ಪ್ರಬುದ್ಧ ಕರ್ಣಾಟಕ

ಸಂಪುಟ ೬೪ ಸಂಚಿಕೆ ೩-೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೩

ಮಾನ್ಯರೆ,

ದಯವಿಟ್ಟು ನನ್ನನ್ನು/ ಈ ಸಂಸ್ಥೆಯನ್ನು 'ಪ್ರಬುದ್ಧ ಕರ್ಣಾಟಕದ' ಅರವತ್ತೈದನೆಯ ಸಂಪುಟಕ್ಕೆ ಚಂದಾದಾರನನ್ನಾಗಿ ದಾಖಲು ಮಾಡಿಕೊಳ್ಳಬೇಕೆಂದ ಪ್ರಾರ್ಥಿಸುತ್ತೇನೆ. ವಾರ್ಷಿಕ ಚಂದಾಹಣ ನಾಲ್ಕು/ಆರು/ಎಂಟು ರೂಪಾಯಿಗಳನ್ನು ಮನಿಯಾರ್ಡರ್/ಚೆಕ್/ಡ್ರಾಫ್ಟ್ ಮೂಲಕ ಇಂದು ಕಳುಹಿಸಿದ್ದೇನೆ. ವಿವರಗಳನ್ನು ಕೆಳಗೆ ನಮೂದಿಸಿದ್ದೇನೆ.

ಇಂತೀ
(ರುಜು)

1. ಹೆಸರು —

[ಸ್ಪಷ್ಟವಾಗಿ ತಿಳಿಯುವಂತೆ ಬರೆಯಿರಿ]

2. ವಿಳಾಸ —

[ವಿದ್ಯಾರ್ಥಿಯಾಗಿದ್ದರೆ ಶಾಲೆ ಅಥವಾ ಕಾಲೇಜಿನ ಹಾಗೂ ಮನೆಯ ವಿಳಾಸಗಳೆರಡನ್ನೂ ನಮೂದಿಸಿರಿ]

3. ಶಿಫಾರಸು —

[ವಿದ್ಯಾರ್ಥಿಗಳು ತಮ್ಮ ಶಾಲಾ ಕಾಲೇಜುಗಳ ಮುಖ್ಯಸ್ಥರಿಂದ ತಾವು ಅಲ್ಲಿ ವ್ಯಾಸಂಗ ಮಾಡುತ್ತಿರುವ ಬಗೆಗೆ ಇಲ್ಲಿ ಶಿಫಾರಸು ಬರೆಸಬೇಕು]

4. ಪತ್ರಿಕೆಯನ್ನು ರಿಜಿಸ್ಟ್ರೇಷನ್ ಮೂಲಕ ಕಳುಹಿಸಬೇಕೆ ? —

5. ಕಳೆದ ವರ್ಷ ನನ್ನ ಚಂದಾ ಸಂಖ್ಯೆ —

'ಪ್ರಬುದ್ಧ ಕರ್ಣಾಟಕ'ದಲ್ಲಿ ಆಸಕ್ತಿ ತೋರಿಸಬಹುದಾದ ನನ್ನ ಕೆಲವು ಮಿತ್ರರ ವಿಳಾಸಗಳು :

1.

[ತಿರುಗಿಸಿ

2.

3.

4.

5.

ಪ್ರಬುದ್ಧ ಕರ್ನಾಟಕದ ಚಂದಾ ವಿವರ :

ಆಜೀವ ಸದಸ್ಯತ್ವ	:	ರೂ.	100-00
ಪ್ರತಿ ಸಂಪುಟಕ್ಕೆ ವಿದ್ಯಾರ್ಥಿಗಳಿಗೆ	:	ರೂ.	4-00
ಇತರರಿಗೆ	:	ರೂ.	6-00
ಸಂಸ್ಥೆಗಳಿಗೆ	:	ರೂ.	8-00

ವಿಳಾಸ :

ಡೈರೆಕ್ಟರ್, ಪ್ರಸಾರಾಂಗ
ಮೈಸೂರು-570006

ಪ್ರಬುದ್ಧ ಕರ್ನಾಟಕ

ಸಂಪುಟ ೬೪ ಸಂಚಿಕೆ ೩–೪

೨೫೩, ೨೫೪

ದುಂದುಭಿ ಸಂವತ್ಸರ

ಮಾರ್ಗಶಿರ — ಫಾಲ್ಗುಣ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೩

PRABHUDDHA KARNATAKA, Kannada quarterly of the University of Mysore, Volume 64, Number 3 & 4, December 1982 and March 1983. Edited by H. M. Channaiah and P. V. Chandrashekhara

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಎಚ್. ಎಮ್. ಚನ್ನಯ್ಯ

ಪಿ. ವಿ. ಚಂದ್ರಶೇಖರ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು–೬

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವಿ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿಕೆ

		ಶ್ರೀಯುತರಾದ	ಪುಟ
೧.	ಸಾಕೆ ?	ಬಿ. ಎ. ಸನದಿ	೧
೨.	ಪಂಜೆ ಮಂಗೇಶರಾಯರು	ಗೊರೂರು ರಾಮಸ್ವಾಮಿ ಅಯ್ಯಂಗಾರ್	೩
೩.	ಸಂಪ್ರದಾಯದ ಬಿಳಲುಗಳು	ಜೆ. ಪಿ. ರಾಮಪ್ರಸಾದ್	೩೦
೪.	ಬೌದ್ಧ ಜೈನರಾಮಾಯಣಗಳು	ಎನ್. ಅನಂತರಂಗಾಚಾರ್	೩೧
೫.	ಭರತೇಶ ವೈಭವದ ಭರತ— ಬಾಹುಬಲಿ ಪ್ರಸಂಗ	ಎನ್. ಕುಮುದ	೩೭
೬.	ಚಾರ್ಲ್ಸ್ ಬಾದಲೇರನ ಮೂರು ಪದ್ಯಗಳು	ಎಚ್. ಎಮ್. ಚನ್ನಯ್ಯ	೬೫
೭.	ಇಂಗ್ಲಿಷ್ ಬೈಬಲ್ ಮತ್ತು ಭವ್ಯ ಶೈಲಿ	ಎಡ್ವರ್ಡ್ ನೋರೋನ	೭೨
೮.	ಹಲಗನ 'ಹರಿಶ್ಚಂದ್ರನ ಸಾಂಗತ್ಯ'	ಸಂ : ಸಿ. ಪಿ. ಕೆ.	೯೩
೯.	ಯಶೋಧರನ ಧೃತಿ	ಡಾ. ಎ. ಎಸ್. ವೇಣುಗೋಪಾಲ ರಾವ್	೧೩೫
೧೦.	ಹಂಬಲ	ಎಚ್. ಎಚ್. ಗಂಗಾಧರಾಚಾರ್	೧೪೧
೧೧.	ಆರಂಭ ಸೂತ್ರ	ದೊಡ್ಡರಂಗೇಗೌಡ	೧೪೧
೧೨.	ಸುಲವಾಲರಾಯನ ಕೆಥೆ	ಸಂ : ಸುಶೀಲಾ ಸೊಂಡೂರು	೧೪೫
೧೩.	ಕಂಬ ರಾಮಾಯಣವ್	ಎನ್. ಅನಂತರಂಗಾಚಾರ್	೧೫೫
೧೪.	ಕಾವ್ಯಾವಲೋಕನ	ಡಾ. ಕೆ. ಕೆಂಪೇಗೌಡ	

ಈ ಸಂಚಿಕೆಯ ಲೇಖಕರು

ಶ್ರೀಯುತರಾದ

೧. ಬಿ. ಎ. ಸನದಿ	456, ವಿಭಾಗ III, ಸಿ. ಜಿ. ಕಾಲೋನಿ, ಸಯಾನ್ ಕೋಳಿವಾಡ, ಮುಂಬೈ–400037
೨. ಗೊರೂರು ರಾಮಸ್ವಾಮಿ ಅಯ್ಯಂಗಾರ್	1ನೇ ಬ್ಲಾಕ್, ರಾಜಾಜಿನಗರ, ಬೆಂಗಳೂರು–10
೩. ಜಿ. ಪಿ. ರಾಮಪ್ರಸಾದ್	ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–6
೪. ಎನ್. ಅನಂತರಂಗಾಚಾರ್	ನಿವೃತ್ತ ಕನ್ನಡ ಪ್ರಾಧ್ಯಾಪಕರು, ೧೨ನೇ ಕ್ರಾಸ್, ಜಯನಗರ, ಮೈಸೂರು–೧೪
೫. ಎನ್. ಕುಮುದ	ಸಿ. ಎಚ್. 35, 7ನೇ ಮುಖ್ಯ ರಸ್ತೆ, ಸರಸ್ವತಿಪುರಂ, ಮೈಸೂರು–9
೬. ಎಚ್. ಎಂ. ಚನ್ನಯ್ಯ	ಕನ್ನಡ ರೀಡರ್, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–5
೭. ಎಡ್ವರ್ಡ್ ನೋರೋನ	ಕನ್ನಡ ಅಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–6
೮. ಸಿ.ಪಿ.ಕೆ.	ಕನ್ನಡ ಪ್ರಾಧ್ಯಾಪಕರು, ಕನ್ನಡ ಅಧ್ಯಯನ ಸಂಸ್ಥೆ, ಮಾನಸ ಗಂಗೋತ್ರಿ, ಮೈಸೂರು–6
೯. ಡಾ. ಎ. ಎಸ್. ವೇಣು ಗೋಪಾಲರಾವ್	ಕಮಲಾ ನೆಹರೂ ಕಾಲೇಜ್, ಶಿವಮೊಗ್ಗ
೧೦. ಎಚ್. ಎಚ್. ಗಂಗಾಧರಾಚಾರ್	ಅಧ್ಯಾಪಕರು, ಎಸ್.ಜೆ. ಪಾಲಿಟೆಕ್ನಿಕ್, ಭದ್ರಾವತಿ
೧೧. ದೊಡ್ಡರಂಗೇಗೌಡ	36, 3ನೇ ಮಹಡಿ, ಸಂಜೀವ ನಾಯಕನ ಗಲ್ಲಿ, ಅವಿನ್ಯೂ ರಸ್ತೆ ತಿರುವು, ಬೆಂಗಳೂರು–560002
೧೨. ಸುಶೀಲಾ ಸೊಂಡೂರ್	ಸಂಶೋಧಕಿ, ಸ್ನಾತಕೋತ್ತರ ಕೇಂದ್ರ, ಬಿ. ಆರ್. ಪ್ರಾಜೆಕ್ಟ್

ಬಿ. ಎ. ಸನದಿ

ಸಾಕೆ ?

ಭೂಮಂಡಲದ ದಿಕ್ಕು ದಿಕ್ಕಿಗೆ
ದೊಡ್ಡ ದೊಡ್ಡವರು ಹರಸಿ ಹೋದ
ನೆತ್ತರ ನಾಲೆಗಳ
ಬೆವರ ಹೊಳೆಗಳ
ನನ್ನ, ನನ್ನವರ ಕಣ್ಣೀರ ಕಾಲುವೆಗಳ ಬಲೆಗೂಡಿಸಿ
ಹಾಡಿ ಹರಸುವುದಕ್ಕೆ ನನಗೇಕೋ ಕಸಿವಿಸಿ
ಅವರಿಗೂ ನಮಗೂ
ಸಮಾಂತರ ರೇಷೆಗಳನೆಳೆಯುತ್ತ
ಸಮತ್ವದ ಕುರಿತು
ನಮ್ಮಷ್ಟಕೆ ನಾವೆ ಸಂತೈಸಿಕೊಳ್ಳುತ್ತ
ಸಮಾಂತರದೊಳಗೂ ಅಂತರವಿರುವ ದಿಟವನ್ನೆ ಮರೆವಲ್ಲಿ
ಸಮತ್ವದ ನಮ್ಮ ಕಲ್ಪನೆಯ ಪುಟ-ಪುಟವೂ ಹಸಕು
ಕೂಡುಬಿಂದುವಿನತ್ತ ನಡೆವ ದಾರಿಯೊ, ಮೊದಲೆ ಮುಸುಕು

ಈ ಇಂಥ ಮುಸುಕು ದಾರಿಯ ಮೇಲೆ
ಶತಶತಮಾನದುದ್ದಕ್ಕೂ
ದೊಡ್ಡವರ ಹೆಸರುಗಳ ಉಸಿರುಗಳ ಸೆರಗು ಹಿಡಿದು
ಕುಂಟುತ್ತ ಕೂರುತ್ತ ನಡೆದವರು ನಾವು
ವ್ಯಕ್ತಿಪೂಜೆಯ ಮಾಡಿ ಪನಿವಾರ ಹಂಚುತ್ತ ಹಿಗ್ಗಿದವರು
ನಡೆಯುತ್ತ ನಡೆಯುತ್ತ ದಣಿದು ನಿಂತೆಡೆಯಲ್ಲಿ
ಫಾಜೆಗಟ್ಟಿಯೇ ಬಂತೆಂದು ಭ್ರಮಿಸಿದವರು
ನಮ್ಮ ನದರಿನ ನೇರ ಕಂಡನಿತು

ದೊಡ್ಡವರ ನೆನಹಿಗೇ ನೂರೊಂದುಸಲ ನಮಿಸಿದವರು

ಈ ಭ್ರಮಣ
ಈ ನಮನದಲಿ ನಮ್ಮತನ ಕಳಕೊಂಡವರು
ದೂರ ದಾರಿಯ ನಡುವೆ ಹತ್ತು ಜನ ಸತ್ತಲ್ಲಿ ಉಳಕೊಂಡವರು
ಸೂರ್ಯನುದಯಕ್ಕೇನೆ ಕಣ್ಣು ತೆರೆವವರು
ಎದ್ದ ತಪ್ಪಿಗೆ ನಾಲ್ಕು ಹಿಡಿ ಮಣ್ಣು ಹೊರುವವರು
ತಳಪಾಯವೇ ಸಡಿಲಾದ ಸ್ವಪ್ನಸೌಧಕ್ಕೆ ;
ನೀರು ಹೊಯ್ಯುತಲಿಹೆವು ಪರಂ—
ಪರೆಯ ವಿರೋಧ–ಪ್ರತಿರೋಧಕ್ಕೆ !

ಅಷ್ಟಾದರೆ ಸಾಕೆ ???

ಗೊರೂರು ರಾಮಸ್ವಾಮಿ ಅಯ್ಯಂಗಾರ್

ಪಂಜೆ ಮಂಗೇಶರಾಯರು

ಶ್ರೀಮಾನ್ ಪಂಜೆ ಮಂಗೇಶರಾಯರ ಕವನಗಳು ಪ್ರಬಂಧಗಳು ಲಘುಬರಹಗಳು ವಿದ್ವತ್ಪೂರ್ಣ ವಿಮರ್ಶೆ ಇವುಗಳಿಂದ, ಅವರ ಪ್ರತಿಭೆ ಪಾಂಡಿತ್ಯಗಳ ಪ್ರಸಿದ್ಧಿಯನ್ನು ಅರಿತಿದ್ದ ಅಭಿಮಾನಿಗಳು, ಪ್ರತ್ಯಕ್ಷವಾಗಿ ಪಂಜೆಯವರನ್ನು ಕಂಡಾಗ, ಪಂಜೆಯವರು ಅವರ ಸಾಹಿತ್ಯ ಕೃತಿಗಳಿಗಿಂತಲೂ, ಪ್ರಸಿದ್ಧಿಗಿಂತಲೂ ಬಹುಪಾಲು ದೊಡ್ಡವರೆಂದೂ, ಅಪೂರ್ವವಾದ ಮಾನವೀಯ ಸದ್ಗುಣ ಸಂಸ್ಕೃತಿ ಅನುಕಂಪ ಸ್ನೇಹಪರತೆಯ ಉನ್ನತ ವ್ಯಕ್ತಿ ಎಂದೂ ಅರಿಯುತ್ತಿದ್ದರು. ಪಂಜೆಯವರು ಬರೆದ ಸಾಹಿತ್ಯ ಕೃತಿಗಳ ಸಂಖ್ಯೆ, ಅಷ್ಟು ಹೆಚ್ಚು ಅಲ್ಲದಿದ್ದರೂ, ಅವು ಪ್ರತಿಯೊಂದು–ಕವನವಾಗಲೀ ಪ್ರಬಂಧವಾಗಲಿ ಸಂಶೋಧನಾ ಲೇಖನವಾಗಲಿ ಎಲ್ಲವೂ ಆಳವಾದ ಅಭ್ಯಾಸ, ವಿಸ್ತಾರವಾದ ಲೋಕಾನುಭವ ಹಿತವಾದ ವಿಚಾರ ಸರಣಿ, ಪಂಚಾಮೃತದಂತೆ ರಸಪೂರ್ಣವಾದ ಸತ್ವಪೂರ್ಣವಾದ ಅವರಿಗೇ ವಿಶಿಷ್ಟವಾದ ಸನಿಶೈಲಿ ಕಾವ್ಯಶೈಲಿ, ವಾಚಕನನ್ನು ಕಡ್ಡಾಯವಾಗಿ ಆಕರ್ಷಿಸುವ ಆತ್ಮೀಯತೆ ಇವುಗಳಿಂದ ಕನ್ನಡ ಸಾಹಿತ್ಯ ಇರುವವರೆಗೆ ಉಳಿಯುವುದರಲ್ಲಿ ಓದಿಸಿಕೊಳ್ಳುವುದರಲ್ಲಿ ಸಂಶಯವಿಲ್ಲ.

ನಾನು ಅವರ ಹೆಸರನ್ನು ಯಾವಾಗ ಕೇಳಿದೆ, ಅವರನ್ನು ಮೊದಲಬಾರಿಗೆ ಯಾವಾಗ ನೋಡಿದೆ ಎಂದು ಖಚಿತವಾಗಿ ಹೇಳಲಾರೆ. ಆದರೆ ನಾನು ಅವರನ್ನು ಮೊದಲಬಾರಿಗೆ ಮಂಗಳೂರಿನಲ್ಲಿ ನೋಡಿದಾಗ "ಇವರನ್ನು ಮೊದಲೇ ಎಲ್ಲಿಯೋ ಕಂಡಿದ್ದೇನೆ ಎಂಬ ನಂಬಿಕೆಯುಂಟಾಯಿತು. ಅದಕ್ಕೆ ಕಾರಣ, ಬಹುಶಃ ನಾನು ಅವರನ್ನು ಆಗಾಗ ಮೆಚ್ಚಿಕೆಯಿಂದ ನೆನಿಸಿ ಪಠ್ಯಪುಸ್ತಕಗಳಲ್ಲಿ ಪ್ರಕಟವಾದ ಅವರ ಕವಿತೆಗಳನ್ನು ಓದಿದುದಾಗಿರಬಹುದು. 1930ನೆ ವರುಷವೆಂದು ನೆನಪು. ಆಗ ನಾನು ತಿರುಪೂರಿನ ಅಖಿಲಭಾರತಚರಕ ಸಂಘದ ವತಿಯಿಂದ ಖಾದಿಕೆಲಸಕ್ಕಾಗಿ ಮಂಗಳೂರಿಗೆ ಹೋಗಬೇಕಾಗಿತ್ತು. ನಾನು ಪಂಜೆಯವರನ್ನು ಆಗ ಅವರ ಮನೆಯಲ್ಲಿಯೇ ಭೇಟಿಮಾಡಿದೆ. ನನ್ನ ಜೊತೆಯಲ್ಲಿ ಮಂಗಳೂರಿನ ಇಬ್ಬರು ಖಾದಿಕಾರ್ಯಕರ್ತರೂ ಸ್ವಾತಂತ್ರ್ಯ ಹೋರಾಟಗಾರರು ಇದ್ದರು. ನಾನು ಆಗ ಇನ್ನೂ ಸಾಹಿತ್ಯದ ಕಾರ್ಯಕ್ಕೂ ಕೈಹಾಕಿರಲಿಲ್ಲ. ನನ್ನ

ಹೆಸರನ್ನೂ ಸಹ ಯಾರೂ ಕೇಳಿರಲಿಲ್ಲ. ಖಾದಿಕಾರ್ಯ ಮತ್ತು ಸ್ವಲ್ಪಮಟ್ಟಿಗೆ ಪತ್ರಿಕಾ ವೃತ್ತಿಯ ಅನುಭವ ಮಾತ್ರ ನನಗೆ ಇತ್ತು.

ನಾನು ಪಂಜೆಯವರನ್ನು ನೋಡಿದ ಆ ಪ್ರಥಮ ದರ್ಶನವನ್ನು ಎಂದಿಗೂ ಮರೆಯಲಾರೆ. ನಾವು ಅವರ ಜೊತೆ ಇದ್ದುದು ಸ್ವಲ್ಪವೇಳೆ ಮಾತ್ರವಾದರೂ ಪಂಜೆಯವರ ಆತಿಥ್ಯದ ಸೊಗಸನ್ನು ಪೂರ್ಣವಾಗಿ ಅನುಭವಿಸಿದೆವು. ನಮಗೆ ಎಷ್ಟು ಉಪಚಾರ ಮಾಡಿದರೂ ಅದು ಕಡಿಮೆಯೆಂದೇ ಪಂಜೆ, ಭಾವಿಸುತ್ತಿದ್ದರು. ಕಾಫಿ ಚಹ ಶರಬತ್ತು ಎಳನೀರು ಸಿಹಿಉಪ್ಪಿನಕಾಯಿ ಎಲ್ಲ ಆಯಿತು. ಅತಿಥಿಗಳಿಗೆ ಎಷ್ಟು ಕೊಟ್ಟರೂ ಅವರಿಗೆ ತೃಪ್ತಿಯಿಲ್ಲ. ಆ ಪ್ರಥಮ ದರ್ಶನದ ರೋಮಾಂಚನ, ನೆನೆಸಿಕೊಂಡಾಗಲೆಲ್ಲ ನನ್ನನ್ನು ಸಂತೋಷದಲ್ಲಿ ಮುಳುಗಿಸುವುದು. ಪಂಜೆಯವರು ಆಗ ತಾನೇ ಎಲ್ಲಿಗೋ ಹೊರಡುವುದಕ್ಕೇ ಸಿದ್ಧರಾಗುತ್ತಿದ್ದರೋ ಅಥವಾ ಎಲ್ಲಿಂದಲಾದರೂ–ಬೇರೆ ಊರಿಗೆ ಹೋಗಿ ಹಿಂದಿರುಗಿದ್ದರೋ ಎಂಬಂತೆ ಅಚ್ಚುಕಟ್ಟಾದ ಪೋಶಾಕು ಧರಿಸಿ ಸಿದ್ಧರಾಗಿದ್ದರು. ಶುಭ್ರವಾದ ಕಚ್ಚೆಪಂಚೆ ಅದರ ಮೇಲೆ ಕಪ್ಪು ಬಣ್ಣದ ಕೋಟು, ತಲೆಗೆ ರುಮಾಲು, ಕತ್ತಿನ ಸುತ್ತ ಒಂದು ಉತ್ತರೀಯ ; ಎಲ್ಲಕ್ಕಿಂತ ಹೆಚ್ಚಾಗಿ ನಮ್ಮನ್ನು ಆಕರ್ಷಿಸುವುದು ಪ್ರಿಯವಾದ ಅವರ ದೇಹದ ಗೌರವರ್ಣ ವಿಶಾಲವಾದ ಹಣೆ ತೀಕ್ಷ್ಣವಾದ ಕಣ್ಣು ಮತ್ತು ಕಿಂಚಿತ್ ವಿನೋದವನ್ನು ಸದಾ ಸೂಸುತ್ತಿದ್ದ ನಿಷ್ಕಳಂಕ ಮುಖಭಾವ. ಆಗ ಪಂಜೆಯವರಿಗೆ ವಯಸ್ಸು 50–52 ಆಗಿದ್ದಿರಬಹುದು. ನಾನು 25–26 ವರುಷದ ಯುವಕನಾಗಿದ್ದೆ. ಪಂಜೆಯವರು ಬೇಡ ಬೇಡ ಎಂದು ತಡೆಯುತ್ತಿದ್ದರೂ, ನಾನು ಅವರಿಗೆ ಸಾಷ್ಟಾಂಗ ನಮಸ್ಕಾರ ಮಾಡಿದೆ. ಅದು ಸ್ವಾತಂತ್ರ್ಯ ಹೋರಾಟದ–ಉಪ್ಪಿನ ಸತ್ಯಾಗ್ರಹಕ್ಕೆ ಸಿದ್ಧತೆಯ ತೀವ್ರ ಚಳುವಳಿಯ ಕಾಲ. ಪಂಜೆಯವರು ನಮ್ಮೊಂದಿಗೆ ದೇಶದ ಪರಿಸ್ಥಿತಿ ಖಾದಿ ಚಳುವಳಿ ಹರಿಜನರಿಗೆ ನ್ಯಾಯ ಇವನ್ನೆಲ್ಲ ಕುರಿತು ನಿರಾತಂಕವಾಗಿ ಮಾತನಾಡಿದರು. ತೀವ್ರದೇಶಪ್ರೇಮ, ಗಾಂಧೀಜಿಯ ಅಪ್ರತಿಮಸಾಧನೆಗಳಲ್ಲಿ ಮೆಚ್ಚಿಕೆ, ಗಾಂಧೀಜಿಯ ರಚನಾತ್ಮಕ ಕಾರ್ಯಕ್ರಮಗಳ ಸಾರ್ಥಕ್ಯ ಪಾನನಿರೋಧ ಇವನ್ನೆಲ್ಲ ಕುರಿತು ಬಹಳ ಗಂಭೀರವಾಗಿ ಶ್ರದ್ಧಾಪೂರ್ವಕವಾಗಿ ಮಾತನಾಡಿದರು. ದೇಶದ ಪ್ರಶ್ನೆಯನ್ನು ಕುರಿತು ಮಾತನಾಡುವಾಗ ಅವರ ತನ್ಮಯತೆ ಆದೇಶ ವ್ಯಕ್ತವಾಗುತ್ತಿತ್ತು. ವಾಗಾಡಂಬರ ಇರಲಿಲ್ಲ. ಗಾಂಧೀಜಿಗೆ ಜನ ಇನ್ನೂ ಹೆಚ್ಚು ಬೆಂಬಲ ಕೊಡಬೇಕೆಂದು ಹೇಳುತ್ತಿದ್ದರು. ಬಡವರ ವಿಷಯದಲ್ಲಿ ಅವರ ಅನುಕಂಪ, ಸಂವೇದನೆ ಅಪೂರ್ವವಾಗಿ ಅವರ ಸಂಪರ್ಕಕ್ಕೆ ಬಂದವರಲ್ಲಿಯೂ ಅದು ತುಂಬುತ್ತಿದ್ದಿತು. ಖಾದಿಯ ವಿಷಯದಲ್ಲಿ ಸಾಮಾನ್ಯವಾಗಿ ಪ್ರಾರಂಭವಾದ ಒಂದು ಚರ್ಚೆ, ದೇಶದ ಸಮಗ್ರ ಆರ್ಥಿಕ ನೀತಿಯ ಗಂಭೀರ ವಾತಾವರಣವನ್ನು ನಿರ್ಮಿಸಿ, ಒಂದು ಉನ್ನತಜೀವಿಯ ಕರುಣೆಯ ಸಂದೇಶವನ್ನು ನಮಗೆ ನೀಡಿತು ; ನಮಗೆ ಒಂದು ಮಹತ್‌ಸಾನ್ನಿಧ್ಯದ ಅನುಭವವುಂಟಾಯಿತು. ನಾವು ಹೊರಟಾಗ ಪಂಜೆಯವರು, ಸ್ವಲ್ಪ ವಿನೋದದಿಂದರೂ ಶ್ರದ್ಧಾಪೂರಿತ ಧ್ವನಿಯಲ್ಲಿ "ನನಗೆ ಖಾದಿಯೆಂದರೆ ತುಂಬ ಪ್ರೀತಿ. ನಾವು ಬಡವರೊಂದಿಗೆ ಒಂದಾಗುವ

ಸಂಕೇತ ಅದು. ಅದನ್ನು ನಾನು ನನ್ನ ಹೃದಯಕ್ಕೆ ಬಹಳ ಹತ್ತಿರದಲ್ಲಿ ಇಟ್ಟುಕೊಂಡಿದ್ದೇನೆ" ಎಂದು ತಮ್ಮ ಅಂಗಿಯ ಒಳ ಅಂಗಿಯನ್ನು ತೋರಿಸಿದರು. ಅದನ್ನೆ ಮತ್ತೊಬ್ಬರು ಮಾಡಿದ್ದರೆ ಅದೆಲ್ಲ ಬೂಟಾಡಿಕೆ ಎಂದು ನಾವು ಹೇಳುತ್ತಿದ್ದೇವೇನೊ, ಆದರೆ ಪಂಜೆಯವರು ಹೇಳಿದ ಮಾತು ನಮಗೆ ಅದು ಅವರ ಅಂತಃಕರಣ ಪೂರಿತವಾದ ನಂಬಿಕೆಯೆಂದು ಮನವರಿಕೆಯಾಯಿತು.

ಅಲ್ಲಿಂದ ನಮ್ಮ ಬಿಡಾರಕ್ಕೆ ಹಿಂದಿರುಗುವಾಗ, ಮಂಗಳೂರಿನವರೇ ಆದ ನನ್ನ ಜೊತೆಗಾರರು ನನಗೆ ಉದ್ದಕ್ಕೂ ಪಂಜೆಯವರ ಕಾವ್ಯ ಸಾಹಿತ್ಯ ಸರಸಸ್ವಭಾವಗಳ ರಸಕವಳವನ್ನೇ ನೀಡಿದರು. ಪಂಜೆಯವರಿಗೆ ಗಣಿತಶಾಸ್ತ್ರದಲ್ಲಿ ಆಸಕ್ತಿಯೂ ಅದರ ವ್ಯಾಸಂಗದಲ್ಲಿ ತುಂಬ ಇಷ್ಟವೂ ಇದ್ದರೂ, ಹಣದ ಅಭಾವದಿಂದ ಅವರು ಗಣಿತದ ಕಾಲೇಜಿಗೆ ಸೇರಲಾಗದೆ—ಸೇಂಟ್ ಅಲೋಯಿಸಿಸ್ ಕಾಲೇಜನ್ನು ಸೇರಿ ಅಲ್ಲಿಂದ ಬಿ.ಎ. ಪದವಿ ಪಡೆದು, ಪ್ರಾರಂಭದಲ್ಲಿ ತಿಂಗಳಿಗೆ ಇಪ್ಪತ್ತು ರೂಪಾಯಿನ ಸಂಬಳಕ್ಕೆ ಸೇರಿದರು. ಭಾವೀ ಪ್ರಜೆಗಳಾದ ಮಕ್ಕಳ ಅಭಿವೃದ್ಧಿಗಾಗಿಯೇ ತಮ್ಮ ಜೀವನವನ್ನು ಮುಡುಪಾಗಿಟ್ಟು ಬಾಲ ಸಾಹಿತ್ಯಮಂಡಲವನ್ನು ಸ್ಥಾಪಿಸಿ ಅದರ ಮೂಲಕ ಮಕ್ಕಳಿಗಾಗಿ ಅನೇಕ ಸಣ್ಣ ಸಣ್ಣ ಪುಸ್ತಕಗಳನ್ನು ದಪ್ಪ ಅಕ್ಷರಗಳಲ್ಲಿ ಮುದ್ರಿಸಿ ಆಕರ್ಷಣೀಯವಾದ ಚಿತ್ರಗಳ ಮತ್ತು ರಕ್ಷಾಪತ್ರಗಳೊಂದಿಗೆ ಒದಗಿಸಿದರು. ಮಕ್ಕಳಿಗಾಗಿಯೇ ಕವನಗಳನ್ನು ಬರೆದು ಹಾಡುವ ಮಟ್ಟುಗಳನ್ನು ಹಾಕಿ, ತಾವೇ ಅವನ್ನು ಹಾಡಿ—ಹಾಡುವಾಗ ಅಭಿನಯವನ್ನು ಕೈ ಕುಣಿಸುವುದು ಧ್ವನಿಯನ್ನು ಏರಿಸಿ ಇಳಿಸುವುದು—ಕಾವ್ಯದ ಆನಂದವನ್ನು ಪೂರ್ಣವಾಗಿ ಅನುಭವಿಸುತ್ತ ಕಣ್ಣಿನಲ್ಲಿ ಹೊಳಪನ್ನು ಸೂಸುತ್ತ, ಮೀಸೆಯನ್ನು ಕುಣಿಸಿ ಕಾಕು ಧ್ವನಿಯೊಂದಿಗೆ ಹಾಡಿ ಮಕ್ಕಳಿಗೂ ಉಪಾಧ್ಯಾಯರಿಗೂ ಕವನದಲ್ಲಿ ಪ್ರೀತಿಯನ್ನುಂಟುಮಾಡುತ್ತಿದ್ದರು. ವಿದ್ಯಾರ್ಥಿಗಳಿಗೆ ಕವಾಯಿತ್ತು ಕವಾಯತ್ತಿಗೆ ಅನುಗುಣವಾಗಿ ಹಾಡು, ಆಟ ನೋಟದ ವಿಷಯವೇ ಪಾಠಗಳ ವಿಷಯವಾಗಿತ್ತು. ಮಕ್ಕಳಿಗೆ ಅವರ ಪಾಠಗಳು ಒಣಕಗ್ಗ ವಿಷಯಗಳಾಗುತ್ತಿರಲಿಲ್ಲ. ಅವರ ಪಾಠದಲ್ಲಿ ವಿದ್ಯಾರ್ಥಿಗಳಿಗೆ ಯಕ್ಷಗಾನ, ಸ್ಥಳ ಪುರಾಣ, ತುಂಡು ಪದ್ಯಗಳು, ಗಾದೆಗಳು, ಹಾಸ್ಯಚಟಾಕಿ ಇವುಗಳ ಸಮಾರಾಧನೆಯೇ ಇರುತ್ತಿತ್ತು. ಪಂಜೆಯವರು ಅಭಿನಯದಲ್ಲಿಯೇ ಪಾಠಗಳನ್ನು ಹೇಳುತ್ತಿದ್ದರು. ನಾಟಕ ನಟನೆಗಳು ಅವರಿಗೆ ತುಂಬ ಪ್ರಿಯವಾಗಿದ್ದವು. ಅವರು ಇಂಗ್ಲಿಷ್ ಚಂದ್ರಹಾಸ ನಾಟಕದಲ್ಲಿ ಪಾತ್ರವನ್ನು ವಹಿಸಿ ರಂಗದಲ್ಲಿ ಅಭಿನಯಿಸಿದ್ದರು. ಇತರ ಇನಿಸ್ಪೆಕ್ಟರು (ಸಬ್ ಅಸಿಸ್ಟೆಂಟ್) ಶಾಲೆಗೆ ಬಂದರೆ ಹೆದರುತ್ತಿದ್ದ ವಿದ್ಯಾರ್ಥಿಗಳೂ ಉಪಾಧ್ಯಾಯರು, ಪಂಜೆಯವರು ತರಗತಿಯಲ್ಲಿ ಒಂದು ಮಾದರಿ ಪಾಠವನ್ನು ಮಾಡಲು ಪ್ರಾರಂಭಿಸಿದರೆ ಸಂತೋಷಗೊಳ್ಳುತ್ತಿದ್ದರು. ಪಂಜೆಯವರದು ಕರುಣೆಯ ಮನಸ್ಸು. ಅವರು ಮೇಲಧಿಕಾರಿಗಳಾದರೂ ಉಪಾಧ್ಯಾಯರನ್ನು ದರ್ಪದಿಂದ ನುಡಿಸುತ್ತಿರಲಿಲ್ಲ.

ಆಗಿನ ಕಾಲದಲ್ಲಿ ಮದರಾಸು ಪ್ರಾಂತ ಕೊಡಗು ಇಲ್ಲೆಲ್ಲ ಪಾಠಶಾಲೆಗಳು ಸರ್ಕಾರದ ಅನುದಾನದಿಂದ—ಗ್ರಾಂಟ್—ನಡೆಯುತ್ತಿದ್ದವು. ಉಪಾಧ್ಯಾಯರ ಸಂಬಳವೂ

ತುಂಬ ಕಡಿಮೆಯಾಗಿತ್ತು. ಪಂಜೆಯವರಿಗೆ ಉಪಾಧ್ಯಾಯರ ದಾರಿದ್ರ್ಯ ದಡ್ಡತನ ಠಕ್ಕು ತಗಲೂಪಿ ದೈನ್ಯ ತಂತ್ರ ಸಾಹಸ ಪ್ರವೃತ್ತಿ ಇವುಗಳೆಲ್ಲವರ ಅನುಭವವೂ ಚೆನ್ನಾಗಿ ಆಗಿತ್ತು. ಆದರೂ ಅವರು ಉಪಾಧ್ಯಾಯರ ವಿಷಯದಲ್ಲಿ ನಂಬಿಕೆಯನ್ನು ಕಳೆದು ಕೊಳ್ಳಲಿಲ್ಲ. "ಉಪಾಧ್ಯಾಯರು ಶಿಸ್ತಿನಿಂದ ಇರಬೇಕು. ಶಾಲೆಯನ್ನು ಸರಿಯಾಗಿ ನಡೆಸಬೇಕು. ಅನುಮತಿ ಇಲ್ಲದೆ ಶಾಲೆಗೆ ಗೈರುಹಾಜರು ಆಗಬಾರದು." ಈ ವಿಷಯ ದಲ್ಲಿ ಮಾತ್ರ ಪಂಜೆಯವರದು ಖಂಡಿತ. ಅತಿಸ್ತನ್ನು ಅವರು ತಮ್ಮಲ್ಲಿಯೂ ಸಹಿಸು ತ್ತಿರಲಿಲ್ಲ ಇತರರಲ್ಲಿಯೂ ಸಹಿಸುತ್ತಿರಲಿಲ್ಲ. ಅವರು, ವಿದ್ಯಾಧಿಕಾರಿಯಾಗಿ ಕೊಡಗಿನಲ್ಲಿ ಪಂಚೆಯುಟ್ಟು ಶಾಲಾ ತನಿಖೆಗೆ ಹೋದಾಗ, ಅಂಗ್ಲೇಯ ವೇಷಭೂಷಣಗಳ ಅನುಕರಣ ಪಟುಗಳಾದ ಕೊಡಗರು "ಇವರು ಶಿಸ್ತನ್ನು ಸರಿಯಾಗಿ ಪಾಲಿಸುವರೆ ?" ಎಂದು ಸಂಶಯ ಗ್ರಸ್ತರಾಗಿದ್ದರು. ಆದರೆ ತಮ್ಮ ಸಂಶಯಗಳು ನಿರಾಧಾರವೆಂಬುದು ಅವರಿಗೆ ಬಹು ಬೇಗನೇ ಗೊತ್ತಾಯಿತು. ಅವರು ಹೋದ ಕಡೆಗಳಲ್ಲೆಲ್ಲ ಜನಸಂಪರ್ಕವನ್ನು ಹೊಂದಿ, ಅಲ್ಲಿಯ ಸ್ಥಳಪುರಾಣ ಜನಪದ ಹಾಡು ಕಥೆಗಳು ನುಡಿಗಟ್ಟು ಇವುಗಳನ್ನೆಲ್ಲ ಸಂಗ್ರಹಿಸಿ ಪರಿಶೋಧಿಸಿ ಅವನ್ನೆಲ್ಲ ಆಧುನಿಕ ಕನ್ನಡಕ್ಕೆ ವಾಹಕವನ್ನಾಗಿ ಮಾಡಿದರು. ಕನ್ನಡದಲ್ಲಿ ಭಾಷೇತರ ವಿಷಯಗಳ ಬೋಧನೆಯನ್ನು ಪ್ರಾರಂಭಿಸಿ ಅದರಲ್ಲಿಯೂ ಜಯವನ್ನು ಹೊಂದುವುದರಲ್ಲಿ ಮೊದಲನೆಯವರಾದರು. ಪಂಜೆಯವರು ಕೊಡಗಿಗೆ ಸಹ ಅಪಾರ ಸೇವೆಯನ್ನು ಸಲ್ಲಿಸಿ ಕೊಡವರ ಹಾಡುಗಳನ್ನು ಪ್ರೋತ್ಸಾಹಿಸಿ ಪಾಠ ಪ್ರವಚನಗಳಲ್ಲಿಯೂ ಅದನ್ನು ಬಳಸಿ–ಹುತ್ತರಿ ಹಾಡಿನಂಥ ಪ್ರಸಿದ್ಧ ಕವನವನ್ನೂ ರಚಿಸಿ–ಕನ್ನಡ ಸಾಹಿತ್ಯ ದಲ್ಲಿ ಕೊಡಗಿನ ಸ್ಥಾನವನ್ನು ಚಿರಸ್ಥಾಯಿಯಾಗಿ ಮಾಡಿದ್ದಾರೆ. ಅವರ ಕಾಲದಲ್ಲಿ ಅವರಿಗಿಂತ ಇನ್ನೂ ಅನೇಕ ಗ್ರಂಥಗಳನ್ನು ಹೆಚ್ಚಾಗಿ ಬರೆದ ಸಾಹಿತಿಗಳಿದ್ದರೂ, ಪಂಜೆ ಯವರಷ್ಟು ಜನಪ್ರಿಯರೂ ಆಬಾಲವೃದ್ಧರಾದಿಯಾಗಿ ಜನರಿಗೆಲ್ಲ ಗೊತ್ತಾಗಿದ್ದವರೂ ಬೇರೆ ಯಾರೂ ಇರಲಿಲ್ಲ. ಇದಕ್ಕೆ ಮುಖ್ಯ ಕಾರಣ ಪಂಜೆಯವರ ಉದಾತ್ತ ವ್ಯಕ್ತಿತ್ವ ನಾಡು ನುಡಿಗಳ ಪ್ರೇಮ, ಸೇವೆ, ಜನ ಬದುಕಬೇಕೆಂಬ ಹಿರಿಯ ಆದರ್ಶ, ಆಚರಣೆ. ಅವರು ತಮ್ಮ ಸಂಪರ್ಕಕ್ಕೆ ಬಂದವರನ್ನೆಲ್ಲ ತಮ್ಮ ಮಾನವೀಯ ಗುಣಗಳಿಂದ ಉನ್ನತಿ ಗೇರಿಸುತ್ತಿದ್ದರು. ಒಂದು ಸಲ ಅವರನ್ನು ನೋಡಿ ಮಾತನಾಡಿದರೆ ತೀರಿತು. ಅನಂತರ ಅವರನ್ನು ನೆನೆಸಿಕೊಂಡಾಗಲೆಲ್ಲ ಮಲ್ಲಿಗೆಯ ಕಂಪಿನಂತೆ ನಮ್ಮ ಬಾಳು ಸುವಾಸಿತ ವಾಗುವುದು.

ನಾನು ಎಲ್ಲ ರೀತಿಯಿಂದಲೂ ವಯಸ್ಸಿನಿಂದ ಸಹ ಅವರಿಗಿಂತ ಕಿರಿಯನಾದರೂ ಅವರು ನನ್ನಲ್ಲಿ ತುಂಬ ಪ್ರೇಮವನ್ನೂ ಸಲಿಗೆಯನ್ನೂ ತೋರಿಸಿದರು. ಅವರನ್ನು ನನ್ನ ಮನೆಗೆ ಕರೆದುಕೊಂಡು ಹೋಗುವ ಸೌಭಾಗ್ಯವೂ ನನಗೆ ದೊರಕಿತ್ತು. ಅದು 1935ನೇ ಸಂವತ್ಸರ ಇರಬೇಕು. ಪರಿಷತ್ತಿನ ವಿಶೇಷ ಸಾಹಿತ್ಯೋತ್ಸವಕ್ಕಾಗಿ ಅವರು ಬೆಂಗಳೂರಿಗೆ ಬಂದಿದ್ದರು. ಆ ವೇಳೆಗೆ ನಾನು ಮೂರು ಪುಸ್ತಕಗಳನ್ನು ಪ್ರಕಟಿಸಿದ್ದೆ. ಪರಿಷತ್ತಿಗೆ ನಾನು ಹೋದಾಗ ಶ್ರೀಮಾನ್ ಡಿ. ವಿ. ಗುಂಡಪ್ಪನವರು, ನನ್ನನ್ನು ಪಂಜೆಯವರಿಗೆ

ಪರಿಚಯ ಮಾಡಿಸಿದರು. ಪಂಜೆಯವರು "ನಾನು ಇವರನ್ನು ಬಲ್ಲೆ. ಗಾಂಧೀಜನ ಖಾದಿ ಜನ. ಆದರೆ ಇವರು ಲೇಖಕರೆಂಬುದು ತಿಳಿದಿರಲಿಲ್ಲ" ಎಂದು ನನ್ನ ಹೆಗಲಿನ ಮೇಲೆ ಕೈಗಳನ್ನಿಟ್ಟು ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿದರು.

ವಸಂತ ಸಾಹಿತ್ಯೋತ್ಸವದಲ್ಲಿ ಭಾಷಣ ಮಾಡಿದ ನಂತರ ಪಂಜೆಯವರು ಸೆಂಟ್ರಲ್ ಕಾಲೇಜಿನಲ್ಲಿ ಕರ್ನಾಟಕ ಸಂಘಕ್ಕೊ ಭೇಟಿ ಇತ್ತರು. ಕರ್ನಾಟಕ ಸಂಘದ ಪತಿಯಿಂದ ಅಲ್ಲಿ ಅವರಿಂದ ಒಂದು ಭಾಷಣ ಮಾಡಿಸಬೇಕೆಂಬುದು ನಮ್ಮೆಲ್ಲರ ಇಚ್ಛೆಯಾಗಿತ್ತು. ಆದರೆ ಪಂಜೆಯವರು ಈಗಾಗಲೇ ಪರಿಷತ್ತಿನಲ್ಲಿ ಒಂದು ಭಾಷಣವಾಗಿದೆ, ಅಲ್ಲಿ ಬೇಡ" ಎಂದರು. ಸಂಘದವರು "ಆಗಲಿ. ಸಂಘಕ್ಕೆ ಭೇಟಿ ಕೊಡಿ" ಎಂದು ಕರೆದುಕೊಂಡು ಹೋದರು. ಅಲ್ಲಿ ಹೋದನಂತರ ಅಲ್ಪಾಹಾರವಾದ ಮೇಲೆ ಮಾಸ್ತಿ ವೆಂಕಟೇಶ ಅಯ್ಯಂಗಾರ್ಯರು, ಪಂಜೆಯವರನ್ನು ಸಭಾಭವನಕ್ಕೆ ಕರೆದುಕೊಂಡು ಬಂದರು. ಪಂಜೆಯವರ ಪರಿಚಯವನ್ನು ನಾಲ್ಕು ಮಾತುಗಳಲ್ಲಿ ಹೇಳಿದರು. ಅನಂತರ ಪಂಜೆಯವರು ಎದ್ದು ನಿಂತು "ನಾನು ಭಾಷಣ ಬೇಡ ಎಂದೆ, ಇವರು ಕೇಳಲಿಲ್ಲ, ತಿಂಡಿ, ಕಾಫಿ, ಹಣ್ಣು ಫಲಹಾರ ಇವನ್ನೆಲ್ಲ ಕೊಟ್ಟು ಉಪಚರಿಸಿದಾಗಲೇ, ಮುಂದೆ ಕೆಡವುವ ಕೊಳ ಇದೆ ಎಂದು ನಂಬಿದೆ, ಇದು ಅನಿರೀಕ್ಷಿತ ಭಾಷಣವಾದುದರಿಂದ ಇದರಲ್ಲಿರುವ ತಪ್ಪುದೋಷಗಳನ್ನು ನೀವು ಸಹಿಸಿಕೊಳ್ಳಬೇಕು" ಎಂದು ಪ್ರಾರಂಭಿಸಿದರು. ಅಂದು ಅವರ ಭಾಷಣ "ಕುಮಾರವ್ಯಾಸನ ಕರ್ಣ" ಎಂಬ ವಿಷಯದ್ದಾಗಿತ್ತು. ಆ ಭಾಷಣದಲ್ಲಿ ಕರ್ಣನ ಜನ್ಮದ ಕರುಣಾಜನಕ ವೃತ್ತಾಂತ. "ತಾಯಿ ಬಲ್ಲಂದದಲಿ ಕಂದನ ಕಾಯಿ ಮೇಣ್ ಕೊಲ್ಲೆನುತ ಕಮಲದಳಾಯತಾಕ್ಷಿ ಕುಮಾರಕನ ಹಾಯ್ಕಿದಳು ಮಡುವಿನಲಿ" ಪಂಜೆಯವರು ಕುಮಾರವ್ಯಾಸನ ಪದ್ಯಗಳನ್ನೆಲ್ಲ ನಿರರ್ಗಳವಾಗಿ ಬಾಯಲ್ಲಿ ಉಚ್ಚರಿಸುತ್ತಿದ್ದರು. ಅವರ ಕಂಠದಲ್ಲಿ ಕೇಳುವವರನ್ನು ಹಿಡಿದಿಡುವ ಮೋಹಕಶಕ್ತಿ ಅಡಗಿತ್ತು.

ತರಣಿಬಿಂಬದ ನುಡಿಯೊ ಕೌಸ್ತುಭ
ವರಮಣಿಯ ಖಂಡದ ಕಣಿಯೋ ಮ
ರ್ತ್ಯರಿಗೆ ಮಗನಿವನಲ್ಲ ಮಾಯಾಬಾಲಕನೊ ಮೇಣು

ಪದ್ಯವನ್ನು ಓದುವಾಗ ಪಂಜೆಯವರ ಧ್ವನಿಯಲ್ಲಿ ಮಾತೃವಾತ್ಸಲ್ಯ ಉಕ್ಕಿ ಹರಿಯುತ್ತಿತ್ತು. ಅನಂತರ ರಾಜಕುಮಾರನಾದವನು ರಾಧೇಯನ ಮನೆಯಲ್ಲಿ ಮಾತಾಪ್ರೇಮ ವಂಚಿತನಾಗಿ ಶಸ್ತ್ರ ಪಾಂಡಿತ್ಯ ಪ್ರದರ್ಶನದಲ್ಲಿ, ಪಾಂಡವರೂ ಅರ್ಜುನನೂ ಸಮಸ್ತ ನೈಪುಣ್ಯವನ್ನೂ ತೋರಿಸಲು "ಗಂಗಾಭವ ಕೃಪದ್ರೋಣಾದಿಗಳ ಮುಖಗಳು ಅರಳಿದವು. ಪಾಂಡವರ ಜನನಿಯ ಮುಖ, ಸುಮ್ಮಾನಗೊಂಡುದು ; ದುರ್ಯೋಧನನ ಜನನಿಯ ಮುಖ ವರ್ಣಿಸಲಸದಳವಾದ ದುಮ್ಮಾನದಲ್ಲಿ ನೊಂದುದು. ಆಗ ಕರ್ಣನು ಎದ್ದನು, ಇವರ ಪಕ್ಷಪಾತವನ್ನು ನೋಡಿ "ಫಲುಗುಣನ ಹೊಗಳುವ ನಾಯಿಗಳು" ಎಂದು ಗರ್ಜಿಸುತ್ತ, ಕುರುರಾಯರನುಜರ ಮೇಳದಿಂದ ಹೊರಬಂದನು. ಗುರುಗಳಿಗೆ ಕೈಮುಗಿದು ಸೂರ್ಯನಿಗೆ ತಲೆಬಾಗಿ ಈತನಾರೆಂದು ಜನರೆಲ್ಲರೂ ಕೌತುಕಗೊಳ್ಳುತ್ತಿರಲು, ಪಾರ್ಥನು

ತೋರಿದ ರೀತಿಯಲ್ಲಿಯೇ ಎಲ್ಲ ದಿವ್ಯಾಸ್ತ್ರಗಳನ್ನೂ ಪ್ರಯೋಗಿಸಿದನು. ಬಾಣದಲ್ಲಿ ಪಾರ್ಥನ ಬಿನ್ನಾಣವನ್ನೂ ತೋರಿದನು. "ಸೆಣಸುವೊಡೆ ಬಾ" ಎಂದು ಅರ್ಜುನನನ್ನು ಗಜರಿದನು. ಇಬ್ಬರ ಮೀಸೆಗಳೂ ಕುಣಿದುವು ; ಕಣ್ಣು ಬೆಂಕಿ ಕಾರಿತು. ಕಣೆ ಕಣೆಗಳಾಟದಲಿ ಶರಖಂಡನೆಯ ಕೋಲಾಟದಲಿ ಖಣಿ ಖಣಿ ಖಣಿಲು ಖಣಿ ಖಣಿ ಮಸಗಲು ಇಬ್ಬರೂ ಕೈಚಳಕವನ್ನು ತೋರಿದರು.

ಆಗ ಏನಾಯಿತು ! ಕರ್ಣನಿಗೆ ಅವನ ಪೌರುಷ ಬಿಲ್ಲುಗಾರಿಕೆ ಸಾಹಸಕ್ಕೆ ಮೆಚ್ಚುಗೆ ನೀಡಲು ಸಭೆ ಒಪ್ಪಲಿಲ್ಲ. ಆಗ ಅವನ ಮೇಲೆ ಏನೋ ಒಂದು ಗೂಬೆ ಕೂರಿಸಿ ಅವನ ಸಾಧನೆಗೆ ಮಸಿ ಬಳಿಯಲು ಪ್ರಯತ್ನಿಸಿದರು. ಪರೀಕ್ಷೆ ಕೊಟ್ಟು ಗೆದ್ದರೂ ಸಹ ಅದು ಸರಿಯಲ್ಲವೆಂದು ಅದಕ್ಕೆ ಒಂದು ಕುಂಟು ನೆಪ ಒಡ್ಡಿದರು. ಇವನು ಯಾರು ? ಇವನ ಕುಲ ಯಾವುದು ? ಇವನ ತಂದೆ ತಾಯಿ ಯಾರು ? ಇವನಿಗೆ ಈ ಸ್ಪರ್ಧೆಯಲ್ಲಿ ರಾಜಕುಮಾರರೊಂದಿಗೆ ಸ್ಪರ್ಧಿಸಲು ಹಕ್ಕು ಇಲ್ಲ. ಅರ್ಹತೆಯೇ ಇಲ್ಲ, ಎಂದರು. ಫಲಿತಾಂಶ ತಿಳಿದ ಮೇಲೆ ಸ್ಪರ್ಧೆಯಲ್ಲಿ ದೋಷವನ್ನು ಹುಡುಕಿದರು.

ಆಯಿತೆಲವೋ ಕರ್ಣ ನೀ ನನು
ನಾಯಕನೊ ನೃಪಹಾರದಲಿ ಮೇಣ್
ನಾಯಕನೊ ನೀನಾವನೆಂದನು ಕೃಪನು ಖಾತಿಯಲಿ

ಹಿರಿಯರು ಪಕ್ಷಪಾತದ ನಿಲುವನ್ನು ಹಿಡಿದರು. ಸ್ವಭಾವದಿಂದಲೇ ಪಂಜೆಯವರು ದೀನರು ದಳಿತರ ಮಿತ್ರರೂ ಅನ್ಯಾಯ ಪ್ರತಿಭಟಕರೂ ಆದುದರಿಂದ ಆ ಭಾಗವನ್ನು ಅವರು ಬಹು ಮನೋಜ್ಞವಾಗಿ ವಿವರಿಸಿದರು. ಇಂದಿನ ಪರೀಕ್ಷೆಗಳು, ಅಭ್ಯರ್ಥಿಗಳಿಗೆ ಸಂದರ್ಶನ ಅರ್ಹತೆಯನ್ನು ಕಡೆಗಣಿಸಲು ಒಡ್ಡುವ ಕುಂಟುನೆಪಗಳು ಇವುಗಳನ್ನೆಲ್ಲ ಅವರು ಬಹಳ ಮನೋಜ್ಞವಾಗಿ ವಿವರಿಸಿದರು. ಕರ್ಣನ ಪಾತ್ರದಲ್ಲಿ ಪಂಜೆಯವರಿಗೆ ಅಭಿಮಾನ ಬಹಳ.

"ಗದುಗಿನ ಭಾರತದ ಪಾತ್ರ ಚಿತ್ರಗಳಲ್ಲಿ ಕರ್ಣನದು ಕಾರ್ಯ ರೀತಿಯಿಂದ ಮೊದಲನೆಯ ಉತ್ಕೃಷ್ಟ. ಕರ್ಣ ಎಂದರೆ ಗರ್ವಿಷ್ಟ, ಆತ್ಮಪ್ರಶಂಸಾಪರ ಎಂದು ಹಲ ಕವಿಗಳ ಮತ, ನಾರಣಪ್ಪನಿಗೂ ಅವೇ ಶಾಲೆಯಲ್ಲಿ ವಿದ್ಯಾಭ್ಯಾಸವಾಗಿದೆ. ಆದರೆ ಇವನ ಕರ್ಣ ಸ್ವಲ್ಪ ಬೇರೆ. ಮೂಲಭಾರತದಲ್ಲಿ ಸಹ ಕರ್ಣನ ಪಾತ್ರ, ಕುಂಚದ ಒಂದೇ ಗೆರೆಯಲ್ಲಿ ಸಮಾಪ್ತ. ಸ್ಫುಟವಾಗಿ ಮೂಡಿಸಿಲ್ಲ. ಅವನ ಧೀರೋದಾತ್ತ ಗುಣಗಳು ಬೆಳಕಿಗೆ ಬಂದಿಲ್ಲ. ಇದರಲ್ಲಿ ಕರ್ಣ ಪೂರಾಚಂದ್ರ ಪೂರಾ ಮೂಡಿದ್ದಾನೆ. ಓದುಗರ ಕರುಣೆಗೆ ಪಾತ್ರನಾಗಿದ್ದಾನೆ.

"ಅರಮನೆಯ ಸಿಂಹ ಕರ್ಣ, ಹೊಲಗೇರಿಯ ಹಂದಿಯಾಗಿ ಬೆಳೆದ. ಕುಟ್ಟಿ ಕೆಡುವಬಲ್ಲ ಗಂಡುಗಲಿ. ಆದರೆ ಹುಟ್ಟು ತಿಳಿಯದ ಹೀನ. ನಾಡಿಯ ರಕ್ತ ದಿವ್ಯವಿದ್ದರೇನು ? ನಾಡಿನಲ್ಲಿ ಅಪಾಂಗ್ತೆಯ, ಬಹಿಷ್ಕೃತ. ವಿದ್ಯೆ ಕಲಿತವ, ಆಸೆ ಉತ್ಸಾಹವಿದೆ. ಗುರೂಪದೇಶದ ಭಾಗ್ಯವಿಲ್ಲ. ಕುಲೀನರಲ್ಲಿ ಮೋರೆ ಎತ್ತಲಾರ. ಮೂಕ, ತಾಯಿ ತೊರೆ

ದಳು, ತಂದೆ ಕರೆಯಬಾರದವ. ಇದು ನಾರಣಪ್ಪನ ಚಿತ್ರ. ಈ ಕರ್ಣನಿಗೆ ದುರ್ಯೋಧನ ಕೆಳೆಯ. ಅವರದು ಸಂದುಗಾಣದ ಸಖ್ಯ. ದುರ್ಯೋಧನನ ಅಭಿಮಾನ ಕರ್ಣನ ಪ್ರಶಸ್ತಿ, ಕರ್ಣನ ಸ್ನೇಹ ಕುರುಪತಿಯ ಕವಚ."

ಅಂದಿನ ಭಾಷಣದಲ್ಲಿ ಪಂಜೆಯವರು ನಿಜವಾಗಿ ಕರ್ಣನ ಒಂದು ಹೊಸಚಿತ್ರವನ್ನು ಸೃಷ್ಟಿಸಿದರು. ದುರಂತ ನಾಯಕನ ಪಾತ್ರಕ್ಕೆ ಕರ್ಣ ಒಂದು ಉಜ್ವಲ ಉದಾಹರಣೆ. ಆತನನ್ನು ಕುರಿತು ಯಾರಾದರೂ ಶ್ರೇಷ್ಠ ಲೇಖಕರು ಒಂದು ಗಂಭೀರ ನಾಟಕವನ್ನು ಬರೆಯಬೇಕು ಎಂದು ಹೇಳಿದರು. [ಅವರ ಈ ಸೂಚನೆಯನ್ನು ಅಂಗೀಕರಿಸಿಯೋ ಏನೊ ಅಬಾದ ಕೆಲವು ದಿನಗಳ ನಂತರ ಕರ್ಣನ ಮೇಲೆ ಒಂದು ನಾಟಕ ಸಹ ಪ್ರಕಟವಾದಂತೆ ನನಗೆ ನೆನಪಿದೆ.]

ಭಾಷಣದುದ್ದಕ್ಕೂ ಪಂಜೆಯವರು ಕುಮಾರವ್ಯಾಸನ ಇನ್ನೂ ಅನೇಕ ಪದ್ಯಗಳನ್ನು ಹೇಳಿದರು. ಪಂಪನ ಪದ್ಯವನ್ನೂ ಹೇಳಿದರು.

ನೆನೆಯದಿರಣ್ಣ ಭಾರತದೊಳಿಂ ಪೆರರಾಮುಮನೊಂದೆ ಚಿತ್ತದಿಂ
ನೆನೆವೊಡೆ ಕರ್ಣನಂ ನೆನೆಯ ಕರ್ಣನೊಳಾರ್ ದೊರೆ ಕರ್ಣನೇರು ಕ
ರ್ಣನ ಕಡುನನ್ನಿ ಕರ್ಣನಳವಂಕದ ಕರ್ಣನ ಚಾಗಮೆಂದು ಕ
ರ್ಣನ ಪಡೆಮಾತಿನೊಳ್ ಪುದಿದು ಕರ್ಣರಸಾಯನ ಮಲ್ತೆ ಭಾರತಂ ||

ಕರ್ಣನ ರೋಮಾಂಚಕಾರಿ ಮನಕರಗುವ ಭಾವಪೂರ್ಣ ಕಥೆಯ ಚಿತ್ರವನು ಅತ್ಯಂತ ಸೂಕ್ಷ್ಮವಾಗಿಯೂ ಸ್ಪಷ್ಟವಾಗಿಯೂ ಬಿಡಿಸದರು. ಕೇಳುತ್ತ ಕೇಳುತ್ತ ಜನರ ಕಣ್ಣುಗಳಿಂದ ಆನಂದಭಾಷ್ಪವೇ ಹರಿದು ಹೋಯಿತು. ತಾವು ದೃಢಚಿತ್ತರೆಂದು ಕೊಂಡವರೆಲ್ಲ ಕಣ್ಣುಗಳಲ್ಲಿ ತುಂಬಿದ್ದ ನೀರನ್ನು ಬೆರಳುಗಳಿಂದ ಮಿಡಿದರು. ಕಾವ್ಯರಸ ಯಾವ ಪರಿಣಾಮವನ್ನು ಉಂಟುಮಾಡಬಲ್ಲದು ! ಬಲ್ಲವರಾರು ? "ಕಾವ್ಯರಸ ಮಾಧುರ್ಯಂ ಶಂಕರೋ ವೇತ್ತಿ ವಾನವಾ" ಪಂಜೆಯವರು ಇನ್ನೂ ಅನೇಕ ಪದ್ಯಗಳನ್ನು ಹೇಳಿದರು. ಅವರ ಜ್ಞಾಪಕಶಕ್ತಿ ಅಗಾಧ. ನಾನು ಭಾರತದ ಮೇಲೆ ಅವರ ಉಪನ್ಯಾಸವನ್ನು ಕೇಳಿದುದು ಅದೇ ಮೊದಲು. ನಾನು ಕಣ್ಣು ಕಿವಿ ಬಾಯಿ ತೆರೆದು ಕೊಂಡು ಅವರ ಭಾಷಣದ ಗುಂಗಿನಲ್ಲಿ ಲೀನವಾಗಿದೆ. ನೆನೆಸಿಕೊಂಡರೆ ಇಂದೂ ಅದು ಕಿವಿಯಲ್ಲಿ ಪ್ರತಿಧ್ವನಿಸುವಂತೆ ತೋರುತ್ತದೆ. ಪಂಜೆಯವರ ಭಾಷಣದ ನಂತರ ಶ್ರೀ ಮಾಸ್ತಿವೆಂಕಟೇಶಅಯ್ಯಂಗಾರ್ಯರೇ ಉಪಸಂಹಾರದ ಮಾತುಗಳನ್ನು ಆಡಿದರು. ಅವರು ಹೇಳಿದ ಒಂದು ಮಾತು ಈಗಲೂ ನನಗೆ ನೆನಪಿದೆ. "ಪಂಜೆ ಎಂಬ ಹೆಸರಿಗೆ ಮಂಗೇಶರಾಯರು ಒಂದು ದೊಡ್ಡ ಕೀರ್ತಿ ತಂದರು. ಅದಕ್ಕೆ ಅಂಟಿದ್ದ ಕಳಂಕವನ್ನು ತೊಡೆದು ಹಾಕಿಬಿಟ್ಟರು ಎಂದರು. (ಪಂಜೆ ಎಂದರೆ ಭಿಕ್ಷುಕ, ತಿರುಕ, ದೀನ ಎಂದು ಅರ್ಥ.)

ಮರುದಿನ ಬೆಳಿಗ್ಗೆ ಶ್ರೀರಾಮಪುರದಲ್ಲಿ ಆಗ ನಾನು ವಾಸಮಾಡುತ್ತಿದ್ದ ಮನೆಗೆ– ಕನ್ನಡ ಪಂಡಿತ ಸೀತಾರಾಮ ಶಾಸ್ತ್ರಿಗಳ ಮನೆ– ಬಂದು ನನಗೆ ಸಂತೋಷವುಂಟುಮಾಡೆ

ಬೇಕೆಂದು ನಾನು ಪಂಜೆಯವರನ್ನು ಬೇಡಿದೆ. ಪಂಜೆಯವರು ಕಾಲವನ್ನು ನಿಗದಿಮಾಡಿ ಆ ವೇಳೆಯಲ್ಲಿ ತಾವು ಬಿ. ಎಂ. ಶ್ರೀಕಂಠಯ್ಯನವರ ಮನೆಯಲ್ಲಿ ಇರುವುದಾಗಿಯೂ, ಅಲ್ಲಿಗೆ ಹೋಗಿ ನಾನು ಅವರನ್ನು ಕರೆದುಕೊಂಡು ಹೋಗಬಹುದೆಂದೂ ಹೇಳಿದರು. ಅಲ್ಲಿಂದ ನಮ್ಮ ಮನೆಗೆ ಹೋಗುವುದು ಹೇಗೆ ? ಎಂದು, ನಾವು ಚರ್ಚಿಸಿದೆವು. ನಾನು "ಒಂದು ಜಟಕಬಂಡಿ ತರುತ್ತೇನೆ. ಅದರಲ್ಲಿ ಕರೆದುಕೊಂಡು ಹೋಗುತ್ತೇನೆ" ಎಂದೆ. ಪಂಜೆಯವರು "ಅದರಲ್ಲಿ ಕೈಕಾಲು ಮುದುರಿಕೊಂಡು ಹೋಗುವುದು ಕಷ್ಟವಲ್ಲಪ್ಪ, ನಡೆದುಕೊಂಡೇ ಹೋಗೋಣ" ಎಂದರು. ಆಗ ಬೆಂಗಳೂರಿನಲ್ಲಿ ರಸ್ತೆ ಬಸ್ ಸೌಕರ್ಯ, ಆಗ ತಾನೆ ಅಲ್ಲಲ್ಲಿ ಪ್ರಾರಂಭವಾಗುತ್ತಿತ್ತು. ಆಗಿನ ಕಾಲಕ್ಕೆ ಶ್ರೀ ನಿಟ್ಟೂರು ಶ್ರೀನಿವಾಸ ರಾಯರು ಒಬ್ಬ ಒಳ್ಳೆ ಕುದುರೆಗಾಡಿಯವನನ್ನು ಗೊತ್ತುಮಾಡಿಕೊಂಡಿದ್ದರು. ಆ ಸಾಹೇಬ, ಸೈನ್ಯಕ್ಕೆ ಸೇರಿದ್ದ ಒಂದು ಬೆಟ್ಟದಂತಹ ಕುದುರೆಯನ್ನೂ ಅದಕ್ಕೇ ಅನುಗುಣ ವಾದ ಎತ್ತರವಾದ ಒಂದು ಗಾಡಿಯನ್ನೂ ಇಟ್ಟು ಬಾಡಿಗೆಗೆ ಹೊಡೆಯುತ್ತಿದ್ದ. ಅಂಥ ಗಾಡಿಯ ಮೇಲೆ ಕೂರುವುದೇ ಒಂದು ಸಂತೋಷ. ಅವನು ಒಂದು ರೀತಿಯಲ್ಲಿ ಶ್ರೀ ನಿಟ್ಟೂರರ ಭಕ್ತ. ಶ್ರೀನಿವಾಸರಾಯರು ಗಾಡಿಯವನನ್ನೂ ಗಾಡಿ ಕುದುರೆಯನ್ನೂ ನನ್ನ ವಶಕ್ಕೆ ಕೊಟ್ಟರು. ನಾನು ಪಂಜೆಯವರನ್ನು ಕೂರಿಸಿಕೊಂಡು ಆ ಗಾಡಿಯಲ್ಲಿ ನಮ್ಮ ಮನೆಗೆ ಹೋದೆ. ಕುದುರೆಗಾಡಿ, ಸೊಗಸಾಗಿ ಸಾರೋಟಿನಂತೆ ಓಡಿತು. ಯಾರಿಗೂ ಸ್ವಲ್ಪವೂ ಶ್ರಮವಾಗಲಿಲ್ಲ.

ಪಂಜೆಯವರು ನಮ್ಮ ಮನೆಗೆ ಬರುವ ಸಮಾಚಾರವನ್ನು ಅರಿತು ಗಮಕಿ ಸಂಪತ್ಕುಮಾರಾಚಾರ್ಯರು ಅವರನ್ನು ಕಾಣಬೇಕೆಂದು ನಮ್ಮ ಮನೆಗೆ ಬಂದಿದ್ದರು. ಪಂಜೆಯವರಿಗೆ ನಾನು ಅವರ ಪರಿಚಯವನ್ನು ಮಾಡಿಸಿದನಂತರ ಸಂಪತ್ಕುಮಾರಾ ಚಾರ್ಯರು ತಮ್ಮ ಗಮಕ ನಾಲ್ಕು ಪದ್ಯಗಳನ್ನಾದರೂ ಕೇಳಿ ತಮ್ಮನ್ನು ಆಶೀರ್ವದಿಸ ಬೇಕೆಂದು ಪಂಜೆಯವರನ್ನು ಕೇಳಿದರು. ಆ ವೇಳೆಗೆ ಸಂಪತ್ಕುಮಾರಾಚಾರ್ಯರು ಇನ್ನೂ ಅಷ್ಟು ಪ್ರಸಿದ್ಧರಾಗಿರಲಿಲ್ಲ. ಪಂಜೆಯವರು ಸಂತೋಷದಿಂದ ಒಪ್ಪಿದರು. ಮಗ್ಗುಲು ಮನೆಯಿಂದ ಹಾರ್ಮೋನಿಯಂ ತಂದೆವು. ಆಚಾರ್ಯರು ಪಂಜೆಯವರಿಗೆ ದೀರ್ಘದಂಡ ನಮಸ್ಕಾರವನ್ನು ಮಾಡಿ, ಜೈಮಿನಿ ಭಾರತದ ಸುಧನ್ವನ ಭಾಗವನ್ನು ವಾಚಿಸಲು ಪ್ರಾರಂಭಿಸಿದರು. ಆಚಾರ್ಯರ ಕಂಠಶ್ರೀ ಅವರ ಬಲಿಷ್ಠವಾದ ದೇಹದಂತೆ ಪುಷ್ಟವೂ ಸುಲಭವಾಗಿ ಉಚ್ಚಸ್ಥಾಯಿಗೆ ಏರುವುದೂ ಆಗಿದ್ದಿತು. "ಶ್ರೀಯುವತಿಯಂಬಕ ಚಕೋರಕಂ ಪೊರೆಯೆ" ಮೊದಲನೆಯ ಪದ್ಯವೇ ಆಕಾಶದಲ್ಲಿ ಮೇಘಘರ್ಜನೆಯಂತೆ ಮೊಳಗಿ ಮಂಗಳಕರವಾದ ಶಂಖವಾದ್ಯವಾಗಿ ವಾತಾವರಣವನ್ನೆಲ್ಲ ತುಂಬಿತು. ಹತ್ತು ನಿಮಿಷವಲ್ಲಿಯೇ ಆ ಬೀದಿಯ ಜನರೆಲ್ಲ ಬಂದು ನನ್ನ ಚಿಕ್ಕ ಮನೆ ತುಂಬಿ ಬೀದಿಯಲ್ಲಿಯೇ ನಿಂತರು. ಆಚಾರ್ಯರ ಕಂಠ, ಸುಲಭವಾಗಿ ಐವತ್ತು ಗಜ ಕೇಳಿಸುತ್ತಿತ್ತು. ಗಮಕಿಗಳು ಅನೇಕರಿದ್ದರೂ ಅಂಥ ಕಂಠಶ್ರೀ ಅಂತರಿಕ್ಷವನ್ನೇ ಮೇಲಕ್ಕೆ ಭೇದಿಸಿಕೊಂಡು ಹೋಗು ತ್ತಿದ್ದ ಮೊಳಗು ಇವನ್ನು ನಾನು ಇದುವರೆಗೆ ಕೇಳಿಲ್ಲ. ಆಚಾರ್ಯರು ಅರಿಸಿಕೊಂಡಿದ್ದ

ಹೆತ್ತು ಪದ್ಯಗಳನ್ನು ಓದಿ, ಪಂಜೆಯುವರ ಮುಖವನ್ನು ನೋಡಿದರು. ಪಂಜೆಯುವರು ತಮ್ಮ ಗಡಿಯಾರವನ್ನು ನೋಡಿ 'ಈ ಆನಂದವನ್ನು ನಾನು ನಿರೀಕ್ಷಿಸಿರಲಿಲ್ಲ. ಇಷ್ಟೊಂದು ಜನ ಬಂದು ನಿಂತಿದ್ದಾರೆ ಕೇಳಲಿ. ಕಾವ್ಯರಸಾಸ್ವಾದಕ್ಕಿಂತ ಹೆಚ್ಚಿನ ಸಂತೋಷ ಯಾವುದಿದೆ ?" ಎಂದರು. ಪಂಜೆಯುವರಿಗೂ ಪದ್ಯಗಳು ಬಾಯಿಗೆ ಬರುತ್ತಿದ್ದವು. ಆ ಪದ್ಯ ಓದಿ ಈ ಪದ್ಯ ಓದಿ ಎಂದು ಅವರೇ ಹೇಳಿ "ಭೋ ಎಂದು ಬಳ ಪರಿವಾರ ಮಡಿಗಡಿಗೆ" ಎಂಬ ಪದ್ಯವನ್ನು ಓದಿದಾಗ ಗದ್ಗದ ಕಂಠರಾಗಿ "ಹಿಂದೆ ಪ್ರಹ್ಲಾದನಂ ಪಾಲಿಸಿದೆ ಗಡ" ಪದ್ಯವನ್ನು ಓದಿ ಎಂದರು. ವಾಚನವಾದ ಮೇಲೆ ಅಚಾರ್ಯನನ್ನು ಮೆಚ್ಚಿ" ಸಂತೋಷಂ ಜನಯೇತ್ ಪ್ರಾಜ್ಞಃ ಈ ಕಲೆ ನಿಮಗೆ ಸಿದ್ಧಿಸಿದೆ" ಎಂದು ಆಶೀರ್ವದಿಸಿದರು. ಸೇರಿದ್ದವರಲ್ಲಿ ಎಲ್ಲ ಹುಡುಗರೂ ಕೆಲವು ವಯಸ್ಕರೂ ನಾಗರಹಾವೆ, ಪದ್ಯವನ್ನು ಹಾಡಬೇಕೆಂದು ಬಲಾತ್ಕರಿಸಿದರು. ಪಂಜೆಯುವರು, ನಾಗರ ಹಾವೆ ಹಾವೊಳು ಹೂವೆ, ಎಂಬ ಪದ್ಯವನ್ನು ತಮ್ಮ ಮೃದುವಾದ ಧ್ವನಿಯಲ್ಲಿ ಸುಶ್ರಾವ್ಯವಾಗಿ ಹಾಡಿದರು. ಬಾಬಾ ಬಾಬಾ ಬಾಬಾ ಬಾಬಾ ಬಾ, ನೀ ನಿ ನೀ ನಿ ನೀ ನಿ ನೀ ನಿ ತಾ ತಾ ತಾ ತಾ ತಾ ತಾ ತಾ ತಾ | ಪೋ ಪೋ ಪೋ ಪೊ ಪೋ ಪೋ ಪೋ ಪೋ ಎಂಬ ಪಲ್ಲವಿಯನ್ನು ಬಾಯಿಗೆ ಬಂದಂತೆ ಹಾಡುತ್ತ ಕೂಗುತ್ತ ಹೊರಟು ಹೋದರು.

ನಮ್ಮ ಮನೆಯಲ್ಲಿ ಪಂಜೆಯುವರು ಸ್ವಲ್ಪ ಫಲಹಾರ ಹಣ್ಣು ಕಾಫಿ ತೆಗೆದುಕೊಂಡರು. "ಕಾಫಿ ಚೆನ್ನಾಗಿದೆ. ನನಗೆ ಮೈಸೂರುದೇಶದವರು ಮಾಡುವ ಕಾಫಿ ತುಂಬ ಇಷ್ಟ. ನಿಮಗೆ ಅದರ ಹದ ಗೊತ್ತಿದೆ" ಎಂದರು. ನಾನೂ ನನ್ನ ಹೆಂಡತಿಯೂ ಅವರಿಗೆ ನಮಸ್ಕಾರ ಮಾಡಿದೆವು. ಮನಃಪೂರ್ವಕವಾಗಿ ಆಶೀರ್ವಾದ ಮಾಡಿದರು. ನನ್ನ ಹಿರಿಯ ಮಗ "ಬಾಬಾ ಬಾಬಾ ನೀನೀಪೋಪೋ ತಾತಾತಾತಾ" ಎಂದು ಕೂಗಿದಾಗ ಅವರು "ನಾನೂ ತಾತಾ, ಪೊ ಪೊ ಎನ್ನುತ್ತೀಯಾ ತುಂಟ" ಎಂದು ಅವನ ಗಲ್ಲವನ್ನು ಚಿವುಟಿದರು. ಒಂದು ರಥೋತ್ಸವ ಒಂದು ದೇವರು ಒಂದು ಪವಾಡ ಬರುವಂತೆ ಬಂದು ನನ್ನ ಬಾಡಿಗೆಯ ಬಡಮನೆಯಲ್ಲಿಯೇ ಜನಜಾತ್ರೆಯನ್ನು ಸೇರಿಸಿ, ಒಂದು ಗಳಿಗೆ ಮನೆಯ ಮೇಲೆ ಪ್ರಕಾಶವನ್ನೂ, ಮಹಿಮೆಯನ್ನೂ ಚೆಲ್ಲಿ, ಮಂಗೇಶರಾಯರು ಹೊರಟು ಹೋದರು. ಆ ಸಂಗತಿಯನ್ನು ನೆನೆದಾಗಲೆಲ್ಲ ನನ್ನ ಮನಸ್ಸು ದೇವತಾಸಾನ್ನಿಧ್ಯದಲ್ಲಿದ್ದಂತೆ ಮಡಿಯಾಗುವುದು.

ಹೊಸಕನ್ನಡ ಸಾಹಿತ್ಯದ ಈಚಿನ ಎಲ್ಲ ಪ್ರಕಾರಗಳಿಗೂ ಕವಿತೆ ಸಣ್ಣಕತೆ ಗಂಭೀರ ಪ್ರಬಂಧ, ಕಿರು ಕಾದಂಬರಿ ಲಘುಪ್ರಬಂಧ, ಹರಟೆ, ಹಾಸ್ಯ ಪ್ರಬಂಧ, ಇವುಗಳ ಮೂಲ ಪುರುಷರ ಪೈಕಿ ಪಂಜೆಯವರದು ಅಗ್ರಪಂಕ್ತಿ. ಇಂತಹ ಪ್ರಯೋಗಗಳನ್ನು ಅವರು 1902ರಿಂದಲೇ ಮಾಡಿದ ದಾಖಲೆಗಳಿವೆ. ಕನ್ನಡವನ್ನು ಆದರ ಚಂಪೂ ಕಂದ ಅರ್ಥವಾಗದ ಸಂಸ್ಕೃತ ಭೂಯಿಷ್ಠವಾದ ಅಲಂಕಾರ ಛಂದಸ್ಸುಗಳ ಭಾರವಾದ ಜಡಸಂಕೋಲೆಯಿಂದ ಬಿಡುಗಡೆ ಮಾಡಿ ಅದನ್ನು ಸಾಮಾನ್ಯ ವಾಚಕನಿಗೂ ಮಕ್ಕಳಿಗೂ ಸ್ತ್ರೀಯರಿಗೂ ಗ್ರಾಮೀಣರಿಗೂ ತಿಳಿಯುವಂತೆ ಸರಳೀಕರಿಸಿದವರು ಪಂಜೆ ಅವರು. ಕನ್ನಡ ಭಾಷೆ

ಅದರ ನೂತನ ಸರಳರೀತಿಯಲ್ಲಿ ಜಗತ್ತಿನ ಸಮಸ್ತ ಜ್ಞಾನ ವೈಜ್ಞಾನಿಕ ವಿಷಯ ಸಾಮಾಜಿಕ ಸುಧಾರಣೆ ರಾಜಕೀಯ ಪ್ರಯೋಜನ ಇವುಗಳಿಗೆಲ್ಲ ಅರ್ಹವಾದ ವಾಹಕ ವಾಗುವಂತೆ ಈಗ ಐವತ್ತು ವರುಷಗಳಿಗೂ ಹಿಂದೆ ಅಡಿಪಾಯುವನ್ನು ಹಾಕಿದವರು ಪಂಜೆ ಯವರು. ಹಾವಿನಹಾಡು, ತೆಂಕಣಗಾಳಿಯಾಟ, ಹುತ್ತರಿಹಾಡು, ಡೊಂಬರಚೆನ್ನೆ ಈ ಬಗೆಯ ಸುಲಭವಾದ ಹಾಡುಗಳನ್ನು ಆವರೆಗೆ ನಮ್ಮ ಬಾಲಕರು ಕೇಳಿಯೇ ಇರಲಿಲ್ಲ. ಪಂಜೆಯವರು ಉದ್ದಾಮ ಕಾವ್ಯಗಳಲ್ಲಿ ಪರಿಣಿತರೂ ಒಳ್ಳೆ ಭಾಷಾ ಶಾಸ್ತ್ರಜ್ಞರೂ ಕವಿ ಗಳೂ ಆದರೂ ತಮ್ಮ ಅಮೂಲ್ಯವಾದ ಕಾಲ ಮತ್ತು ಪ್ರತಿಭೆಗಳ ಬಹುಪಾಲನ್ನು ಮಕ್ಕಳ ಸಾಹಿತ್ಯ ನಿರ್ಮಾಣಕ್ಕಾಗಿಯೇ ವಿನಿಯೋಗಿಸಿದರು. ಮಕ್ಕಳ ಮನೋಭಾವ ಅಭಿರುಚಿ ಸ್ವಭಾವ ಮೃದುಮನಸ್ಸು ಇವುಗಳನ್ನು ಅವರಂತೆ ಅರಿತ ಉಪಾಧ್ಯಾಯರು ಇನ್ನೂ ಬರಲಿಲ್ಲ. ಕಥಾವಿಷಯ ಮಕ್ಕಳ ಪ್ರಪಂಚಕ್ಕೆ ಒಳಪಟ್ಟಿರಬೇಕು. ದೋಸೆ ಹುಯ್ಯುವುದು, ಗಾಡಿ ಎಳೆಯುವುದು, ತೇರು ಎಳೆಯುವುದು ಮೊದಲಾದುವು ಮಕ್ಕಳ ಇಂದ್ರಿಯ ಗ್ರಹಣಕ್ಕೆ ಒಳಪಟ್ಟವು ಎಂಬುದು ಅವರ ಮತವಾಗಿತ್ತು.

ಪಂಜೆಯವರ ಕೃತಿಗಳಲ್ಲಿ ಮುಖ್ಯವಾಗಿ ಮಕ್ಕಳಿಗಾಗಿ ಬರೆದ ಕವಿತೆಗಳು ಕಿರುಗತೆ ಗಳು ಕಾಗೆಗುಬ್ಬಿ, ಆಲಿಬಾಲ– ಚಾರಿತ್ರ್ಯಕ ಕಿರುಗತೆಗಳು ದುರ್ಗಾವತಿ ಪೃಥುಲಾ ವೀರ ಮತಿ ಶೈಲಿನಿ ಮತ್ತು ಗದ್ಯಪ್ರಬಂಧಗಳು ಲಭ್ಯವಾಗಿವೆ. ಪಂಜೆಯವರು ದೊಡ್ಡಕವಿ. ದೊಂಬರ ಚೆನ್ನೆಯ ಈ ಸಾಲುಗಳೇ ಅದಕ್ಕೆ ಸಾಕ್ಷಿ.

"ಹೆಣ್ಣು ಬಂದಳು ಹಣ್ಣು ಬಿಡದಾ ಸಣ್ಣ ಬಳ್ಳಿಯು ಬೆಡಗಿನಾ
ಮಣ್ಣೊಳಾಡುವ ಬೆಣ್ಣೆಯಂತಿಹ ಕಣ್ಣು ಕಟ್ಟನ ಸೊಬಗಿನಾ
ಮಣಿದು ಹಗ್ಗಕೆ ಹಾರಿಸಿಡಿದಳು ಕುಣಿವ ಮರಿಸಿಡಿಲಂತೆಯೆ
ಹೆಣೆದು ಮೈಯನು ಹಾವಿನಂತೆಯೆ ಗಣೆಗೆ ಸರಿದಳು ಸರ್ರನೆ

ರಾಜನು ಡೊಂಬಿತಿಯನ್ನು ನೋಡುವುದನ್ನು ಕವಿ, ಹೀಗೆ ವಿವರಿಸುತ್ತಾನೆ.

ಇದ್ದು ನೋಡಿದ ಎದ್ದು ನೋಡಿದ ಕದ್ದು ನೋಡಿದ ಹುಡುಗಿಯಾ
ಮುದ್ದು ಗಿಣಿಯಲಿ ಅರಸಿನಾ ಮನ ಹದ್ದು ಹಾರಿತು ಬೇಗನೆ

* * * *

ಪಂಜೆಯವರ ಗದ್ಯಸಾಹಿತ್ಯದಲ್ಲಿ ಲಘುಪ್ರಬಂಧಗಳೇ ಮುಖ್ಯವಾದುವು. ಉತ್ತಮ ವಾದ ಸರಳವಾದ ಸುಲಭ ಗ್ರಾಹ್ಯವಾದ ಶೈಲಿ, ಬರವಣಿಗೆಯ ತುಂಬ ಮಲ್ಲಿಗೆಯ ಕಂಪಿ ನಂತೆ ಮನೋಹರವಾಗಿ ಹರಡಿರುವ ಮೃದುಹಾಸ್ಯ, ಮಧ್ಯೆಮಧ್ಯೆ ದೇಸೀಯ ನುಡಿಗಟ್ಟಿನ ತುಳು ಕೊಂಕಿಣಿ ಗಾದೆಗಳು ಹಾಸ್ಯಪ್ರಸಂಗಗಳು ಕಿರುಗತೆಗಳು, ಕನ್ನಡ ಕಾವ್ಯದ ತುಣುಕುಗಳು ಇವುಗಳೆಲ್ಲ ಅವರ ರಸಪಾಕದ ಲಕ್ಷಣಗಳು. ಅವರು ರಚಿಸಿದ ಗಂಭೀರ ವಾದ ಮತ್ತು ಪ್ರೌಢವಾದ ಪ್ರಬಂಧಗಳಲ್ಲಿ "ಮೂಡಬಿದರೆಯ ಹೊಸಬಸದಿಯ ಶಿಲಾ

ಶಾಸನಗಳು ಬಿಳಿಗಿರಿಯ ಕೆಲವು ಶಾಸನಗಳು ಮುಖ್ಯವಾದವು. ಇವುಗಳ ಹೊರತು ಪಂಜೆಯವರು ಕುಮಾರವ್ಯಾಸ, ಸರ್ವಜ್ಞ, ಬಾಲಸಾಹಿತ್ಯ, ನಂದಳಿಕೆ ಲಕ್ಷ್ಮೀನಾರಣಪ್ಪ ಇವರನ್ನೆಲ್ಲ ಕುರಿತು ಗದ್ಯ ಪ್ರಬಂಧಗಳನ್ನು ಬರೆದಿದ್ದಾರೆ. ಹಿಂದೆಯೇ ತಿಳಿಸಿದಂತೆ ಕುಮಾರವ್ಯಾಸ ಅವರಿಗೆ ತುಂಬ ಪ್ರಿಯನಾದ ಕವಿ. ಕುಮಾರವ್ಯಾಸನನ್ನು ಜೀವಮಾನವೆಲ್ಲ ವ್ಯಾಸಂಗ ಮಾಡಿ ಅವನ ಗುಣದೋಷಗಳ ಸಮತೂಕವನ್ನು ಪಂಜೆಯವರು ಮಾಡಿದ್ದರು.

"ಲಕ್ಷ್ಮೀಶ ವಿರೂಪಾಕ್ಷ ಮಲ್ಲಣಾರ್ಯ ಮುಂತಾದವರಲ್ಲಿ ವಿರೋಧಾಭಾಸ ಶ್ಲೇಷ ಚಿತ್ರಕವಿತೆ ಯಥೇಷ್ಟವಾಗಿದೆ. ಈತರದ ಚಿತ್ರಕವಿತೆ, ಛಂದೋಬದ್ಧ ಒಗಟು. ನಾರಣಪ್ಪ ಇಂಥ ಗೊಡವೆಗೆ ಹೋಗಲಿಲ್ಲ. ಅವನು ಆ ಜಾತಿಯ ಕವಿಯೇ ಅಲ್ಲ. ಕವಿತೆಗೆ ಅಲಂಕಾರ ಜೀವದಂತೆ. ಹಾಗೆಯೇ ಮನಸ್ಸಿಗೆ ಆಪ್ಯಾಯನ ಕೊಡುವ ಗುಣವೂ ಧಾರೆಯಲ್ಲಿ ಚೆಲುವೂ, ಕವಿತೆಯ ಜೀವಾಳ. ಕುಮಾರವ್ಯಾಸನಿಗೆ ಅವು ಹುಟ್ಟು ಗುಣ. ವರ್ಣನೆಯ ಹದ, ಪಾತ್ರ ನಿರೂಪಣೆ, ಸನ್ನಿವೇಶ ಆಯ್ಕೆ, ಅಲಂಕಾರ ನಿರ್ವಹಣೆಗೆ ಗದುಗಿನ ಭಾರತ, ಒಂದು ಲಕ್ಷ್ಯ ಉದಾಹರಣೆ. ಕುಮಾರವ್ಯಾಸನ ಕೃಷ್ಣ ಕನ್ನಡಿಗ ಕೃಷ್ಣ. ವಿಜಯನಗರದ ಕೃಷ್ಣರಾಯ ಚಾಳುಕ್ಯರ ರಾಯರ ಅರಮನೆಯ ನರುಗಂಪು ಅಲ್ಲಿದೆ. ಹಂಪೆಯ ಹೊಂಬಣ್ಣ ಇಲ್ಲಿ ಬಳಿದಿದೆ. ಮೂಲ ಭಾರತದ ಕೃಷ್ಣನ ಚಿತ್ರದಿಂದ ಇದು ತೀರಾ ಭಿನ್ನ. ಇದು ನಮ್ಮದು. ನಮ್ಮ ಅಭಿಮಾನಕ್ಕೆ ಪಾತ್ರವಾದದ್ದು. ಇದು ನಮ್ಮ ಎದೆಯರಳಿಸುತ್ತದೆ. ಅದು –ವೇದವ್ಯಾಸನ ಚಿತ್ರ– ಉತ್ತರ ಹಿಂದುಸ್ಥಾನದ್ದು.

ಪಂಜೆಯವರಿಗೆ ಕನ್ನಡ ತುಳು ಕೊಂಕಣಿ ಭಾಷೆಗಳು ಹುಟ್ಟಿನಿಂದಲೇ ಬಂದಿದ್ದವು. ಸಂಸ್ಕೃತ ಇಂಗ್ಲೀಷು ವ್ಯಾಸಂಗದಿಂದ ಕರಗತವಾಗಿದ್ದವು. ಸಾಧಾರಣ ಅನುಭವದಿಂದ ತೆಲುಗು ತಮಿಳು ಮಲೆಯಾಳಿ ಕೊಡವ ಭಾಷೆಗಳನ್ನು ಅರಿತಿದ್ದರು. ಕನ್ನಡ ನುಡಿಯ ಸಮೃದ್ಧತೆಯನ್ನು ಹೆಚ್ಚಿಸುವುದು ಇರುವ ಪದಗಳ ಸರಿಯಾದ ಅರ್ಥವನ್ನು ಗ್ರಹಿಸಿ ನಿರೂಪಿಸಿ ಉಪಯೋಗಿಸಿ ಅವುಗಳ ಸೊಬಗನ್ನು ಪುನರ್ ಮೌಲ್ವೀಕರಿಸುವುದು, ಚಲಾವಣೆಯಾಗದಿರುವುದರ ಶಕ್ತಿ ಸೌಂದರ್ಯ ಸತ್ವಗಳನ್ನರಿತು ಮತ್ತೆ ಬಳಕೆಗೆ ತರುವುದು, ಇತರ ದ್ರಾವಿಡ ಭಾಷೆಗಳಲ್ಲಿರುವ ಸಮಾನಾರ್ಥಕ ಮಾತುಗಳೊಂದಿಗೆ ಹೋಲಿಸಿ ಶುದ್ಧ ರೂಪವನ್ನು ಪರಿಶೋಧಿಸುವುದು. ಈ ಕ್ರಿಯೆಗಳೆಲ್ಲ ಅವರಿಗೆ ಒಲುಪ್ರಿಯವಾಗಿದ್ದವು. ಪದಾರ್ಥವೆಂಬ ಪ್ರಬಂಧವಲ್ಲಿ ಅವರು ಈ ಕಾರ್ಯವನ್ನು ಕುತೂಹಲಕಾರಿಯಾಗಿಯೂ ಸಮರ್ಪಕವಾಗಿಯೂ ಮಾಡಿದ್ದಾರೆ. ಕನ್ನಡ ನಾಡಿನ ಅಡಿಗೆ ಮನೆಯಲ್ಲಿ ತಯಾರಾಗುವ ಪದಾರ್ಥ ಮೇಲೋಗರ ಪಲ್ಲೆಗಳಿಂದ ಪ್ರಾರಂಭವಾಗುವ ಈ ಲೇಖನ ಕನ್ನಡ ತುಳು ಕೊಂಕಣಿಗಳಲ್ಲಿ ಪದಗಳು ಒಂದು ಭಾಷೆಯಿಂದ ಮತ್ತೊಂದು ಭಾಷೆಗೆ ಹೋಗುವಾಗ ಹೊಂದುವ ವ್ಯತ್ಯಾಸಗಳನ್ನು ತಿಳಿಸಿ, ಒಂದು ತೌಲನಿಕ ಸಿದ್ಧಾಂತವನ್ನೇ ಮಾಡಿದ್ದಾರೆ. "ಭಾಷೆ ಗ್ರಂಥಸ್ಥವಾಗದೆ ಮುಖಸ್ಥ ಮಾತ್ರವೇ ಇದ್ದರೆ ಅದರಲ್ಲಿ ಒಂದು ಗುಣವಿದೆ.

ಅದು ಬೇಕಾದಾಗ ಹೊರಗಿನ ಶಬ್ದಗಳನ್ನು ತರುತ್ತದೆ. ಹೊಸಶಬ್ದಗಳನ್ನು ತಾನೇ ಮಾಡಿಕೊಳ್ಳುತ್ತದೆ. ಕೊಂಕಣಿ ಹಾಗೆ ಮಾಡಿದೆ, ಮಾಡುತ್ತಿದೆ. ಅದು ಕನ್ನಡದ ಹಾಗಲಕಾಯಿ ಕಂಡು ಫಾಗಿಲ ತಕ್ಕೊಂಡಿತು, ಕಾಯಿ ಬಿಟ್ಟಿತು. ಸೀಗೆಕಾಯಿ ಕಂಡು ಸೀಕಾಯಿ ಎಂದು ಚಿಕ್ಕದು ಮಾಡಿತು" ಎನ್ನುತ್ತಾರೆ.

ಹೀಗೆಯೇ ಇವರು ಈ ಪ್ರಬಂಧದಲ್ಲಿ ಬೀಳ್ಕೊಡು ಬೀಳ್ಕೊಂಡು ಎಂಬ ಮಾತಿನ ಅರ್ಥವನ್ನು ರಸವತ್ತಾಗಿ ವಿವೇಚಿಸಿ ಇದು ಸಂಸ್ಕೃತದ "ವೀಟಿ" ಶಬ್ದದಿಂದ ಹುಟ್ಟಿದುದೆಂದೂ, ಎಲೆ ಅಡಿಕೆ ಕೊಡುವುದೆಂದೂ ನಿರ್ಣಯಿಸುತ್ತಾರೆ. ಅಡಿಕೆ ವಿಷಯ ಹೇಳುತ್ತ "ಹಿಂದಲ ಕಾಲದಲ್ಲಿ ಇಲ್ಲಿಯ ಅಡಿಕೆ ಸೋಪಾರಾ ಬಂದರಕ್ಕೆ ಸಾಗುತ್ತಿದ್ದಿತು. ಅಲ್ಲಿಂದ ಪಾರಸಿಸ್ಥಾನ ಅರಬಸ್ಥಾನಗಳಿಗೆ ಹೋಗುತ್ತಿತ್ತು. ಹಾಗೆ ಕರೆಯುವುದಕ್ಕೆ (ಸುಪಾರಿ) ಅಡಕೆಯ ಆಮದು ರಫ್ತು ಆ ಕಾಲದ ಬಂದರು ಸೋಪಾರದಿಂದ ಸಾಗುತ್ತಿದ್ದುದೇ ಕಾರಣ. ಸರ್ವಜ್ಞ ಕವಿ, ಅಡಕೆಯಿಲ್ಲದ ವೀಳ್ಯ ನಿರರ್ಥಕ ಎನ್ನುತ್ತಾನೆ. ಆದರೆ ಆತನೂ ಇತರ ಕನ್ನಡ ಕವಿಗಳೂ ಅಡಕೆಯನ್ನು ಉಪಮಾನವಾಗಿ ತರುವುದು ತೀರ ಕಡಿಮೆ. ದಕ್ಷಿಣ ಕನ್ನಡ ಮಾರಿ ಹೊಲೆಯರ ಒಂದು ಹಾಡಿನಲ್ಲಿ ಕೊಟ್ಟಿರುವ ಅಡಕೆ ಎಲೆಗಳ ಉಪಮಾನವು ಕವಿತಾ ದೃಷ್ಟಿಯಿಂದ ಅತಿ ಸುಂದರವಾದುದು.

ಬಜ್ಜಾಯ್ ಇದ್ಯಾಂತಿ ಬಚ್ಚಿರೆ ಮಟ್ಟೆಲಟ್ ದಾಯೇ ಗ್
ಪಿಲ್ಯಾ ಇದ್ಯಾಂತಿ ದಿಕ್ಕಾಳ ಕೇಲಟ್ ದಾಯೇಗ್
ಅಡಕೆ ಇಲ್ಲದ ಎಲೆ ಸೋಗಿಲಲ್ಲಿ ಏತಕ್ಕೆ ?
ಗಂಡ ಇಲ್ಲದ ಹೆಣ್ಣು ಗುಡಿಸಲಲ್ಲಿ ಏತಕ್ಕೆ ?

ಅಣ್ಣ ತಮ್ಮಂದಿರು ತೆಂಗು ಕಂಗು, ಗಂಡ ಹೆಂಡಿರು ಎಲೆ ಅಡಕೆ ತೊಟ್ಟಿಲಮಗ ಅಡಕೆಯ ಹಿಂಗಾರು – ಹೀಗಿದ್ದರೆ ಮನೆ ಇಲ್ಲದಿದ್ದರೆ ಸುಮ್ಮನೆ.

ಇದೇ ರೀತಿ ಮುಂದೆ, ತಂಬಾಕು ಸರಿಯೋ ತಂಬಾಕು ಸರಿಯೆ ಎಂಬುವ ವಿವೇಚನೆ ಹಿಡಿದು ಕನ್ನಡ ಮಾತಿನಲ್ಲಿ ಸೊನ್ನೆಯ ಸ್ಥಾನವನ್ನು ವಿಶ್ಲೇಷಿಸುತ್ತಾರೆ. "ಮಗ ಮಂಗನಾಗುವುದೂ ಒಂದು ದೋಷದಿಂದ, ಸಂಸಾರದಲ್ಲಿ ಬಿಂದುವಿದ್ದುದರಿಂದ ಅದನ್ನು ಉತ್ತರಿಸುವುದಕ್ಕೆ –ಉಚ್ಚರಿಸುವುದಕ್ಕೆ– ಕಷ್ಟ. ಬಿಂದುವಿಲ್ಲದಿದ್ದರೆ ಸಂಸಾರ ಸಸಾರವಾಗುತ್ತದೆ" ಎನ್ನುತ್ತಾರೆ.

ತಂಬಾಕಿನಲ್ಲಿ ಅನುಸ್ವಾರ ಉಂಟೆ ಇಲ್ಲವೆ ಎನ್ನುವ ಚರ್ಚೆಯಲ್ಲಿ, ತಂಬಾಕಿನ ಜನ್ಮವನ್ನು ಕುರಿತು ಹೇಳುವ ಮೋಹಿನಿ ಪ್ರಸಂಗವೆಂಬ ಯಕ್ಷಗಾನದ ಸಂಗತಿ ಬರುತ್ತದೆ. ಹೊಗೆಸೊಪ್ಪು ಶಿವನ ಆಜ್ಞಾನುಸಾರವಾಗಿ ಮೋಹಿನಿ ರೂಪದಲ್ಲಿ ಅವತರಿಸಿ ಜನರ ಮನಸ್ಸನ್ನು ಮರುಳು ಮಾಡಲು ಭೂಮಿಗೆ ಇಳಿಯಿತು ಎಂಬುದೇ ಅದರ ಕಥಾವಸ್ತು. ಮುಂದೆ ಹೊಗೆಸೊಪ್ಪು, ಆದಿಲ್‌ಶಾಹಿಯ ಆಸ್ಥಾನಕ್ಕೆ ಬಂದ ಅಕ್ಬರನ ಒಬ್ಬ ಹಕೀಮನಿಂದ ಡಿಲ್ಲಿಯ ದರ್ಬಾರದಲ್ಲಿ ಹರಡಿತು. ಈ ದುರಭ್ಯಾಸವನ್ನು ತಡೆಯಬೇಕೆಂದು ಅಕ್ಬರನಿಗೆ ಮನಸ್ಸಾಯಿತು.

"ಸಭೆಯಲ್ಲಿ ಅಕ್ಬರ್ ಬಾದಷಹನು ಸಿಂಹಾಸನದ ಮೇಲೆ ವಿರಾಜಮಾನನಾಗಿದ್ದನು. ಅವನ ಬಲಕ್ಕೆ ಮುಂದುಗಡೆಗೆ ಪರಿಜನರೂ ಪರಿವಾರದವರೂ ಕುಳಿತಿದ್ದರು. ಎಡಕ್ಕೆ ಹಕೀಮರೂ ವೈದ್ಯರೂ ಪಂಡಿತರೂ ಆಯುರ್ವೇದಿಗಳೂ ದವಾಖೋರರೂ ಕೂಡಿದ್ದರು. ನಡುವೆ ಉದ್ದಕ್ಕೆ ದಾರಿ ಬಿಟ್ಟಿತ್ತು. ಹಿಂದೆ ದ್ರುಪದನು ದ್ರೌಪದಿಯ ಸ್ವಯಂವರಕ್ಕಾಗಿ ಮತ್ಸ್ಯಯಂತ್ರವನ್ನು ವಿವಾಹ ಮಂಟಪದಲ್ಲಿ ಹೂಳಿಟ್ಟಂತೆ ಸಭಾಮಧ್ಯದಲ್ಲಿ, ಈ ಹೊಗೆ ಸೊಪ್ಪಿನ ಸತ್ವಪರೀಕ್ಷೆಗಾಗಿ ಅಂದವಾಗಿ ಅಲಂಕರಿಸಿದ್ದ ಗುಡಿಗುಡಿಯೊಂದನ್ನು ತಂದಿಟ್ಟರು. ಕೂಡಲೇ ಅಲ್ಲಿದ್ದವರ ಮನಸ್ಸು ಹುಕ್ಕೆಯ ಮೇಲೆ ಹಾರಾಡಿತು.

ಹೊರೆಯ ಸಭಿಕರ ನೋಟ ಮೈಯಲಿ
ಹರಿದು ಬಳಲದು ಚಿತ್ತ ಹುಕ್ಕೆಯ
ಧರಿಸಿ ಕುಸಿಯದು ಕಿವಿಗಳಿಗೆ ಮೆಲ್ದನಿಯ ಸವಿಸವಿದು
ಅರುಚಿಯಾಗದು ನಾಸಿಕವು ಮೈ
ಪರಿಮಳದ ಪೂರದಲಿ ಗಂಧಾಂ
ತರವನರಿಯದು ರೂಪವೇ ನೆನ್ನುವೆನು ಗುಡಿಗುಡಿಯಾ

ತರುವಾಯ ಚಿಲುಮೆ ಅಡಿತಂಬಾಕು, ಮೇಲಕ್ಕೆ ಕೆಂಗೆಂಡ ತುಂಬಿ ಅಣಿ ಮಾಡಿದ್ದ ಆ ಹುಕ್ಕೆಯನ್ನು, ಒಬ್ಬೊಬ್ಬರೇ ಕ್ರಮವಾಗಿ ಸೇದಿ ಮುಂದರಿಸುತ್ತ ಸುತ್ತಲೂ ಸಾಗಿಸಿದರು. ಮೊದಲು ಗುಡಿ ಗುಡಿ ವಿದ್ಯೆ ಚೆನ್ನಾಗಿ ಬಲ್ಲವರು ಕೊತಲ್ಲಿ ನಳಿಗೆ ತುದಿಯನ್ನು ಹೊರ ತುಟಿಗೆ ಮುಟ್ಟಿಸಿ ಕುಟರ್ ಕುಟರ್ ಎಂದು ಒಳಗಾಳಿಯನ್ನು ಒಂದೆರಡು ಸಲ ಗುಟುಗಿಸಿ, ಬಳಿಕ ಶ್ವಾಸದವರೋಹಣಗಳನ್ನು ಸರಿನೋಡಿ, ಹೊಕ್ಕುಳಿನ ಕೆಳಗಿನಿಂದ ಹೊಳ್ಳೆಗಳ ತುದಿವರೆಗೆ ಹೊಗೆ ತುಂಬುವಂತೆ ಒಂದೇ ಸಮನೆ ಎಳೆದು ಅರೆ ಕಣ್ಮುಚ್ಚಿ ಮೂಗಿಂದ ಬಾಯಿಂದ ಹೊಗೆ ಸುರಿದು ಅಷ್ಟಾಂಗಸಿದ್ಧಿಯ ಸಮಾಧಿಸ್ಥ ಯೋಗಿ ಎಂಬಂತೆ ಕಾಣುತ್ತಿದ್ದರು. ಸ್ವಲ್ಪವೇ ಅಭ್ಯಾಸವಿದ್ದ ಸರ್ದಾರ ಸಭಿಕರು ತಮ್ಮ ಕೈಮುಷ್ಟಿಯಲ್ಲಿ ಹುಕ್ಕಾನಳಿಗೆ ಮುಚ್ಚಿಟ್ಟು ಬಾಯಿಂದ ಮುದ್ದಿಟ್ಟು ಮೂರೇ ಗುಟುಕು ಗಾಳಿಯನ್ನು ಒಳಕೊಂಡು, ನೀರಲ್ಲಿ ಗುಳ್ಳೆಗಳನ್ನು ಕಂಡು ಹೊಗೆಯಿಂದ ಗಲ್ಲ ಹಿಗ್ಗಿಸಿ ಕಣ್ಣು ಅರೆಮುಚ್ಚಿ ಕಡಲ ನೆಗೆತಕ್ಕಾಗಿ ಟೊಂಕ ಕಟ್ಟಿದ ಹನುಮನಂತೆ ತೋರುತ್ತಿದ್ದರು. ಹುಟ್ಟಿದಾರಭ್ಯ ಹುಕ್ಕ ಹೆಸರು ಗೊತ್ತಿರದವರು ತಮ್ಮ ಎರಡು ಅಂಗೈಗಳಿಂದ ಸವರಿ ನಾಳದ ತುದಿ ತುದಿಗಳನ್ನು, ಹಲ್ಲುಗಳಿಂದ ಬಿಗಿಹಿಡಿದು ಒಂದುಸಿರು ಎಳಕೊಳ್ಳು ವಷ್ಟರಲ್ಲಿಯೇ ದಮ್ಮು ಕೆಮ್ಮು ಒಂದಾಗಿ ಮುಳುಗುವ ದೋಣಿಯಲ್ಲಿ ಪಾಪಿಗಳ ಜೊತೆಯಲ್ಲಿದ್ದ ಪುಣ್ಯಾತ್ಮರಂತೆ ನೀರಿನ ಗುಟುಕು ಒಂದೊಂದು ಕುಡಿದು ತುಸ ಒರಗಿಕೊಳ್ಳುತ್ತಿದ್ದರು" ಇದು ಧೂಮ್ರಪತ್ರೆಯಂತ್ರದ ವಿಚಾರ.

ಇಲ್ಲಿಂದ ಮುಂದೆ ಲೇಖಕರು ಹಳಗನ್ನಡದಲ್ಲಿ ಸೊನ್ನೆ ಇಲ್ಲದ ಕಡೆ ಹೇಗೆ ಹೊಸಗನ್ನಡದಲ್ಲಿ ತಲೆಹಾಕಿದೆ ಎಂಬುದನ್ನು ತುಂಬ ವಿದ್ವತ್ ಪೂರ್ಣವಾಗಿ ವಿವೇಚಿಸಿದ್ದಾರೆ. ಹಳಗನ್ನಡದ ಹೆಟ್ಟಿ, ಹೊಸಗನ್ನಡದ ಹೆಂಟೆ, ಬಾಸಿಗ–ಬಾಸಿಂಗ, ನಿಲ್ತು ನಿಂತು, ಇತ್ಯಾದಿ.

ಈ ಸಂದರ್ಭದಲ್ಲಿ ಮತ್ತೊಂದು ಸ್ವಾರಸ್ಯಕರ ಸಂಗತಿಯನ್ನು ಲೇಖಕರು ಹೇಳು ತ್ತಾರೆ. "ಮಾಜಿ ಕಲೆಕ್ಟರ್ ಆಫೀಸ್ ಪ್ರಿಯಗುಮಾಸ್ತ ಬಜೆಗಡ ಕೃಷ್ಣಯ್ಯ, ಕಲೆಕ್ಟರು ಸಂಬೋಧಿಸುತ್ತಿದ್ದುದು, ಕುಟೆಯ ಎಂದು ಕಲೆಕ್ಟರರಿಗೆ ಕುಟೆಯ ಕನ್ನಡ ಪಾಠ ಹೇಳಿಕೊಡುತ್ತಿದ್ದ. ಅವನು ಐದು ದಿನ ರಜ ಹೋದಾಗ, ಅಲ್ಲಿಗೆ ಪಂಜೆಯ ವರನ್ನು ನಿಯಮಿಸಿದರು. ಅವರು ಮೂರುದಿನ ಕಲಿಸುವುದರೊಳಗಾಗಿ ಕಲೆಕ್ಟರು "ನಿಮ್ಮ ಕನ್ನಡ "ವ" ಕೊಂಬುಕೂಡಿ "ವು" ಆಗುವುದು ಹೇಗೆ "ರ" ಹೊಟ್ಟೆ ಸೀಳಿದರೆ "ಈ" ಬರುವುದು ಏಕೆ ? "ಪ" ಹೊಡೆದರೆ "ಷ" ಹೊರಡುವದೆಂತು ? ಕನ್ನಡದಲ್ಲಿ ಸೊನ್ನೆ ಬರೆಯಲಿಕ್ಕೆ ಸುಲಭ ನೋಡಲಿಕ್ಕೆ ಚೆಂದ, ಕೇಳಲಿಕ್ಕೆ ಇಂಪು. ನಿಮ್ಮ ಒತ್ತುಗಳನ್ನು ಬರೆಯುವುದು ಕಷ್ಟ. ಒತ್ತುಗಳನ್ನು ಬಿಟ್ಟು ಬರೆದರೆ ಏ ? ಒತ್ತಿನ ಬದಲು ಸೊನ್ನೆ ಇಟ್ಟರೆ ಆಗದೆ ?

ಹೀಗೆ ಕಲೆಕ್ಟರು ಹೇಳಿ "ನನ್ನ ಮುನಶಿಯ ಹೆಸರು ಬರೆಯುತ್ತೇನೆ" ಎಂದು ಬರೆದರು. ಆ ವೇಳೆಗೆ ಹಳೆ ಮುನಶಿ ಒಳಕ್ಕೆ ಬಂದರು. ಓದು ಎಂದು ಕಲೆಕ್ಟರು ಕುಟೆಯನಿಗೆ ಕೊಟ್ಟರು. ಅವನು ಅದನ್ನು ತಟ್ಟನೆ ಓದಿಬಿಟ್ಟ "ಬಂಜೆ ಗಂಡ ಕುಂಟಯ್ಯ! ಬಂಜೆ ಗಂಡ ಕುಂಟಯ್ಯ."

ಪಂಜೆಯವರು "ಇದರಲ್ಲಿ ಕುಟ್ಟಯ್ಯನವರಿಗೆ ದೊರೆ ಸೊನ್ನೆ ಹಾಕಿ ಬಿಟ್ಟಿದ್ದಾರೆ" ಎಂದ. ತಿದ್ದಲಿಕ್ಕೆ ಹೋದರು. ಆಗ ಕಲೆಕ್ಟರು "ಇಲ್ಲಿ ನೋಡಯ್ಯ. ಬಜೆ ಮತ್ತು ಬಂಜೆ ಗಡ ಮತ್ತು ಗಂಡ ಮತ್ತು ಕುಟ ಮತ್ತು ಕುಂಟ ಇವು ಭೇದವಿಲ್ಲದ ರೂಪ ಗಳೆಂದು ನನ್ನ ಗ್ರಹಿಕೆ. ನಾನು ಸರಿಯೇ ? ಕೊತುಕೊ ಮತ್ತು ಕುಂತುಕೊ, ನಿತ್ತುಕೊ ಮತ್ತು ನಿಂತುಕೊ ಇದನ್ನು ಹೇಗೆ ಬರೆಯಬೇಕೆಂದು ಕೇಳಿದಾಗ ಕುಟಯ್ಯ ಹೇಳಿದ್ದು "ಹಾಗೂ ಆಗುತ್ತದೆ ಹೀಗೂ ಆಗುತ್ತದೆ. ಕನ್ನಡದಲ್ಲಿ ಸೊನ್ನೆ ಇಟ್ಟರೂ ಒಂದೇ ಬಿಟ್ಟರೂ ಒಂದೆ ಅರ್ಥ" ಎಂದ

ಹೀಗೆ ಇದರಲ್ಲಿ ವಿನೋದ ಹರಿಸಿದ್ದರೂ ಪಂಜೆಯವರು ಅನುಸ್ವಾರದ ಸ್ಥಾನ ಕಾರ್ಯ, ಸಾಧು ಉಪಯೋಗ, ಅಸಾಧುಉಪಯೋಗ ಇವನ್ನೆಲ್ಲ ಶಾಸ್ತ್ರೀಯವಾಗಿ ವಿವೇಚಿಸಿದ್ದಾರೆ

ಮುಂದೆ ಪಂಜೆಯವರು ಬಾಯಿಪಾಠದ ಮೋಜೆಯೋ (ಪರುವಡಿ) ಒಂದು ಲಘು ಪ್ರಬಂಧವನ್ನು ಬರೆದಿದ್ದಾರೆ. ಬಾಯಿಪಾಠದಲ್ಲಿ ತೆಲುಗಿನ ಸೊಲ್ಲು ಇದೆ ಎನ್ನುತ್ತಾರೆ ಎರಡ್ಲೊಂದ್ಲ ಎರಡು ಎರಡು ಮೂರ್ಲ ಆರು.

ಹೊಡೆಯುವ ಉಪಾಧ್ಯಾಯರನ್ನು ಕಂಡರೆ ಪಂಜೆಯವರಿಗೆ ಬಲು ಸಿಟ್ಟು ಒಬ್ಬ ಕ್ರೂರಿ ಉಪಾಧ್ಯಾಯನನ್ನು ಕುರಿತು ಅವರು ಹೀಗೆ ಹೇಳುತ್ತಾರೆ.

"ಮಾಮಾಯಿ ಶಾಮನ ತಲೆ ಎದೆ ಎರಡೂ ಗಟ್ಟಿ. ಅವರಿಗೆ ಮನೆಯಲ್ಲಿ ಸುಖ ವಿಲ್ಲ. ಮನಸ್ಸಿನಲ್ಲಿ ನೆಮ್ಮದಿಯಿಲ್ಲ. ಅವರು ಕಲಿತದ್ದು ಕಡಿಮೆ ಇದ್ದರೂ ಕಲಿಸಿದ್ದೊಂದು ಮಕ್ಕಳ ಮನಸ್ಸಿನಲ್ಲಿ ಚೆನ್ನಾಗಿ ಉಳಿಯುತ್ತಿತ್ತು.—ಪೆಟ್ಟು. ಪೆಟ್ಟು ಕೊಡಲಿಕ್ಕೆ

ಅವರಿಗೆ ಬೆತ್ತವೇ ಆಗಬೇಕೆಂದಿರಲಿಲ್ಲ. ಪೊರಕೆ ಸೋಂಟೆ ಒನಕೆ ಯಾವುದಾದರೂ ಆಗುತ್ತಿತ್ತು. ಅವರಲ್ಲಿ ಆಯುಧ ಭೇದವೂ ಇರಲಿಲ್ಲ. ಅಪರಾಧ ಭೇದವೂ ಇರಲಿಲ್ಲ. ಗುತ್ತಿನ ಮನೆ ಅಪ್ಪಯ್ಯನನ್ನು ಬಿಟ್ಟು ಉಳಿದವರೆಲ್ಲರಿಗೂ ಒಂದೇ ರೀತಿಯ ಪೆಟ್ಟು. ಪೆಟ್ಟಿನ ವಿಷಯ ಅವರು ಮಕ್ಕಳಿಗೇ ಒಳ್ಳೆ ಆಧಾರ ಕೊಡುತ್ತಿದ್ದರು. ಹುಡುಗನನ್ನು ಕದಲದಂತೆ ಕಂಬಕ್ಕೆ ಕಟ್ಟುತ್ತಿದ್ದರು. ಕೋಲಡಂಟೆ ಆಧಾರ ಇರಲಿಲ್ಲ." ಅವರ ಸರ್ವಜ್ಞೋಕ್ತಿಗಳು ಎರಡು ಇಲ್ಲಿವೆ. "ಹುಡುಗರ ಬೆನ್ನಿಗೆ ಪೆಟ್ಟು ಇದೇ ಕಲಿಸುವ ಗುಟ್ಟು. ದೊಡ್ಡಪ್ಪಯ್ಯನಿಗೆ ಟೊಪ್ಪಿಕೋಟು ಬಡವರ ಮಕ್ಕಳ ಬೆನ್ನಿಗೆ ಏಟು"

ಈ ಏಟು ತಿಂದದ್ದು ಏಳು ಜನ್ಮಕ್ಕೂ ಮರೆಯುವ ಹಾಗಿಲ್ಲ.

ಒನಕೆ ಕುಟ್ಟಿಗೆ ಒರಳ ಬತ್ತವಾಗಬಹುದು
ರಂಪಧಾರೆಗೆ ಮೊಚ್ಚೆ ತೊಗಲಾಗಬಹುದು
ಆಡಿಗಲ್ಲಿನ ಮೇಲೆ ಕೆಂಪಗೆ ಕಾದು ಚಿಮ್ಮುಟಿಗೆ
ಎದ್ದುಂಬಲಾಳೆ ಕಬ್ಬಿಣವಾಗಬಹುದು ||

ಎಳೆವ ತಮ್ಮಚಿ ಬಾಯ ಸರಿಗೆಯಾಗಲುಬಹುದು
ಹಿಳಿವ ಅಲೆಯ ದವಡೆ ಕಬ್ಬಾಗಬಹುದು
ವರ ಚಿಮಟೆಯಲಿ ಬಾಲ ಮಂಗನಾಗಲುಬಹುದು
ಕೋಲೇಟಿನಯ್ಯಗಳಿಗೆ ಬೆನ್ನು ಕೊಡು ಮಗನೆ

ಇಲ್ಲಿ ಕನ್ನಡ ಅಕ್ಷರಮಾಲಿಕೆಯ ವಿಶೇಷ ವಿವರಣೆ ವಿಶ್ಲೇಷಣೆ ತುಂಬ ಸ್ವಾರಸ್ಯವಾಗಿ ಬರುತ್ತದೆ. ಕನ್ನಡದಲ್ಲಿ ಅಕ್ಷರಗಳು ಐವತ್ತೆರಡೆ ಐವತ್ತುಮೂರೇ ಇದನ್ನು ಸಂಸ್ಕೃತ ವರಿಯದ ಮಕ್ಕಳಿಗೆ ಹೇಗೆ ಕಲಿಸಬೇಕು. ನಮ್ಮ ಜೀವನದಲ್ಲಿ ಅಕ್ಷರದ ಸ್ಥಾನ ವೇನು ಇವನ್ನೆಲ್ಲ ಸೊಗಸಾಗಿ ವಿವೇಚಿಸಿದ್ದಾರೆ.

"ಅಕ್ಷರ ಎಂದರೆ ನಾಶವಾಗದ್ದು ಎಂದರ್ಥ. ಅಕ್ಷರ ಮಾಲೆಯು ಮಾನವ ಜಾತಿಗೆ ಹಿಂದೆ ಮಾಡಿದ ಈಗ ಮಾಡುತ್ತಿರುವ ಮಹೋಪಕಾರವು ಅನಂತ ಅಚಿಂತ್ಯ ಅವಿನಾಶವಾದದ್ದು. ಅಕ್ಷರಮಾಲೆ ಇದು ಮನುಷ್ಯನನ್ನು ಮೃಗಗಳಿಂದ ಬೇರೊಂದಾಗಿಸಿ ನವೀನ ಜನ್ಮದ ದ್ಯೋತಕವಾಗಿ ಆತನ ಕೊರಳಿಗೆ ಇಕ್ಕಿದ ಶಬ್ದ ಬ್ರಹ್ಮದ ಜನಿವಾರ. ಆತನ ಹೊಸ ಹುರುಪಿನ ಕಣ್ಣುಗಳು ಕಂಡ ಹೊರಗಿನ ಪಂಚಭೂತಗಳ ಆಟಗಳನ್ನು ಕೈಗಳು ವಿಧ ವಿಧದಿಂದ ರೂಪುಗಾಣಿಸುವ ಮುಂಚಿತವಾಗಿ ಯತ್ನಿಸಿ ಯತ್ನಿಸಿ ಗೀರಿದ ವಾಗ್ದೇವಿಯ ಚಿತ್ತಾರದ ಕುರುಪು. ಆತನ ಮಿದುಳಿನ ಮೂಲೆಗಳಲ್ಲಿ ಅವಿತದ್ದನ್ನು ಬೇಕಾದಾಗ ಹೊರಕ್ಕೆ ತರಲು ನೆನಪಿನ ತುದಿಗೆ ಸಿಂಬಿ ಸುತ್ತಿದ ಮಾನಸ ಪುತ್ರನ ಸೆರಗಿನ ಗಂಟು. ಭಾವಗಳನ್ನು ರಾಗಗಳನ್ನು ಪರಸ್ಪರ ವಿನಿಮಯ ಮಾಡಲು ಗಣಪತಿ ಮುದ್ರೆಯ ಹೆಸರನ್ನೆತ್ತಿ ಚಲಾವಣೆ ಮಾಡಿದ ಓಂಕಾರದ ಚಕ್ರದ ನೋಟವಿದು. ಸತ್ಯ ಧರ್ಮದ ಸಂಸ್ಕೃತಿದೇವಿಯ ಪಲ್ಲಕ್ಕಿಯನ್ನು ಗ್ರಂಥಾಭ್ಯಾಸ, ಸತ್ಕೃತಿರಚನೆ ವಿದ್ಯಾಪ್ರಸರಣೆ ಜ್ಞಾನ ರಕ್ಷಣೆ, ಎಂಬೀ ನಾಲ್ವರು ಬೋವಿಗಳು, ಬಹುಕಾಲದಿಂದ ಬಹುದೂರದಿಂದ ಹೊತ್ತು

ತಂಪುಕೊಂಡು ಬಂದ ಸುಧಾರಣೆಯ ಮಾರ್ಗವಿದು ಅಕ್ಷರ ಮಾಲೆ ! ಅಕ್ಷರಮಾಲೆ ! ಅಕ್ಷರದ ಈ ಮಣಿಮಾಲೆಯು ನಮ್ಮ ಹಿರಿಯ ಹಿಂದಲ ಪೆರುಮಾಳರಿಗೆ ದೊರಕಿದ ಈಶ್ವರ ಪ್ರಸಾದ. ಅದು ದೇವರ ವರದಾನವೆಂದೇ ಅವರ ಭಾವನೆ. ಮಾನವನ ಸ್ವಪ್ರಯತ್ನ ಫಲ ಎಂದು ಈಗಿನವರ ಹೇಳಿಕೆ."

ಪಂಜೆಯವರು ಬರೆದಿರುವ ಮತ್ತೊಂದು ಪ್ರಬಂಧ 'ಸ್ಥಳ ನಾಮಗಳು' ಎಂಬುದು. ಇದು ವಿದ್ವತ್ ಪೂರ್ಣವಾದ ಲೇಖನ ಸಹ. ಕನ್ನಡನಾಡಿನಲ್ಲಿರುವ ಸಣ್ಣ ದೊಡ್ಡ ಹಳ್ಳಿಗಳು ಮತ್ತು ಊರುಗಳ ವಿಷಯ. ಆ ಹೆಸರು ಅವುಗಳಿಗೆ ಬರಲು ಕಾರಣಗಳೇನಿದ್ದಿರಬಹುದು ? ಆ ಹೆಸರುಗಳು ಅರ್ಥವತ್ತಾಗಿದ್ದರೆ ಇಂದು ಅವಕ್ಕೆ ಅವು ಹೊಂದುತ್ತವೆಯೆ? ಎಂಬುದನ್ನೆಲ್ಲ ಅವರು ದೀರ್ಘವಾಗಿ ವಿಶ್ಲೇಷಣೆ ಮಾಡಿದ್ದಾರೆ. ಕೊಡಗಿನಲ್ಲಿರುವ ಕೊಡಲಿಪೇಟೆ "ಪರಶುರಾಮನು ಕ್ಷತ್ರಿಯರ ತಲೆಕಡಿಯೆ ಪರುಶುವನು ಮಸೆದರಿಂ" ಈ ಹೆಸರಾಯಿತೇ ? "ಕೊಡಲಿ ರಾಮನ ಸಿಡಿಲಿಗಳುಕಿ ಹಿಂದೋಡಿ ಕಡಲಾರೆ ಅಲೆಗಳನ್ನೊಡೆದು ಮೂಡಿ ತುಳುನಾಡು ಎದ್ದಿತೆ ?" ಎಂದು ತರ್ಕಿಸುತ್ತಾರೆ. ಮೈಸೂರು ಪ್ರಾಂತದ ಬಂದಳಿಕೆ ಗ್ರಾಮಕ್ಕೆ "ಈಶ್ವರನು ಸದಾ ದೇಹಭಾಗಿಯಾದ ಪಾರ್ವತಿಯಿಂದ ಒಂದು ಸಲ ತಪ್ಪಿಸಿಕೊಂಡು ಬಂದು ಬಹುದೂರ ಬಂದುಬಿಟ್ಟನೆಂದೂ, ಆಗ ಕಾಡಿನಲ್ಲಿ ಒಂಟಿಯಾಗಿ ಅಲೆಯುತ್ತಿರುವಾಗ ಒಂದುಕಡೆ ಹಿಂದಿರುಗಿ ನೋಡಿದಾಗ ಪಾರ್ವತಿ ದೇವಿಯನ್ನು ಕಂಡು ಇಲ್ಲಿಗೂ ಬಂದಳೆಂದು ಬೇಸರದಿಂದ 'ಬಂದಳೀಕೆ' ಎಂದು ಹೇಳಿದುದರಿಂದ ಆ ಹೆಸರಾಯಿತು" ಎನ್ನುತ್ತಾರೆ. ಮಂಗಳೂರು ಹೆಸರನ್ನು ವಿಶ್ಲೇಷಿಸಿ ಹೀಗೆ ಹೇಳುತ್ತಾರೆ.

"ಮಂಗಳಾದೇವಿಯ ಹೆಸರಿನಿಂದ ಮಂಗಳೂರು ಬಂದಿತೆಂದು ಸಾಧಿಸಿದರೆ ನಮ್ಮ ಜಿಲ್ಲೆಯಲ್ಲಿ ಮಂಗಳವಾಡಿ ಮಂಗಳ ಪೇಟೆ ಈಶ್ವರ ಮಂಗಳ ಕ್ಯಾತಮಂಗಳ ಕುಂಞ ಮಂಗಳ ಮೊದಲಾದ ಊರುಗಳಿಗೆ ಆ ನಾಮಕರಣವಾಗಲು ಅಲ್ಲೆಲ್ಲ ಮಂಗಳಾದೇವಿ ಇದ್ದಳೆ ?

"ವಾಸ್ತುಶಾಸ್ತ್ರದ ಪ್ರಕಾರ ಮಂಗಲ ಎಂದರೆ ದುರ್ಗ ರಕ್ಷಣೆಗಾಗಿ ನಗರದಲ್ಲಿದ್ದ ಸೈನ್ಯಕ್ಕೆ ಬೇಕಾದ ಸೌಕರ್ಯಗಳುಳ್ಳ ಸ್ಥಳಗಳೆಂದರ್ಥ. ದಂಡಿನವರು ಇರುವ ಕೋಟೆ ಕೇರಿ ಎಂದು ಹೇಳಬಹುದು. ಈ ಮಂಗಲವು ನೆಲದಡಿಯಲ್ಲಿದ್ದರೆ ನೆಲಮಂಗಲವಾಯಿತು. ನಗರದ ಎಡಕ್ಕಿದ್ದರೆ ಎಡಮಂಗಲವಾಯಿತು. ದುರ್ಗದ ಆಕಾರವನ್ನೋ ಸೈನ್ಯದ ಮಿತಿಯನ್ನೋ ಅನುಸರಿಸಿಕೊಂಡು ನಾಗಮಂಗಲವಾಗುತ್ತದೆ. ಇಲ್ಲವೇ ಈಶ್ವರ ಮಂಗಲವಾಗುತ್ತದೆ. ಕೋಟೆಯನ್ನು ಕುಂಜನು ಕಟ್ಟಸಿದ್ದರೆ ಕುಂಜಮಂಗಲ, ಕಾಂತನ ಹಾಗಿದ್ದರೆ ಕಾಂತಮಂಗಲ. ಬೀರನ ವಶದಲ್ಲಿದ್ದರೆ ಬೀರಮಂಗಲ ಎಂದು ಪ್ರಸಿದ್ಧವಾಗುತ್ತದೆ. ಮಂಗಲದ ಒತ್ತಿನಲ್ಲಿದ್ದ ಪೇಟೆ ಮಂಗಲಪೇಟೆ, ಪಾಡಿ ಮಂಗಲಪಾಡಿ, ಪುರ ಮಂಗಲಪುರ, ಹೀಗೆ ದುರ್ಗನಿರ್ಮಾಣ ಕಾಲದ ಮಂಗಲ ಎಂಬ ಹೆಸರು ಕ್ರಮೇಣ ಪಕ್ಕದಲ್ಲಿದ್ದ ಇತರ ಹಳ್ಳಿಗಳ ಮೇಲೆ ಬಿದ್ದು ತುಳುನಾಡಿನ ಬಹುಭಾಗವನ್ನು ಆಕ್ರಮಿಸಿ

ವಿಜಯನಗರ ರಾಜ್ಯದಲ್ಲಿ ರಾಜ್ಯವೆನಿಸಿಕೊಂಡು ಈಗ ಮಂಗಲೂರು ಎಂಬ ಮಾತೇ ಸಾಕಾಗಿದೆ. ಈ ಕೋಟೆಯಲ್ಲಿ ಫೌಜು, ವಿಜಯದಶಮಿಯ ದಿನ ದಂಡಯಾತ್ರೆಗೆ ಹೊರಡುವ ಸಂಪ್ರದಾಯವಿತ್ತೆಂಬುದಕ್ಕೆ ಮಂಗಲದೇವಸ್ಥಾನದ ರಥೋತ್ಸವವನ್ನು ಬೋಳಾರ ಫೌಜು ಎಂದು ಈಗಲೂ ಕರೆಯುವುವೇ ಸಾಕ್ಷಿಯಾಗಿದೆ.

"ಊರ್ ಬಂದದ್ದು ಉರ್‌ಧಾತುವಿನಿಂದ. ಈ ಉರ್ ಎಂಬುದು ಇರ್ ಎಂಬುದರ ಮತ್ತೊಂದು ರೂಪ. ಮನುಷ್ಯನು ಎಲ್ಲಿ ನಿಲ್‌ತಾನೋ ಅದೇ ನೆಲ, ನೆಲೆ. ಎಲ್ಲಿ ತೋಡ್‌ತಾನೋ ಅದೇ ತೋಡು, ತೋಟ. ಎಲ್ಲಿ ನಡ್‌ತಾನೋ ಅದೇ ನಾಡು ನಾಟಿ, ಎಲ್ಲಿ ಉರು (ಊರು) ಅದು (ಆ) ಎಂಬಿವುಗಳ ಪ್ರಯೋಗದಿಂದ ತೋರಿಸುವಂತೆ ನೀರಿನ ಪ್ರವಾಹವಿರುವ ಸ್ಥಳವು ದೂರವಿದ್ದಾಗ ಬೋಳಾರು ಎನಿಸಿತು. ಹತ್ತಿರವಿದ್ದಾಗ ಬೋಳೂರು ಎನಿಸಿತು. ಹೀಗೆಂದು ಹೇಳಿ ಇದನ್ನು ಸಮರ್ಥಿಸುವುದಕ್ಕೆ ಪಡೂರು–ಪಡಾರು, ಮೂಡೂರು ಮೂಡಾರು, ಕೊಯ್ಯೂರು ಕೊಯ್ಯಾರು, ಪುತ್ತೂರು ಪುತ್ತಾರು, ಪೇರೂರು ಪೇರಾರು ಎಂಬೀ ಜೋಡು ಹೆಸರುಗಳ ದೃಷ್ಟಾಂತವನ್ನು ಹೇಳುವುದುಂಟು. ಊರು, ಇದು ಉರ್ ಧಾತುವಿನಿಂದ ಹುಟ್ಟಿದ್ದೆಂದು ಹೇಳುವುದಕ್ಕಿಂತ ಉರ ಎಂಬುದರಿಂದ ಬಂದಿತೆಂದು ಹೇಳಬೇಕು. ಉರ ಎಂದರೆ ತುಳುವಿನಲ್ಲಿ ಉಳುವುದೆಂದರ್ಥ. ಗದ್ದೆಯೆಂದು ಎರಡನೆಯ ಅರ್ಥ (ಉರಪಲ ಆರಿ) ಯಾವ ಸ್ಥಳವು ಉರ್‌ತ್ತು (ಉತ್ತು) ಇದೆಯೋ ಅದೇ ಊರು ಎಂದು ಹೇಳುವುದಕ್ಕೆ ಅಡ್ಡಿಯೇನು?"

ಸಾಹಿತ್ಯದಲ್ಲಿ ಹಲ್ಲಿಯನ್ನು ಕುರಿತು ಪ್ರಬಂಧವನ್ನು ಬರೆದವರು ಅವರೇ. ಅದಾದರೂ ಹಾಸ್ಯಪೂರಿತ ಅನುಭವಜನಿತ ವಿದ್ವತ್‌ಪ್ರಬಂಧ'

"ನಮ್ಮ ಮನೆಗೆ ದಿನಂಪ್ರತಿ ಬರುವ ಸ್ನೇಹಿತರಲ್ಲಿ ಹಲ್ಲಿಯೂ ಒಂದು. ಇರುಳು ನಾನು ಬೆಳಕನ್ನು ಇಟ್ಟು ಓದಲು ಕುಳ್ಳಿರುವಾಗ ಹಲ್ಲಿಯು ಪ್ರತಿರಾತ್ರಿ ನನ್ನ ಭೇಟಿಗೆ ಬಾರದೆ ಇರುವುದಿಲ್ಲ. ಹಲ್ಲಿಗಳಿಗೆ ಮನೆಗಳೆಂದರೆ ಪ್ರೀತಿ. ಆದುದರಿಂದ ಸಂಸ್ಕೃತದಲ್ಲಿ ಇದನ್ನು ಗೃಹಗೋಧಿಕೆ ಎಂದು ಕರೆಯುವರು. ಹಲ್ಲಿಯು ದೊಡ್ಡ ಮನೆತನಕ್ಕೆ ಸೇರಿದ್ದು. ಮೊಸಳೆ ಉಡ ಮತ್ತು ಹಲ್ಲಿ ಅಕ್ಕ ತಂಗಿಯರು. ಇವು ಮನೆ ಮಾಡಿಕೊಳ್ಳಲು ಎಲ್ಲವನ್ನೂ ಒದಗಿಸಿಕೊಂಡು, ಮೊಸಳೆಯು ನೀರು ತರಲು ಕಡಲಿಗೂ ಉಡು ಕಟ್ಟಿಗೆ ತರಲು ಕಾಡಿಗೂ ಹಲ್ಲಿ ಬೆಂಕಿ ಉರಿಸುವುದಕ್ಕೆ ನಾಡಿಗೂ ಹೋದುವಂತೆ. ಅಷ್ಟರಲ್ಲಿ ಕಲಿಕಾಲ ಕಾಲ್ಕ ಹಾಕಿದುದರಿಂದ ಅಲ್ಲೇ ಉಳಿದುವಂತೆ.... ನಮ್ಮ ಪೂರ್ವಿಕರು ಹಲ್ಲಿಯನ್ನು ಜೋಯಿಸನೆಂದು ಭಾವಿಸುತ್ತಿದ್ದರು.

"ಹಲ್ಲಿಯು ತನ್ನ ನಾಲ್ಕು ಕಾಲುಗಳಿಂದ ನಯವಾದ ಗೋಡೆಯನ್ನು ಹ್ಯಾಗೆ ಹತ್ತುತ್ತದೆಂಬುದು ಆಶ್ಚರ್ಯವಾಗಿದೆ. ಸಾವಿರ ವರುಷ ಗರಡಿ ಸಾಧಕ ಮಾಡಿದ ಜಟ್ಟಿಯು, ಮನೆಯ ಅಜ್ಜಿಯ ಸೊಂಟ ಮುರಿದಾನಲ್ಲದೆ ಇಂಥ ಅಸಾಧ್ಯಕೃತ್ಯವನ್ನು ಮಾಡಲಾರನು. ಇದರ ಗುಟ್ಟನ್ನು ಅರಿಯಬೇಕೆಂದಿರುವವರು ಹಲ್ಲಿಯ ಕಾಲು ಹಿಡಿಯಬೇಕು. ಆಗ ತಾನೇ ತಿಳಿದೀತು. ಆದರೆ ಹಲ್ಲಿಯು ನಮ್ಮ ಕುಲಸ್ತ್ರೀಯರಂತೆ ಮುಂದ

ಮತಿಯಲ್ಲ. ಆದರ ಕಾಲುಗಳನ್ನು ಹಿಡಿಯಲು ಯತ್ನಿಸುವಾಗ ನಿಮ್ಮ ಗುರಿ ತಪ್ಪಿ ಅದರ ಕಾಲು ಸಿಗದೆ ಬಾಲಕ್ಕೆ ಕೈ ಬೀಳುವುದು. ಕಾಲುಗಳನ್ನು ಹಿಡಿದು ನೋಡಿದರೆ ಒಂದೊಂದು ಕಾಲಿನಲ್ಲಿ ಐದೈದು ಕಿರುಬೆರುಳುಗಳು ಕಾಣಿಸುತ್ತವೆ. ಈ ಚಿಕ್ಕಬೆರಳುಗಳ ತುದಿಗಳಲ್ಲಿ ಮೊನಚಾದ ಉರುಗಳಿವೆ. ಈ ಉಗುರುಗಳನ್ನು ಹಲ್ಲಿಯು ಬೆಕ್ಕಿನಂತೆ ಪಾದದ ಒಳಗೆ ಎಳೆದುಕೊಳ್ಳಬಹುದು.

"ಹಲ್ಲಿಯ ಆಟವನ್ನು ಇರುಳು ನೋಡಬೇಕು. ಆದು ನಮ್ಮ ನಾಟಕದ ವೇಷ ಗಾರರಂತೆ ಹಗಲೆಲ್ಲ ಕತ್ತಲುಮೂಲೆಯಲ್ಲಿ ಅವಿತುಕೊಂಡಿದ್ದು ನಿದ್ದೆಮಾಡಿ ದೀಪ ಹಚ್ಚು ತ್ತಲೇ ರಂಗಭೂಮಿಗೆ ಇಳಿಯುತ್ತದೆ. ಶಲಭವಧೆಯಲ್ಲಿ ಮುಖ್ಯ ಪಾತ್ರವು ಮುಸಲಿಯೆ· ಮೊದ ಮೊದಲು ಮುಸಲಿಯು ಧ್ಯಾನಾರೂಢನಾದಂತೆ ನಿಶ್ಚಲಿತವಾಗಿದ್ದು ಸುತ್ತಲೂ ಹರಿದು ಹಾರಿ ಪ್ರಪಂಚಕ್ಕೆ ಬಾಧೆಯುಂಟು ಮಾಡುವ ಸಾವಿರಾರು ಶಲಭಾ ಸುರರನ್ನು ತಲೆಯಲ್ಲಿ ಒತ್ತಿದಂತಿರುವ ದೊಡ್ಡದಾದ ಅಗಲಗಣ್ಣುಗಳಿಂದ ಹೊಂಚಿ ನೋಡುವುದು. ಮುಸಲಿಗೆ ನಮ್ಮ ಹಾಗೆ ಕಿವಿಯಿಲ್ಲದಿದ್ದರೂ ಕಣ್ಣುಗಳ ಹಿಂದುಗಡೆಯಲ್ಲಿ ಎರಡು ರಂಧ್ರ ಗಳಿವೆ. ಇವುಗಳ ಮೂಲಕವಾಗಿ ಹಲ್ಲಿಗೆ, ತುಸ ಸದ್ದಾದರೂ ಕೇಳಿಸುತ್ತದೆ. ಕೂಡಲೇ ಮುಸಲಿಯು ಕತ್ತನ್ನು ನೀಡಿ ಕಣ್ಣು ಕೆರಳಿಸಿ ಬಾಯಿ ಅಗಲಿಸಿ ಭರ್‍ರೆಂದು ಮಂಡಲಿಸು ತ್ತಿರುವ ಶಲಭಗಳ ಮೇಲೆ ಧೀಂಕಿಟ್ಟು ಅವನ್ನು ಸಂಹಾರ ಮಾಡುವುದು. ಹಲ್ಲಿಯು ಸತ್ತ ಹುಳುಗಳನ್ನು ಮುಟ್ಟದು. ಆದು ಕ್ರಿಮಿ ಕೀಟಗಳನ್ನೇ ಕೊಂದು ತಿನ್ನುವುದು. ಹಲ್ಲಿಯು ಹೀಗೆ ಹುಳುಗಳನ್ನು ಸಂಹರಿಸದಿದ್ದರೆ ಕೀಟದ ಕಾಟವು ಮನೆಯಲ್ಲಿ ಎಷ್ಟಾಗು ತ್ತಿತ್ತೋ ಹೇಳಲು ಬರುವುದಿಲ್ಲ. ಹಲ್ಲಿಯು ವಿಷಕರ ಜಂತುವೆಂದೂ ಅದರ ಉಚ್ಛಿಷ್ಟವು ಮರಣಕಾರಕವೆಂದೂ ಹೇಳುವ ಮಾತು ಸುಳ್ಳಾಗಿದೆ."

ಇನ್ನು "ನಾನು ಕತ್ತೆಯಲ್ಲವೇ" (ಅಹಂ ನಹಿಗದ್ಧಾ) ಎಂಬ ಚಿತ್ರ ನಗೆಯ ಕೋಲಾಹಲ. ಆಂಗ್ಲ ಸೈನ್ಯದ ಜನರಲ್, ಕರ್ನಲ್, ಲೆಫ್ಟಿನೆಂಟ್ ಮೂವರಿಗೂ ದೇಶೀಯ ಅಗಸ ಬಟ್ಟೆಗಳನ್ನು ಮಡಿಮಾಡಿ ತೆಗೆದುಕೊಂಡು ಹೋಗಿ ಕೊಡುತ್ತಿದ್ದನು. ಜನರಲ್ ಮತ್ತು ಕರ್ನಲ್‌ರ ಮನೆಗಳು ಗುಡ್ಡದ ಕಡೆಗೆ ಎತ್ತರದಲ್ಲಿದ್ದವು. ಆದುದರಿಂದ ಕತ್ತೆಯ ಮೇಲೆ ಅವರಿಗೆ ಬಟ್ಟೆ ತೆಗೆದುಕೊಂಡು ಹೋಗಿ ಕೊಡುತ್ತಿದ್ದನು. ಲೆಫ್ಟಿನೆಂಟ್‌ನ ಮನೆ ಸಮತಳದಲ್ಲಿ ಇದ್ದುದರಿಂದ ತನ್ನ ಬೆನ್ನನ್ನೇ ವಾಹನ ಮಾಡಿಕೊಂಡಿದ್ದನು. ಲೆಫ್ಟಿನೆಂಟನಿಗೆ, ತನ್ನ ಮೇಲ್ಮಟ್ಟ ಇಬ್ಬರು ಅಧಿಕಾರಿಗಳಿಗೂ ಕತ್ತೆಯ ಮೇಲೆ ತೆಗೆದು ಕೊಂಡು ಹೋಗಿ ಕೊಡುತ್ತ, ತನಗ್ಯಾಕೆ ಬೆನ್ನ ಮೇಲೆ ತರುತ್ತಾನೆ ಎಂಬುದು ಸಮಸ್ಯೆ ಯಾಯಿತು.

ಒಂದು ದಿನ ಲೆಫ್ಟಿನೆಂಟರು ಕಾರಣಾಂತರದಿಂದ ಸ್ನೇಹಿತರನ್ನೆಲ್ಲ ಊಟಕ್ಕೆ ಕರೆದಿರುವಾಗ ಅಗಸನು ಹೆಗಲಮೇಲೆ ಮಡಿಮಾಡಿದ ಬಟ್ಟೆ ಹೊತ್ತುಕೊಂಡು ಬಂದನು. ಅತಿಥಿಗಳ ಸಮಕ್ಷಮದಲ್ಲಿ ಅದು ತನಗೆ ಅವಮಾನವೆಂದು ಲೆಫ್ಟಿನೆಂಟ್ ಭಾವಿಸಿದನು. ಅಲ್ಲದೆ ತನಗೆ ದೇಶಭಾಷೆ (ಉರ್ದು) ಎಷ್ಟು ಚೆನ್ನಾಗಿ ಬರುತ್ತಿರುವುದೆಂಬುದನ್ನು ಅತಿಥಿ

ಗಳಿಗೆ ತೋರಿಸಬೇಕೆಂಬುದೂ ಅವನ ಇಷ್ಟವಾಗಿತ್ತು. ಅವನು ಅಗಸನನ್ನು "Come here you Niggar" ಎಂದು ಗದರಿಸಿದನು. ಅಗಸ ನಡುನಡುಗಿ ಮುಂದೆ ಹೋಗಿ ಸಲಾಂ ಮಾಡಿದನು. ಲೆಫ್ಟಿನೆಂಟನು ಕೋಪದಿಂದ "ವೈ ಜನರಲ್ ಸಾಹೇಬ್ ಗದ್ಧಾ ಅಂಡ್ ಕರ್ನಲ್ ಸಾಹೇಬ್ ಗದ್ದಾ ಅಂಡ್ ಹಂ ನಹಿ ಗದ್ದಾ ? ಎಂದು ಕೇಳಿದನು. ಅಗಸನ ಬುದ್ಧಿ ಅಡಿಮೇಲಾಯಿತು. ಅರ್ಥ ತಿಳಿಯದೆ ಅವನು ನಿರುತ್ತರನಾದನು. ಸಾಹೇಬರು ಇನ್ನೂ ಕೆರಳಿ Dare you deny it ? I will break every bone for you ? ಮಾಲುಂ ಎಂದರು.

"ಖಾವಂದ್ ! ಆಪ್ ಕ್ಯಾ ಕಹತೆ ಹೊ. ಹಂ ಸಮುಜ್ತೆ ನೈ" ಎಂದು ಉತ್ತರಿಸಿದನು.

"ಸಮುಜ್ತೆ ನೈ old rot I will explains to you. ದೇಖೋ ಖಾನ್ ಸಾಂ

"ಜಿ ಸೆಜೂರ್

"ದೇಖೋ ! ಕರ್ನಲ್ ಸಾಹೇಬ್ ಗದ್ಧಾ ; ಜನರಲ್ ಸಾಹೇಬ್ ಗದ್ಧಾ ! ಹಮ್ ಗದ್ಧಾ ನಹಿ ? "

ಇದಕ್ಕೆ ಅಗಸನು ಸುಮ್ಮನಿರಲಾರದೆ "ನಹಿ ಸಾಹೇಬ್ ಆಪ್ ಕೈಸಾ ಗದ್ಧಾ ! ಆಪ್ ಗದ್ದಾ ನಹಿ" ಎಂದನು.

ಇದನ್ನು ಕೇಳಿ ಸಾಹೇಬನು ಕೋಪದಿಂದ "you stupid ass you dare deny me Donkey ? What do you mean ? ಅಂಗದ್ದಾ of course ಅಂಗದ್ದಾ " ಎಂದನು.

ಪಂಜೆಯವರ ಹಳೆ "ಸಬ್‌ಅಸಿಸ್ಟೆಂಟ್‌ನ ಸುಳ್ಳು ಡೈರಿಯಿಂದ" ಎಂಬುದಂತೂ ನಗು ವಿನೋದ ಹಾಸ್ಯದ ಕೋಲಾಹಲ. ತಮ್ಮ ಸರ್ಕಾರಿ ಹುದ್ದೆಯಲ್ಲಿ ಅವರು ನೋಡಿದ ನೂರಾರು ಉಪಾಧ್ಯಾಯರು ಅವರ ವಿದ್ಯೆ ಅವಿದ್ಯೆ ತಂತ್ರ ಬೂಟಾಟಿಕೆ ಶ್ರದ್ಧೆ ವ್ಯವಹಾರ ಜ್ಞಾನ, ದಾರಿದ್ರ್ಯ ಮೇಲಿನ ಇನಿಸ್ಪೆಕ್ಟರನ್ನು ಅಡ್ಡದಾರಿಗೆಳೆಯುವ ಠಕ್ಕವಿದ್ಯೆ ಅವರು ಇನಿಸ್ಪೆಕ್ಟರಿಗೂ ಸರ್ಕಾರಕ್ಕೂ ಮಾಡುತ್ತಿದ್ದ ಸಣ್ಣಪುಟ್ಟ ಮೋಸಗಳು, ಒಟ್ಟಿನಲ್ಲಿ ಈ ಪ್ರಬಂಧ ಉಪಾಧ್ಯಾಯರ ಒಂದು ವಿಶ್ವರೂಪದರ್ಶನವೇ ಆಗಿವೆ. ಇನಿಸ್ಪೆಕ್ಟರು ಊರಿನ ಶಾಲೆಯ ತನಿಖೆಗೆ ಹೋದಾಗ ಊರಬಾಗಿಲಿನಲ್ಲಿ ದೊಡ್ಡ ಮನುಷ್ಯರೊಬ್ಬರು ತಮ್ಮ ಕೊಡೆಯನ್ನು ಮುಚ್ಚಿ ಕೆರ ಕಳಚಿ ಕೈ ಮುಗಿದು ತಾವಾಗ ಅವರ ಹಿಂದೆಯೇ ಹೋದಂಥಾವರಾದರು. ಅವರು ಹತ್ತುಮಾರು ದೂರ ಹೋಗುವಷ್ಟರಲ್ಲಿ ಶಾಲಾಮನೆ ಎದುರಾಗಲು ಉಪಾಧ್ಯಾಯರು ಹೊರಬಂದು ಇನಿಸ್ಪೆಕ್ಟರಿಗೆ ನಮಸ್ಕಾರ ಮಾಡಿದರು. ಅದನ್ನು ಕಂಡರೋ ಇಲ್ಲವೊ ಇನಿಸ್ಪೆಕ್ಟರ ಜೊತೆ ಬಂದಿದ್ದವರು ಬೆಬ್ಬಿಳಿಸಿ ಹೋಗಿ "ಉಳೋ ಅಪ್ಪಾ ! ಒಯಸ್ !" ಎಂದು ಬಾಯಿಬಿಟ್ಟರು ಮತ್ತು ಅದೇ ಬಾಯಿಂದ ಅವರು ಇನಿಸ್ಪೆಕ್ಟರನ್ನು ಕುರಿತು ಉಪಾಧ್ಯಾಯರ ಹತ್ತಿರ "ಒಯಸ್! ಉಂಟೆ ಇದು ?

ನಾನು ಪೋಲಿಸ್ ಇನಿಸ್ಪೆಕ್ಟರು ಎಂದು ಗ್ರಹಿಸಿ ಸುಮ್ಮನೆ ನಡೆದು ಬಂದದ್ದು. ಈಗ ನೋಡಿದರೆ ಇದು ಪೋಲೀಸ್ ಅಲ್ಲ ಇದು ಪೋಲಿ ಇನಿಸ್ಪೆಕ್ಟರು. ಪೋಲಿ ಮಕ್ಕಳನ್ನು ನೋಡಬರುವ ಇದಕ್ಕೆ ನಾನು ಕೈಯೆತ್ತುವುದುಂಟೆ ? ಕಾಸಿನ ಪ್ರಯೋಜನವಿಲ್ಲದೆ ಕಾಲು ದಣಿಸಿ ಬಂದದ್ದು ನಾನು ! ಒಯ್ ! ಉಂಟೆ ಇದು ? ಥೂ" ಎಂದರು.

ಸರ್ಕಾರಿ ಅಧಿಕಾರಿ ಅಪಾಯಕರ ಪ್ರಾಣಿ ಎಂಬುದು ಹಳ್ಳಿಯವರಿಗೆ ಗೊತ್ತು: ಅವರು ಮೂರು ವೀಸ ಅಧಿಕಾರಿಗಳನ್ನು ಸರೀಸೃಪ (ಹೊಟ್ಟೆಯಲ್ಲಿ ತೆವಳು) ಗಳಿಗೆ ಹೋಲಿಸುತ್ತಾರೆ. ಒಬ್ಬ ಉಪಾಧ್ಯಾಯರ ಮಾತಿನಲ್ಲಿ ಹೇಳಬೇಕಾದರೆ "ಸರ್ಕಾರದವರಲ್ಲಿ ಸಿವಿಲ್‌ನವರು ಹೆಬ್ಬಾವುಗಳು, ಪೋಲೀಸಿನವರು ನಾಗರಹಾವುಗಳು ಅಬ್ಕಾರಿ ಜಂಗ್ಲಿಯವರು ಮಂಡಲಗಳು.

"ಟಪಾಲಿನವರೊ ?

"ಟಪಾಲ್ ಇನಿಸ್ಪೆಕ್ಟರು ಹಸಿರು ಹಾವು ಸರ್

"ಹಾಗಾದರೆ ಕೇರ್ ಹಾವು ಯಾರು ?

"ರೆವಿನ್ಯು ಇನಿಸ್ಪೆಕ್ಟರು ಸಾರ್ ?

"ಶಾಲಾ ಇನಿಸ್ಪೆಕ್ಟರು ಯಾವ ವರ್ಗದಲ್ಲಿ

"ತಾವು, ತಮ್ಮ ವರ್ಗ ಒಳ್ಳೆಯದು ಬುದ್ಧಿ

ಮಾಸ್ತರ ಕಡೆಯ ಮಾತಿನಲ್ಲಿ ನೀರ್ಪೊಳ್ಳೆಯ (ನೀರುಹಾವು) ಅರ್ಥದ ಮರ್ಮ ನೋಡಿ"

ಸರ್ಟಿಫಿಕೇಟ್ ಕಳುಹಿಸಬೇಕೆಂದು ಕೇಳಿದಾಗ ಅದರಲ್ಲಿ ಮದರಾಸು ಗವರ್ನರ ಸಹಿ ಇರುವುದರಿಂದ ಟಪಾಲಿನಲ್ಲಿ ಗೈರುವಿಲೆ ಆಗುವುದೆಂದು ಕಳಿಸದೆ ಇದ್ದ ಉಪಾಧ್ಯಾಯನಲ್ಲಿ ಹೋಗಿ ನೋಡಿದಾಗ ಅದು ಖಾನೇಷುಮಾರಿಯ ಎನುಮರೇಟ್ ಸರ್ಟಿಫಿಕೇಟು ಆಗಿದ್ದುದು, ತನಗೆ ಊರಿನವರು ಸಂಬಳ ಕೊಡದೆ ಇನಿಸ್ಪೆಕ್ಟರು ಬಂದಾಗ ಮಾತ್ರ ಅವರ ಬಿಡಾರದ ಖರ್ಚಿಗೆ ಕೊಡುತ್ತಿದ್ದುದರಿಂದ ಅದನ್ನೇ ಹೆಚ್ಚಾಗಿ ವಸೂಲ್ಮಾಡಿಕೊಳ್ಳುತ್ತಿದ್ದ ಉಪಾಧ್ಯಾಯ, ಹುಡುಗರಿಂದ ವೀಳ್ಯದ ಎಲೆ ಬಾಳೆಎಲೆ ತೆಂಗಿನಕಾಯಿ ಬದನೆಕಾಯಿ ಮಾವಿನಹಣ್ಣು ಇವುಗಳನ್ನೆಲ್ಲ ತರಿಸಿಟ್ಟಿದ ಉಪಾಧ್ಯಾಯರು ಸಿಕ್ಕಿಬಿದ್ದಾಗ "ಇಷ್ಟನೇ ನಂಬರ್ ಹುಕುಂನಂತೆ ಪದಾರ್ಥಗಳನ್ನು ಎದುರಿಗೆ ಇಟ್ಟುಕೊಂಡು, ಚಿತ್ರಲೇಖನ ಕಲಿಸಬೇಕೆಂದು ಹೇಳಿರುವುದರಿಂದ ಹುಡುಗರಿಂದಲೇ ತರಿಸಿದ್ದೇನೆ. ಪಾಠ ಮುಗಿದ ನಂತರ ಏನು ಮಾಡಬೇಕೆಂದು ಹೇಳಿಲ್ಲದುದರಿಂದ, ಶಾಲೆಯ ಪಕ್ಕದ ನನ್ನ ಮನೆಯಲ್ಲಿಟ್ಟಿರುತ್ತೇನೆ" ಎಂದು ಹೇಳಿದ ಉಪಾಧ್ಯಾಯ ; ಇನಿಸ್ಪೆಕ್ಟರು ಶಾಲೆಯಲ್ಲಿ "ಹಳೆಯ ಮರವನ್ನು ಕಡಿದು ಹಾಕಬೇಡ" ಎಂಬ ಪಾಠವನ್ನು ಓದಬೇಕೆಂದು ವಿದ್ಯಾರ್ಥಿಗೆ ಹೇಳಿದಾಗ ಅವನು ಓದದೆ ಮಾಸ್ತರರ ಮುಖವನ್ನು ಮಿಟಮಿಟನೆ ನೋಡಿದನು. ಕೊನೆಯಲ್ಲಿ ಬಂದು ಹಳೆ ಮರ ಕಡಿದ ಮೊಖದ್ದಮೆಯಲ್ಲಿ ಜಂಗ್ಲಿಯವರು ಉಪಾಧ್ಯಾಯರಿಗೆ ಹತ್ತು ರೂಪಾಯಿ ಜುಲ್ಮಾನೆ ವಿಧಿಸಿದ್ದರೆಂಬುದು ಗೊತ್ತಾದುದು ; ಶಾಲಾಮಾಸ್ತರಗಳ ಅಡ್ಡ

ಹೆಸರು ; ಕದನೆಬಾಯಿ ತಿಮ್ಮಪ್ಪ ಎಂಬ ಮಾಸ್ತರ ಹೆಸರನ್ನು ಎಲ್ಲ ವಿದ್ಯಾರ್ಥಿಗಳೂ (ಒಬ್ಬನ ಹೊರತು) ಬದನೆಕಾಯಿ ತಿನ್ನಪ್ಪ ಎಂದು ಬರೆದುದು.

ಅಡ್ಡ ಹೆಸರುಗಳ ವೈಚಿತ್ರ್ಯದ ವಿಚಾರದಲ್ಲಿಯೇ ಲೇಖಕರು ಕುತೂಹಲಕಾರಿ ವರ್ಣನೆ ಕೊಟ್ಟಿದ್ದಾರೆ. ತಿಮ್ಮಪ್ಪ ಮಾಸ್ತರಿಗೆ ನಮ್ಮ ದೊರೆಗಳು (ಯೂರೋಪಿಯನ್ ಶಾಲಾ ಇನ್‌ಸ್ಪೆಕ್ಟರು) ತಿ-ಮಪ್ ಎಂದಿಟ್ಟ ಸಲಿಗೆಯ ಹೆಸರು ನಮ್ಮ ಬಾಯೊಳಗೆ ಮಾತ್ರವೇ ಹೊರತು ನಮ್ಮ ಊರಿಗೆ ಪ್ರಚಾರವಾಗಲಿಲ್ಲ. ತಿಮ್ಮಪ್ಪ ಮಾಸ್ತರರ ಹಾಗೆಯೇ ಇನ್ನಿಬ್ಬರು ಉಪಾಧ್ಯಾಯರಿದ್ದರು. ಒಬ್ಬರು ನೆಟ್ಟ ಶಾಲೆಯಲ್ಲಿ ಮತ್ತೊಬ್ಬರು ವಿಟ್ಲ ಶಾಲೆಯಲ್ಲಿ. ಒಬ್ಬರು ಎಡಗಣ್ಣು ಹೊಟ್ಟು ಮತ್ತೊಬ್ಬರ ಬಲಗಣ್ಣು ಕುರುಡು. ಇವರಿಬ್ಬರನ್ನೂ ಅಡ್ಡ ಹೆಸರುಗಳಿಂದಲೇ ಕರೆಯುವುದು, ಏತಕ್ಕೋ ವಾಡಿಕೆಯಾಗಿತ್ತು. ಶುಕ್ಲಾಚಾರಿ ಎಂದರೆ ನೆಟ್ಲದವರಂತೆ, ಡೆಸಿಮಲ್ ಒಂದು (.೧) ಎಂದರೆ ವಿಟ್ಲದವರಂತೆ। ಆದರೆ ತಿಮ್ಮಪ್ಪಮಾಸ್ತರರು ಮಾತ್ರ ಹೀಗೆ ಬಿರುದಾಂಕಿತರಾಗಿರಲಿಲ್ಲ. ಬಿರುದಂಕಿತಗಳು ಅಡ್ಡಹೆಸರುಗಳೆಂದೂ ದೊಡ್ಡಹೆಸರುಗಳೆಂದೂ ಎರಡು ತೆರನಾಗಿವೆ. ರಾವ್ ಬಹದ್ದೂರ್ ಮೊದಲಾದವು ಅಡ್ಡ ಹೆಸರುಗಳು. ತಿಪ್ಪೂರ್ ಲಂಗಡ ಮೊದಲಾದವು ಅಡ್ಡ ಹೆಸರುಗಳು ದೊಡ್ಡ ದೊಡ್ಡ ಹೆಸರುಗಳು ನಮ್ಮ ನಮ್ಮ ಲೋಕೋತ್ತರವಾದ ಕಾರ್ಯಗಳು ಇಲ್ಲವೇ ಜ್ಞಾನದಿಜ್ಞಾನಶೋಧಗಳ ಮಹತ್ವವನ್ನು ಸರ್ಕಾರ ಲಕ್ಷಿಸಿ ನಮಗೆ ದಯ ಪಾಲಿಸುವ ಮೆಚ್ಚಿಕೆಯ ಬಿರುದುಗಳು. ಅಡ್ಡ ಹೆಸರುಗಳು ನಮ್ಮ ನಮ್ಮ ಅಂಗನ್ಯೂನತ್ವ ವನ್ನೋ ಕಾರ್ಯಸ್ಖಾಲಿತ್ಯವನ್ನೋ ಕಂಡು ಸಾಮಾನ್ಯಜನರು ವಿನೋದಾತ್ಮಕವಾಗಿ ಅಲಂಕಾರರೂಪದಲ್ಲಿ ಹೇಳಿದ ಉಪಮಾನಗಳು. ದೊಡ್ಡ ಹೆಸರುಗಳು ಮಕ್ಕಳ ಬರಹ ಪುಸ್ತಕದ ಮೇಲ್ಪಂಕ್ತಿಯಂತೆ ಒಂದೇ ತೆರ. ಅಡ್ಡ ಹೆಸರುಗಳು ಮಕ್ಕಳು ಕೇಳುವ ಪ್ರಶ್ನೆಗಳಂತೆ ವಿವಿಧವಾಗಿವೆ. ದಂತವಕ್ರಸೆಟ್ಟಿ, ಲಂಬೋದರರಾಯರು, ಘಂಟೆ ಹನುಮಂತಯ್ಯ ಮಾಸ್ತರರು ಇತ್ಯಾದಿ ಅಡ್ಡ ಹೆಸರುಗಳನ್ನು ಕಲ್ಪಿಸಿದವರಲ್ಲಿ ಕಾವ್ಯದೃಷ್ಟಿ ಇದೆ. ದೊಡ್ಡ ಹೆಸರುಗಳು ಸೀಮೆಬಟ್ಟೆಯ ಕೆಂಬಣ್ಣದಂತೆ, ಅವನ್ನು ಧರಿಸಿಕೊಂಡವರ ಜೀವಮಾನ ಪರ್ಯಂತಂ ಮಾತ್ರ ಶೋಭಿಸಿದ್ದು ಜೀರ್ಣವಸನ ಸ್ಥಿತಿಯಲ್ಲಿ ಬಿಟ್ಟು ಹೋಗುತ್ತವೆ. ಅಡ್ಡ ಹೆಸರು ಹಾಗಲ್ಲ ಒಂದು ಸಲ ಬೆನ್ನು ಹಿಡಿಯಿತೆಂದರೆ ಬ್ರಹ್ಮಕಪಾಲದಂತೆ ಬಿಟ್ಟು ಹೋಗುವುದು ಸ್ವಲ್ಪ ಕಷ್ಟ.

ತಮ್ಮ ಕಾರಣದಿಂದಲೇ ಕಣ್ಣು ಕಳೆದುಕೊಂಡ ಮಾಸ್ತರರ ಸ್ಥಿತಿಯನ್ನು ಪಂಜೆ ಸ್ವಾರಸ್ಯವಾಗಿ ವರ್ಣಿಸುತ್ತಾರೆ. “ಸ್ವಾಮಿ ಒಂದು ದಿನ ಸೂಪರ್‌ವೈಸರು ಶಾಲೆಗೆ ಬಂದು ಮಕ್ಕಳಿಗೆ ಬಂದು ಪಾಠ ಮಾಡಿ ಎಂದು ಅಪ್ಪಣೆ ಮಾಡಿದರು. ದೊಂಬರ ಚೆನ್ನಿಯ ಪಾಠ. ಅದು ತಮ್ಮ ಕವನವಂತೆ ಆ ಪಾಠ ಕಲಿಸುವಾಗ “ಬೇಗ ತಿರ್ರನೆ ತಿರುಗಿ ಸರ್ರನೆ ಲಾಗ ಹಾಕಿದ ದೊಂಬನು” ಎಂಬ ಚರಣ ಬಂತು. ಅದರ ಅರ್ಥ ಮಕ್ಕಳಿಗೆ ಹತ್ತಲಿಲ್ಲ. ಆಗ ನಾನೇ ದೊಂಬನಾದೆ, ಲಾಗ ಹಾಕಿ ತೋರಿಸಿದೆ. ಹೊಡೆದ ಲಾಗಕ್ಕೆ ಕೈತಪ್ಪಿ ನಾನು ನೆಲದ ಮೇಲಾದೆ. ನನ್ನ ಕಾಲು ತಾಗಿ ಬೋರ್ಡು ಜಾರಿ ನನ್ನ ಮುಖಕ್ಕೆ

ಬಂದು ಬಡಿಯಿತು. ಬೋರ್ಡಿನ ಅಂಚಿನ ಮೊನೆಯು ಪೆಟ್ಟು ಕಣ್ಣಿಗೆ ಬಿತ್ತು. ಮದ್ದು ಮಾಡಿದೆ, ಮುಲಾಮು ಹಚ್ಚಿದೆ. ಏನು ಮಾಡಿದರೂ ಕಣ್ಣೊಂದು ಇಂಗಿ ಹೋಯಿತು.

ಈ ವ್ಯಸನಕರವಾದ ಸ್ಥಿತಿಯನ್ನು ನೋಡಿ ನನ್ನಲ್ಲಿ ಕನಿಕರವಾದರೂ ಮಾಸ್ತರರ ಮಾತುಗಳಲ್ಲಿ ಕೊರಗು ಇರಲಿಲ್ಲ. "ದೇವರ ದಯದಿಂದ ಒಂದು ಕಣ್ಣಾದರೂ ಉಳಿಯಿತಷ್ಟೆ ಸ್ವಾಮಿ. ಹೋದ ವರ್ಷ ತಮ್ಮ ಕಣ್ಣು ಶಾಲೆ ಬೋರ್ಡಿನ ಮೇಲೆ ಬಿತ್ತು. ಈ ವರ್ಷ ಶಾಲೆ ಬೋರ್ಡು ನನ್ನ ಕಣ್ಣಿಮೇಲೆ ಬಿತ್ತು ಎಂಬುದಾಗಿ ನಗೆನುಡಿಯಿಂದ ಕಥೆ ಮುಗಿಸಿದರು" ಎನ್ನುತ್ತಾರೆ.

ಹಳ್ಳಿಯ ಮಾಸ್ತರರಿಗೆ ಅಡ್ಡ ಹೆಸರು ಇದ್ದಂತೆಯೇ ಶಾಲಾ ಇಲಾಖಾ ಆಫೀಸರ್ ಗಳನ್ನು ಕುರಿತು ಕೆಲವು ಗೂಢನಾಮಗಳು ಉಪಾಧ್ಯಾಯರ ವ್ಯವಹಾರದಲ್ಲಿ ವಾಡಿಕೆಯಾಗಿದ್ದವು. ಉಪಾಧ್ಯಾಯರು ಜಿಲ್ಲೆಯ ಎಲ್ಲ ಶಾಲಾ ಇಲಾಖೆಯ ಆಫೀಸರ್ ಗಳನ್ನು ಪಂಚಭೂತಗಳಲ್ಲಿ ಗಣಿಸಿದ್ದರು. ಈ ಭೂತಗಳಲ್ಲಿ "ಗುಳಿಗ" ಎಂಬುದು ಇನಿಸ್ಪೆಕ್ಟರ್ ದೊರೆಗೆ (ಆಂಗ್ಲೇಯನಿಗೆ) ಇತ್ತ ಸಂಕೇತ. ಮುಂಡತ್ತಾಯ ಕೊಡ ಮುಂಡತ್ತಾಯ, ಮಲ್ತಾಯ ಜಾರಂತಾಯ ಈ ಹೆಸರುಗಳಲ್ಲಿ ಯಾವುದಾದರೂ ಸರಿಯೆ ಅಸಿಸ್ಟಾಂಟ್ ಇನಿಸ್ಪೆಕ್ಟರನ್ನು ನಿರ್ದೇಶಿಸುತ್ತಿತ್ತು. ಈ ಆಫೀಸರನು ಕ್ರೈಸ್ತನಾದರೆ "ಪೊಸಭೂತ" ಎಂಬುದೇ ಅದರ ಸೂಚನೆ. ಜಮಾದಿ ತೋಡಕನ್ನಾಯೆ ಕೋಟಿ ಚೆನ್ನಯ್ಯರು ಎಂದರೆ ಸಬ್ಅಸಿಸ್ಟಾಂಟ್ ಎಂದು ಅರ್ಥ. ಮುಸಲ್ಮಾನ ಶಾಲೆಗಳ ವಿಚಾರಕರ್ತನೇ ಅಲಿಭೂತ. ಇನ್ನೂ ಬೊಬ್ಬಿಡುವ ಅಧಿಕಾರಿಯನ್ನು ಬೊಬ್ಬರ್ಯೆ ಎಂದು ಲಂಚ ತಿನ್ನುವವನನ್ನು ಕಲ್ಲುರ್ಟಿ ಎಂದೂ ಕುಡುಕನನ್ನು ಕಲ್ಕುಡ ಎಂದೂ ಸೂಪರ್ ವೈಸರಿಗೆ ಕಿನ್ನಿಮಾನಿಗಳು ಎಂದೂ ಗುಟ್ಟಿನ ಹೆಸರು. "ಪತ್ತೆ ನಾಜಿತ್ ಮಳೆರಾಯನ ಸವಾರಿ" ಎಂದರೆ ಹದಿನಾರನೆ ತಾರೀಖು ಎಸಿಸ್ಟಾಂಟ್ ಇನಿಸ್ಪೆ ಇನಿಸ್ಪೆಕ್ಟರ ಸವಾರಿ ಬರುತ್ತದೆಂದು ಅಭಿಪ್ರಾಯ. ನನ್ನ ಕಾಲದಲ್ಲಿದ್ದ ಪ್ರತಿಯೊಬ್ಬ ಶಾಲಾ ಆಫೀಸರನನ್ನೂ ಸೂಚಿಸತಕ್ಕ ಒಂದೊಂದು ಭೂತದ ಹೆಸರು ಈ ನಾಮಾವಳಿಯಲ್ಲಿದೆ.

ವೈದ್ಯರ ಒಗ್ಗರಣೆ ಎಂಬುದಾದರೂ ಒಂದು ಸ್ವಾರಸ್ಯ ಪ್ರಸಂಗವೇ. ಅಷ್ಟೇನೂ ವಿದ್ಯಾವಂತರಲ್ಲದ ಆದರೆ ಘಾಟಿಯಾದ ಅಮಲ್ದಾರ್ ವಲ್ಲಭಾಚಾರ್ರು. ಅವರಿಗೆ ಇಂಗ್ಲೀಷ್ ಚೆನ್ನಾಗಿ ಬರುತ್ತಿರಲಿಲ್ಲ. ಭಾರತ ರಾಮಾಯಣಗಳ ಆಧಾರದ ಮೇಲೆಯೇ ಜಡ್ಜ್ಮೆಂಟ್ ಕೊಡುತ್ತಿದ್ದರು. ಅವರು ಇಂಗ್ಲೀಷ್ ಪೀನಲ್ ಕೋಡನ್ನು ಮನ್ನಿಸುತ್ತಿರಲಿಲ್ಲ. ಆ ಕೋಡು ಬಿಳಿ ಜನಗಳ ತಲೆಮೇಲೆ ಚೆನ್ನಾಗಿ ತೋರುವುದಲ್ಲದೆ, ನಾವು ಅದನ್ನು ಧರಿಸುವುದಕ್ಕೆ ಎತ್ತುಗಳಲ್ಲವೆಂಬುದು ಅವರ ಅಭಿಪ್ರಾಯವಾಗಿತ್ತು. ಅವರು ಸರ್ಕೀಟಿಗೆ ಆಪ್ತಮಿತ್ರರೊಡನೆ ಯಮುನ ದಿಬ್ಬಣದಂತೆ ಹೋಗುತ್ತಿದ್ದರು. ಅವರು ಸ್ತ್ರೀ ಪಾಕನಿಷ್ಠರು. ಅವರಿಗೆ ಬ್ರಾಹ್ಮಣರ ಹೆಂಗಸರು ಅಡಿಗೆಗೆ ಬೇಕಾಗುತ್ತಿದ್ದರು. ಅವರನ್ನು ಹೊಂಚಲು ಬ್ರಾಹ್ಮಣರು ಕಡಿಮೆ ಇದ್ದ ಊರಿನಲ್ಲಿ ಪಟೇಲನಿಗೆ ಯಾವಾಗಲೂ ಕಷ್ಟವಾಗುತ್ತಿತ್ತು. ಆ ಸಲವಂತೂ ನೆರೆಯ ಊರಿನ ಜಾತ್ರೆಯಿದ್ದುದರಿಂದ

ಎಲ್ಲರೂ ಅಲ್ಲಿಗೆ ಹೋಗಿ ಬಿಟ್ಟಿದ್ದರು. ಅಮುಲ್ದಾರರು ಜಮಾಬಂದಿ ಮುಗಿಸಿಕೊಂಡು ಮನೆಗೆ ಬರುವ ವೇಳೆಗೆ ಆಗಲೇ ಊಟದ ಹೊತ್ತು ಆಗಿತ್ತು. ಮನೆಯಲ್ಲಿ ಅಡಿಗೆ ಸುಳಿವಿಲ್ಲ. ಒಗ್ಗರಣೆ ವಾಸನೆ ಇಲ್ಲ. ಪಟೇಲ "ಅಡಿಗೆಯವರು ಸಿಕ್ತಿಲ್ಲ" ಎಂದ. ಅಮುಲ್ದಾರರು "ಯಾರನ್ನಾದರೂ ಬಿಟ್ಟಿಗೆ ಹಿಡಿ" ಎಂದರು. ಪಟೇಲನು "ಹಣ ಕೊಟ್ರೆ ಆಳು ಸಿಕ್ಕೋಲ್ಲ. ಬಿಟ್ಟಿಗೆ ಯಾರು ಬರ‍್ತಾರೆ ?" ಎಂದ. ಸಾಹೇಬರಿಗೆ ಸಿಟ್ಟು ಹತ್ತಿತು. ಅವರು "ಯಾರನ್ನಾದರೂ ಬಿಟ್ಟಿಗೆ ಹಿಡಿದು ತಂದರೆ ಸರಿ. ಇಲ್ಲದಿದ್ದರೆ ನಿನ್ನ ಕೆಲಸಕ್ಕೆ ರಾಜೀನಾಮೆ ಕೊಡು" ಎಂದರು. ಆ ವೇಳೆಗೆ ಅಲ್ಲೊಬ್ಬ ಅಮುಲ್ದಾರರಿಗೆ ಕೈಮುಗಿಯದೆ ನಗುತ್ತ ಹೋಗುತ್ತಿದ್ದುದು ಕಂಡಿತು. (ಅಮುಲ್ದಾರರು ಪುಣ್ಯ ಕಥೆಯನ್ನು ಕೇಳಿ ಅರಿತಿದ್ದ ಮನುಷ್ಯನಿರಬೇಕು) ಅಮುಲ್ದಾರರು ಪಟೇಲನಿಗೆ 'ಅವನನ್ನು ಬಿಟ್ಟಿಗೆ ಹಿಡಿ" ಎಂದರು. ಪಟೇಲ ಅವನನ್ನು ಹೋಗಿ ತಡೆದನು. "ಹೆಚ್ಚು ಮಾತು ಬೇಡ. ನಾನು ಹೇಳಿದ ಹಾಗೆ ಕೇಳಬೇಕು" ಎಂದನು. ದಾರಿಗನು ಸಿಟ್ಟಾಗಿ "ಹಾಗೆ ಕೇಳಲಿಕ್ಕೆ ನಾನೇನು ಅಡಿಗೆ ಭಟ್ಟನೆ ?" ಎಂದನು. ಪಟೇಲನು "ಈಗ ನೀನು ಅಡಿಗೆ ಭಟ್ಟನಾಗಬೇಕು. ಇಲ್ಲಾಂದ್ರೆ ಕೈಕೋಳ ಹಾಕಿಸ್ತೇನೆ" ಎಂದನು. ದಾರಿಗನು "ನಾನು ಅಡಿಗೆಯವನಲ್ಲಯ್ಯ ನಾನು ವೈದ್ಯ. ಮದ್ದು ಕೊಡುವೆ. ಜಾತ್ರೆಗೆ ಹೋಗದೆ ನಿರ್ವಾಹವಿಲ್ಲ. ಬಿಡಿ" ಎಂದನು. ಪಟೇಲನು ಬಲಾತ್ಕಾರದಿಂದ ಅವನನ್ನು ಹಿಡಿದುಕೊಂಡು ಬಂದು ಅಡಿಗೆಗೆ ಹಾಕಿದನು. ವೈದ್ಯನಿಗೆ ಸ್ವಯಂಪಾಕ ಅಭ್ಯಾಸವಾಗಿದ್ದುದರಿಂದ ಅಡಿಗೆ ಕೆಲಸ ನಿರ್ವಹಿಸಿದನು. ಎರಡು ದಿನ ಕಳೆದರೂ ಪಟೇಲನಿಗೆ ಬೇರೆ ಅಡಿಗೆಯವರು ಸಿಕ್ಕಲಿಲ್ಲ. ವೈದ್ಯರೇ ಹೆಂಗಸಿನಂತೆ ಒಲೆಯ ಬಳಿ ಬೇಯಬೇಕಾಯಿತು.

ಆ ಮಧ್ಯಾಹ್ನ ಅಮುಲ್ದಾರರು ಊಟ ಮಾಡಿ ಮಧ್ಯಾಹ್ನದ ನಿದ್ರೆ ಹೊಡೆಯುತ್ತಿರುವಾಗ, ವೈದ್ಯರು ಉಲ್ಲಾಸದಿಂದ ಮುಗುಳುನಗೆ ನಗುತ್ತ ಏನೋ ಹಾಡಿಕೊಳ್ಳುತ್ತ ಏನನ್ನೋ ನಿರೀಕ್ಷಿಸುತ್ತಿದ್ದರು. ಆಗ ಒಬ್ಬ ಬಂದು "ಎಲಾ ಬಾಬಾಬಾ ಏಳೇಳು ಎಂದು ಕಿರುಚಿದನು. ಅಡಿಗೆಯವನು ಗಾಬರಿಗೊಳ್ಳದೆ "ಏನು ಸಂಕ್ತಿ. ಅವಸರ ಯಾಕೆ ?" ಎಂದು ಪ್ರಶ್ನೆ ಮಾಡಿದನು. ಬಂದವನು "ಅಯ್ಯೋ ಬೇಗ ಏಳು, ಅಮುಲ್ದಾರರು ಅಮುಲ್ದಾರು—ಅಡಿಗೆಯವನು "ಸತ್ತರೆ ?" ಎಂದು ಶಾಂತವಾಗಿ ಕೇಳಿದನು. ಬಂದವನು "ಪ್ರಾಣಾಂತಿಕ ನೀನು ಬಾರದೆ ಆಗದು ಎಂದನು. ವೈದ್ಯ ಅಸಮಾಧಾನ ಪಟ್ಟುಕೊಂಡು "ನಾನು ಖಾಯಂ ಅಡಿಗೆ ಭಟ್ಟನಲ್ಲ. ನಾನು ಹೆಣ ಹೊರಲಾರೆ" ಎಂದುಬಿಟ್ಟನು. ಬಂದವನು "ಏನು ಹಠಟೆ ನಿನ್ನದು. ಅಮುಲ್ದಾರರು ನಿನ್ನನ್ನು ಕರಕೊಂಡು ಬರಬೇಕಂತ ಹೇಳಿದ್ದಾರೆ. ಬಾಬಾ " ಎಂದು ವೈದ್ಯನನ್ನು ಎಳೆದುಕೊಂಡು ಹೋದನು. ಹೋಗುವ ವೇಳೆಗೆ ಅಮುಲ್ದಾರರು "ಅಯ್ಯೋ ಸತ್ತೆ ಸತ್ತೆ ಏ ದೇವ್ರೆ" ಎಂದು ಗೋಳಿಡುತ್ತಿದ್ದರು. ಮುಖ ನೋವಿನಿಂದ ಕಂಗೆಟ್ಟಿತ್ತು. ನೆಲದ ಮೇಲೆ ಬಿದ್ದು ಹೊರಳಾಡುತ್ತಿದ್ದರು. ವೈದ್ಯನು ವಿನಯದಿಂದ "ರಾಯರೇ ಏನು ಬೇಕು. ಬೆಳಗಿನ ಕೇಸರಾನ್ನ ಇಷ್ಟು ತರಲೇ ?" ಎಂದು ಕೇಳಿದನು. ಅಮುಲ್ದಾರರು ಕೇಸರಾನ್ನ "ಕೇಸರಾನ್ನ ಸುಡು.

ನನಗೆ ಒಂದು ಔಷಧ ಕೊಡು ಮಹಾರಾಯ. ಹೊಟ್ಟೆ ನೋವು ಅಯ್ಯಯ್ಯೋ ? ಉದರಶೂಲೆ ಏನೂ ತಾಳಲಾರೆ " ಎಂದು ತನ್ನವಸ್ಥೆಯನ್ನು ಒಪ್ಪಿಸಿದರು. ವೈದ್ಯನು "ನಾನು ವೈದ್ಯನಲ್ಲ ಮಹಾಸ್ವಾಮಿ. ನಾನು ಅಡಿಗೆಯವ ಖಾವಂದಿರಿಗೇ ವೇದ್ಯ ವಾಗಿದೆ" ಎಂದನು. ಅಮಲ್ದಾರರು ಹೊರಳುತ್ತ "ನೀನು ಮದ್ದು ಕೊಡುವುದಿಲ್ಲವಾದರೆ ಈಗ ಕೋಳ ಹಾಕಿಸುವೆ" ಎಂದರು. ವೈದ್ಯನು "ನನ್ನನ್ನು ಅಡಿಗೆಯವನೆಂದು ಇಲ್ಲಿ ಹಿಡಿದಿರುವರು." ಎಂದನು. ಅಮಲ್ದಾರರು "ಅಯ್ಯಯ್ಯೋ ಏನಾದರೂ ಮಾಡು. ಏನಾದ್ರೂ ಮದ್ದು ಕೊಡು. ಒಂದು ಔಷಧಿ ಕೊಡು" ಎಂದು ಕಿರಚಿದರು. ಆ ವೇಳೆಗೆ ಹೆಡ್‌ಗುಮಾಸ್ತೆ ವೈಕುಂಠಾಚಾರ್ಯರಿಗೂ ಹೊಟ್ಟೆಶೂಲೆ ಆಗಿರುವುದು ತಿಳಿಯಿತು. ವೈದ್ಯರು ಇಬ್ಬರಿಗೂ ಪ್ರಾಣಭಯವನ್ನು ಹತ್ತಿಸಿ ದುಡ್ಡನ್ನೂ ಕಿತ್ತು ಕೊಂಡು ಕಹಿ ಔಷಧಿ ಕುಡಿಸಿದರು. ಎರಡು ದಿನಗಳ ನಂತರ ಇಬ್ಬರಿಗೂ ಹೊಟ್ಟೆಶೂಲೆ ವಾಸಿಯಾಯಿತು. ಕೃಷ್ಣವೈದ್ಯರು ಇಬ್ಬರ ಅಪ್ಪಣೆಯನ್ನೂ ಪಡೆದು ಶ್ರೀಕಾಂತ ಜಾತ್ರೆಯ ಹಾದಿ ಹಿಡಿದರು. ದಾರಿಯಲ್ಲಿ ಪಟೇಲ್ ಪದ್ಮರಾಜನು ಅವರ ಬಳಿ ಬಂದು ಆತ್ಮೀಯವಾಗಿ ಅಧಿಕಾರಿಗಳಿಗೆ ಈ ಅವಸ್ಥೆ ಆಗಲಿಕ್ಕೆ ಕಾರಣವೇನೆಂದು ಕೇಳಿದನು. ವೈದ್ಯರು ಸರಳವಾಗಿ "ಔಷಧಿಕಾರನನ್ನು ಅಡಿಗೆಗೆ ಹಿಡಿದಿದ್ದರಿಂದ " ಎಂದು ಉತ್ತರಿಸಿದರು. ಪಟೇಲನು "ಅದು ಹ್ಯಾಗೇ" ಎಂದು ಕೇಳಿದನು. ವೈದ್ಯರು "ನನಗೆ ಅಡುಗೆಯ ಅನುಭವ ಅಷ್ಟಿಲ್ಲ. ಹಿಂಗಿನ ಒಗ್ಗರಣೆ ಹಾಕಲಿಕ್ಕೆ ಮರೆತು ಮಣಿಮಂತಿ ಚೂರ್ಣವನ್ನು ಬೆರಸಿಬಿಟ್ಟೆ" ಎಂದನು. ಉಕ್ಕಿಬರುತ್ತಿದ್ದ ನಗುವನ್ನು ತಡೆಯಲಾರದೆ ಪಟೇಲನು ಬಿದ್ದು ಬಿದ್ದು ನಕ್ಕನು.

ಪಂಜೆಯವರ ಗದ್ಯ ಶೈಲಿ, ಸರಳತೆ ಹಾಸ್ಯ ಮತ್ತು ಕಾವ್ಯ ಲಕ್ಷಣಗಳಿಂದ ಕೂಡಿದೆ. ಸಂಸ್ಕೃತ ಪದಗಳು ಸಾಧ್ಯವಾದಷ್ಟು ಕಡಿಮೆ. ಒಂದು ಸಣ್ಣ ಕಥೆಯ ನಡುವೆ ಬರುವ ಈ ಗದ್ಯವನ್ನು ನೋಡಿ. "ಅಂಗಳದಲ್ಲಿ ಅವಳನ್ನು ನೋಡುತ್ತಲೇ ನನ್ನ ಮನಸ್ಸು ಸ್ವಲ್ಪ ಹಿಂಜರಿಯಿತು. ಆ ರಮಣಿಯು ಮುವತ್ತಕ್ಕೆ ಮೀರಿರಲಿಲ್ಲ. ದೇಹ ಕಾಂತಿಯು ಕೃಷ್ಣವರ್ಣದಿಂದ ಮಂಜುಳವಾಗಿತ್ತು. ಆ ಸಂಕುಚಿತ ಚಕ್ಷುಗಳನ್ನು ಆವರಿಸಿದ ಭ್ರೂಯುಗ್ಮವು ಲಲಾಟ ಪ್ರದೇಶದಲ್ಲಿ ಕಲಭಕೇಶದಂತಿದ್ದ ಅವಳ ಆಳಕಾವಳಿಯನ್ನು ತಡವೆ ತಡವೆಗೆ ಚುಂಬಿಸುತ್ತಿತ್ತು. ತಾಂಬೂಲದಿಂದಾರಕ್ತವಾದ ದಂತಗಳು ಅದರ ನಿರೋಧವನ್ನು ಅತಿಕ್ರಮಿಸಿ ಮುಖದ ಮೇಲೆ ಅಲಂಕೃತವಾದ ಕೆಂಪು ಚಿಬ್ಬುಗಳನ್ನು ನೋಡುವಂತೆ ವಿರಾಜಿಸುತ್ತಿದ್ದವು. ಕಂಚುಕವು ಸ್ಕಂಧಾಗ್ರದಲ್ಲಿಯೇ ಪೂರೈಸಿದುದರಿಂದ ಉಳಿದ ಹಸ್ತಭಾಗದಲ್ಲಿ ಗಾಜಿನ ಹಿಂಬಳೆಗಳಲ್ಲದೆ ಮತ್ತೊಂದಲಂಕಾರ ವಿರಲಿಲ್ಲ."

ಯಾವ ಪದವನ್ನೂ ವಿಶ್ಲೇಷಿಸುವ ಅಭ್ಯಾಸ ಪಂಜೆಯವರಿಗೆ. ಉದಾಹರಣೆಗೆ ಸರ್ಕಸ್. "ಸ್ವಾಮಿ ಎಡಿಟರರೆ ನಮ್ಮ ಊರಲ್ಲಿ "ಸರ್‌ಕಸ್" ಬಂದಿದೆ. ಇದರ ನಿಷ್ಪತ್ತಿಯನ್ನು ಕೇಳಬಹುದೇ ? ಅದು ಮುಂದರಿಸು ಎಂಬ ಅರ್ಥವಿರುವ ಸರಕಿಸು ಎಂಬ

ಕನ್ನಡ ಶಬ್ದದಿಂದ ಹುಟ್ಟಿರಬಹುದೆ ? ಇದು ಗಜರಗಳೆಯೋ ನಾಯಿರಗಳೆಯೋ ? ಗಜರಗಳೆ ಶುದ್ಧವೋ ಗಜರಗುಳು ಶುದ್ಧವೋ ಎಂಬುದನ್ನು ತೀರ್ಮಾನಿಸಬೇಕು. ಸರ್ಕಸ್ ಆಟದವರು ಒಂದೆಡೆಯಿಂದ ಮತ್ತೊಂದೆಡೆಗೆ ಸರಕಿಸುತ್ತಲೇ ಇರುವುದರಿಂದ ಈ ಹೆಸರು ಅನ್ವರ್ಥವಾಗಬಹುದು. ಆಟದ ಮೃಗಗಳನ್ನು ಕಂಡಾಗ ನನಗೆ ನನ್ನ ಪೂರ್ವಜರನ್ನು ಕಂಡಂತಾಯಿತು. ಕರಡಿ ಹುಲಿಗಳು ಬಾಯಿ ತೆರೆದಾಗ ಅಫೀಮು ತಿಂದು ಯೋಗಾರೂಢರಾದ ನಮ್ಮ ಪುರಾತನ ಬೈರಾಗಿಗಳಂತೆ ತೋರುತ್ತಿದ್ದವು. ನಾಯಿ ಕುದುರೆಗಳು ನನ್ನ ಹಾಗೆಯೇ ಸ್ವತಂತ್ರತಪ್ಪಿ ಆತಂಕವಾಗಿದ್ದವು. ಇವುಗಳಿಗೆ ಹೊಟ್ಟೆಗೆ ಸರಿಯಾಗಿ ಬೀಳದಿದ್ದರೂ ಬೆನ್ನಿಗೆ ಸರಿಯಾಗಿ ಬೀಳುತ್ತಿತ್ತು."

ಪಂಜೆಯವರು ಹರಟೆಮಲ್ಲನೆಂಬ ಹೆಸರಿನಲ್ಲಿ ಅನೇಕ ಲಘುಪ್ರಬಂಧಗಳನ್ನು ಬರೆದಿದ್ದಾರೆ. "ಪರನಿಂದೆ ಬೇಡ" ಎಂಬ ಲೇಖನ ಅತ್ಯಂತ ಮರ್ಮಸ್ಪರ್ಶಿಯೂ ಮನೋಜ್ಞವೂ ಆಗಿದೆ. "ದೋಷವಿಲ್ಲದವನನ್ನು ನೋಡಬೇಕಾದರೆ ಚೌತಿಯು ಏಕಾದಶಿ ದಿನ ಬರಬೇಕು. ನಿರ್ದೋಷಿ ಎಂಬುವನು ದೇವರೊಬ್ಬನೆ. ಚಂದ್ರನಾಗಲೀ ಇಂದ್ರನಾಗಲೀ ದೋಷರಹಿತನಲ್ಲ. ಚಂದ್ರನಲ್ಲಿ ಕಪ್ಪುಂಟು, ಇಂದ್ರನಲ್ಲಿ ಕಣ್ಣುಂಟು ದೀಪದ ಸುತ್ತ ಬೆಳಗು ಅಡಿಗೆ ಮಾತ್ರ ಕತ್ತಲು. ಊರಗೌಡನಾದರೂ ಪೂರಾಗೌಡನಾಗಿರಲಾರ. ಜನಗಳ ತಪ್ಪು ಯಾವಾಗ ಬಯಲಿಗೆ ಬರುತ್ತದೆಂದು ಹೇಳಬರುವುದಿಲ್ಲ. ಕುಂಟಾಕಳು ಹಾಲು ತುಂಬಿದಾಗ ಒದೆದು ಬಿಡುತ್ತದೆ. ಕುಂಟೆತ್ತು ಹರದಾರಿ ದೂರ ನಡೆದು ನೆಲಕ್ಕೆ ಒರಗಿತು. ಸನ್ಯಾಸಿ ಶ್ವಾಸಕಟ್ಟಿಬಿಟ್ಟು ಯೋಗಾರೂಢನಾಗಿ ಕುಳಿತುಕೊಳ್ಳುವನು. ಯಜಮಾನನು ಮಾರ್ಗಕ್ಕೆ ಇಳಿಯಲು, ಮನೆಯೊಳಗಣ ಸೀತೆಯನ್ನೇ ಎತ್ತಿಕೊಳ್ಳುವನು. ನೋಡಲಿಕ್ಕೆ ತಬ್ಬಲಿ. ಹಾರಲಿಕ್ಕೆ ಹೆಬ್ಬುಲಿ. ತಪ್ಪು ತಿದ್ದುವಾಗ ಎಚ್ಚರವಿರಬೇಕು. ಬಿರುಸಾಗಿ ಊದಿದರೆ ಬೆಂಕಿ ಆರೀತು. ಮೆಲ್ಲನೆ ಊದಿದರೆ ಹೊಗೆ ತುಂಬೀತು"

ಪಂಜೆಯವರು ಹರಟೆ ಮಲ್ಲನ ಹೆಸರಿನಲ್ಲಿ ಬರೆದ ಬರೆಹಗಳು ಮುನಿಸಿಪಾಲಿಟಿ ಊರಿನ ಸಂಘ ಸಂಸ್ಥೆಗಳು ಜನೋಪಕಾರ ಮತ್ತು ಸಾರ್ವಜನಿಕ ಕಾರ್ಯಗಳಿಗಾಗಿ ದಾನಿಗಳು ಕೊಟ್ಟ ಹಣ ವಿನಿಯೋಗವಾಗದಿರುವುದಕ್ಕೆ ಆಕ್ಷೇಪಣೆ ಇವುಗಳಿಗೆ ಸಂಬಂಧಿಸಿವೆ. ಪಂಜೆಯವರು ಸುಮಾರು 75 ವರುಷಗಳ ಹಿಂದೆ ಭಾರತದ ಒಂದು ಪತ್ರಿಕೆಯಲ್ಲಿ ಪ್ರಥಮ ಅಂಕಣಕಾರರಾಗಿ ಜನಪ್ರಿಯ ಲಘುಹಾಸ್ಯದ ಬರಹಗಳನ್ನು ಬರೆದರು. "ಹರಟೆಮಲ್ಲನ ಚಾಕರಿ ಮುನಸಿಪಲ್ ನೌಕರಿ ಇವೆರಡೂ ಒಂದೇ ತೆರ. ಐದು ಬಾಯಿಗಳು ಹೊಗಳುತ್ತವೆ. ಹತ್ತು ಬಾಯಿಗಳು ತೆಗಳುತ್ತವೆ. ರಾ ರಾ ನ ಸುಬ್ಬರಾಯರು ಚೇರ್‌ಮನ್ ಆದಂದಿನಿಂದ ಮುನಿಸಿಪಲ್ ಆಫೀಸು ಗಡಗಡನೆ ನಡುಗುತ್ತಿದೆ. ಬಡತನದಿಂದಲೇ ಎಂದು ತಿಳಿದುಕೊಳ್ಳುವಾ. ಹಂಪನ ಕಟ್ಟೆಯಿಂದ ಮಡಕೇರಿ ಗುಡ್ಡದವರೆಗೆ ರಸ್ತೆಯಲ್ಲ ಹುಣ್ಣಾಗಿ ಕೀವು ಕಟ್ಟಿ ನಿಂತಿವೆ. . . ಇತ್ತಲಾಗಿ ನಾನು ದೇಶಸಂಚಾರಕ್ಕೆ ಹೊರಟದ್ದರಿಂದ ತಮಗೆ ಮೋರೆ ತೋರಿಸಲು ಆಗಲೇ ಇಲ್ಲ. ದೇಶಯಾತ್ರೆ ಮಾಡಿ

ಕಳೆದ ಗುರುವಾರ ಸಾಯಂಕಾಲ ಮನೆಗೆ ಹಿಂದಿರುಗಿದೆನು. ಬರುವಾಗ ಪೇಟೆಯಲ್ಲಿ ಜನಗಳು ಪತ್ರಿಕೆ ಪ್ರತಿಯನ್ನು ಕೈಕೊಂಡು ಅಧ್ಯಯನ ಮಾಡುವುದನ್ನು ನೋಡಿದೆನು. ಒಬ್ಬಿಬ್ಬರು "ಮಲ್ಲ ಮಲ್ಲ (ಹರಟೆಮಲ್ಲ) ಎಂದು ತಲೆಯ ಮೇಲೆ ಕೈ ಮಾಡಿದರು. ಕ್ಷೌರಕ ಬಿರ್ಮಪೂಜಾರಿಯು "ಮಲ್ಲನು ತಲೆ ತೋರಿಸಿದ್ದಾನೋ ಎಂದು ನೋಡಿದನು. ನಾನು ಇಲ್ಲದ್ದನ್ನು ನೋಡಿ ತಲೆ ಬೋಳಿಸದೆ ಸುಮ್ಮನಾದನು. ಸೋಡಾ ಮಾಡುವ ಬಾಸಣ್ಣನು ಹರಟೆ ಓದುವ ತವಕದಿಂದ ಸೀಸೆಯಲ್ಲಿ ಲಿಂಬೆ ನೀರು ಹಾಕುವುದಕ್ಕೆ ಮರೆತು ಚಂಬು ನೀರನ್ನು ತುಂಬಿಸಿಬಿಟ್ಟ. ರೊಟ್ಟಿಗಾರ ಪೇದು ಮಿಂಗೇಲನು ಗೋಧಿ ಹುಡಿಗೂ ಹಾದಿಹುಡಿಗೂ ಹೆಚ್ಚು ಕಡಿಮೆ ಉಂಟೆ ? ಎಂದು ಮನಸ್ಸಿನಲ್ಲಿ ಮಥಿಸುತ್ತಿದ್ದಾಗ, ಸತ್ಯದೀಪಿಕೆಯಲ್ಲಿ ಆಗ ಬೋಟು ಬಂದ ವರ್ತಮಾನವನ್ನು ನೋಡಿ ದುಃಖಗೊಂಡನು. ಹೊಸ ಗೋಧಿ ಬರುವವರೆಗೆ ಪೇದ್ರಿ ಮಿಂಗೇಲನ ರೊಟ್ಟಿಯನ್ನು ಮೂಗು ಹಿಡಿದು ತಿನ್ನಬೇಕಾಗಿತ್ತು. ಆದ್ದರಿಂದ ದೇಶಯಾತ್ರೆಗೆ ಹೊರಟೆನು ಸ್ವಾಮಿ ! ಮಲ್ಲನು ಕಾರವಾರಕ್ಕೆ ತಲೆ ತೋರಿಸಬೇಕೆಂದು ಕೆಲವರ ಆಶೆ. ಮಲ್ಲನು ಕಲ್ಪಾಂತರದವರೆಗೆ ಕಣ್ಣು ಮುಚ್ಚಿರಬೇಕೆಂದು ಕೆಲವರ ಭಾಷೆ. ಹಲವರು ಮಲ್ಲನು ಕೆಲಸಕ್ಕೆ ಬಾರದ ಹಾಳು ಹರಟೆಗಳ ಗಾಳಿ ಊದಿ ಸತ್ಯ ದೀಪಿಕೆ ಎಂಬ ಪತ್ರಿಕೆಯ ಬೆಳಕನ್ನು ತೀರಾ ಆರಿಸಿಬಿಟ್ಟನೆಂದು ದೂಷಿಸುತ್ತಾರೆ. ಹಲವರು ಮಲ್ಲನು ನಾಲಗೆಯಿಂದ ತಿರುಗಣೆ ತಿರುಗಿಸಿ ದೀಪಿಕೆಯ ಪ್ರಕಾಶವನ್ನು ವಿಸ್ತರಿಸಿದನೆಂದು ಭಾಷಿಸುತ್ತಾರೆ.

ಇದ್ದ ಕಥೆಯ ತಾನೆದ್ದು ಹೇಳಿದರೆ
ಬದ್ಧ ಜಾಲ ನೀನೆನ್ನುವರು
ಸದ್ದು ಮಾಡದೆ ಬಿದ್ದುಕೊಂಡರೂ
ಮೊದ್ದು ಮೂಕಜಂತುವೆನ್ನುವರು

ಹರಿಜನೋದ್ಧಾರದ ಆವಶ್ಯಕತೆಯನ್ನು ಮನಗಂಡು ಗಾಂಧೀಜಿಗಿಂತ ಮುಂಚಿತವಾಗಿಯೇ ಅದಕ್ಕಾಗಿ ದುಡಿದವರು ಬರೆದವರು ಪಂಜೆಯವರು. "ಉಳ್ಳಯ್ಯ ದಯೆಗೊಳ್ಳು" ಎಂಬ ಪದ್ಯವನ್ನು ಅವರು ರಚಿಸಿದುದು 1901 ರಲ್ಲಿ. "ಹರಿಜನರಿಗೆ ಒಂದು ಒಳ್ಳೆಯ ಹೆಸರಿಗೂ ಸಹ ಗತಿ ಇಲ್ಲವೆ ? ದಟ್ಟಿದಿಕ್ಕಾ, ಮಾರಿಮುಂಡ, ಮುಂಡಾಳ ಹುಟ್ಟು ಹೊಲೆಯ ಪೋಲಿ ಚಂಡ ಚಂಡಾಳ ಬೊಟ್ಟಿ ಬೊಗ್ಗರೆ ಎಂದೆಲ್ಲ ಅವರನ್ನು ಕರೆಯಬೇಕೆ ? ಹಂದಿ ನಾಯ್ಗಳಿಗಿಂತ ಅವರು ಕಡೆಯಾಗಿ ಬಾಳಬೇಕೆ ? ಆಗಲೇ ಪಂಜೆಯವರು ಜನತೆಯನ್ನು ಎಚ್ಚರಿಸಿದರು.

ನೋಡು ಸ್ವರಾಜ್ಯಕೆ ನಾವೂರು ಗೋಲು
ನೋಡಣ್ಣ ದಮ್ಮಯ್ಯ ಕೊಡು ಸರಿಪಾಲು
ಬೇಡಿದಾಗಲೇ ಬಿಟ್ಟು ಕೊಡುವುದೆ ಮೇಲು

ಸಮಾನತೆಯನ್ನು ಕೊಡದಿದ್ದರೆ ಆಗುವ ಪರಿಣಾಮವನ್ನು ಪಂಜೆಯವರು ಈಗ

ಎಪ್ಪತ್ತೈದು ವರ್ಷಗಳ ಹಿಂದೆಯೇ ಸೂಚಿಸಿದರು. "ನಂದಿಸು ಕಿಡಿಯಲ್ಲಿ ಹೊಲೆಯನಾ ಹಗೆಯ"

ನಾವು ಪಂಜೆಯವರ ಸಂದೇಶವನ್ನು ಈಗಲಾದರೂ ನಡೆಸಿ ಈ ಕಳಂಕದಿಂದ ಈ ದೇಶವನ್ನು ಪಾರುಮಾಡುವೆವೆ ?2

ಅಡಿಟಿಪ್ಪಣಿಗಳು

1. ನಮ್ಮಲ್ಲಿ ಬಲಗಣ್ಣು ಇದ್ದು ಎಡಗಣ್ಣು ಇಲ್ಲದವರಿಗೆ ದಶನೇತ್ರ ೧೦ ಎಂದು ಹೆಸರು. ಒಂದು–ಸೊನ್ನೆ.

2. 1974 ನೇ ಫೆಬ್ರುವರಿ 8, 9, 10 ಈ ಮೂರು ದಿನಗಳು ಮಂಗಳೂರಿನಲ್ಲಿ ಪಂಜೆ ಜನ್ಮ ಶತಮಾನೋತ್ಸವ ತುಂಬ ವಿಜೃಂಭಣೆಯಿಂದ ನೆರವೇರಿತು. ಅದರಲ್ಲಿ ನಾಡಿನ ಅನೇಕ ವಿದ್ವಾಂಸರು ಕವಿಗಳೂ ಸಾಹಿತಿಗಳೂ ಪಾಲುಗೊಂಡಿದ್ದರು. ನಾನು ಒಂದು ಗೋಷ್ಠಿಯ ಅಧ್ಯಕ್ಷತೆಯನ್ನು ವಹಿಸಿದ್ದೆ. ಅಲ್ಲದೆ ಇನ್ನೊಂದು ಭಾಷಣವನ್ನೂ ಮಾಡಿದೆ.

ಅನಂತರ ಈ ಭಾಷಣವನ್ನು ಬರೆದೆ.

ಜಿ. ಪಿ. ರಾಮಪ್ರಸಾದ್

"ಸಂಪ್ರದಾಯದ ಬಿಳಲುಗಳು"

ಬೆಳೆಯುತ್ತವೆ ದಿಕ್ಕುದಿಕ್ಕುಗಳಲ್ಲಿ
ಹೊತ್ತುಗೊತ್ತುಗಳಿಲ್ಲದೆ
ಮನದ ಮೂಲೆ ಮೂಲೆಗಳಲ್ಲಿ
ಕಲ್ಲು ನೆಲದಲ್ಲೂ ಹಾಯಾಗಿ ನುಸುಳಿ
ತನಗೆ ತಾವೇ ಪೋಷಕವಾಗಿ
ಮುಗ್ಧ ಮನದ ಶಿಶುವಾಗಿ
ಗಂಟುಬಿದ್ದವರ ನಂಟಾಗಿ
ರೆಂಬೆಗೆ ಇಂಬಾಗಿ
ಮೇಲಿಂದ ಕೆಳಗಿಳಿದು ಕಂಬವಾಗುತ್ತವೆ.
ಸಿಕ್ಕಿದ್ದನ್ನೆಲ್ಲ ಬಾಚಿ
ಉದರ ಪೂರ್ತಿ ನೆಕ್ಕಿ
ಹಳತನದ ದಳವಾಯಿಯಾಗಿ
ಹೊಸತನದ ನಾಶವಾಗಿ
ಧಮನಿ ಧಮನಿಗಳಲ್ಲಿ ಬೇರು ಬಿಡುತ್ತವೆ.
ಅತ್ತಿತ್ತ ಹರಿದಾಡಲೂ ಬಿಡದಂತೆ
ದೆವ್ವವಾಗಿ
ಶವಿಸಂತಾನವಾಗಿ
ಸುತ್ತಲೂ ಬಳಸಿ ಬಂಧಿಸಿ
ನೆನಪಿಗೂ ತಡೆಯೊಡ್ಡುತ್ತವೆ.
ಬೆಳೆವ ಬದುಕಿಗೆ ನೇಣಾಗಿ
ಮನದ ತುಂಬೆಲ್ಲ ವ್ರಣವಾಗಿ
ಮನುಕುಲದ ಜೀವಂತ ವ್ಯಥೆಯಾಗಿ
ಇತಿಹಾಸದ ಕಥೆಯಾಗುತ್ತವೆ.

ಎನ್. ಅನಂತರಂಗಾಚಾರ್

ಬೌದ್ಧ ಜೈನ ರಾಮಾಯಣಗಳು

ವಾಲ್ಮೀಕಿಯಾದ ಮೇಲೆ ಬಹು ವರ್ಷಗಳವರೆಗೆ ಅವರ ರಾಮಾಯಣ ಕತೆಯನ್ನು ಯಾರೂ ಉಪಯೋಗಿಸಿರುವಂತೆ ಕಾಣುವುದಿಲ್ಲ. ಬಹಳ ಕಾಲವಾದಮೇಲೆ ವಾಲ್ಮೀಕಿ ರಾಮಾಯಣವನ್ನು ಇತರ ಪಂಥದವರು ತಮ್ಮ ಧರ್ಮ ಪ್ರಕ್ರಿಯೆಗಳಿಗೆ ಅನ್ವಯಿಸುವಂತೆ ಮಾರ್ಪಡಿಸಿಕೊಂಡು ಭಿನ್ನ ಭಿನ್ನ ಗ್ರಂಥಗಳನ್ನು ರಚಿಸಿದರು. ಇಂತಹವರಲ್ಲಿ ಮೊದಲು ವಿಚಾರಣೀಯರಾದವರು ಬೌದ್ಧರು. ಬೌದ್ಧ ರಾಮಾಯಣಗಳ ಮೇಲೆ ಅವರ ಮತ ವಿಶೇಷ ಪ್ರಭಾವವನ್ನು ಬೀರಿದೆ. ಅವರ ಜಾತಕ ಕತೆಗಳಲ್ಲಿ 'ದಶರಥ ಜಾತಕ'ವೆಂಬುದು ಗಣನೀಯವಾಗಿದೆ. ಇದರಲ್ಲಿ ರಾಮಾಯಣದ ಕತೆ ಸಿಕ್ಕುತ್ತದೆ. ಇದರಲ್ಲಿ ರಾವಣನ ಪ್ರಸ್ತಾಪವೇ ಇಲ್ಲ. ಸೀತಾಪಹರಣವೂ ಅದರ ಮುಂದಿನ ಕಥಾಭಾಗವೂ ಕಂಡು ಬರುವುದಿಲ್ಲ. ರಾಮ ಲಕ್ಷ್ಮಣ ಸೀತೆಯರು ಅಣ್ಣತಂಗಿಯರು. ಒಬ್ಬ ತಾಯಿಯ ಮಕ್ಕಳು. ದಶರಥನ ಹದಿನಾರು ಸಾವಿರ ಹೆಂಡತಿಯರಲ್ಲಿ ಪ್ರಧಾನಳಾದ ಒಬ್ಬ ರಾಣಿಯ ಮಗ ಭರತ. ಆ ರಾಣಿಗೆ ದಶರಥನು ಎಂದೋ ಒಂದು ವರವನ್ನು ಕೊಟ್ಟಿದ್ದನು. ರಾಮನಿಗೆ ಪಟ್ಟಾಭಿಷೇಕವಾಗುವ ಸಂದರ್ಭದಲ್ಲಿ ಈ ವರವು ಅಡ್ಡಲಾಗಿ ಬಂದಿತು. ರಾಮ ಲಕ್ಷ್ಮಣ ಸೀತೆಯರು ಕಾಡಿಗೆ ಹೋಗಬೇಕಾಯಿತು. ಅನಂತರ ದಶರಥನ ಮರಣ ಸಂಭವಿಸಿತು. ಭರತನು ಅಣ್ಣನ ಬಳಿಗೆ ಹೋಗಿ ರಾಜ್ಯವನ್ನು ಸ್ವೀಕರಿಸ ಬೇಕೆಂದು ಬೇಡುವನು. ಅವಧಿ ಕಳೆಯುವವರೆಗೆ ರಾಮನು ಹಿಂದಿರುಗಲು ಒಪ್ಪಲಿಲ್ಲ. ಮುಗಿದಮೇಲೆ ಮರಳಿ ಬಂದು ಸೀತೆಯನ್ನು ಮದುವೆ ಮಾಡಿಕೊಂಡು ಸುಖವಾಗಿ ರಾಜ್ಯಭಾರ ಮಾಡುವನು. ಈ ಕಥೆಯಲ್ಲಿ ರಾಮಪಂಡಿತನು ಸತ್ವಗುಣ ಪ್ರಧಾನವಾಗಿ ಬುದ್ಧನಿಗೆ ಸಾಟಿಯಾದ ಪರಮಸಾಧು, ವೈರಾಗ್ಯನಿಧಿ, ಧರ್ಮಮೂರ್ತಿಯಾದ ಇವನನ್ನು ಬೌದ್ಧರು ತಮ್ಮವನನ್ನಾಗಿ ಮಾಡಿಕೊಂಡಿದ್ದಾರೆ. ಅಲ್ಲದೆ ಹಿಂದಿನ ಜನ್ಮಗಳಲ್ಲಿ ರಾಮನ ಅವತಾರವೂ ಒಂದೆಂದು ಪರಿಗಣಿಸಿದ್ದಾರೆ. ಇದರಿಂದ ಬೌದ್ಧಮತ ಪ್ರಚಾರಕ್ಕೆ ಹೆಚ್ಚು ಪ್ರಯೋಜನವಾಗಿರಬಹುದು.

ಜೈನ ರಾಮಾಯಣಗಳು : ಜೈನ ರಾಮಾಯಣವನ್ನು ತಮ್ಮ ಮತಧರ್ಮ ಕ್ಕನುಗುಣವಾಗಿ ಮಾರ್ಪಡಿಸಿಕೊಂಡಿದ್ದಾರೆ. ಜೈನ ರಾಮಾಯಣಕ್ಕೆ 'ಪದ್ಮಚರಿತ'

ವೆಂದು ಹೆಸರು. ಅದು ಪ್ರಾಕೃತದಲ್ಲಿ 'ಪಉಮ ಚರಿತೆ'ಯಾಗಿದೆ. ಜೈನರಾಮಾಯಣ ಗಳಿಗೂ ಸಾವಿರಾರು ವರ್ಷದ ಇತಿಹಾಸವಿದೆ. ಅವುಗಳಲ್ಲಿಯೂ ಭಾರತಿ ಸಂಸ್ಕೃತಿಯ ಬೆಳವಣಿಗೆಯನ್ನೂ ಕಾಣಬಹುದು. ರಾಮನ ಪೂರ್ವಭವ ಮತ್ತು ಪುನರ್ಭವಗಳ ದೃಷ್ಟಿಯಿಂದ ಕತೆಯು ವಿಶೇಷವಾಗಿ ವಿಸ್ತೃತವಾಗಿದೆ. ಈ ಕತೆಯನ್ನು ತನ್ನ 'ತ್ರಿಷಷ್ಟಿ ಶಲಾಕಾಪುರುಷ ಚರಿತ್ರೆ'ಯಲ್ಲಿ ಅಳವಡಿಸಿಕೊಂಡಿವೆ.4 ರಾಮ ಅಥವಾ ಪದ್ಮ, ಲಕ್ಷ್ಮಣ ಮತ್ತು ರಾವಣರು ಶಲಾಕಾಪುರುಷರಲ್ಲಿ ಸೇರಿದ್ದಾರೆ. ಎಂಟನೆಯ ಬಲವೇವ, ವಾಸು ದೇವ ಮತ್ತು ಪ್ರತಿ ವಾಸುದೇವರಾಗಿದ್ದಾರೆ. ಆಧ್ಯಾತ್ಮ ಜೀವನದಲ್ಲಿ ಅದ್ಭುತ ಉತ್ಕ್ರಾಂತಿಯನ್ನೂ ಸ್ಥಾಪಿಸಿದ ಮಹಾಪುರುಷರುಗಳಾಗಿದ್ದಾರೆ. ಜೈನ ರಾಮಾಯಣ ಗಳು ಭಾರತೀಯ ಸಂಸ್ಕೃತಿಯ ಮತ್ತೊಂದು ಮುಖವನ್ನು ಪ್ರಕಟಿಸುತ್ತದೆ.

ಇಲ್ಲಿಯ ರಾಮನು ಬಲದೇವನಾಗಿದ್ದಾನೆ. ಇವನು ಬಲಭದ್ರನೂ ಅಹುದು. ಲಕ್ಷ್ಮಣನೇ ವಾಸುದೇವ–ನಾರಾಯಣ. ಇಬ್ಬರೂ ಬೇರೆ ಬೇರೆ ತಾಯಿಂದಿರ ಮಕ್ಕಳು. ಲಕ್ಷ್ಮಣನು ಅಣ್ಣನ ಸಹಾಯದಿಂದ ಪ್ರತಿವಾಸುದೇವನಾದ ರಾವಣನನ್ನು ಕೊಲ್ಲುವನು. ಮುಂದೆ ದಿಗ್ವಿಜಯಕ್ಕೆ ಹೊರಟು ಭಾರತದ ಮೂರು ಖಂಡಗಳನ್ನು ಜಯಿಸುವನು. ಅವುಗಳ ಅಧಿಪತ್ಯವನ್ನು ಪಡೆದು ಚಕ್ರವರ್ತಿಯಾಗುತ್ತಾನೆ. ಮರಣಾನಂತರ ಲಕ್ಷ್ಮಣ ನಿಗೆ ರಾವಣ ವಧೆಯ ಪ್ರತಿಫಲವಾಗಿ ನರಕ ಪ್ರಾಪ್ತಿಯಾಗುವುದು. ತಮ್ಮನ ಮರಣ ದಿಂದ ವ್ಯಾಕುಲನಾದ ರಾಮನು ಜಿನದೀಕ್ಷೆಯನ್ನು ಸ್ವೀಕರಿಸಿ ಮೋಕ್ಷವನ್ನೂ ಪಡೆಯು ವನು.

ಇಲ್ಲಿಯ ವಾನರರೂ ರಾಕ್ಷಸರೂ ಭಿನ್ನ ಭಿನ್ನ ವಂಶಕ್ಕೆ ಸೇರಿದ ವಿದ್ಯಾಧರರು. ದೇವಯೋನಿಗೇ ಸೇರಿದವರು. ಇವರೂ ಮನುಷ್ಯರೇ. ಆದರೆ ಕಾಮರೂಪತ್ವ ಆಕಾಶ ಗಮನ ಮೊದಲಾದ ವಿದ್ಯೆಯನ್ನು ತಿಳಿದವರು. ವಾನರ ವಂಶದ ವಿದ್ಯಾಧರ ಧ್ವಜ ವಾನರ ಚಿಹ್ನೆಯಿಂದ ಕೂಡಿದುದರಿಂದಲೇ ಅವರಿಗೆ ವಾನರ ಸಂಜ್ಞೆ ಬಂದುದು.

ಈಗಿರುವ ಜೈನ ರಾಮಾಯಣಗಳಲ್ಲೆಲ್ಲ ವಿಮಲಸೂರಿಯ 'ಪಉಮಚರಿಯ'ವೇ ಪ್ರಾಚೀನವಾದುದು. ಇದು ಹುಟ್ಟುವ ಕಾಲಕ್ಕೆ ವಾಲ್ಮೀಕಿ ರಾಮಾಯಣವು ರೂಢ ಮೂಲವಾಗಿ ಪೂಜನೀಯ ಗ್ರಂಥವಾಗಿತ್ತು. ಈಗಿರುವಂತೆಯೇ ಇರುವ ವಾಲ್ಮೀಕಿ ರಾಮಾಯಣವು ವಿಮಲಸೂರಿಗೆ ಪರಿಚಯವಾಗಿತ್ತೆಂಬುದಕ್ಕೆ ಸಾಕಷ್ಟು ಆಧಾರಗಳಿವೆ. ಇವನ್ನೇ ಮಾರ್ಪಡಿಸಿಕೊಂಡು ವಿಮಲಸೂರಿಯು ತನ್ನ ಗ್ರಂಥವನ್ನು ರಚಿಸಿದನೋ ಅವನಿಗೆ ಪ್ರತ್ಯೇಕ ಆಕರವಿತ್ತೊ ಹೇಳಲಾಗುವುದಿಲ್ಲ.

ಜೈನ ರಾಮಾಯಣಗಳಲ್ಲಿ ಎರಡು ಸಂಪ್ರದಾಯಗಳಿವೆ. ಒಂದು ವಿಮಲಸೂರಿ ಯದು ಮತ್ತೊಂದು ಗುಣಭದ್ರಾಚಾರ್ಯರದು. ಜೈನ ಮಹಾರಾಷ್ಟ್ರೀ ಪ್ರಾಕೃತದಲ್ಲಿ 'ಪಉಮ ಚರಿಯ'ವೆಂಬ ಹೆಸರಿನ ಎರಡು ಪುರಾಣಗಳಿರುವಂತೆ ಕಾಣುತ್ತದೆ. ಒಂದು ಚಾವುಡ ಎಂಬ ಕವಿಯಿಂದ ರಚಿತವಾದುದು. ಇನ್ನೊಂದು ಸ್ವಯಂಭು ಎಂಬುವನಿಂದ ರಚಿತವಾದುದು. ಸ್ವಯಂಭುವು ಗ್ರಂಥವನ್ನು ಮುಗಿಸುವುದಕ್ಕೆ

ಮುಂಚೆಯೇ ತೀರಿಕೊಂಡುದರಿಂದ ಇವನ ಮಗ ತ್ರಿಭುವನ ಸ್ವಯಂಭುವು ಅದನ್ನು
ಪೂರ್ಣಮಾಡಿದನು. ಕಾಲಾನುಕಾಲದಲ್ಲಿ ಈ ಭಾಗವು ನಾಶವಾದುದರಿಂದ
ಜಯಸಲ್ಮೀರನ ಜಸುತ್ತ ಭಟ್ಟಾರಕನು ಇದನ್ನು ಪುನಃ ರಚಿಸಿ ಮುಗಿಸಿದನು, ಆದುದ
ರಿಂದ ಇದರ ರಚನೆಯಲ್ಲಿ ಮೂರು ಜನರ ಕೈವಾಡವಿದೆ. ಇದರಲ್ಲಿ ೧೨೦೦೦ ಶ್ಲೋಕ
ಗಳಿವೆಯಂತೆ. ಇದರ ಕಾಲ ಕ್ರಿ. ಶ. ೭ನೆಯ ಶತಮಾನದಿಂದ ೧೨ನೆಯ ಶತಮಾನದ
ಮಧ್ಯವಾಗುತ್ತದೆ. ಇದು ವಿಮಲಸೂರಿಯ ಸಂಪ್ರದಾಯಕ್ಕೆ ಸೇರಿದುದೆಂದು ಊಹಿಸ
ಬಹುದು. ಸಂಸ್ಕೃತ ಜೈನ ರಾಮಾಯಣಗಳಲ್ಲಿ ರವಿಷೇಣನ 'ಪದ್ಮ ಪುರಾಣ' ಅಥವಾ
'ಮಹಾಪುರಾಣ'ವು ಮುಖ್ಯವಾದುದು. ಇದು ಕ್ರಿ. ಶ. ೬೭೮ರಲ್ಲಿ ರಚಿತವಾದುದು.
ಇವನು ವಿಮಲಸೂರಿಯನ್ನು ಬಹುಮಟ್ಟಿಗೆ ಅನುಸರಿಸಿದ್ದಾನೆ. ೧೨ನೆಯ ಶತಮಾನದಲ್ಲಿ
ಹೇಮಚಂದ್ರಾಚಾರ್ಯನು ರಚಿಸಿರುವ ಇನ್ನೊಂದು ರಾಮಾಯಣವಿದೆ. ಆ ಕವಿಯ
'ತ್ರಿಷಷ್ಟಿ ಶಲಾಕಾಪುರುಷ ಪುರಾಣ'ದ ಏಳನೆಯ ಕತೆಯಾಗಿ ಈ ಕತೆಯು ಬರುತ್ತದೆ.
ಕ್ರಿ. ಶ. ೧೫೯೭ರಲ್ಲಿ ದೇವವಿಜಯಗಣಿ ಎಂಬುವನು ರಚಿಸಿರುವ 'ರಾಮ ಚರಿತ'ವೆಂಬ
ಗ್ರಂಥವೂ ಈ ಪರಂಪರೆಗೆ ಸೇರಿದುದು, ಕನ್ನಡ ಭಾಷೆಯಲ್ಲಿ ನಾಗಚಂದ್ರನ 'ಪಂಪ
ರಾಮಾಯಣ' (ಚಂಪು) ಕುಮುದೇಂದುವಿನ ರಾಮಾಯಣ (ಷಟ್ಪದಿ) ದೇವಪ್ಪನ 'ರಾಮ
ವಿಜಯ' (ಸಾಂಗತ್ಯ) ದೇವಚಂದ್ರನ 'ರಾಮ ಕಥಾವತಾರ' – ಇವುಗಳೂ ಈ ಸಂಪ್ರ
ದಾಯವೇ. ಮರಾಠಿಯಲ್ಲಿ ಗುಣಕೀರ್ತಿ, ಚೌಮುದ, ಚಿಂತಾಮಣಿ ಬ್ರಹ್ಮ್ಯಾ
ವಾನರ – ಈ ಮೂವರೂ ಸೇರಿ ರಚಿಸಿರುವ 'ಪದ್ಮ ಪುರಾಣ'ವೂ ಈ ಪರಂಪರೆಯವೇ.
ಈ ಸಂಪ್ರದಾಯ ಗ್ರಂಥಗಳಿಗೂ ವಾಲ್ಮೀಕಿ ರಾಮಾಯಣಕ್ಕೂ ಬಹಳ ವ್ಯತ್ಯಾಸಗಳಿವೆ.

'ಪಉಮ ಚರಿಯ'ದಲ್ಲಿ ಏಳು ಕಾಂಡಗಳಿವೆ. ವಿದ್ಯಾಧರ ಕಾಂಡ, ಭೂಮಿ
ಗೋಚರ ಕಾಂಡ, ದೇಶಾಟನ ಕಾಂಡ, ಸಿದ್ಧಶಿಲಾಕಾಂಡ, ಯುದ್ಧಕಾಂಡ, ಉತ್ತರ
ಕಾಂಡ, ನಿರ್ವಾಣಕಾಂಡ ಎಂಬಿವೇ ಕ್ರಮವಾಗಿ ೭ ಕಾಂಡಗಳು. ರಾವಣನ ಕತೆ
ಯಿಂದಲೇ ಕತೆ ಪ್ರಾರಂಭವಾಗುತ್ತದೆ. ನಮಿವಿನಮಿಗಳಿಂದ ಪ್ರಾರಂಭವಾಗುವ
ವಿದ್ಯಾಧರ ವಂಶದ ಉಗಮದಿಂದ ಪ್ರಾರಂಭವಾಗಿ ರಾವಣನ ಪೂರ್ವಕತೆಯಿಂದ
ತುಂಬಿದೆ. ರಾವಣನು ರತ್ನಶ್ರವ ಕೇಕಸಿಯರ ಮಗ. ಗರ್ಭದಲ್ಲಿರುವಾಗಲೇ ಅನೇಕ
ಅಪಶಕುನಗಳು ತೋರಿದವು. ಕನ್ನಡಿಯನ್ನು ನೋಡುವುದಕ್ಕೆ ಬದಲಾಗಿ ಖಡ್ಗದಲ್ಲಿಯೇ
ಮುಖವನ್ನು ನೋಡುತ್ತಾ ಬೆಳೆಯುವನು. ಮುಂದೆ ವಿದ್ಯಾಸಾಧಕನಾಗಿ, ದಿಗ್ವಿಜಯಿ
ಯಾಗಿ, ವೀರ ಯೋಧನಾಗಿ, ಪ್ರತಿಷ್ಠನಾಗಿ ಬಾಳಿ ಬೆಳೆಯುತ್ತಾನೆ. ಮಂಡೋದರಿ
ಯನ್ನು ಲಗ್ನವಾಗುತ್ತಾನೆ. ವಿದ್ಯಾಧರವಂಶದ ಕೀರ್ತಿಯನ್ನು ಹೆಚ್ಚಿಸುತ್ತಾನೆ.
ದುರ್ಲಂಘ್ಯಪುರದ ರಾಣಿಯಾದ ಉಪರಂಭೆಯು ತಾನಾಗಿಯೇ ಒಲಿದು ಬಂದರೂ
ತಿರಸ್ಕರಿಸಿ ಅವಳು ಪತಿಯೊಡನೆ ಬಾಳುವ ಹಾಗೆ ಮಾಡಿ ತನ್ನ ಸಂಯಮವನ್ನು ಪ್ರದರ್ಶಿ
ಸುತ್ತಾನೆ. ಹನುಮಂತನು ಇವನ ಸ್ನೇಹಿತ. ರಾವಣನು ಅತಿಪೌರುಷದಿಂದ ಕೂಡಿದ

ಸವನ್ರಾಟನಾಗುತ್ತಾನೆ. ಲಂಕೆಯಲ್ಲಿ ವಿಭೀಷಣ ಕುಂಭನೊಡನೆ ಸುಖವಾಗಿ ರಾಜ್ಯ ಭಾರವಾಡುತ್ತಾನೆ.

ಇತ್ತ ಇಕ್ಷ್ವಾಕು ವಂಶದ ಅರಸನಾದ ದಶರಥನಿಗೆ ತನ್ನ ನಾಲ್ವರು ರಾಣಿಯರಲ್ಲಿ ನಾಲ್ಕು ಮಕ್ಕಳು ಹುಟ್ಟುತ್ತಾರೆ. ಅಪರಾಜಿತೆ, ಸುಮಿತ್ರೆ, ಸುಪ್ರಭೆ ಮತ್ತು ಕೈಕೆ ಯೆಂಬುವರೇ ನಾಲ್ಕು ರಾಣಿಯರು. ಜನಕನ ಮಗಳಾದ ಸೀತೆಯನ್ನು ರಾಮನು ವರಿಸುವನು. ದಶರಥನು ಜಿನದೀಕ್ಷೆಯನ್ನು ಸ್ವೀಕರಿಸಲು ಇಚ್ಛಿಸಿ ರಾಮನಿಗೆ ಪಟ್ಟಾಭಿ ಷೇಕ ಮಾಡಲು ಏರ್ಪಡಿಸುವನು. ಪತಿಯ ವೈರಾಗ್ಯ ಮನೋಭಾವವನ್ನು ತಪ್ಪಿಸಲು ಕೈಕೆಯು ಭರತನಿಗೆ ರಾಜ್ಯವನ್ನು ಕೇಳುವಳು. ಭರತನೂ ಸಂಸಾರದಲ್ಲಿ ವಿರಕ್ತನೇ. ಆದರೂ ಸಂದರ್ಭಕ್ಕೆ ಹೊಂದಿಕೊಂಡು ಪಟ್ಟಾಭಿಷಿಕ್ತನಾಗುವನು. ರಾಮಲಕ್ಷ್ಮಣರು ಭರತನ ಪ್ರತಿನಿಧಿಗಳಾಗಿ ದೇಶಪರ್ಯಟನ ಮಾಡುವರು. ದಂಡಕಾರಣ್ಯವನ್ನು ಪ್ರವೇಶಿಸು ದರು. ಲಕ್ಷ್ಮಣನು ಶಂಬುಕನನ್ನು ಕೊಲ್ಲುವನು. ಅದರ ಫಲವಾಗಿ ಸೀತಾಪಹರಣ ವಾಗುವುದು. ಮುಂದೆ ವಾನರ ಸಖ್ಯವಾಗುವುದು. ಲಕ್ಷ್ಮಣನು ಸಿದ್ಧಶಿಲೆಯನ್ನೆತ್ತಿ ತನ್ನ ಶಕ್ತಿ ಪ್ರದರ್ಶನ ಮಾಡಿದಮೇಲೆ ಹನುಮಂತನು ಲಂಕೆಗೆ ತೆರಳಿ, ಸೀತೆಯನ್ನು ಸಂದರ್ಶಿಸಿ ರಾವಣನಿಗೂ ಬುದ್ಧಿವಾದವನ್ನು ಹೇಳುವನು. ವಿಭೀಷಣನ ಉಪದೇಶವೂ ನಿಷ್ಪ್ರಯೋಜನವಾಗುವುದು. ರಾಮನು ಸಮಸ್ತ ಸೈನ್ಯದೊಡನೆ ಲಂಕಾ ಪ್ರವೇಶಮಾಡಿ ಯುದ್ಧವನ್ನಾರಂಭಿಸುವನು. ಲಕ್ಷ್ಮಣನು ರಾಮನಿಗೆ ಸಹಾಯ ಮಾಡುವನು. ಹಸ್ತ ಪ್ರಹಸ್ತರು ಮಡಿಯುವರು. ಇಂದ್ರಜಿತ್ ಕುಂಭಕರ್ಣರು ಬಂಧಿತರಾಗುವರು. ರಾವಣನು ವಿದ್ಯಾಧರ ಶಕ್ತಿಯಿಂದ ಸೃಷ್ಟಿಸಿದ ಎಲ್ಲ ಯಂತ್ರಗಳೂ ನಿರ್ವೀರ್ಯವಾಗು ವುವು. ಕೊನೆಗೆ ಬಹುರೂಪಿಣೀ ವಿದ್ಯೆಯಿಂದ ರಾಮನನ್ನು ಸೆರೆ ಹಿಡಿದು ಸೀತೆಯನ್ನು ರಾಮನಿಗೆ ಒಪ್ಪಿಸಲು ಹತ್ತು ದಿನಗಳ ಕಾಲ ಯುದ್ಧ ಮಾಡುವನು. ಕೊನೆಗೆ ಲಕ್ಷ್ಮಣನ ಚಕ್ರಾಯುಧಕ್ಕೆ ಬಲಿಯಾಗುವನು. ಇಂದ್ರಜಿತು ಮತ್ತು ಕುಂಭಕರ್ಣರು ಅನಂತ ವೀರ್ಯಕೇವಲಿಗಳಿಂದ ದೀಕ್ಷೆಯನ್ನು ಸ್ವೀಕರಿಸಿ ತಪಸ್ಸಿಗೆ ತೆರಳುವರು. ರಾಮನು ಸೀತೆ ಯೊಡನೆ ಅಯೋಧ್ಯೆಗೆ ಮರಳಿ ರಾಜ್ಯ ಸ್ವೀಕಾರ ಮಾಡುವನು. ಭರತನೂ ತಪಸ್ಸಿಗೆ ನಡೆಯುವನು.

ಉತ್ತರ ಕಾಂಡದ ಕತೆಯು ರಾಮನ ದಿಗ್ವಿಜಯದಿಂದ ಪ್ರಾರಂಭವಾಗುವುದು. ಮಧುರಾವಿಜಯ, ರತ್ನರಥನಸೋಲು ಮೊದಲಾದುವು ಜರುಗುವುದು. ಅನೇಕ ರಾಜ್ಯ ಗಳು ಸ್ವಾಧೀನವಾಗುವುವು. ಚೊಚ್ಚಲು ಬಸುರಿಯಾದ ಸೀತೆಯನ್ನು ರಾಜ್ಯದ ಮಹಾ ಜನರ ಅಭಿಪ್ರಾಯಕ್ಕೆ ಮಣಿದು ರಾಮನು ಕಾಡಿನಲ್ಲಿ ತ್ಯಜಿಸುವನು. ಅರಣ್ಯದಲ್ಲಿ ಆವಳು ಅಲ್ಲಿಂದ ಪುಂಡರೀಕಪುರವನ್ನು ಸೇರುವಳು. ರಾಮನಿಗೂ ಪಶ್ಚಾತ್ತಾಪವಾಗುವುದು. ಕಾಡಿನಲ್ಲಿ ಲವಣಾಂಕುಶರು ಜನಿಸಿ ಪ್ರಾಪ್ತವಯಸ್ಕರಾಗುವರು. ಅವರು ಅಯೋಧ್ಯೆಯ ಮೇಲೆ ದಂಡೆತ್ತಿ ಬರುವರು. ತಂದೆ ಮಕ್ಕಳಿಗೆ ಯುದ್ಧವಾಗುವುದು. ಸೀತೆಗೆ ಅಗ್ನಿ ದಿವ್ಯ ನಡೆದು ಜಯಶೀಲಳಾಗಿ ದೀಕ್ಷೆಯನ್ನು ಸ್ವೀಕರಿಸಿ ತಪಸ್ಸಿಗೆ ಹೊರಡುವಳು.

ನಿರ್ವಾಣಕಾಂಡದಲ್ಲಿ ರಾಮ, ಸುವ್ರತ ಮುಂತಾದವರ ತಪಸ್ಸು ಮೋಕ್ಷ ಮೊದಲಾದುವು ವರ್ಣಿತವಾಗಿವೆ. ಲಕ್ಷ್ಮಣನ ಮರಣದಿಂದ ಮೋಹಿತನಾದ ರಾಮನು ದುಃಖಿಸಿ ತಪಸ್ಸು ಮಾಡಿ ಕೊನೆಗೆ ಕೇವಲ ಜ್ಞಾನವನ್ನು ಪಡೆಯುವನು. ಸೀತೆಯು ಪರಿಶುದ್ಧಳಾಗಿ ಪುನರ್ಭವದಲ್ಲಿ ಸೀತೇಂದ್ರನಾಗಿ ಹುಟ್ಟಿ ನರಕದಲ್ಲಿರುವ ಲಕ್ಷ್ಮಣನನ್ನು ಉದ್ಧರಿಸಿ ಕೇವಲ ಜ್ಞಾನಿಯಾದ ರಾಮಮುನಿಯ ಸಾನ್ನಿಧ್ಯವನ್ನು ಸೇರುತ್ತಾಳೆ. ಮುಂದಿನ ಮೋಕ್ಷ ಸಿದ್ಧಿಯ ವಿವರಣೆಯಿಂದ ಗ್ರಂಥವು ಮುಗಿಯುವುದು. ರಾಮ ಕೇವಲಿಯ ಉತ್ಕೃಷ್ಟ ಆತ್ಮಪ್ರಭಾವದಿಂದ ಸುತ್ತಮುತ್ತಲಿನ ಸಮಸ್ತ ಪ್ರಾಣಿಗಳಿಗೂ ಸಮಭಾವದ ಅರಿವುಂಟಾಗುತ್ತದೆ. ರಾಮನು ಸಿದ್ಧ ಪದವಿಯನ್ನು ಪಡೆದು ಅನಂತ ಸುಖಿಯಾಗುವನು.

ವಿಮಲಸೂರಿಯು ತನ್ನ ಗ್ರಂಥದಲ್ಲಿ ರಾವಣನ ಪಾತ್ರವನ್ನು ಬಹು ಉದಾತ್ತವಾಗಿ ಚಿತ್ರಿಸಿ ಅವನ ಪತನವನ್ನು ಬಹು ವಿದ್ರಾವಕವಾಗುವ ರೀತಿಯಲ್ಲಿ ವರ್ಣಿಸಿದ್ದಾನೆ.

ಜೈನ ಪುರಾಣದ ಮತ್ತೊಂದು ಶಾಖೆಯು ಗುಣಭದ್ರನ ಕತೆಯು. ಆತನ ಉತ್ತರ ಪುರಾಣದ ೬೮ನೆಯ ಅಧ್ಯಾಯದಲ್ಲಿ ಉಕ್ತವಾಗಿದೆ. ಅದರ ಕತೆ ಈ ರೀತಿ ಇದೆ. ರತ್ನಪುರದ ರಾಜನಾದ ಪ್ರಜಾಪತಿಗೂ ಅವನ ಹೆಂಡತಿಯಾದ ಗುಣಕಾಂತಿಗೂ ಚಂದ್ರ ಚೂಡನು ಮಗನಾಗಿ ಹುಟ್ಟುವನು. ಮಂತ್ರಿಯ ಮಗನಾದ ವಿಜಯನೂ ಇವನು ಪರಮ ಸ್ನೇಹಿತರು. ಇಬ್ಬರೂ ಆ ಊರಿನಲ್ಲಿದ್ದ ಕುಬೇರನೆಂಬುವನ ಮಗಳನ್ನು ಪ್ರೇಮಿಸಿದುದಕ್ಕಾಗಿ ದೇಶಭ್ರಷ್ಟರಾಗುತ್ತಾರೆ. ಮಹಾಬಲನೆಂಬ ಜೈನ ಋಷಿ ಇವರಿಗೆ ದೀಕ್ಷೆಯನ್ನು ಕೊಡುತ್ತಾನೆ. ಮೂರು ಜನ್ಮಗಳು ಕಳೆದ ಬಳಿಕ ಇವರು, ಕಾಶೀ ವಿಷಯದ ವಾರಣಾಸೀ ಪುರವನ್ನು ಆಳುವ ದಶರಥನಿಗೆ ರಾಮ ಲಕ್ಷ್ಮಣರೆಂಬ ಮಕ್ಕಳಾಗಿ ಹುಟ್ಟುವರು. ದಶರಥನು ರಾಜಧಾನಿಯನ್ನು ಸಾಕೇತಪುರಕ್ಕೆ ಬದಲಾಯಿಸುವನು. ಅಲ್ಲಿ ಭರತ ಶತ್ರುಘ್ನರು ಹುಟ್ಟುವರು. ಇತ್ತ ಮಥುರಾಪುರದ ಜನಕನಿಗೂ ಅವನ ಹೆಂಡತಿ ವಸುಧಾ ದೇವಿಗೂ ಒಂದು ಹೆಣ್ಣುಮಗು ಸಿಕ್ಕುತ್ತದೆ. ಅದಕ್ಕೆ ಸೀತೆಯೆಂಬ ನಾಮಕರಣವಾಗುತ್ತದೆ.

ಲಂಕಾಧಿಪತಿಯಾದ ಪುಲಸ್ತ್ಯನಿಗೂ ಆತನ ಹೆಂಡತಿಯಾದ ಮೇಘಲೆಗೂ ರಾವಣನು ಸೌಧರ್ಮಕಲ್ಪದಿಂದ ಬಂದು ಮಗನಾಗುವನು. ತಪಸ್ಸು ಮಾಡುತ್ತಿದ್ದ ಮಣಿಮತಿಯೆಂಬುವಳನ್ನು ಒಮ್ಮೆ ಮೋಹಿಸಿದುದರಿಂದ ಅವಳು ಕುಪಿತಳಾಗಿ ಅವನನ್ನು ಕೊಲ್ಲಬೇಕೆಂದು ಸಂಕಲ್ಪಿಸಿ ಮಂಡೋದರಿಯ ಗರ್ಭವನ್ನು ಪ್ರವೇಶಿಸಿ ಅವಳ ಮಗಳಾಗಿ ಹುಟ್ಟುವಳು. ಮಗುವು ಹುಟ್ಟುವಾಗ ಅನೇಕ ಘೋರ ಅಪಶಕುನಗಳಾದುದರಿಂದ ಅವಳು ಅದನ್ನು ಮಾರೀಚನ ಮೂಲಕ ಮಿಥಿಲೆಯ ಬಳಿ ಎಸೆದು ಬರುವ ಹಾಗೆ ಏರ್ಪಡಿಸುವಳು. ಈ ಶಿಶುವೇ ಜನಕನಿಗೆ ಸಿಕ್ಕಿದ ಸೀತೆ.

ರಾಮನಿಗೂ ಸೀತೆಗೂ ವಿವಾಹವಾಗುತ್ತದೆ. ರಾಮನು ಸೀತಾಲಕ್ಷ್ಮಣರೊಡನೆ ವಾರಾಣಾಸಿಗೆ ಬಂದು ಕೆಲವು ಕಾಲ ವಿನೋದವಾಗಿ ಕಾಲ ಕಳೆಯುತ್ತಿರುವನು.

ನಾರದನು ರಾವಣನಲ್ಲಿಗೆ ಹೋಗಿ ಸೀತೆಯ ಸೌಂದರ್ಯವನ್ನು ವರ್ಣಿಸುವನು. ಅವನಿಗೆ ಅವಳಲ್ಲಿ ಮೋಹವುಂಟಾಗುವುದು. ಶೂರ್ಪನಖಿ (ಚಂದ್ರನಖಿ) ಯನ್ನು ಕರೆದು ಸೀತಾ ದೇವಿಯ ಅಭಿಪ್ರಾಯವನ್ನು ತಿಳಿದು ಬರುವಂತೆ ಹೇಳಿ ಕಳುಹಿಸುವನು. ಶೂರ್ಪನಖಿಯು ಚಿತ್ರಕೂಟಕ್ಕೆ ಹೋಗಿ ಸೀತೆಯಿಂದ ತಿರಸ್ಕೃತಳಾಗಿ ಬರುವಳು. ರಾವಣನೇ ಅಲ್ಲಿಗೆ ಹೋಗಿ ತನ್ನ ಮಾಯಾಬಲದಿಂದ ಮಾರೀಚನನ್ನು ಮಣಿ ಹರಿಣಪೋತಕವನ್ನಾಗಿ ಮಾಡಿ ಸೀತೆಯನ್ನು ಮೋಸಗೊಳಿಸಿ ಅವಳನ್ನು ಅಪಹರಿಸಿಕೊಂಡು ಹೋಗಿ ತನ್ನನ್ನು ಪ್ರೀತಿಸುವಂತೆ ಒತ್ತಾಯ ಮಾಡುವನು. ಸೀತೆಯು ಅನಶನ ವ್ರತ ಮಾಡುವಳು.

ರಾಮ ಲಕ್ಷ್ಮಣರು ಸೀತೆಯನ್ನು ಹುಡುಕಿಕೊಂಡು ಬರುವಾಗ ಸುಗ್ರೀವ ಆಂಜನೇಯರ ಸ್ನೇಹವಾಗುವುದು. ಲಕ್ಷ್ಮಣನು ವಾಲಿಯನ್ನು ಕೊಲ್ಲುವನು. ಹನುಮಂತನು ಸೀತಾನ್ವೇಷಣ ಮಾಡಿ ಬರುವನು. ಈ ಮಧ್ಯೆ ಮಂಡೋದರಿಯು ಯಾವುದೋ ಅಜ್ಞಾತವಾಣಿಯಿಂದ ಸೀತೆಯು ತನ್ನ ಪರಿತ್ಯಕ್ತಳಾದ ಮಗಳೆಂದು ತಿಳಿದು ಸೀತೆಯನ್ನು ರಾಮನಿಗೆ ಒಪ್ಪಿಸುವಂತೆ ರಾವಣನಿಗೆ ಬುದ್ಧಿ ಹೇಳುವಳು. ಅದು ವ್ಯರ್ಥವಾಗುವುದು. ವಿಭೀಷಣನು ರಾವಣನಿಂದ ತಿರಸ್ಕೃತನಾಗಿ ರಾಮನ ಪಕ್ಷವನ್ನು ಸೇರುವನು. ರಾವಣನನ್ನು ಯುದ್ಧಭೂಮಿಗೆ ಬರಿಸುವುದಕ್ಕಾಗಿ ಹನುಮಂತನು ಲಂಕಾದಹನ ಮಾಡುವನು. ರಾವಣನು ಆದಿತ್ಯಗಿರಿಯಲ್ಲಿ ನಿಯಮಸ್ಥನಾಗಿ ಅನೇಕ ಶಕ್ತಿಗಳನ್ನು ಸಂಪಾದಿಸಿದ ಬಳಿಕ ಯುದ್ಧಕ್ಕೆ ಸ್ಸೈಗೊಡುವನು. ಮುಂದೆ ನಡೆಯುವ ಸಂಗ್ರಾಮದಲ್ಲಿ ರಾವಣನು ಮಾಯಾ ಸೀತೆಯ ಶಿರಸ್ಸನ್ನು ಕತ್ತರಿಸುವನು. ಆದರಿಂದ ರಾಮನಿಗೆ ವಿಶೇಷ ಮನೋವ್ಯಥೆಯಾಗುವುದು. ಕೊನೆಗೆ ಲಕ್ಷ್ಮಣನು ಚಕ್ರಾಯುಧದಿಂದ ರಾವಣನನ್ನು ಸಂಹಾರ ಮಾಡುವನು. ರಾಮನು ವಾರಾಣಾಸಿಗೆ ಹಿಂತಿರುಗಿ ವೈರಾಗ್ಯಗೊಂಡು ಕೇವಲಿಯಾಗ್ವನು. ಲಕ್ಷ್ಮಣನು ಪಂಕಪ್ರಭೆಯೆಂಬ ನರಕಕ್ಕೆ ಹೋಗುವನು.

ಇದೇ ಕಥೆಯನ್ನನುಸರಿಸಿ ಕ್ರಿ. ಶ. ೬೫೫ರಲ್ಲಿ 'ತಿಸಟ್ಟಿ ಮಹಾಪುರುಷ ಪುರಾಣ'ವನ್ನು ಪುಷ್ಪದಂತನು ರಚಿಸಿದ್ದಾನೆ. ಆತನು 'ಉತ್ತರ ಪುರಾಣ'ವನ್ನು ಅನುಸರಿಸಿದ್ದಾನೆ. ಸಂಸ್ಕೃತ 'ಪುಣ್ಯಾಸ್ರವ ಕಥಾಸಾಗರ'ದಲ್ಲಿ ಬರುವ ರಾಮಕಥೆಯೂ ಸಾಮಾನ್ಯವಾಗಿ ಹೀಗೆಯೇ ಇದೆ.

ಎನ್. ಕುಮುದ

ಭರತೇಶ ವೈಭವದ ಭರತ-ಬಾಹುಬಲಿ ಪ್ರಸಂಗ

ರತ್ನಾಕರನ ಭರತೇಶವೈಭವದಲ್ಲಿ, ರಣರಂಗದಲ್ಲಿ ಭರತ-ಬಾಹುಬಲಿಯರು ಮುಖಾಮುಖಿಯಾಗುವ ಸಂದರ್ಭ ಬಹಳ ಮುಖ್ಯವಾದದ್ದು. ಕವಿ, ಪೂರ್ವಪುರಾಣ ಮತ್ತು ಆದಿಪುರಾಣಗಳಿಂದ ಬೇರೆಯಾಗಿ ಚಿತ್ರಿಸಿರುವ ಸಂದರ್ಭಗಳಲ್ಲಿ ಇದು ಅವನ ಪ್ರತಿಭೆಯನ್ನು ಪರೀಕ್ಷೆಗೆ ಒಳಗು ಮಾಡಿರುವ ಮಹತ್ವಪೂರ್ಣ ಸಂದರ್ಭ. ಭರತೇಶ ವೈಭವದ ಶೃಂಗಘಟನೆ ಇದು ; ಇದರ ಚಿತ್ರಣದಲ್ಲಿಯೇ ರತ್ನಾಕರ ತನ್ನೆಲ್ಲಾ ಸಾಮರ್ಥ್ಯವನ್ನು ತೊಡಗಿಸಿರುವುದು ; ಇಲ್ಲಿ ರತ್ನಾಕರ ಸೋತಿದ್ದರೆ ಅದು ಭರತೇಶ ವೈಭವದ ಸೋಲು ; ಯಶಸ್ವಿಯಾಗಿದ್ದರೆ ಅದು ಭರತೇಶವೈಭವದ ಯಶಸ್ಸು. ಏಕೆಂದರೆ ಈ ಶೃಂಗವನ್ನು ತಲುಪಿದ ಕಾವ್ಯದ ಕ್ರಿಯೆ ಮುಂದೆ ಇಳಿಯತೊಡಗುತ್ತದೆ ; ಇಲ್ಲಿ ಹುಟ್ಟಿದ ವಿಷಾದ, ಕ್ರಿಯೆ ಇಳಿಯತೊಡಗಿದಂತೆ, ನಿಧಾನವಾಗಿ ಕಾವ್ಯವನ್ನು ವ್ಯಾಪಿಸುತ್ತಾ, ಭರತೇಶನ ವೈರಾಗ್ಯದ ಹೊತ್ತಿಗೆ 'ಮಹಾವಿಷಾದ'ವಾಗಿ ಪರಿಣಮಿಸಿ, ಅರ್ಕಕೀರ್ತಿ ಇತ್ಯಾದಿಗಳ ವೈರಾಗ್ಯದೊಂದಿಗೆ ಒಂದು ವಿಶಿಷ್ಟವಾದ ದುರಂತಾನುಭವವಾಗಿ ಪರಿಣಮಿಸಿ ಬಿಡುತ್ತದೆ. ಈ ಸಂದರ್ಭದ ನಿರ್ವಹಣೆಯಲ್ಲಿ ಕವಿಯ ಗ್ರಥನ ಕೌಶಲವನ್ನು ಕೆಲವರು ಮೆಚ್ಚಿಕೊಂಡಿದ್ದರೆ ; ಬಹಳ ವಿಮರ್ಶಕರು ಅದನ್ನು ರತ್ನಾಕರನ ಅಸಾಮರ್ಥ್ಯಕ್ಕೆ ಉದಾಹರಣೆಯಾಗಿ ಪರಿಗಣಿಸುತ್ತಾರೆ. ಮೊದಲ ವರ್ಗಕ್ಕೆ ಸೇರಿದ ವಿಮರ್ಶಕರಲ್ಲಿ ಎಸ್.ವಿ. ರಂಗಣ್ಣನವರು ಮುಖ್ಯರು ;[1] ಬಹುಶಃ ಅವರೊಬ್ಬರೇ ಆ ಅಭಿಪ್ರಾಯದವರು ಎಂದು ಹೇಳಬಹುದೇನೋ ! ; ಎರಡನೆಯ ಅಭಿಪ್ರಾಯವೇ ಸಾಮಾನ್ಯವಾಗಿ ಬಹಳ ಜನಗಳ ಮನ್ನಣೆ ಪಡೆದಿರುವಂಥದು.[2]

ಭರತನ ವ್ಯಕ್ತಿತ್ವವನ್ನು ಮೇಲೆತ್ತುವ, ಹಾಗೆಯೇ ಸಮಯ ದೊರೆತಾಗಲೆಲ್ಲ ಬಾಹುಬಲಿಯ ವ್ಯಕ್ತಿತ್ವವನ್ನು ಕೀಳು ಮಾಡುವ ರತ್ನಾಕರನ ಪ್ರಯತ್ನ ಉದ್ದೇಶಪೂರ್ವಕವಾದದ್ದು. ಕವಿ ಹೀಗೆ ಮಾಡಿರುವುದಕ್ಕೆ ಕಾರಣವೂ ಸ್ಪಷ್ಟವಾಗಿದೆ. ಆದಿತೀರ್ಥಂಕರನ ಹಿರಿಯ ಕುಮಾರನಾದ ಭರತ ಪುಣ್ಯಶಾಲಿ ; ಪೂರ್ಣಚಕ್ರಿ. ಭುಜಬಲಿಯಾದರೊ ಅರ್ಧಚಕ್ರಿ. ಅಂಥದ್ದರಲ್ಲಿ ಭರತನೇ ಬಾಹುಬಲಿಗಿಂತ ಶ್ರೇಷ್ಠನೇ ಹೊರತು, ಬಾಹುಬಲಿ ಭರತನಿಗಿಂತ ಶ್ರೇಷ್ಠನಾಗಲು ಹೇಗೆ ಸಾಧ್ಯ ? ಹಾಗೆ, ಹಿಂದಿನ ಪುರಾಣ

ಕರ್ತೃಗಳು ಕವಿಗಳು ಚಿತ್ರಿಸಿರುವುದು ಸರಿಯಲ್ಲ ; ಅದು ಹಾಗೆ ನಡೆಯಲೇ ಇಲ್ಲ ; ಚಿತ್ರಿಸುತ್ತಿರುವ ರೀತಿಯಲ್ಲಿಯೇ ಅದು ನಡೆದದ್ದು ; ಇದು ರತ್ನಾಕರನ ಸ್ಪಷ್ಟ ಧೋರಣೆ: ತಾನು

ಭಂಗಿಸಿದರೆ ದೀಕ್ಷೆಗೆಯ್ದುವನೆಂದು ತ । ಮ್ಮಂಗೊಳ್ಳನುಡಿದು ಚಕ್ರೇಶ ||
ಮಂಗಲಯುದ್ಧವ ಕೆಲರರಿಯದೆ ರಸ ಭಂಗಮಾಡಿ ನುಡಿವರು || (೫೨–೨)

ಜಲವೃಷ್ಟಿಮುಷ್ಟಿಯುದ್ಧದಿಚಕ್ರಿ ತಮ್ಮಗೆ । ಗೆಲವೋರಿನುಡಿದನಂತದನು ||
ಕೆಲರುಕಾದಿಯೆ ಗೆಲ್ದನೆಂಬರು ಚಕ್ರಿಯ । ಗೆಲಸಮರ್ಥನೆ ಪುಷ್ಪಬಾಣ ||
(೫೨-೩)

ಜಗವ ಮೋಹಿಪ ಶಕ್ತಿಯಲ್ಲದೆ ಚಕ್ರಿಯ । ನೆಗಪ ಸಾಹಸವುಂಟೆ ಸ್ಮರಗೆ ||
ಹಗಲಂತೆ ಬೆಳುದಿಂಗಳಿಹುದೆನೆ ಸೂರ್ಯರ । ಶ್ಮಿಗಳ ನೂಂಕುವ ಶಕ್ತಿಯುಂಟೆ ||
(೫೨-೪)

ಕಾಮದೇವರ್ಕಳ ಶಕ್ತಿಯೆಂಬುದು ಸಾರ್ವ । ಭೌಮರ ಶಕ್ತಿಗಗ್ಗಳವೆ ||
ಕಾವದೊಳೂಟದೊಳದ್ರಿಸೇನೆಯನಾಳ್ವ । ನೇಮಸೊಳರಿವುದಂತಿರಲಿ ||
(೫೨.-೬)

ಚಕ್ರಿ ಎಲ್ಲರ ಮುಂದೆ ಸೋಲವೆಂದನು ತನ್ನ । ಚಕ್ರಕೆ ನೂಕು ತಾಕಾಯ್ತು ||
ವಕ್ರಿಯಲ್ಲದ ತಮ್ಮ ವಕ್ರಿಯಾದನು ಕಾಲ । ಚಕ್ರದೊಳಾದ ದೋಷವದು ||
(೫೨-೬)

ರಂಗಾಗೆಟ್ಟಾಚಕ್ರ ತೊಲಗಿ ನಿಂದುದೆ ಚಕ್ರ । ಭಂಗವಂತದನು ಕೆಲಬರು ||
ಅಂಗಜಗದು ಬೆಸಗೈದುದೆಂದತಿರಸ । ಭಂಗವಮಾಡಿ ನುಡಿವರು || (೫೨-೭)

ಅರ್ಧಚಕ್ರಿಯ ಚಕ್ರವೈರಿಗೆ ಬೆಸಗೈದು । ಅರ್ಧಚಕ್ರಿಯನೆ ಖಂಡಿಪುದು ||
ವರ್ಧಿಪ ಸಕಲ ಚಕ್ರಿಯ ಚಕ್ರಸೋಲ್ಪುದೆ || ಸ್ಪರ್ಧಿಸಿದಿದಿರ ಭೂಪತಿಗೆ ||
(೫೨-೮)

ಮೃದುಯುದ್ಧ ಮೂರಕೊಪ್ಪಿದ ಮೇಲೆ ಮೀರಿ ಚ । ಕ್ರದೊಳಿಡುವನೆ ಭರತೇಶ||
ಮದನನ ಪ್ರಾಣಕೆ ಮುನಿವನೆ ಪಾಪಿಗ । ಳಿದ ನುಡಿದಾಡಿ ಕೆಡುವರು ||
(೫೨-೯)

ರಣಭಂಗವಾಗಬಾರದು ತಮ್ಮಗೆಂದು ಸ । ದ್ಗುಣ ವಚನದಿ ಜಯಿಸಿದನು ||
ಕ್ಷಣಕೆ ಮುಕ್ತಿಯ ಕೊಂಬ ಮೃದು ಹೃದಯಗೆ ಕ್ರೂರ । ಗುಣವುಂಟೆ ಸಾಕ
ದಂತಿರಲಿ (೫೨-೧೦)

ಆದ್ದರಿಂದ ರತ್ನಾಕರ ತನ್ನ ಧೋರಣೆಗೆ ತಕ್ಕಂತೆ ಬಾಹುಬಲಿಯ ವ್ಯಕ್ತಿತ್ವವನ್ನು ಕೆಳಗಿಳಿಸುವ ಮತ್ತು ತನ್ನ ಕಥಾನಾಯಕ ಭರತನ ವ್ಯಕ್ತಿತ್ವವನ್ನು ಉನ್ನತಿಗೇರಿಸುವ

ಪ್ರಯತ್ನದಲ್ಲಿ ಪೂರ್ವಪುರಾಣ ಮತ್ತು ಆದಿಪುರಾಣಗಳಲ್ಲಿಲ್ಲದ ಎಷ್ಟೋ ಸನ್ನಿವೇಶ ಸಂದರ್ಭಗಳನ್ನು ತಾನೇ ಸ್ವತಂತ್ರವಾಗಿ ಸೃಷ್ಟಿಸಿಕೊಂಡಿದ್ದರೆ ಮತ್ತೆ ಕೆಲವೆಡೆಗಳಲ್ಲಿ ಮೂಲಕೃತಿಗಳ ಸನ್ನಿವೇಶಗಳನ್ನೇ ಸ್ವೀಕರಿಸಿ ತನ್ನ ಉದ್ದೇಶಕ್ಕೆ ತಕ್ಕಂತೆ ಅವುಗಳನ್ನು ದುಡಿಸಿಕೊಂಡಿದ್ದಾನೆ, ಬಾಹುಬಲಿಯ ವ್ಯಕ್ತಿತ್ವವನ್ನೇ ಕೆಳಿಕ್ಕೆಳೆಯುವ ರತ್ನಾಕರನ ಪ್ರಯತ್ನ ಭರತೇಶ ವೈಭವದ ಪಾರಣಾಸಂಧಿಯಿಂದಲೇ ಪ್ರಾರಂಭವಾಗಿದೆ. ಭುಜಬಲಿಯ ಕಡೆಯಿಂದ ಬಂದ ಹೆಗ್ಗಡತಿಯನ್ನು ಕುರಿತು ಯಶಸ್ವತಿ ಕೇಳುವ :—

"ಏನು ಲೀಲೆಯೊಳು ಚಿಕ್ಕಣ್ಣನಿಹನು ತನ್ನ | ವಿಾನಲೋಚನೆಯರೆಂತಿಹರು ||
ತಾನು ದೊಡ್ಡಣ್ಣನಂತಃಪ್ರವಾಸಗೈವನೊ | ಮಾನಿನಿಹೇಳು . . . . . . |"—

ಪ್ರಶ್ನೆಗೆ ಹೆಗ್ಗಡತಿಯ ಉತ್ತರವಿದು :

"ಹಿರಿಯಸ್ವಾಮಿಯವೊಲು ಬಹಳವಿಲ್ಲೆಮ್ಮ ಭೂ | ವರನೇಕಭುಕ್ತವಂತಾದ||
ಚರಿತದೊಳಿಹನು ತನ್ನಂತೆ ಸರ್ವರು ವೃದು | ಚರಿತದೊಳಿಹರು , ... ||"

ಹೀಗೇ ಮುಂದೆಯೂ ಅನೇಕ ಸಂದರ್ಭಗಳಲ್ಲಿ ರತ್ನಾಕರ, ಬಾಹುಬಲಿ ಭರತನಿಗಿಂತ ಕೆಳಮಟ್ಟದವನು ಎನ್ನುವುದನ್ನು ಕಾಣಿಸುತ್ತಾ ಹೋಗುತ್ತಾನೆ. ಇಂತಹ ಸಂದರ್ಭಗಳಲ್ಲೆಲ್ಲಾ ಬಾಹುಬಲಿಯ ವ್ಯಕ್ತಿತ್ವದ ಪಕ್ಕಕ್ಕೇ ಭರತನ ವ್ಯಕ್ತಿತ್ವದ ಉನ್ನತಿಯನ್ನೂ ಕಾಣಿಸುವುದು ರತ್ನಾಕರನ ಉದ್ದೇಶ. ಆದ್ದರಿಂದ ಬಾಹುಬಲಿ–ಭರತ ಇಬ್ಬರ ವ್ಯಕ್ತಿತ್ವಗಳ ವೈದೃಶ್ಯಗಳು ನಮಗೆ ಒಟ್ಟೊಟ್ಟಿಗೇ ಗೋಚರಿಸುತ್ತ ಹೋಗುತ್ತವೆ. ಬಾಹುಬಲಿಯ ಅತ್ಯಂತ ನಿಕಟವರ್ತಿಗಳಿಂದ ಹಿಡಿದು ದೂರದ ಪ್ರಜೆಗಳವರೆಗೆ ಯಾರಿಗೂ ಬಾಹುಬಲಿ, ಅವರೆಲ್ಲರ ಒಡೆಯ ಎಂಬ ಭಾವವಿದ್ದಂತೆ ಕವಿ ಚಿತ್ರಿಸುವುದಿಲ್ಲ. ಮೇಲಿನ ಹೆಗ್ಗಡತಿಯ ಉತ್ತರವೇ ಇದಕ್ಕೆ ಉತ್ತಮ ನಿದರ್ಶನ. ಹೀಗೆಯೇ ಇನ್ನೂ ಕಲವು ಪ್ರಸಂಗಗಳನ್ನು ಗಮನಿಸಬಹುದು.

'ನವರಾತಿ ' ಸಂಧಿಯಲ್ಲಿ, ಭರತನನ್ನು ದಿಗ್ವಿಜಯ ಯಾತ್ರೆಗೆ ಬೀಳ್ಕೊಡಲು ಬಾಹುಬಲಿಯ ಪ್ರತಿನಿಧಿಯಾಗಿ ಬರುವ ಮಂತ್ರಿ ಪ್ರಣಯಚಂದ್ರಮ, ಭರತ ಬಾಹುಬಲಿಯನ್ನು ಕುರಿತಂತೆ ಕೇಳುವ—"ಏನೈ ಪ್ರಣಯಚಂದ್ರಮ ಬಾಹುಬಲಿ ನಿಚ್ಚ | ಲೇನು ಲೀಲೆಯೊಳಿರುತಹನೆ || ಈ ನಮ್ಮ ಪಯಣವ ಕೇಳ್ದೇನ ನುಡಿದನು" ಎಂಬ ಮಾತಿಗೆ ಪ್ರಣಯ ಚಂದ್ರಮ ಕೊಡುವ ಉತ್ತರವಿದು :

ದೇವರ ಕೃಪೆಯಿಂದ ದೇವರ ಸೋದರ | ಗಾವ ಚಿಂತೆಯು ತೊಡಕಿಲ್ಲ ||
ಆವಾಗ ಸುಖದೊಳೋಲಾಡುತಿಹನು ಪುರು | ದೇವ ಸಾತ್ಮಜನಲ್ತೆ . . . ||

(೨೦–೮೫)

ಕಾವ್ಯನಾಟಕ ಕಾಮಶಾಸ್ತ್ರದೊಳೊಮ್ಮೊಮ್ಮೆ | ದಿವ್ಯ ನಾಟ್ಯಾಂಗದೊಳೊಮ್ಮೆ ||
ನವ್ಯ ಯೌವನೆಯರೋಲಗದೊಳುನಿಚ್ಚ ಕಾ | ಲವ್ಯಯಗಳ ಮಾಡುತಿಹನು ||
(೨೦–೮೬)

ಶೃಂಗಾರವನದಲ್ಲಿ ಕೊಳದಲ್ಲಿ ಹೊನ್ನ ಮಾ | ಡಂಗಳೊಳರಮನೆಯಲಿ ||
ತಂಗಾಳಿತುಂಬಿ ಕೋಗಿಲೆಗಿಳಿಕೊಳರ್ವಕ್ಕಿ | ಹೆಂಗಳೊಪ್ಪಿರೆ ಹೊತ್ತುಗಳೆವ ||
(೨೦–೮೭)

ಭೋಗವ ಭೋಗಿಸುತಿಹನಲ್ಲಿ ನೆರೆಮಗ್ನ | ನಾಗದೊಂದಿನಿಸಡಿಗಡಿಗೆ ||
ಯೋಗವನುಜ್ಜುಗಿಸುವನಾತ ಚಕ್ರಿಯೊಂ | ದಾಗಿ ಹುಟ್ಟಿದನಲ್ಲ ಸ್ವಾಮಿ ||
(೨೦–೮೮)

ಇದು ನಮ್ಮ ನೃಪನವರ್ತನೆ . . . . ||

ಪ್ರಣಯಚಂದ್ರನು ಬಾಹುಬಲಿಯ ಮಂತ್ರಿಯಾಗಿದ್ದು ಆತ ಬಾಹುಬಲಿಯ ವರ್ತನೆಯ ಬಗ್ಗೆ ಅತ್ಯಂತ ಪ್ರಾಮಾಣಿಕವಾಗಿ (ಕವಿಯ ದೃಷ್ಟಿಯಿಂದ) ಆಡಿರುವ ಮೇಲಿನ ಮಾತುಗಳು ಒಂದು ಬಗೆಯ ವ್ಯಂಗ್ಯದಿಂದ ಕೂಡಿವೆ. ಈ ಮಾತಿನ ಹಿನ್ನೆಲೆಯಲ್ಲಿ, ಭರತನನ್ನು ದಿಗ್ವಿಜಯಕ್ಕೆ ಬೀಳ್ಕೊಡಲು ಬಾಹುಬಲಿಯೇ ಬರಲಾರದಿದ್ದಕ್ಕೆ ಪ್ರಣಯ ಚಂದ್ರನು ಕೊಡುವ ಕಾರಣ :

"ಒಂದು ಶಾಸ್ತ್ರವ ಕೇಳತೊಡಗಿದ್ಧ ಮೊದಲದ | ರಿಂದೆನ್ನನಿಲ್ಲಿಗಟ್ಟಿದನು ||
ಹೇಳುವರಾತ್ಮ ಪ್ರವಾದವ ಮುನಿಗಳು | ಕೇಳುವನೆಮ್ಮ ವನೀಶ ||
ನಾಳೆನಾಡಿದಿನೊಳು ಮುಗಿವುದಾ ಗ್ರಂಥ . . . . ||

ಈ ಮಾತುಗಳು, ಬಾಹುಬಲಿ ತಾನು ಬರಲಾರದ್ದಕ್ಕೆ ನೀಡುತ್ತಿರುವ ಸುಳ್ಳು ನೆಪ ಎನ್ನುವುದು ಭರತನ ಅರಿವಿಗೆ ಬಂದು, ಭರತ ಇದಕ್ಕಾಗಿ ಬಹಳ ನೊಂದುಕೊಳ್ಳುವುದನ್ನು ಕವಿ ಚಿತ್ರಿಸುತ್ತಾನೆ. ಹೀಗೆ ನೊಂದುಕೊಂಡರೂ ತಾಯಿ ಯಶಸ್ವತಿಯ ಬಳಿ ದಿಗ್ವಿಜಯಕ್ಕೂ ಮುಂಚೆ ಆಶೀರ್ವಾದ ಪಡೆಯಲು ಹೋಗುವ ಭರತ ತಮ್ಮನ ನಡೆವಳಿಯನ್ನು ಕುರಿತು ಒಂದು ಮಾತನ್ನೂ ಆಡುವುದಿಲ್ಲ.

ಮುಂದೆ ಕವಿ ಬಾಹುಬಲಿಯ ಆಸ್ಥಾನವನ್ನು ಭರತನ ದೂತ ದಕ್ಷಿಣಾಂಕನ ಮೂಲಕ ವರ್ಣಿಸುವಾಗಲೂ ಬಾಹುಬಲಿಯ ವ್ಯಕ್ತಿತ್ವ, ಭರತನ ವ್ಯಕ್ತಿತ್ವದ ಗಾಂಭೀರ್ಯವನ್ನು ಉಳ್ಳದ್ದಲ್ಲ ಎನ್ನುವುದನ್ನು ತೋರಿಸಲು ಯತ್ನಿಸುತ್ತಾನೆ. ಬಾಹುಬಲಿಯ ಆಸ್ಥಾನದ ವರ್ಣನೆ ದೀರ್ಘತೆಯಲ್ಲಿ ಪೂರ್ವಪುರಾಣವನ್ನು ಹೋಲುತ್ತದಾದರೂ ಸತ್ವದಲ್ಲಿ ತೀರಾ ಭಿನ್ನವಾಗಿದೆ. ರತ್ನಾಕರ ಮಾಡಿರುವ ಈ ಆಸ್ಥಾನ ವರ್ಣನೆ ಜೈನ ತತ್ತ್ವದ 'ಮೋಹಾವರಣ'ಕ್ಕೆ ಉತ್ತಮ ಪ್ರತೀಕವಾಗಿ ನಿಲ್ಲುತ್ತದೆ ಎನ್ನಬಹುದು. ಅಲ್ಲಿನ ವರ್ಣನೆಯ ಕೆಲವು ಪದ್ಯಗಳನ್ನು ನೋಡಬಹುದು :

"ನವಿಲಂಚೆ ಕೋಗಿಲೆ ಕೊಳರ್ವಕ್ಕಿ ಕೊಂಚೆ ಪಾ | ರಿವ ಗಿಳಿ ಬಾಣಾಂಕಿಗಳನು||
ಹವಣಿಸಿಕೊಳುವ ಕೊಡುವರಿಂದ ಜನಕೆ ಕಾ | ಮವನೆ ಹೆಚ್ಚಿಸುವುದಾನಗರ ||
(೪೭–೨೧)

ಭೋಗಾಂಗವಲ್ಲದೆ ಯೋಗಾಂಗವಿಲ್ಲನು |ರಾಗವುಂಟೆಲ್ಲವಿರಕ್ತಿ
ಪೂಗಣೆಯನ ಪುರವಸ್ತೆಯೆನುತ ಮಂಡೆಯ | ದೂಗುತ ಬರುತಿರ್ದನವನು ||
(೪೭–೨೨)

ಇವುಗಳು ಬಾಹುಬಲಿಯ ನಗರ ಪೌದನಪುರದ ವರ್ಣನೆಯ ಕೆಲವು ಮಾತು ಗಳಾದರೆ ಬಾಹುಬಲಿಯ ರಾಜಸ್ಥಾನದ ವೈಭೋಗವನ್ನು ಪ್ರತ್ಯೇಕವಾಗಿ ಕವಿ ಹೀಗೆ ಹೇಳುತ್ತಾನೆ :

ಅರಯ್ಯುತೋಸರಿಸುತ ನಡೆತಪ್ಪಾಗ | ನಾರಿಯರೋಲಗದೊಳಗೆ ||
ದೂರದೊಳಿದಿರೊಳೊಪ್ಪುವ ಮನಸಿಜನಕ | ಣ್ಣಾರೆ ಕಂಡನು ದಕ್ಷಿಣಾಂಕ
(೪೭–೬೪)

ಬೆಂಗಡೆಯೊಳೆಂಟುಸಾವಿರ ತನ್ನ ರಾ | ಜಾಂಗನೆಯರು ತೆರೆಯೊಳಗೆ ||
ಮುಂಗಡೆಯೊಳು ಮಂತ್ರಿಸಖರು ತನ್ನೋಲಗ | ವೆಂಗಳೊಪ್ಪಿರೆ ಕಾಮನಿರ್ದ ||
(೪೭–೬೫)

ಅರಲ ಸಿಂಹಾಸನದಗ್ರದೊಳಂಚೆಯ | ಕೊರಳತುಪ್ಪುಳಗದ್ದುಗೆಯೊಳು ||
ನರಸುರನಾಗಲೋಕದ ಮೋಹನಾಂಗವೆ | ಪುರುಷರೂಪಾಂತವೊಲಿರ್ದ ||
(೪೭–೬೬)

ಮೀನಾಂಕನಿರ್ದನು ಮಲಗಿತಾನೊರಗಿಸು | ಮ್ಮಾನದೊಳ್ನೀಡಿ ಪಾದಗಳಾ ||
ಮಲಯ ಮಾರುತ ಚರಣವನೆ ಒತ್ತುತ್ತಿರೆ ಹಸ್ತ|ತಳವ ಮಂದಾನಿಲನೊತ್ತೆ.....||
(೪೭–೭೪,೭೫)

ಒತ್ತಿನೊಳನ್ಯರಿದ್ದಾಗ ಗಂಭೀರಾಂಗ | ವೆತ್ತಿಹರವ ಚಕ್ರಿಯಲ್ಲ ||
ಚಿತ್ತಜನಲ್ಲವೆ ಓಲಗದೊಳು ತನ್ನ ಚಿತ್ತಕೆ ಬಂದವೊಲಿರ್ದ ||
(೪೭–೭೭)

ಮೇಲಿನ ಬಗೆಯ ವರ್ಣನೆ, ವಿಮರ್ಶೆಗಳೆಲ್ಲ ರತ್ನಾಕರನದೇ. ಪೂರ್ವಪುರಾಣ ಆದಿಪುರಾಣಗಳ ಬಾಹುಬಲಿಯನ್ನು ತನ್ನ ಕೃತಿಯಲ್ಲಿ ತದ್ವಿರುದ್ಧನಾಗಿ ಮಾಡುವ ರತ್ನಾಕರನ ಉದ್ದೇಶ ಇಲ್ಲೆಲ್ಲಾ ಸ್ಪಷ್ಟವಾಗಿ ಕಾಣುತ್ತದೆ. ಬಾಹುಬಲಿಯನ್ನು ಕುರಿತಂತೆ ರತ್ನಾಕರ ಆಡಿರುವ ಈ ಬಗೆಯ ಒಂದೇ ಒಂದು ಮಾತೂ ಪೂರ್ವಪುರಾಣ ಆದಿಪುರಾಣ ಗಳಲಿಲ್ಲ.

ಪೂರ್ವಪುರಾಣದಲ್ಲಿ ಇದೇ ದಕ್ಷಿಣಾಂಕನಿಗೆ ಕಾಣುವ ಬಾಹುಬಲಿಯ ಚಿತ್ರ ವಿದು :

ಪೃಥು ವಕ್ಷಸ್ತಟಂ ತುಂಗಮುಕುಟೋದಗ್ರಶೃಂಗ ಕಂ ।
ಜಯಲಕ್ಷ್ಮೀ ವಿಲಾಸಿನ್ಯಾಃ ಕ್ರೀಡಾಶೈಲಮಿವೈಕಕಂ ॥ (೩೫-೪೫)

("ವಿಶಾಲವಾದ ಎದೆಯುಳ್ಳವನೂ ಉನ್ನತವಾದ ಕಿರೀಟವೆಂಬ ಉನ್ನತವಾದ ಶಿಖರವುಳ್ಳವನೂ ಜಯಲಕ್ಷ್ಮಿಯೆಂಬ ವಿಲಾಸವತೀಸ್ತ್ರೀಯ ಮುಖ್ಯವಾದ ಕ್ರೀಡಾ ಪರ್ವತವೋ ಎಂಬಂತಿರುವವನೂ")

ಲಲಾಟಪಟ್ಟಮಾರೂಢಪಟ್ಟಬಂಧಂ ಸುವಿಸ್ತೃತಂ ।
ಜಯಶ್ರೀಯ ಇವೋದ್ವಾಹಪಟ್ಟಂ ದಧತಮುಚ್ಚಕೈಃ ॥ (೩೫-೪೬)

("ಜಯಲಕ್ಷ್ಮಿಯ ವಿವಾಹದ ಪಟ್ಟವೋ ಎಂಬಂತಿರುವುದೂ ಪಟ್ಟಬಂಧವನ್ನು ಧರಿಸಿರುವುದೂ ವಿಶಾಲವೂ ಉನ್ನತವೂ ಆದ ಹಣೆಯನ್ನು ಧರಿಸಿರುವವನೂ")

ವಧಾನಂ ತುಲಿತಾಶೇಕ್ಷರಾಜನ್ಯಕಯಶೋಧನಂ ।
ತುಲಾದಂಡಮಿವೋದೂಢಭೂಭಾರಾ ಭುಜದಂಡಂಕಂ ॥ (೩೫-೪೭)

("ತಕ್ಕಡಿಯ ಕೋಲಿನಂತಿರುವುದೂ ಸಮಸ್ತ ರಾಜರುಗಳ ಸಮೂಹದ ಯಶಸ್ಸೆಂಬ ಧನವನ್ನು ತೂಗಿರುವುದೂ ಭೂಭಾರವನ್ನು ಧರಿಸಿರುವುದೂ ಆದ ಭುಜ ದಂಡವನ್ನು ಧರಿಸಿರುವವನೂ")

ಮುಖೇನ ಪಂಕಜಚ್ಛಾಯಂ ನೇತ್ರಾಭ್ಯಾಮುತ್ಪಲಶ್ರಿಯಂ)
ದಧಾನಮಪ್ಯನಾಸನ್ನ ವಿಜಾತಿಮಜಲಾಶಯಂ ॥ (೩೫-೪೮)

("ಮುಖದಲ್ಲಿ ತಾವರೆಯ ಕಾಂತಿಯನ್ನೂ ಕಣ್ಣುಗಳಲ್ಲಿ ನೈದಿಲೆಯ ಶೋಭೆಯನ್ನೂ ಧರಿಸಿರುವವನಾದರೂ ಸಮೀಪದಲ್ಲಿ ಪಕ್ಷಿಜಾತಿ, ಹೀನಜಾತಿಯಿಲ್ಲದಿರುವ ಜಲಾಶಯ— ಮಂದಬುದ್ಧಿಯಿಲ್ಲದಿರುವವನೂ")

ಬಿಭ್ರಾಣಮತಿವಿಸ್ತೀರ್ಣಂ ಮನೋವಕ್ಷಶ್ವ ಯದ್ದ್ವಯಂ ।
ವಾಗ್ದೇವೀಕಮಲಾವಕ್ತ್ಯೋರ್ಗತಂ ನಿತ್ಯಾವಕಾಶತಾಂ ॥ (೩೫-೪೯)

("ವಾಗ್ದೇವಿಗೂ ಲಕ್ಷ್ಮೀ ದೇವಿಗೂ ನಿತ್ಯವಕಾಶವನ್ನು ಹೊಂದಿರುವುದು ಅತ್ಯಂತ ವಿಸ್ತಾರವೂ ಆದ ಮನಸ್ಸನ್ನೂ ಎದೆಯನ್ನೂ ಎರಡನ್ನೂ ಧರಿಸಿರುವವನೂ (ವಾಗ್ದೇವಿಗೆ ಮನಸ್ಸನ್ನೂ ಲಕ್ಷ್ಮೀ ದೇವಿಗೆ ಎದೆಯನ್ನೂ ಧರಿಸಿರುವವನೂ")

ರಕ್ಷಾ ವೃತ್ತಿ ಪರಿಕ್ಷೇಪಂ ಗುಣಗ್ರಾಮಂ ವ್ಯಹಾಫಲಂ ।
ನಿವೇಶಯುತಮಾತ್ಮಾಂಗೇ ಮನಸ್ಸು ಚ ಮಹೀಯಸಾಂ ॥ (೩೫-೫೦)

"ರಕ್ಷಣೆಯೆಂಬ ಬೇಲಿಯ ಆವರಣವುಳ್ಳವನೂ ಮಹಾ ಪ್ರಯೋಜನಗಳನ್ನುಂಟು

ಮೂಡುವ ಗುಣಗಳ ಸಮೂಹವನ್ನು ತನ್ನ ಶರೀರದಲ್ಲಿಯೂ ಮಹಾತ್ಮರುಗಳ ಮನಸ್ಸು ಗಳಲ್ಲಿಯೂ ಇರಿಸುವವನೂ—ಮಹಾತ್ಮರುಗಳು ಇವನ ಗುಣ ಸಮೂಹವನ್ನು ಸ್ಮರಿಸುತ್ತಾರೆಂದರ್ಥ.)"

—ಇತ್ಯಾದಿಯಾಗಿ ಕಾಣಿಸಿಕೊಳ್ಳುತ್ತಾನೆ. ಬಾಹುಬಲಿಯ ಮೇಲಿನ ರೀತಿಯ ಚಿತ್ರಣವನ್ನು ನೋಡಿದರೆ ರತ್ನಾಕರ ತನ್ನ ಬಾಹುಬಲಿಯಲ್ಲಿ ಈ ಬಗೆಯ ಒಂದೇ ಒಂದು ಲಕ್ಷಣವೂ ಇಲ್ಲದಂತೆ ಚಿತ್ರಿಸುತ್ತಾನೆ. ರತ್ನಾಕರನ ಬಾಹುಬಲಿ ಕೇವಲ 'ಚಿತ್ತಜ', 'ಕಾಮದೇವ' ಅಷ್ಟೆ. ಹೀಗೆ ಮೂಲದಲ್ಲಿಲ್ಲದ ಕೆಲವು ಅಂಶಗಳನ್ನು ಬಾಹು ಬಲಿಯ ವ್ಯಕ್ತಿತ್ವಕ್ಕೆ ಜೋಡಿಸಿದ್ದರೆ ಮೂಲದ ಬಾಹುಬಲಿ ಆಡಿರುವ ಕೆಲವು ಮಾತು ಗಳನ್ನೇ ಔಚಿತ್ಯವಿಲ್ಲದಿದ್ದರೂ ತನ್ನ ಬಾಹುಬಲಿಯ ಬಾಯಲ್ಲಿ ಆಡಿಸಿರುವ ಮೂಲಕವೂ ಆ ಪಾತ್ರವನ್ನು ಕೆಳಕ್ಕೆಳೆಯುವ ರತ್ನಾಕರನ ಪ್ರಯತ್ನವನ್ನು ಕಾಣುತ್ತೇವೆ. ಉದಾಹರ ಣೆಗೆ 'ಸಂಧಾನಭಂಗ' ಸಂಧಿಯಲ್ಲಿ ಭರತನ ಸ್ವಾಗತವನ್ನು ತಿಳಿಸುವ ದಕ್ಷಿಣಾಂಕನಿಗೆ ಬಾಹುಬಲಿ ನೀಡಿರುವ ಉತ್ತರದಲ್ಲಿ ಕೆಳಗಿನ ಕೆಲವು ಮಾತುಗಳೂ ಇವೆ.

ಅಣ್ಣನಲ್ಲೆಮಗಾತನೊಡೆಯನ್ನೆ ನೀನಿಂತು | ಬಣ್ಣವಿಕ್ಕದಿರು ಸಾಕು . . . . ||
(೪೮–೨೩)

ದಂಡುನೆರಪಿ ನಿಂದು ಕಾಮನ ಕರೆಯೆಂದು | ತೊಂಡರ ಕರೆಸುವಂತೆನ್ನ ||
ದಂಡಿಸುತಿದ್ದನಣ್ಣನೊ ಈತನೊಡೆಯನೊ | . . . . || (೨೪)

ಗುಣಕೆರಗುವೆನಹುದಣ್ಣನೆಂದೊಮ್ಮೆಯು | ಕಣಕೆರಗುವೆನೆ ತಾ ನೀಗ ||
ಅಣಿಮೋರಿನಿಂದು ಬಣ್ಣಕೆ ನಿನ್ನ ಕಳುಹಿಪ್ರೇ | ರಣಿಸುತಿದ್ದನು ಭಾಪು ನೋಡ
(೪೮–೨೪)

ಕ್ಷಣಕ್ಷಣಕೆನಗೆ ನಿನ್ನೊಡೆಯನ ಗುಣವನೊ | ಕ್ಷಣಿಸುವಾಗೆದೆಯಲ್ಲಿ ಕೋಪ
ಕುಣಿದಾಡುತಿದೆ ನನ್ನ ಕೆರಳಿಸಬೇಡ ದ | ಕ್ಷಿಣ ಹೋಗು ಹೋಗು ಸಾಕು ||
(೪೮–೫೧)[3]

ರತ್ನಾಕರನ ಬಾಹುಬಲಿಯ ಈ ಮಾತುಗಳು ಭರತೇಶವೈಭವದ ಸಂದರ್ಭದಲ್ಲಿ ಭರತನ ಬಗೆಗಿನ ಬಾಹುಬಲಿಯ ತಪ್ಪು ತಿಳುವಳಿಕೆಯಾಗಿ ಮಾತ್ರ ನಮಗೆ ಕಾಣುತ್ತವೆ. ಕಾರಣ ರತ್ನಾಕರನ ಭರತ ಪೂರ್ವಪುರಾಣ, ಆದಿಪುರಾಣಗಳಲ್ಲಿನ ಭರತನಂತಲ್ಲ. ರತ್ನಾಕರನ ಭರತ ಬೂಟಾಟಿಕೆಗಾಗಿ ಮಾತನಾಡುವಂತಹವನೂ ಅಲ್ಲ. ಆದ್ದರಿಂದಲೇ, ಬಾಹುಬಲಿಯಲ್ಲಿಗಿರಲಿ, ಮಿಕ್ಕ ತನ್ನ ಅನುಜರ ಬಳಿಗೂ 'ಆದಿಪುರಾಣ'ದ ಭರತನಂತೆ,

ಎನಗೊರ್ವಂಗುಪಭೋಗ್ಯಮಲ್ತು ವಸುಧಾಸಾಮ್ರಾಜ್ಯ ಮೋರಂತೆ ನಿ
ಮ್ಮನಿಬರ್ಗಂ ಪಿರಿಯಣ್ಣನೇಂ ಜನಕನೇನೆಂಬೊಂದು ಕೊಂಡಾಟದಿಂ
ವಿನಯಂ ಸಲ್ವುದುತಾಮುಮಾಮುಮೊಡನಿರ್ಪಂಬರ್ಪುದೆಂಬೀಶಶಾ
ಸನಮಂ ನೆತ್ತಿಯೊಳಾಂತು ಬನ್ನಿಮೆಱಗಿಂ ಚಕ್ರೇಶಪಾದಾಬ್ಜದೊಳ್ (೧೪–೩೧
ಆದಿಪು)

ಇಂತಹ ಒಂದೇ ಒಂದು ಆಜ್ಞೆಯನ್ನೂ ಆಡಿದವನಲ್ಲ. ರತ್ನಾಕರನ ಭರತ ಹೇಳುವ 'ತಾಮುಮಾಮುಮೊಡನಿರ್ಪಂ' ಎಂಬ ಮಾತು ಮೇಲಿನ ಆದಿಪುರಾಣದ ಭರತನ ಮಾತಿನಂತೆ ಬೂಟಾಟಿಕೆಯುದ್ದಲ್ಲ. ಅದು ಅವನ ಅಂತರಂಗದಿಂದ ಹೊಮ್ಮಿದ ಮಾತಾಗಿ ಕಾಣುತ್ತದೆ. ರತ್ನಾಕರನೇ ಹೇಳುವಂತೆ ಅವನ ಭರತ ಮೃದುಹೃದಯಿ : "ಕ್ಷಣಕೆ ಮುಕ್ತಿಯ ಕೊಂಬ ಮೃದುಹೃದಯುಗೆ ಕ್ರೂರ | ಗುಣವುಂಟೆ ಸಾಕ ದಂತಿರಲಿ ||"

ಅಲ್ಲದೆ ರತ್ನಾಕರನ ಭರತ, ಆಯುಧಾಗಾರದಲ್ಲಿ ಚಕ್ರ ಉದಯಿಸಲು, ತಾನು ದಿಗ್ವಿಜಯ ಸಾಧಿಸಿ ಎಲ್ಲ ಭೂಭುಜರನ್ನೂ ತನ್ನಂಕೆಗೊಳಪಡಿಸಿಕೊಳ್ಳಬಹುದು ಇತ್ಯಾದಿ ಯಾಗಿ ಸ್ವಲ್ಪವೂ ರಾಜ್ಯಲಾಲಸೆಯನ್ನು ಹೊಂದಿದವನಲ್ಲ. ತಾನಾಗಿಯೇ ಚಕ್ರರತ್ನ ಉದಯಿಸಿದ್ದರಿಂದ ವಿಧಿಯಿಲ್ಲದೆ ದಿಗ್ವಿಜಯವನ್ನು ಕೈಗೊಂಡಿದ್ದಾನೆ. ರತ್ನಾಕರನ ಭರತನೇ ಪ್ರಾಮಾಣಿಕವಾಗಿ ಹೇಳುವಮಾತು :

ಕೇಳಣ್ಣ ಚಕ್ರವ ಬಯಸಿತಿಲ್ಲಾನು ಶ | ಸ್ತ್ರಾಲಯದೊಳು ತಾನೆ ಹುಟ್ಟಿ ||
ಏಳಿಸಿ ನಾಡ ಸುತ್ತಿಸಿತು ನಿಮ್ಮೆಲ್ಲರ | ಆಲಿಗೆ ನೋವಾಗುವಂತೆ || (೫೧–೧೦೪)

ಬಾಹುಬಲಿಯನ್ನು ಪೂರ್ವಪುರಾಣ, ಆದಿಪುರಾಣಗಳ ಕೃತಿಯ ಬಾಹುಬಲಿ ಹೊಂದಿರುವಂತಹ ವೀರೋಚಿತವಾದ ಛಲ, ಸಾಹಸ, ಅಭಿಮಾನ ಇತ್ಯಾದಿ ಯಾವುದನ್ನೂ ಹೊಂದಿರುವವನಂತೆ ಉದ್ದೇಶಪೂರ್ವಕವಾಗಿ ರತ್ನಾಕರ ಚಿತ್ರಿಸಿಲ್ಲ. ಹಾಗಿರುವ ಬಾಹುಬಲಿ ಭರತನ ವಿಷಯವಾಗಿ ಕುರಿತು ಹಿಂದೆ ಸೂಚಿಸಿರು ವಂತೆ ಆಡಿರುವ ಮಾತುಗಳು ಕೇವಲ ತಪ್ಪು ತಿಳುವಳಿಕೆಯ, ಇಲ್ಲದ ಸಲ್ಲದ ಭರತನ ಮೇಲಿನ ಆಕ್ಷೇಪವಾಗಿ ಮಾತ್ರ ಉಳಿಯುತ್ತವೆ.

ಈ 'ಸಂಧಾನ ಭಂಗ' ಸಂಧಿಯಲ್ಲಿಯೇ ಬಾಹುಬಲಿಯ ವ್ಯಕ್ತಿತ್ವವನ್ನು ಕೆಳಗಿಳಿ ಸಿರುವ ಮತ್ತೆರಡು ಪ್ರಸಂಗಗಳೆಂದರೆ : (1) ಬಾಹುಬಲಿಯ ಕಡೆಯವರೆಲ್ಲರೂ ಭರತನ ಕಡೆಗೇ ವಾಲಿಕೊಂಡು ಬಾಹುಬಲಿಯ ಯಾವುದೇ ಮಾತನ್ನು ತಿರಸ್ಕಾರವಾಗಿ ಕಾಣು ವಂತೆ ಚಿತ್ರಿಸಿರುವಲ್ಲಿ ಮತ್ತು (2) ಯಾವುದೇ ಬಗೆಯ ಶೃಂಗಾರದ ಆವರಣ ಕೊಟ್ಟು ಲಘುವಾದ ದೃಷ್ಟಿಯಿಂದ ವರ್ಣಿಸಿರುವಂತಿದ್ದರೂ, ಬಾಹುಬಲಿ ತನ್ನ ಓಲಗವೆಂಗಳನ್ನು ಸಭೆಯಲ್ಲಿ ಅಟ್ಟಿ ಕುಟ್ಟಿಸಿರುವ ಚಿತ್ರಣಗಳು. ಈ ಎರಡೂ ಚಿತ್ರಗಳೂ ರತ್ನಾಕರನೇ ಸೃಷ್ಟಿ ಸಿರುವಂತಹವು. ಬಾಹುಬಲಿಯ ಯುದ್ಧ ನಿರ್ಧಾರವನ್ನು ವಿರೋಧಿಸುವ ಅವನ ಸಚಿವ ಮುಖ್ಯರ, ಮತ್ತು ಅವನ ಹೆಣ್ಣುಗಳ ರೀತಿಯನ್ನು ನೋಡಿದರೆ, ಬಾಹುಬಲಿ ವಿವೇಕ ಶೂನ್ಯನಂತೆ ಉಳಿದವರು ವಿವೇಕದಿಂದ ವರ್ತಿಸುತ್ತಿರುವಂತೆ ಚಿತ್ರಿತರಾಗಿದ್ದಾರೆ ಎಲ್ಲೆಲ್ಲಿ ಕವಿ ಬಾಹುಬಲಿಯ ಚಿತ್ರಣವನ್ನು ತರುತ್ತಾನೋ ಅಲ್ಲೆಲ್ಲಾ ಕಾಣುವುದು. ಕೇವಲ ಬಾಹುಬಲಿಯ ಸುಳ್ಳು, ವಂಚನೆ, ಮೋಸ ಇತ್ಯಾದಿಗಳೆ. ಅದೂಬಾಹುಬಲಿಯ ಈ ನಡತೆ

ಯೆಲ್ಲಾ ಪ್ರಕಟವಾಗುವುದು ಸಾತ್ವಿಕನಾದ ಭರತನ ದೂತನ ಸಮಕ್ಷಮದಲ್ಲಿ. ಹೀಗೆ ಚಿತ್ರಿಸಿರುವಲ್ಲಿಯೂ ಭರತ–ಬಾಹುಬಲಿಯರ ವ್ಯಕ್ತಿತ್ವದ ಏರುತಗ್ಗುಗಳನ್ನು ಒಟ್ಟಿಗೆ ತೋರುವ ಉದ್ದೇಶ ಸ್ಪಷ್ಟವಾಗಿ ರತ್ನಾಕರನದಾಗಿದೆ.

'ಮದನ ಸನ್ನಾಹ' ಸಂಧಿಯಂತೂ ಬಾಹುಬಲಿಯ ವ್ಯಕ್ತಿತ್ವದಲ್ಲಿನ ಸುಳ್ಳುತನದ ಮುಖವನ್ನು ಪ್ರಬಲವಾಗಿ ಮಂಡಿಸುತ್ತದೆ. ಪೂರ್ವಪುರಾಣ ಹಾಗೂ ಆದಿಪುರಾಣ ಗಳಲ್ಲಿ ಯುದ್ಧಕ್ಕೆ ಸನ್ನದ್ಧರಾಗುವ ಭರತ–ಬಾಹುಬಲಿಯರಲ್ಲಿ ಕೃತಿಯ ಪಕ್ಷಪಾತ ವೆಲ್ಲವೂ ಬಾಹುಬಲಿಯ ಕಡೆಗೆ ಇದೆಯೇ ವಿನಾ ಭರತನ ಕಡೆಗಿಲ್ಲ. ಅಲ್ಲದೆ ಆ ಕೃತಿಗಳ ಉದ್ದೇಶವೂ ಬಾಹುಬಲಿಯನ್ನು ಮಹೋನ್ನತ ಪಾತ್ರವಾಗಿ ಚಿತ್ರಿಸುವುದು. ಆದ್ದ ರಿಂದ ಅಲ್ಲಿ ಏನೇ ಅಪರಾಧಗಳು ಕಂಡು ಬಂದರೂ ಅವೆಲ್ಲ ಭರತನವೇ ಹೊರತು ಬಾಹು ಬಲಿಯವಲ್ಲ. ಇದನ್ನು ಅಲ್ಲಿನ ಕೆಲವು ಸಂದರ್ಭಗಳ ಮೂಲಕ ತಿಳಿಯಬಹುದಾಗಿದೆ :

ಬಾಹುಬಲಿಯ ಯುದ್ಧ ನಿರ್ಧಾರದ ವಿಷಯ ತಿಳಿದು ಯುದ್ಧಕ್ಕೆ ಸಜ್ಜಾಗಿ ಬಾಹುಬಲಿಗೆ ಅಭಿಮುಖನಾಗಿ ಬರುವ ಭರತನನ್ನು ಚಿತ್ರಿಸುವಾಗ ಪೂರ್ವಪುರಾಣ ಹೇಳುವ ಕೆಲವು ಮಾತುಗಳು ಈ ರೀತಿ ಇವೆ :

"ವಿರೂಪಮಿದಂ ಯುದ್ಧಮಾರಬ್ಧಂ ಭರತೇಶಿನಾ ।
ಐಶ್ವರ್ಯ ಮದ–ದುರ್ವಾರಾಃ ಸ್ವೈರಿಣಃ ಪ್ರಭವೋಧವಾ ॥" (೩೬–೧೭)

("ಭರತೇಶ್ವರನು ಅನುಚಿತವಾದ ಈ ಯುದ್ಧವನಾರಂಭಿಸಿದನು. ಹೇಗೆಂದರೆ ಐಶ್ವರ್ಯಮದದಿಂದ ತಡೆಯಲಾಗದ ದೊರೆಗಳು ಸ್ವೇಚ್ಛಾಚಾರಿಗಳಾಗಿರುತ್ತಾರೆ.")

ಅದೇ ಬಾಹುಬಲಿ ಯುದ್ಧಾಭಿಮುಖನಾಗಿ ನಿಂತಾಗ ಬರುವ ಮಾತುಗಳು :

"ಅಹೋ ಮಹಾನುಭಾವೋಯಂ ಕುಮಾರೋ ಭುಜವಿಕ್ರಮಿ ।
ಕ್ರುದ್ಧೇ ಚಕ್ರಧರೇನ್ಯೈವಂ ಯೋಯೋದ್ಧಂ ಸಮುಖಂಸ್ಥಿತಃ (೩೬–೧೯)

("ಚಕ್ರೇಶ್ವರನು ಹೀಗೆ ಕೋಪಗೊಂಡಿದ್ದರೂ ಯಾವ ಬಾಹುಬಲಿ ಕುಮಾರನು ಯುದ್ಧ ಮಾಡುವುದಕ್ಕಾಗಿ ಅಭಿಮುಖವಾಗಿ ನಿಂತಿರುವನೋ ಅಂತಹ ಬಾಹುಬಲಿ ಪರಾ ಕ್ರಮಿಯಾದ ಈ ಕುಮಾರನು ಮಹಾಮಹಿಮೆಯುಳ್ಳವನಾಗಿದ್ದಾನೆ–ಆಶ್ಚರ್ಯ !")

"ಅಥವಾ ತಂತ್ರಭೂಯಸ್ತ್ವಂನ ಜಯಾಂಗಂ ಮನಸ್ವಿನಃ ।
ನನು ಸಿಂಹೋ ಜಯತ್ಯೇಕಂ ಸಂಹತಾನಪಿದಂತಿನಃ ॥ " (೩೬–೩೦)

("ಅಥವಾ ಮಹಾಪುರುಷನಿಗೆ ಬಹಳವಾದ ಸೈನ್ಯವು ಜಯಕ್ಕೆ ಸಾಧನವಾಗುವು ದಿಲ್ಲ. ಹೆಚ್ಚು ಪಡೆಯಿದ್ದರೂ ಮಹಾಪುರುಷನನ್ನು ಜಯಿಸಲಾಗುವುದಿಲ್ಲ ಎಂದು ಭಾವ")

ಇಂತಹ ಮಾತುಗಳು ಸ್ಪಷ್ಟವಾಗಿ ಕೃತಿಯ ಪಕ್ಷಪಾತ ಯಾವ ಪಾತ್ರದ ಕಡೆಗಿದೆ ಎಂಬುದನ್ನು ಸೂಚಿಸಿಬಿಡುತ್ತವೆ. ಹೀಗೆಯೇ ಆದಿಪುರಾಣದಲ್ಲಿ ಬಾಹುಬಲಿಯ ಬಳಿ

ಸಂಧಾನಕ್ಕೆ ಹೋಗಿ ಬಂದ ಮಹತ್ತರ ಬಾಹುಬಲಿಯ ಯುದ್ಧ ನಿರ್ಧಾರವನ್ನು ಭರತನಿಗೆ ತಿಳಿಸುವಾಗಿನ ಒಂದು ಪದ್ಯ ಹೀಗಿದೆ :

ನಿನಗೀಷಟ್ಖಂಡ ಭೂಮಂಡಲಮೊಱಗಿದುದೇಂಸಾಲದೆ ಬೇಡದುದ್ದ್ರ |
ತ್ರ ನೊಳಿನ್ನೇನೆಂದು ದೇವರ್ಕಡೆಗಣಿಸಿರೆ (ಸೌಪರ್ಯನುಂ)ಕಾದ ಪೆಂಪೀ
ವನಧಿದ್ವೀಪಾಂತರಾಳ ಕ್ಷಿತಿಯೊಳೆಸೆಗುಂಮಾಕ್ಷೇಪಮಂ ಮಾಣ ನೀಂಕ್ರೋ
ಧನನಾಗಲ್ ನಿನ್ನತಮ್ಮಂ ನಿನಗೆಱಗನಿದಂ ನಂಬುರಾಜಾಧಿರಾಜಾ || (೧೪–೭೪ ಆದಿಪು)

ಈ ಪದ್ಯ ಪಂಪನದೇ, ಪೂರ್ವಪುರಾಣದಲಿಲ್ಲ. ವೃತ್ತದ ಮೊದಲ ಪಾದವೇ ಇನ್ನೂ ತೃಪ್ತಿಗೊಳ್ಳದ ಭರತನ ರಾಜ್ಯದಾಹವನ್ನು ಸೂಚಿಸುತ್ತದೆ. ಸೋದರರ ಕಾಳಗದಿಂದ ಬರುವ ಆಕ್ಷೇಪ ನಿವಾರಣೆ ಭರತನಿಂದ ಸಾಧ್ಯವೇ ವಿನಾ ಬಾಹುಬಲಿಯಿಂದಲ್ಲ ಎಂಬ ಭಾವ ಎರಡು–ಮೂರನೇ ವೃತ್ತದಲ್ಲಿದೆ. "ನೀ ಕ್ರೋಧನನಾಗಲ್ ನಿನ್ನ ತಮ್ಮಂ ನಿನಗೆಱಗನ್' ಎಂಬಲ್ಲಿ ಬಾಹುಬಲಿಯ ನಿಶ್ಚಲ ಅಭಿಮಾನದ ಬಗ್ಗೆ ಒತ್ತಿದೆ. ಇದೆಲ್ಲದರಿಂದ ನಿಜಕ್ಕೂ ಭರತನ ಯುದ್ಧವೇ ನಿಷ್ಕಾರಣ ಎಂಬ ಪೂರ್ವಪುರಾಣದ ಭಾವವೇ ಇಲ್ಲೂ ಮಿಡಿದಿರುವಂತಿದೆ.

ಆದರೆ ರತ್ನಾಕರನ ಪಕ್ಷಪಾತ ಭರತನ ಪಾತ್ರದ ಕಡೆಗೆ. ಆದ್ದರಿಂದ, ಅವನ ವ್ಯಕ್ತಿತ್ವದ ಮಹೋನ್ನತಿಯನ್ನು ಚಿತ್ರಿಸುವುದು ಅವನ ಉದ್ದೇಶ. ಭರತೇಶವೈಭವದಲ್ಲಿ ಭರತ–ಬಾಹುಬಲಿಯರ ಯುದ್ಧ ಘಟಿಸದಿದ್ದರೂ ಬಾಹುಬಲಿ ಯುದ್ಧಸಂಕಲ್ಪ ಮಾಡಿ ಸಜ್ಜಾಗಿ ಹೋಗುವ ಚಿತ್ರವಿದೆ. ಇಲ್ಲಿ ಭರತನ ಯುದ್ಧ ಸಿದ್ಧತೆಯ ಚಿತ್ರಣವನ್ನು ಕವಿ ಕೊಡುವುದೇ ಇಲ್ಲ. ಅವನು ಕೊಡಬೇಕಾಗಿಯೂ ಇಲ್ಲ. ಕಾರಣ ಮೂಲದ ಕೃತಿಗಳ ಭರತನಂತೆ ರತ್ನಾಕರನ ಭರತ ಸಾಪತ್ನನ ಭುಜಬಲವನ್ನು ಪರೀಕ್ಷಿಸಿ ನೋಡುವ ಎಳ್ಳಷ್ಟು ಆಸೆಯನ್ನೂ ಹೊಂದದವನು. ನಿಜವಾಗಿ ನೋಡಿದರೆ ರತ್ನಾಕರನಲ್ಲಿ ಭರತನೇ ಅದ್ಭುತ ವೀರ. ಆದ ಕಾರಣ ಬಾಹುಬಲಿಯ ಯುದ್ಧ ಸಿದ್ಧತೆ, ಯುದ್ಧ ನಿರ್ಧಾರಗಳು ನಿಷ್ಕಾರಣವಾದವು ಎಂಬುದು ರತ್ನಾಕರನ ಸ್ಪಷ್ಟ ನಿಲುವು.

ಪೂರ್ವ ಪುರಾಣ, ಆದಿಪುರಾಣಗಳಲ್ಲಿ ಬಾಹುಬಲಿ ಭರತನ ಮೇಲೆ ಯುದ್ಧಕ್ಕೆ ಹೊರಟಿರುವಲ್ಲಿ ಮಹತ್ವದ ಉದ್ದೇಶವಿದೆ. ಅಣ್ಣನಾಗಿ, ಗುರುವಾಗಿ ಬರದೆ 'ಚಕ್ರಿ' ಯೆಂಬ ಗರ್ವ ಹೊತ್ತು ತನಗೆ ಎರಗಿಸಿಕೊಳ್ಳುವ ಮೂಲಕ ಬಾಹುಬಲಿಯ ಅಭಿಮಾನವನ್ನು ಕಳೆಯುವ ಭರತನ ಗರ್ವವನ್ನು ಬಾಹುಬಲಿ ಇಳುಹಬೇಕಿದೆ. ಇದು ಮೂಲದ ಬಾಹುಬಲಿಯ ಮುಖ್ಯ ಉದ್ದೇಶ. ನೆಲಕ್ಕಾಗಿ ಅಣ್ಣನೊಂದಿಗೆ ಹೋರಾಡುವುದಲ್ಲ. ಆದರೆ ರತ್ನಾಕನ ಬಾಹುಬಲಿ ಭರತನನ್ನೆದುರಿಸಿ ಗೆಲ್ಲಲಾರ, ಆದರೂ, ಹಠ ಮಾರಿತನ, ಅಹಂಕಾರಗಳ ಕಾರಣದಿಂದ ಭರತನನ್ನು ಎದುರಿಸುತ್ತಿದ್ದಾನೆ. ಆದ್ದರಿಂದ, ಭರತ ಅಂತಹ ಬಾಹುಬಲಿಯ ಹಠ, ಅಹಂಕಾರಗಳನ್ನು ಕಳೆಯುವ ಯತ್ನ ಮಾಡಬೇಕಾಗಿದೆ, ಅಷ್ಟೆ.

ಪೂರ್ವಪುರಾಣ ಆದಿಪುರಾಣಗಳಲ್ಲಿ, ಭರತ ಬಾಹುಬಲಿಯನ್ನು ತನಗೆ ಎರಗಿಸಿಕೊಳ್ಳುವ ವಿಚಾರದಲ್ಲಿ ಬಹಳ ಚಿಂತಾಕ್ರಾಂತನಾದರೆ ರತ್ನಾಕರನ ಭರತನಿಗೆ ಬಾಹುಬಲಿಯನ್ನು ಎರಗಿಸಿಕೊಳ್ಳುವಲ್ಲಿ ಎಳ್ಳಷ್ಟು ಚಿಂತೆಯಿಲ್ಲ. ಪರಸ್ಪರ ಬಲಾಬಲಗಳನ್ನು ಪರೀಕ್ಷಿಸಿ ಸೆಣಸಾಡಿ ಗೆಲ್ಲುವುದಿರಲಿ ಕೇವಲ ಮಾತಿನಿಂದಲೇ ಬಾಹುಬಲಿಯನ್ನು ಕ್ಷಣಮಾತ್ರದಲ್ಲಿ ಗೆದ್ದು ಬಿಡಬಲ್ಲ, ರತ್ನಾಕರನ ಭರತ. ರತ್ನಾಕರನ ಭರತನೆದುರು ಬಾಹುಬಲಿಯೇ ಬಲಹೀನ, ಭರತನ ಕಿರುಬೆರಳಿನ ಶಕ್ತಿಯ ಮಹಿಮೆಯನ್ನು ಕೇಳುತ್ತಲೇ ಅಳುಕುತ್ತಾನೆ ಬಾಹುಬಲಿ. ಆದರೂ ಭರತನ ಸಾಮರ್ಥ್ಯಕ್ಕೆ ಎದುರು ನಿಲ್ಲುವ ಹುಚ್ಚು ಹಟ ತೊಟ್ಟವನು ಬಾಹುಬಲಿ. (ಬೆರಳ ಶಕ್ತಿಯ ಮೇಲೆ ಬಂದಣ್ಣಗೆ। ಶಿರಬಾಗಬೇಡವೆ ಮದನ ॥ ಘಟಿತ ಗರ್ವವ ನೆನೆದಾ ಕಾಮು ಕೊಡೆ ಹೋ । ರಟಿಗೆ ಮುಂಕೊಂಡನೇನೆಂಬೆ ॥)

ರತ್ನಾಕರನ ಬಾಹುಬಲಿ ಯುದ್ಧಕ್ಕೆ ಹೋಗುವ ಸನ್ನಿವೇಶದಲ್ಲಿ ಪೂರ್ವಪುರಾಣ, ಆದಿಪುರಾಣಗಳಲ್ಲಿನ ಉತ್ಸಾಹ ವಾತಾವರಣಕ್ಕೆ ಬದಲಾಗಿ ಒಂದು ಬಗೆಯ ವಿಷಾದದ ಕರಾಳ ಛಾಯೆ ಕವಿದು ಬಿಟ್ಟಂತೆ ಭಾಸವಾಗುತ್ತದೆ. ಯುದ್ಧಕ್ಕೆ ಹೊರಟಾಗ ಬಾಹುಬಲಿ ತಾಯಿಗೆ, ತನ್ನ ಹೆಂಗಳಿಗೆ, ಹೇಳುವ ಸುಳ್ಳು ಮಾತುಗಳನ್ನು ಕವಿ ಹೇಳುವ ಬಗೆ ಇದು :

"ಕದನವೆಂದರೆ ನೋವಳೆಂದು ಮಾತಿನೊಳಮ್ಮ । ನೆದೆಗೆ ಸಂತಸದೋರಿ ಪೋಪ ।
ಗದಕ ನೆನೆದು ಯುದ್ಧವಿಲ್ಲೆಂದು ನುಡಿದನು । ಮದನಗೆ ವಂಚನೆ ಸಹಜ ॥
(೫೦–೧೮)

ಪಡೆದಳಿಗೆರಗಿ ಬೀಳ್ಕೊಂಡು ತನ್ನ ರಮನೆ । ಗೊಡನೆ ಹೊಕ್ಕನು ಪುಷ್ಪ ಬಾಣ ।
ಬೆಡಗಿ ಸಿಂಗರಿಸಿದನು ತನ್ನಂಗಕೆ । ಕಡೆಯ ಶೃಂಗಾರವತ್ತೆ ॥ (೫೦–೨೨)

ಇಲ್ಲೇ ಕವಿ ಬಾಹುಬಲಿಯ ಸೋಲನ್ನೂ ನಿರ್ಧರಿಸಿಬಿಟ್ಟಂತಿದೆ. ಬಾಹುಬಲಿ ತನ್ನ ಹೆಂಗಳೆಯರಿಗೆ ಕೊಡುವ ಸುಳ್ಳು ಭರವಸೆ :

". . . . . ನಿಮ್ಮೆಲ್ಲರರ್ತಿಯ ಕೆಡಿಸೆನ್ ಸುಖದೋರ್ಪೆನೆಂದ ॥ "
(೫೦–೬೦)

ಬಾಹುಬಲಿ ಭರತನಿಗೆ ಮಣಿಯಲಾರದ ಮನಸ್ಥಿತಿಯಲ್ಲಿ, ಅದೂ ಯುದ್ಧಕ್ಕೆ ಹೊರಡುವ ಸಂದರ್ಭದಲ್ಲಿ ತನ್ನ ಕಾರ್ಯಸಾಧನೆಗಾಗಿ ಹೇಳುವ ಮೇಲಿನ ಬಗೆಯ ಸುಳ್ಳುಗಳು, ಭರತನನ್ನು ರಣಾಂಗಣದಲ್ಲಿ ಎದುರುಗೊಂಡಾಗ, ನಿಜಕ್ಕೂ ಭರತನ ವ್ಯಕ್ತಿತ್ವಕ್ಕೆ ಮಣಿದು ಬಿಡುವ ಬಾಹುಬಲಿಯ ಚಿತ್ರಣ ಎದುರಾದಾಗ, ಅವನು ಹೇಳಿದ ಹಿಂದಿನ ಸುಳ್ಳುಗಳೆಲ್ಲ ನಿಜವಾಗಿಬಿಡುತ್ತವೆ.

ಬಾಹುಬಲಿ, ವಿನಾಕಾರಣ, ತನ್ನ ಅಣ್ಣನ ವಿಚಾರದಲ್ಲಿ ಎಂಥ ದ್ವೇಷ ಬೆಳೆಸಿಕೊಂಡಿದ್ದಾನೆನ್ನುವುದಕ್ಕೆ, ರಣಾಂಗಣದಲ್ಲಿ ತನ್ನನ್ನು ಕಾಣಲು ಬಂದ ಅರ್ಕಕೀರ್ತಿ

ಇತ್ಯಾದಿ ಭರತನ ಮಕ್ಕಳ ವಿಚಾರದಲ್ಲಿ ಅವನು ನಡೆದುಕೊಳ್ಳುವ ರೀತಿ ದ್ಯೋತಕ ವಾಗಿದೆ :

ಬರಬೇಡ ಹೋಗಹೇಳೊ ತಮ್ಮ ಪಿತನೆನ | ಗರಸುತಾವಣುಗೆರೆ ನನಗೆ |
ಅರರೆ ತಾವಾರ ಚಾಳಿಸಬಂದರೆಂದನಾ | ಸ್ಮರನೆನಲೆದ್ದುದೊ ಕರ್ಮ ||

(೫೦-೧೦೨)

ಬಾಹುಬಲಿಯ ಈ ವರ್ತನೆ ಸರಿಯಾದದ್ದಲ್ಲ ಎಂಬುದು ಅವನ ಮಗು ಮಹಾ ಬಲನ ಅರಿವಿಗೇ ಬರುತ್ತದೆ : "ಅಯ್ಯಯ್ಯೋ ಅಣ್ಣಾಜಿಯರುಬರೆವೋಗಲೆಂದಯ್ಯ ಚಾಳಿಸಿದನೆಂದು || ಒಯ್ಯನಾನೆಯವಿಳಿದಾಮಹಾಬಲರಾಜ | ಮೆಯ್ಯತೋರದೆ ಪೋದನೊಂದು || "

"ಮುಂದೀತ ನನ್ನರಕ್ಷಿಸಲರಿಯನುದೊಡ್ಡ | ತಂದೆಯೆ ಪಾಲಿಪನೆಂದು ||
ಇಂದೆ ಕೊಂಡೊಯ್ಯುದೊ ವಿಧಿಯೆನಲಕ್ಕ | ರಿಂದ ಪೋದನು ಚಕ್ರಿಯೆಡೆಗೆ ||

(೫೦-೧೦೫)

ಬಾಹುಬಲಿಯ ಅಲ್ಪವ್ಯಕ್ತಿತ್ವಕ್ಕೆ ಇದಕ್ಕಿಂತ ಬೇರೆ ಉದಾಹರಣೆ ಬೇಕಿಲ್ಲ. ಅಯ್ಯನ ನಡುವಳಿಕೆಗೆ ಹೇಸಿದ ಮಹಾಬಲನ ವರ್ತನೆಯ ಮೂಲಕವೇ ಬಾಹುಬಲಿ ಯನ್ನು ಅರ್ಥಮಾಡಿಸಿದರೂ ಕವಿಗೆ ಇನ್ನೂ ತೃಪ್ತಿಯಿಲ್ಲ. ಬಾಹುಬಲಿಯ ಈ ವರ್ತ ನೆಗೆ ವಿರುದ್ಧವಾಗಿ ಭರತನ ವರ್ತನೆಯನ್ನು ಪಕ್ಕದಲ್ಲೇ ಹೇಳುತ್ತಾನೆ. ಅರ್ಕಕೀರ್ತಿಯ ಬಗೆಗೆ ಬಾಹುಬಲಿ ತೋರಿರುವ ವರ್ತನೆ ತಿಳಿದೂ, ತಂದೆಯ ವರ್ತನೆಗೆ ನೊಂದು ತನ್ನ ಬಳಿಗೆ ಓಡಿಬಂದ ಮಹಾಬಲನನ್ನು ಎತ್ತಿ ತೊಡೆಯ ಮೇಲೆ ಕೂರಿಸಿಕೊಂಡು ಸಂತೈಸು ತ್ತಾನೆ ಭರತ. ಈ ಸಂದರ್ಭದಲ್ಲಿ ಕವಿಯಾಡುವ ಮಾತು : "ತೋರದೊಡೆಯೊಳಿಟ್ಟು ಕೊಂಡನಾ ನೃಪನಂತೆ | ಸಾರಹೃದಯರೊಬ್ಬರುಂಟೆ ||"

ಪೂರ್ವಪುರಾಣ ಮತ್ತು ಆದಿಪುರಾಣಗಳ ಭರತನಿಗಿಂತ ರತ್ನಾಕರನ ಭರತ ಭಿನ್ನ. ಅಲ್ಲಿನಂತೆ ಅವನ ವ್ಯಕ್ತಿತ್ವ ಇಲ್ಲಿ ಸರಳವಾದದ್ದಲ್ಲ; ಅಲ್ಲಿ ಅವನು ಕೇವಲ ಮಹತ್ವಾಕಾಂಕ್ಷಿ ಯಾದ ಚಕ್ರವರ್ತಿ ಮಾತ್ರ. ಇಲ್ಲಿ, ರತ್ನಾಕರ, ಅವನ ವ್ಯಕ್ತಿತ್ವಕ್ಕೆ 'ಹಂಸಕಲೆ'ಯ ಅಂಶವನ್ನು ಸೇರಿಸಿ, ಅವನನ್ನೊಬ್ಬ ಅಧ್ಯಾತ್ಮಿಕ ಸಾಧಕನನ್ನಾಗಿಯೂ ಮಾಡಿದ್ದಾನೆ. ರತ್ನಾಕರನ ಭರತ 'ಧರ್ಮದಿಂದಾದುದು ಸಿರಿ" ಎಂದು ಭಾವಿಸಿದವನೇ ಹೊರತು, ಅದಕ್ಕೆ ಮರುಳಾದವನಲ್ಲ.

ಪೂರ್ವಪುರಾಣ, ಆದಿಪುರಾಣಗಳಲ್ಲಿ ಭರತನೇ ದಿಗ್ವಿಜಯ ಕೈಗೊಂಡಿದ್ದರೂ ಆತನ ವಿಜಯದ ಪಾಲಿನಲ್ಲಿ ಸೇನಾಪತಿ ಮತ್ತಿತರರ ವಿಜಯದ ಪಾಲು ಸೇರುತ್ತದೆ. ಜೊತೆಗೆ ಭರತನೇ ವಿಜಯ ಸಾಧಿಸಿರುವ ಸಂದರ್ಭಗಳಲ್ಲೂ ವಿಜಯ ಪ್ರಾಪ್ತವಾಗುವುದು ಅವನ ಧ್ಯಾನ, ವ್ರತ, ಉಪವಾಸಾದಿಗಳಿಂದ. ಇದು, ಭರತನ ದೂತ ದಕ್ಷಿಣಾಂಕ ಮಹತ್ತರ ಭರತನ ದಿಗ್ವಿಜಯವನ್ನು ಬಾಹುಬಲಿಯೆದುರು ಹಾಡಿ ಹೊಗಳಿದಾಗ ಬಾಹು

ಬಲಿ ಆಡುವ ಮಾತುಗಳಿಂದಲೂ ಸ್ಪಷ್ಟವಾಗುತ್ತದೆ4. ಇದೆಲ್ಲವನ್ನೂ ನೋಡಿದರೆ ಪೂರ್ವ ಪುರಾಣ ಹೇಳುವಂತೆ ಅಲ್ಲಿ ಭರತ ಕೇವಲ ವಯಸ್ಸಿನಲ್ಲಿ ಹಿರಿಯ ಪರಾಕ್ರಮಾದಿ ಸತ್ವ ಗಳಿಂದಲ್ಲ. ಆದರೆ ರತ್ನಾಕರನ ಭರತ ಹೀಗಲ್ಲ. ಕೆಲವರು ರಾಜರುಗಳನ್ನು ಸೋಲಿಸಿ ಕರೆತರುವ ಅಥವಾ ಭರತನ ಮಹತ್ವವನ್ನು ಅವರ ಪರಿವೆಗೆ ತಂದು ಶರಣಾಗತರಾಗು ವಂತೆ ರತ್ನಾಕರನ ಭರತನ ಸೇನಾಪತಿಗಳೂ ಮಾಡುವ ಚಿತ್ರಣವಿವೆ. ಆದರೆ, ಅವು ಘಟಿಸುವುದು ಭರತನ ಮಹತ್ವಪೂರ್ಣ ವ್ಯಕ್ತಿತ್ವದ ಕಾರಣದಿಂದ ಎಂಬುದನ್ನು ಭರತೇಶ ವೈಭವದ ಸಂದರ್ಭದಲ್ಲಿ ಮರೆಯುವಂತಿಲ್ಲ. ಈ ಕಾರಣದಿಂದಲೇ ಮೂಲದ ಬಾಹುಬಲಿಯಂತೆಯೇ ಭರತನ ದಿಗ್ವಿಜಯವನ್ನು ಕುರಿತು ರತ್ನಾಕರನ ಬಾಹುಬಲಿ ಆಕ್ಷೇಪಿಸಿದಾಗ, ತಪ್ಪು ತಿಳುವಳಿಕೆಯ ಕಾರಣದಿಂದ ಇಲ್ಲದ್ದನ್ನು ಹೇಳುವ ವ್ಯಕ್ತಿಯಾಗಿ ಅವನು ಕಾಣಿಸಿಕೊಳ್ಳುತ್ತಾನೆ. ಅಲ್ಲದೆ ರತ್ನಾಕರನಲ್ಲಿ ಭರತನ ಅಶ್ವರತ್ನ, ಗಜರತ್ನ ಗಳನ್ನು ಏರುವವ, ಕವಾಟ ವಿಸ್ಫೋಟನೆ ಮಾಡುವವ ಎಲ್ಲ ಭರತನೇ ಹೊರತು, ಉಳಿ ದವರಿಗೆ ಆ ಹಕ್ಕಿಲ್ಲ.

ರತ್ನಾಕರನ ಭರತ ದಿಗ್ವಿಜಯದುದ್ದಕ್ಕೂ ಯಾರೊಡನೆಯೂ ಪ್ರಬಲವಾಗಿ ಹೋರಾಡದೆ ಅವರವರೇ ಬಂದು ಎರಗಿ ಶರಣಾಗತರಾಗುವುದರಿಂದ ಲೀಲಾಜಾಲವಾಗಿ ಜಯಸಿದ್ಧಿಸಿಕೊಂಡು ಬರುವ 'ಮೆರವಣಿಗೆಯ ಬೊಂಬೆ'ಯಂತೆ ಕಂಡರೂ ರತ್ನಾಕರನಲ್ಲಿ ಭರತನ ಮಹಿಮೆಯೇ ಅಂತಹದ್ದು ಎಂಬಂತೆ ಚಿತ್ರಿತವಾಗಿದೆ. ಕವಿ ಚಿತ್ರಿಸಿರುವ ಭರತನ ಕಿರುಬೆರಳಿನ ಶಕ್ತಿಯ ಚಿತ್ರಣವೊಂದೇ ಸಾಕು ಅಂತಹ ಬಲ ಮತ್ತಾರಿಗೂ ಇಲ್ಲ ಎನ್ನುವುದನ್ನು ತೋರಿಸಲು ; ಭರತನ ಈ ಪರಾಕ್ರಮದೆದುರು ಎಲ್ಲರೂ ಶರಣಾಗಲೇ ಬೇಕು. ಇಷ್ಟಾದರೂ ತನಗೆ ಬಂದು ಶರಣಾದ ಮಾಗಧ, ನಮಿ, ವಿನಮಿ ಇತ್ಯಾದಿ ಮಂದಿಯನ್ನು ಭರತ ನೋಡುವ ದೃಷ್ಟಿಯೇ ಬೇರೆ. ಮೂಲದ ಭರತನ ಗರ್ವದ ನೋಟ ವಲ್ಲ ಇವನದು.

ಮೂಲದ ಕೃತಿಗಳಲ್ಲಿನ ಭರತನ ಬೂಟಾಟಿಕೆ, ವ್ಯಂಗ್ಯ, ಅಣಕ ಮಿಶ್ರಿತ ಮಾತು ಗಾರಿಕೆ, ಸುಳ್ಳಾಟಗಳು ರತ್ನಾಕರನ ಭರತನಿಗಿಲ್ಲ5. ಪೂರ್ವಪುರಾಣದಂತೆ ಬಾಹು ಬಲಿಗೆ ತನ್ನನ್ನು ಬಂದು ಭಜಿಸು ಎನ್ನುವುದಿಲ್ಲ. ಅಥವಾ ಆದಿಪುರಾಣದಂತೆ ನಯವಾಗಿ ಮಾತನಾಡುತ್ತಲೇ ಬಂದು ಎರಗಿ ತನ್ನಂಕೆಯಲ್ಲಿರಬೇಕೆಂದೂ ಹೇಳುವುದಿಲ್ಲ. ಅನುಜ ರೊಂದಿಗೆ ಕೂಡಿ ಬಾಳಬೇಕೆಂಬ ನಿಜವಾದ ಆಸೆಯುಳ್ಳವನು ರತ್ನಾಕರನ ಭರತ. ಆದ್ದ ರಿಂದ ಬಾಹುಬಲಿಯನ್ನು ಸಂತೋಷದಿಂದ ಎದುರಾಗಿ ಹೋಗಬೇಕೆಂಬುದಷ್ಟೇ ಭರತನ ಉದ್ದೇಶ. ಅನುಜರು ತಪಸ್ಸಿಗೆ ಹೋದರೂ ತೀರಾ ನೋಯುತ್ತಾನೆ. ಬಾಹುಬಲಿ ಯನ್ನು ಬೇಕಾದರೆ ಕೈಗಟ್ಟಿ ಚಿಕ್ಕಮ್ಮನ ಬಳಿಗೆ ಕೊಟ್ಟು ಕಳುಹಿ ಪಡೆಯರಿಕೆಯೊಳು ಭಂಗಿಸಿ ಬಿಡಬಲ್ಲ ಭರತ. ಆದರೆ ಅದಕ್ಕೆ ಹೇಸಿ ಬಾಹುಬಲಿ ಮನೆ ತೊರೆಯಬಹುದು. ಆದಕ್ಕಾಗಿ ಹೇಗೆ ಬಾಹುಬಲಿಯನ್ನು ನಯವಾಗಿ ವಿವೇಕಿಯಾಗಿ ಮಾಡಬಹುದೆಂದು ಕೇವಲ ಸಾಮಮಾರ್ಗವನ್ನೇ ಕುರಿತು ಯೋಚಿಸುತ್ತಾನೆ. ಮೂಲದ ಭರತನಂತೆ ಭುಜ

ಬಲಿಯ ಸಾಮರ್ಥ್ಯಕ್ಕೆ ಹೆದರಿ ಸಾಮಮಾರ್ಗವನ್ನು ಪ್ರಯೋಗಿಸಿದವನಲ್ಲ.6 ಅಲ್ಲದೆ ಸಾಮ ಮಾರ್ಗಕ್ಕೊಗ್ಗದ ಭುಜಬಲಿಯ ಮೇಲೆ ಮೂಲದಲ್ಲಿ ಭರತ 'ಸಾಪತ್ನನ ಭುಜಬಲವನ್ನೊ' ಒಮ್ಮೆ ಪರೀಕ್ಷಿಸಿಬಿಡುವ ಚಪಲದಿಂದ ಮುನ್ನುಗ್ಗುತ್ತಾನೆ. ಆದರೆ ರತ್ನಾಕರನ ಭರತ "ಮುನಿದರೆ ಚಂಡನಿಡುವಂತೆ ಹಿಡಿದೆತ್ತಿವನಧಿಗಿಡುವ ಶಕ್ತಿ"ಯಿದ್ದರೂ "ಅನುಜನ ಮೇಲೆ ಶಕ್ತಿಯ ತೋರಬಹುದೆ ಮೇ | ದಿನಿ ಮೆಚ್ಚುವುದೆ" ಎಂಬ ಲೋಕವಿವೇಕ ಹೊಂದಿದವನು. ಆದ್ದರಿಂದಲೇ ಬಾಹುಬಲಿಯನ್ನು ದಾರಿಗೆಳೆಯುವಲ್ಲಿ ಮೊದಲಿಂದ ಕಡೆಯವರೆಗೂ ಭರತ ಅನುಸರಿಸುವುದು ಸಾಮಮಾರ್ಗವೊಂದನ್ನೇ. ಇದು ಅವನ ಗಂಭೀರ ವ್ಯಕ್ತಿತ್ವಕ್ಕೆ ಸಮಂಜಸವಾದುದೂ ಹೌದು. ಅಲ್ಲದೆ ಬಾಹುಬಲಿ ತನ್ನ ಮೇಲೆ ಯುದ್ಧಕ್ಕೆ ಬರುತ್ತಿರುವುದು ನಿಷ್ಕಾರಣವಾದದ್ದು, ಅವಿವೇಕದಿಂದ ಕೂಡಿದ್ದು ಎಂಬುದೂ ಭರತನಿಗೆ ತಿಳಿದಿದೆ; ಅಲ್ಲದೆ ಇಲ್ಲಿನ ಬಾಹುಬಲಿ ಸಾಹಸ ಪರನೂ ಅಲ್ಲ; ಹಾಗಿರುವಾಗ ತಾನೂ ಪ್ರತೀಕಾರ ಮಾಡುವ ಸಲುವಾಗಿ ಬಾಹುಬಲಿಯ ಮೇಲೆ ಯುದ್ಧಕ್ಕೆ ಹೋಗುವುದರಲ್ಲಿ ಅರ್ಥವಿಲ್ಲ. "ಸಾಹಸಪರರ ನೋಯಿಸಬೇಕು ಸ್ವಕುಟುಂಬ| ದ್ರೋಹವ ಮಾಳ್ಪುದು ಗುಣವೆ" ಎಂಬ ತಿಳಿವೂ ರತ್ನಾಕರನ ಭರತನಿಗಿದೆ. ಪೂರ್ವ ಪುರಾಣ ಮತ್ತು ಆದಿಪುರಾಣಗಳ ಭರತನ ರಾಜ್ಯದಾಹ ಅವನನ್ನು ಎಂತಹ ಹೇಯ ಕೃತ್ಯಕ್ಕೂ ಅಳುಕುವಂತೆ ಮಾಡಲಾರದು. ಹಾಗೆ ನೋಡಿದರೆ ಮೂಲದಲ್ಲಿ ಸೋದರ ರೊಳಗೆ ಕಾದಾಡುವ ಹಾಗೆ ಮಾಡುವ ರಾಜ್ಯಲಕ್ಷ್ಮಿಯ ಚಾಂಚಲ್ಯದ ಬಗ್ಗೆ ಬಾಹು ಬಲಿಯೇ ಜುಗುಪ್ಸೆ ತಾಳುತ್ತಾನೆಯೇ ಹೊರತು ಭರತನಲ್ಲ.

ಮೂಲದ ಕೃತಿಗಳಲ್ಲಿ ಭರತನೇ ದೃಷ್ಟಿ–ಜಲ–ಮಲ್ಲಯುದ್ಧಗಳಲ್ಲಿ ತಮ್ಮನ ಕೈಯಲ್ಲಿ ಸೋಲುವಂತಹವನು. ಆದರೆ ರತ್ನಾಕರನ ಭರತ ಬಾಹುಬಲಿಗೆ ಸೋಲುವಂತಹನಲ್ಲ. 'ಕಣ್ಣು ಚುಚ್ಚುವ ಸೂರ್ಯರುಚಿಗೆ ಕುಗ್ಗದೆ ನೋಳ್ಪ | ಕಣ್ಣಾಳ್ಕೆ' ಭರತ ದೃಷ್ಟಿಯುದ್ಧ ದಲ್ಲಿ ಸೋಲುವುದಾದರೂ ಹೇಗೆ ? ಅಂಗಜನ ಬಣ್ಣ ಆ ಸೂರ್ಯರಶ್ಮಿಗಿಂತಲೂ ಮಿಗಿ ಲಾದದ್ದೇ ? ಹಾಗೆಯೇ 'ಮುಗಿಲಿಗೇ ನೀರಚೆಲ್ಲುವ ಶಕ್ತಿಯುಂಟು' ರತ್ನಾಕರನ ಭರತ ನಿಗೆ. 'ರೂಪುಗಳ ಹಲವುತಾಳ್ದು ಸ್ಮರನ ಅಗುಳಿಪ ಶಕ್ತಿಯುಂಟು' ಇಂತಹವನು ಬಾಹು ಬಲಿಯ (ಅದೂ ರತ್ನಾಕರ ಚಿತ್ರಿಸಿರುವಂತಹ ಬಾಹುಬಲಿಯು) ಕೈಯಲ್ಲಿ ಜಲಯುದ್ಧದಲ್ಲಿ ಸೋಲುತ್ತಾನೆಯೇ ? ಹಾಗೆಯೇ ಕಿರುಬೆರಳೊಂದರಿಂದಲೇ ಇಡೀ ಸೈನ್ಯವನ್ನೇ ತೂಗಾ ಡಿಸುವ ಭರತ ಮಲ್ಲಯುದ್ಧದಲ್ಲೂ ಬಾಹುಬಲಿಗೆ ಸೋಲುವವನಲ್ಲ. ಇಷ್ಟೆಲ್ಲಾ ಶಕ್ತಿ ಸಾಮರ್ಥ್ಯಗಳಿದ್ದರೂ ಬಾಹುಬಲಿಯ ಬಳಿ ತಾನೇ ಸೋಲುವವ ಎಂದುಕೊಳ್ಳುವ ಭರತನ ವಿನಯ ಮಿಗಿಲಾದುದು. ಮೂಲದ ಭರತ ಇಂತಹ ಶಕ್ತಿಗಳಿಲ್ಲದೆ ಬಾಹು ಬಲಿಯ ಬಳಿ ಸೋತೂ ಗೆಲುವಿನ ಅಪೇಕ್ಷೆಗಾಗಿ ಕಡೆಯ ಹಂತದಲ್ಲೂ ಚಕ್ರಪ್ರಯೋಗ ಮಾಡಿ ಗರ್ವಭಂಗಿತನಾಗಿ ತೀರಾ ಸಣ್ಣ ವ್ಯಕ್ತಿಯಾಗಿ ಬಿಡುತ್ತಾನೆ. ರತ್ನಾಕರನ ಭರತನಿಗೆ ಅಣ್ಣ–ತಮ್ಮಂದಿರ ನಡುವೆ ಸೋಲು–ಗೆಲುವುಗಳೆಂಬುದು ಅರ್ಥವಿಲ್ಲದ್ದು. ಒಂದು ವೇಳೆ ತನ್ನನ್ನು ಗೆಲ್ಲುವುದರಿಂದ ಬಾಹುಬಲಿ ಯಶಸ್ಸು ಎಂದು ಭಾವಿಸುವುದಾದರೆ

ಆ ಗೆಲವು ಅವನದೇ ಆಗಲಿ, ತಾನು ಅವನ ಕೈಕೆಳಗೆ ಒಬ್ಬ ಸಾಮಾನ್ಯ ರಾಜನಂತೆ ಇದ್ದು ಪೂರ್ಣ ಭೂಭಾರವನ್ನು ಬಾಹುಬಲಿಗೇ ವಹಿಸಿಕೊಡಲು ಸಿದ್ಧ ; ಭರತನ ವಿವೇಕ, ಉದಾರತೆ ಅಂತಹದ್ದು. ಭರತ ತನ್ನ ಈ ಮಾತಿಗೆ ಆದಿನಾಥನ ಕೆಂಜಜ್ಜೆ ಯಾಣೆಯನ್ನೂ ಇಟ್ಟು ಪ್ರಮಾಣೀಕರಿಸುವಂತಹ ಸತ್ಯವಂತ. ಯಾವ ತ್ಯಾಗಕ್ಕೆ ಬೇಕಾದರೂ ರತ್ನಾಕರನ ಭರತ ಸಿದ್ಧ. ಅವನಿಗೆ ಸೋದರಕಾಳಗವಾಗಿ 'ಪನ್ನಗಸುರ ಲೋಕದುತ್ತಮರು ಛಿ' ಎನ್ನದಿದ್ದರೆ ಸಾಕು, ಬಾಹುಬಲಿ ತನ್ನನ್ನು ತಪ್ಪು ತಿಳಿಯದಿದ್ದರೆ ಸಾಕು. ಅವನ ಮಹತ್ವದ ಬಯಕೆ ಅದೊಂದೇ. ಬಾಹುಬಲಿಯ ತಪೋಗಮನಕ್ಕೆ ಮರುಗುವ ರತ್ನಾಕರನ ಭರತನ ಚಿತ್ರಣವೊಂದೇ ಸಾಕು ಅವನ ಪೂರ್ಣ ವ್ಯಕ್ತಿತ್ವವನ್ನು ಕಟ್ಟಿ ಕೊಡುವುದಕ್ಕೆ.

ಹೀಗೆ ರತ್ನಾಕರ, ಭರತನಪಾತ್ರಕ್ಕೆ, ಪೂರ್ವಪುರಾಣ ಆದಿಪುರಾಣಗಳಲ್ಲಿಲ್ಲದ ಸತ್ತ್ವವನ್ನು ತಂದು ಕೊಡುವಲ್ಲಿ ಯಶಸ್ವಿಯಾಗಿದ್ದಾನೆ. ಆದರೆ ಬಾಹುಬಲಿಯ ಪಾತ್ರವನ್ನು ಕೀಳಾಗಿಸುವಲ್ಲಿ ಅವನು ಯಶಸ್ವಿಯಾಗಿದ್ದಾನೆಯೆ ಎಂಬ ಪ್ರಶ್ನೆ ಏಳುತ್ತದೆ. ಈ ಹಿಂದೆ ಗುರುತಿಸಿರುವಂತೆ ಬಾಹುಬಲಿಯ ನಡುವಳಿಕೆಗಳಲ್ಲಿ ಸಣ್ಣತನ, ಸುಳ್ಳುಗಾರಿಕೆ, ವಂಚನೆ ಇತ್ಯಾದಿಗಳನ್ನು ಕಾಣಿಸುವ ಪ್ರಯತ್ನ ಮಾಡಿದ್ದರೂ, ಅವುಗಳೆಲ್ಲವನ್ನೂ ಮರೆಸುವಂತೆ, ತೀರಾಗೌಣವಾಗಿಸಿಬಿಡುವಂತೆ ಬಾಹುಬಲಿಯ ಪಾತ್ರ, "ರಾಜೇಂದ್ರಗುಣವಾಕ್ಯಸಂಧಿ", "ಚಿತ್ತಜನಿರ್ವೇಗಸಂಧಿ"–ಈ ಭಾಗಗಳಲ್ಲಿ ಮಹಾನುಭಾವತತ್ವವನ್ನು ಪಡೆದು ಬಿಡುತ್ತದೆ. ಪೂರ್ವಪುರಾಣ, ಆದಿ ಪುರಾಣಗಳಿಗಿಂತ, ಈ ಸಂದರ್ಭದಲ್ಲಿ ಬಾಹುಬಲಿ 'ಸತ್ತ್ವ'ದಲ್ಲಿ ಹೆಚ್ಚಿನ ಮಹತ್ವವನ್ನು ಪಡೆದುಬಿಡುತ್ತಾನೆ.

ಭರತೇಶ ವೈಭವದಲ್ಲಿ "ರಾಜೇಂದ್ರಗುಣವಾಕ್ಯ ಸಂಧಿ" ಮತ್ತು "ಚಿತ್ತಜನಿರ್ವೇಗ ಸಂಧಿ"ಗಳು ರತ್ನಾಕರನ ಪ್ರತಿಭೆಯ ಮಹತ್ತಿಗೆ ಮತ್ತು ಗ್ರಥನಕೌಶಲಕ್ಕೆ ಸಾಕ್ಷಿಯಾಗಿವೆ. ಈ ಎರಡು ಸಂಧಿಗಳಲ್ಲಿಯೇ ಕಾವ್ಯಕ್ರಿಯೆ ತುಟ್ಟತುದಿಯನ್ನು ಮುಟ್ಟಿ ದಂಥದು.

ದೃಷ್ಟಿಯುದ್ಧ, ಜಲಯುದ್ಧ, ಮಲಯುದ್ಧಗಳ ಮೂಲಕ, ಜಯಾಪಜಯಗಳು ನಿರ್ಣಯವಾಗಬೇಕೆಂಬ ಬಗೆಗೆ ಭರತ ಮತ್ತು ಬಾಹುಬಲಿಗಳಿಬ್ಬರನ್ನೂ ಒಪ್ಪಿಸಲಾಗಿದೆ. ಅದರ ನಿಯಮಗಳನ್ನೂ ಒಪ್ಪಿಕೊಳ್ಳಲಾಗಿದೆ : ಎವೆಯಿಕ್ಕದೊಬ್ಬರೊಬ್ಬರ ನೋಡುವಾಗ ಯಾರು ಕಣ್ಣೆವೆಯಿಕ್ಕುತ್ತಾರೊ ಅವರು ಸೋತಂತೆ ; ಮೊಗೆದು ಹಸ್ತಗಳಿಂದ ಜಲವನ್ನೊಬ್ಬರೊಬ್ಬರು ಮೊಗಕೆ ಚೆಲ್ಲುವುದು, ಚೆಲ್ಲುವಾಗ ಮೊಗವಡ್ಡಗೆದರೆ ಅವನು ಸೋತಂತೆ ; ಮಲ್ಲಯುದ್ಧ ಮಾಡುವಾಗ ಒಬ್ಬನನ್ನೆತ್ತಿದಲ್ಲಿ ಸುಮ್ಮನೆ ನಿಲ್ಲಬೇಕು.

ರಣರಂಗಕ್ಕೆ ಬಂದು, ಆನೆಯಿಂದಿಳಿದು, ಸಿದ್ಧನಾಗಿ ಬಾಹುಬಲಿ ನಿಂತಿದ್ದಾನೆ ಪಸುರ್ಪರ್ವತ ನಿಂದಂತೆ.

ಇತ್ತ ಭರತೇಶ, ಏನು ಮಾಡಬೇಕೆಂದು ಯೋಚಿಸುತ್ತಿದ್ದಾನೆ ; ಬೇಕಾದರೆ, ಭರತ, ಬಾಹುಬಲಿಯನ್ನು ಕೈಕಟ್ಟಿ ಚಿಕ್ಕಮ್ಮನ ಬಳಿಗೆ ಕಳುಹಿಸಿಬಿಡಬಲ್ಲ ; ನೃಪದು

ಯುದ್ಧದಲ್ಲಿ ಅವನನ್ನು ಭಂಗಗೊಳಿಸಬಲ್ಲ ; ಎರಡರಲ್ಲಿ ಒಂದು ಮಾಡಿದರೂ ಮದನ ನಾಚಿ ಮನೆ ತೊರೆಯುತ್ತಾನೆ. ಅದ್ದರಿಂದ ಅದು ಭರತನಿಗೆ ಇಷ್ಟವಾಗದ ವಿಚಾರ. ಹಾಗಾದರೆ, ಈಗ ಏನು ಮಾಡಬೇಕು ? ಒಂದು ದಿವ್ಯೋಪಾಯ ಗುರುವಿನ ಮಹಾತ್ಮ್ಯೆಯಿಂದ ಅವನ ಅಂತರಂಗಕ್ಕೆ ಹೊಳೆಯುತ್ತದೆ. ಹಾಗೇ ಮಾಡುವುದಾಗಿ ನಿಶ್ಚಯಿಸಿದ. ಯುದ್ಧಕ್ಕೆ ತಕ್ಕ ಉಡುಪು ಧರಿಸಲಿಲ್ಲ. ಅವನು ಸಾಮಾನ್ಯ ಉಡುಪಿನಲ್ಲಿಯೇ ರಣರಂಗಕ್ಕೆ ಹೊರಟ. ಅವನ್ನು ನೋಡುತ್ತಿದ್ದವರು ಆಚ್ಚರಿಗೊಂಡರು.

ನೂರಿನ್ನೂಗು ಮಾರಲ್ಲಿ ಭರತ ಬರುತ್ತಿರುವುದನ್ನು ಬಾಹುಬಲಿ ಗಮನಿಸಿದ ; ಸನ್ನೆಯನ್ನು ಮಾಡಿದಾಗ, ಭರತನ ಮುಖ ನೋಡುವೆನೆಂದು, ಅಡ್ಡ ಮುಖವಿಕ್ಕಿ ನಿಂದ. ಜಗದಾಧಿನಾಯಕನ ಬಸುರಲ್ಲಿ ಬಂದು ನಾಡುಗರ ಮಧ್ಯದಲ್ಲಿ ಹೀಗೆ ನಿಂತು ಹಗರಣಕ್ಕೆಳಸಿದ ಬಾಹುಬಲಿಯನ್ನು ಕಂಡು ಭರತನಿಗೆ ಮರುಕವುಂಟಾಗುತ್ತದೆ. ಹತ್ತಿರಕ್ಕೆ ಬಂದು ಶಿಬಿಕೆಯಿಂದ ಇಳಿದು ಹತ್ತೆಂಟು ಮಾರು ದೂರದಲ್ಲಿ ಮದನನ ಇದಿರಲ್ಲಿ ನಿಂತ.

ಚಕ್ರಿಯ ದೇಹ ಐನೂರು ಮಾರುದ್ಧ ತೋರಿತು : ಅಂಗಜನ ಮೈ ಅದನ್ನು ಮೀರಿ ಇಪ್ಪತ್ತೈದು ಮಾರುದ್ಧ. ಅಂದರೆ, ಐನೂರು ಇಪ್ಪತ್ತೈದು ಮಾರುದ್ಧ ತೋರಿತು, ಅಣ್ಣನ ಮೀರಿ ನಡೆವುದ ತೋರುವಂತೆ. "ರಾಜಮೋಡಿಯೊಳು ಚಕ್ರೇಶ ನಿರ್ದನು ವಿಟ | ರಾಜ ಮೋಡಿಯೋಳಿರ್ದ ಮದನಾ."

ನಾಲ್ಕು ಮಾತಾಡಿ ನೋಡುವೆನೆಂದು ಅಕ್ಕಪಕ್ಕದವರಿಗೆ ತಿಳಿಸಿ,ಚಕ್ರಿ ಮಾತಾಡ ತೊಡಗಿದ ; ರತ್ನಾಕರ, ಭರತನ ಬಾಯಲ್ಲಿ ಭೂಮಿತೂಕದ ಮಾತುಗಳನ್ನಾಡಿಸುತ್ತಾನೆ. ; ಹಾಗೆ ಅವನು ಮಾತಾಡುವಾಗ ಬಾಹುಬಲಿ, ಬಹುಶಃ ಮೊದಲಿಗೆ ನಿರ್ಲಕ್ಷ್ಯದಿಂದ ಕೇಳುತ್ತಿದ್ದವನು, ಸಾವಧಾನವಾಗಿ, ಆವನ ಮಾತುಗಳನ್ನು ಗಂಭೀರವಾಗಿ ತೆಗೆದುಕೊಳ್ಳತೊಡಗುತ್ತಾನೆ. ಭರತನ ನಿಸ್ಪೃಹತೆಯ ಬಗೆಗೆ, ನಿಧಾನವಾಗಿ ಅವನಿಗೆ ಪರಿವೆ ಮೂಡತೊಡಗುತ್ತದೆ, ಭರತನ ಮಾತುಗಳು ಅವನ ಅಂತರಂಗದಲ್ಲಿ ಇಳಿಯ ತೊಡಗಿದಂತೆ :

ಮನಸಿಜಕೇಳಣ್ಣ ನಿನಗೆನಗಿಂದು ದು | ರ್ಮನದಿಂದ ಜಗಳವಪ್ಪುದಕೆ ||
ಘನವೇನು ಹೇಳು ನಿಷ್ಕಾರಣ ಕದನವ | ಜನಪರೆಸಗುವರೆಯೆಂದಾ ||
(೫೧–೭೦)

ನಿನ್ನೊಡವೆಯ ನಾನು ಕೊಂಡುದಿಲ್ಲಣ್ಣ ನೀ | ನೆನ್ನೊಡವೆಯ ಕೊಂಡುದಿಲ್ಲ ||
ಮುನ್ನಯ್ಯನಿರಿಸಿದಂದದಿ ರಾಜಯುವರಾಜ | ಸನ್ನಾಹದೊಳಗಿರ್ದೆವಲ್ತೆ ||
(೫೧–೭೧)

ಆಗಲಾಗಲಿ ದೋಷವಿಲ್ಲಣ್ಣ ತಮ್ಮಂದಿ | ರಾಗಿಯುನೋವಹುದದಕೆ

ಹಾಗದ ತೆರಿಗೆ ಬೇಕೆಂದು ನಾ ನಿನ್ನೂರ | ಬಾಗಿಲ್ಗೆ ಭಟರನಟ್ಟಿದೆನೆ ||

(೫೧–೭೨)

ನಿನ್ನೂರ್ಗೆನನ್ನ ವರೆಯ್ದುದಿದ್ದರೆ ಮಾಣ | ಲೆನ್ನೂರ್ಗೆ ನಿನ್ನವರೆಯ್ದೆ ||
ಅನ್ನಿಗರೆಂದು ಕಂಡುದೆ ಪ್ರಜೆಪರಿವಾರ | ಭಿನ್ನಾರ್ಥವೇಕಾಯ್ತು ನಿನಗೆ ||

(೫೧–೭೩)

ನುಡಿಯಲ್ಲಿ ನಾನಿನ್ನ ಬಿಟ್ಟಾಡಿದೆನೆ ನನ್ನ | ಪಡೆಯೊಳಗೊಬ್ಬರಾಡಿದರೆ ||
ಒಡಹುಟ್ಟಿದವನ ನೋಡುವೆನೆಂದು ಬರಹೇಳೆ | ಫಡಹುಸಿಯೆಂಬರೆ ನೀನು ||

(೫೧–೭೪)

ಮಾತಿಗೆ ತೊಡಗಿದ ಕದನಕಿಂದಿವನಿಗೆ | ಭೀತಿಯಾದುದೆನಬೇಡ ||
ಪೂತುಮರ್ಘುರೆಯೆನೆ ಕದನದೋರ್ಪೆನುಕೇಳು | ಪಾತಕಕಳೆವೆನು ಮೊದಲು||

(೫೧–೭೫)

ಪರನೊಬ್ಬನೆನ್ನೊಡನಿದಿರಾಗಳೆ | ಬರಲೊಡನಟ್ಟಿ ಮೆಟ್ಟುವೆನು ||
ಧರೆ ಮೆಚ್ಚದಣ್ಣಸೋದರರಕಾಳಗಕೆ ಮುಂ | ದೊರೆಯಬೇಕಂಕ ಪದ್ಧತಿಯ ||

(೫೧–೭೬)

ನಾನಿಷ್ಟು ನಿನ್ನಿಂದ ಹಿರಿಯನಾದುದರಿಂದ | ಸೇನೆಗೆ ಬರವೇಳ್ದೆನೈಸೆ ||
ನೀನೆನಗಗ್ರಜನಾದರೆ ನೀನಿರ್ದ | ಸ್ಥಾನ ಕೆಯ್ದದೆ ತಡೆದಿಹೆನೆ || (೫೧–೭೮)

ನನ್ನಗೆದ್ದುದರಿಂದ ನಿನಗೆ ಕೀರ್ತಿಯೆ ಹೇಳು | ನಿನ್ನಗೆಲ್ದೆನಗೊಂದು ಜಸವೆ ||
ಪನ್ನಗಸರಸುರಲೋಕದುತ್ತಮರುಭಿ | ಯೆನ್ನರೆ ಯೋಚಿಸಿ ನೋಡು ||

(೫೧–೮೨)

ಅದಕ್ಕೇನು ನೀನಿಂತು ಕದನಕೆಯ್ದಿದೆಯ್ಕೈಸೆ | ಕದನದೊಳ್ಗೆಲವೈಸೆ ಕಡೆಗೆ ||
ಬದೆಗರಂದದಿ ಹೋರಲೇತಕೆ ಗೆಲವು ನಿ | ನ್ನದು ಸೋಲವೆನಗೆ ಹೋಗೆಂದ ||

(೫೧–೮೩)

ದೃಷ್ಟಿವಿಜಯವೆಂತು ಪಂಚವಿಂಶತಿ ಚಾಪ | ದಷ್ಟುದ್ದ ಹೆಚ್ಚು ನೀನೆನ್ನ ||
ದೃಷ್ಟಿಸಬಹುದಾನು ನಿನ್ನ ನೋಳ್ಪಾಗೂರ್ಧ್ವ | ದೃಷ್ಟಿನೊಂದೆವೆ ಹೊಯ್ವುದು ||

(೫೧–೮೬)

ಜಲಯುದ್ಧದೊಳು ನಾನುಚೆಲ್ಲಿನಿನ್ನೆದೆವುಟ್ಟಿ | ಯಿಳಿವುದು ವಾರಿನೀನೆನ್ನಾ ||
ಮುಳುಗಿಸಿಬಿಡಬಹುದದರಿಂದ ನನಗಾಗ | ಚಳಿಗಡ್ಡಮೊಗವಹುದೆಂದಾ

(೫೧–೯೦)

ಭರತೇಶನೆಂದೆನಗಯ್ಯ ಪೆಸರನಿಡೆ । ಭರತ ಭೂಮಿಯ ನಾಳ್ದೆನಾನು ॥
ಕರೆದನುಭುಜಬಲಿಯೆಂದಂದು ನಿನ್ನನೀ । ನಿರನೆನ್ನನೆತ್ತುವೆಯೆಂದ ॥ (೫೧–೯೩)

ಅನುಜಾತಗ ಗ್ರಜ ಸೋತೆನೆಂಬಾಗ ಕ । ರ್‍ರನೆ ದಶದಿಕ್ಕು ಕಂದಿದುವು ॥
ಅನಲವಿಲ್ಲದೆ ಹೊಗೆ ಸೂಸಿತು ಸೂಸದೆ । ಮನುರತ್ನನೊಂದಾಡುವಾಗ ॥
(೫೧–೧೦೨)

ಬೆದರಿತು ಕಟಕ ಹಾ ಕಷ್ಟವನೆನೆದೆನೆಂ । ದೆದೆಯೊಳಂಗಜ ನೊಂದುಕೊಳುತ ॥
ಮದನ ಸಮ್ಮುಖವಾಗದೋರೆಯಾಗಿರೆ ಚಕ್ರಿ । ಮುದದೋರಿ ಮತ್ತಿಂದು
ನುಡಿದ (೫೧–೧೦೩)

ಕೇಳಣ್ಣ ಚಕ್ರವ ಬಯಸಿತಿಲ್ಲಾನ್ನುಶ । ಸ್ತ್ರಾಲಯದೊಳು ತಾನೆ ಹುಟ್ಟಿ ॥
ಏಳಿಸಿ ನಾಡಸುತ್ತಿಸಿತು ನಿಮ್ಮೆಲ್ಲರ । ಆಲಿಗೆ ನೋವಾಗುವಂತೆ ॥ (೫೧–೧೦೪)

ಈ ಸಿರಿಯನು ನಾನು ಪುಣ್ಯದ ಫಲವೆಂದು । ದಾಸೀನದೊಳು ನೋಡುತಿಹೆನು ॥
ಆಸೆಯಿಲ್ಲೆನಗೆ ನೀನೊಪ್ಪುಗೊಳ್ಳುಂಡಣ । ಭೂಸುದತೀಶ ನೀನಸ್ತೆ ॥
(೫೧–೧೦೫)

ಅರಸಾಗಿ ನೀನೂರೊಳಿರ್ದೆನೀನಟ್ಟದ । ದೊರೆಯಾಗಿ ನಾನೆಯ್ದಿ ನಿನ್ನ ॥
ಧರೆಯ ಸಾಧಿಸಿ ತಂದೆನೊಪ್ಪುಗೊಳ್ಳಿನ್ನ ಭೂ । ವರ ವೃಂದವಿದೆ ಕಟಕವಿದೆ ॥
(೫೧–೧೦೬)

ನಿನಗೆ ನಾನಣ್ಣನೆಂಬಕ್ಕರವಿಲ್ಲ ನೀ । ನನುಜನೆಂಬಕ್ಕರುಂಟಪ್ಪ ॥
ನನೆವಿಲ್ಲ ನಿನ್ನ ಭಾಗ್ಯವ ಕಣ್ಣುತುಂಬನೋ । ಳ್ಪೆನು ರಾಜಪದವಿಗಿಂತೊಪ್ಪು ॥
(೫೧–೧೦೭)

ಕೌಶಲಿಯೊಳು ನೀನು ಸುಖಬಾಳು ನನಗೊಂದು । ದೇಶವ ಕೊಟ್ಟು ಬೇರಿರಿಸು ॥
ಕ್ಲೇಶದ ಮಾತಲ್ಲ ಸಂತೋಷಪುರುಪರ । ಮೇಶನ ಕೆಂಬಜ್ಜೆಯಾಣೆ ॥
(೫೧–೧೦೮)

ರಂಜನೆಗಾಡಿದ ಮಾತಲ್ಲ ನಂಬುನಿ । ರಂಜನ ಸಿದ್ಧನೆ ಸಾಕ್ಷಿ ॥
ಕಂಜಾಸ್ತ್ರನನಗಿದರಂದ ಹೆಚ್ಚಿನ ಭಾಷೆ । ಜಂಜಾಟ ॥ (೫೧–೧೧೦)

ಚಕ್ರಿ, ವಿರಸವ ಬಿಡುಬಿಡೆಂದಾಗ ಮದನ ತಗ್ಗಿತ ಮನಸಿನೊಳು ಮುರಿದ ಮೋರೆಯೊಳಿರಲು, ಚಕ್ರರತ್ನವನ್ನು ಕರೆದ ಭರತ : ಪೂರ್ವ ಪುರಾಣ, ಆದಿ ಪುರಾಣಗಳಲ್ಲಿ ಭರತ, ಚಕ್ರ ಪ್ರಯೋಗ ಮಾಡುವುದು, ತನ್ನ ಗೆಲುವಿನ ಕಡೆಯ ಅಸ್ತ್ರವಾಗಿ, ಬಾಹುಬಲಿಯಿಂದ, ದೃಷ್ಟಿ–ಜಲ ಮಲ್ಲಯುದ್ಧಗಳಲ್ಲೆಲ್ಲಾ ಸೋತು ತುಂಬಿದ ಎರಡೂ ಕಡೆಯ ಸೈನ್ಯಸಮೂಹದೆದುರು ತಲೆತಗ್ಗಿಸುವಂತಾದಾಗ. ಭರತನಿಗೆ ಪ್ರಯೋಗಕ್ಕೆ ಉಳಿದಿದ್ದ ಕಡೆಯ ಅಸ್ತ್ರ ಈ ಚಕ್ರವೇ; ಆದರೆ ರತ್ನಾಕರನಲ್ಲಿ ಚಕ್ರರತ್ನವನ್ನು ಭರತ

ಪ್ರಯೋಗಿಸುವಂತೆ ತರುವ ಕವಿಯ ಉದ್ದೇಶವೇ ಬೇರೆಯದು. ಭರತ ಬಾಹುಬಲಿಯನ್ನು ಒಲ್ಲಿಸಲು ಚಕ್ರರತ್ನವನ್ನು ಪ್ರಯೋಗಿಸಿದರೂ ಕವಿ ಈ ಸನ್ನಿವೇಶವನ್ನು ಭರತ–ಬಾಹುಬಲಿಯರ ಪುಣ್ಯವನ್ನಳೆಯುವ ಮಾನದಂಡವಾಗಿ ಚಿತ್ರಿಸಿದ್ದಾನೆ. ಮೂಲದ ಬಾಹುಬಲಿಯಂತೆ ರತ್ನಾಕರನ ಬಾಹುಬಲಿ ಪುಣ್ಯವಂತನಲ್ಲ. ಭರತನೇ ಪುಣ್ಯವಂತ. ಇದರ ಸ್ಪಷ್ಟತೆಗೆ ಈ ಸನ್ನಿವೇಶವನ್ನು ಕವಿ ತಂದಿರುವಂತಿದೆ.

ಹೋಗು ಚಕ್ರವೆ ಭುಜಬಲಿಯನೀನೋಲೈಸೆ | ಹೋಗದೀತಗೆ ಪುಣ್ಯವುಂಟು
ಪೂಗಣೆಯಗೆ ಚಕ್ರ ಬೆಸಗೆಯ್ವ ಪುಣ್ಯವಿ | ಲ್ಲಾಗಿ ನಿಂದಿತು ಮುಂದೆ ಬಂದು ||
(೫೧–೧೧೨)

ಎಲೆಲೆ ಪಿಶಾಚ ಹೋಗೆಂದರೇತಕೆ ಹೋಗೆ | ಕಲಹ ನಿನ್ನಿಂದಾದುದೆನಗೆ ||
ಜಲಜಾಸ್ತ್ರನತ್ತ ಸಾರೆಂದು ನೂಕಿದರದು | ಬಳೆಜಾರುವಂತೆ ಜಾರಿದುದು
(೫೧–೧೧೩)

ಇವಗೆ ಪುಣ್ಯಕ್ಷಯವಾಯ್ತಿಲ್ಲ ಚಕ್ರ ಸಾ | ರುವ ಪುಣ್ಯ ಮನಸಿಜಗಿಲ್ಲ ||
ಅವನೀಶನೂಂಕಿದ ಸರಿತದೊಳಲ್ಪದೂ | ರವಸಾಗಿ ನಿಂದಿತಾ ಚಕ್ರ ||
(೫೧–೧೧೪)

ಕಳೆಗುಂದಿ ಕಾಮನ ಭುಜಸರಿತವೊಳತ್ತ | ತೊಲಗಿ ನಿಂದಿತು ಚಕ್ರರತ್ನ ||
ದಳನಡುಗಿತು ಧೂಮಕೇತುವೆದ್ದವು ಕೂಡೆ | ನೆಲಗುಡುಗಿತು ಘುಡು ಘಡನೆ ||
(೫೧–೧೧೫)

ಇನಬಿಂಬ ಕಂದಿ ಚೆಂಬಿಸಲಿಷ್ಟುವಾಸೆ ಮಾರ್ದನಿಗೊಟ್ಟುವೆಂಟುದಿಕ್ಕುಗಳು
ಘನಪುಣ್ಯಯುತನಲ್ಪಪುಣ್ಯಗೆ ಚಕ್ರವ | ತೂನೆದಟ್ಟಿ ಬೆಸಗೈದುದೆನಲು ||
(೫೧–೧೧೬)

"ಈ ಸಂದರ್ಭದಲ್ಲಿ ಭರತನನ್ನೆತ್ತಲು ಮಾಡಿದ ಪ್ರಯತ್ನ ವಿರೋಧಾಭಾಸ ಹಾಗೂ ಕೃತ್ರಿಮವಾಗಿ ಕಾಣುತ್ತದೆ"7 — ಎಂಬ ವಿಮರ್ಶೆ. ಈ ಸಂದರ್ಭವನ್ನು ಸೂಕ್ಷ್ಮವಾಗಿ ಗಮನಿಸದೆ ಹೇಳಿದ್ದಾಗಿ, ಅರ್ಥವಿಲ್ಲದ್ದಾಗಿದೆ.

ಈಗ, ಬಾಹುಬಲಿಯ ಅಂತರಂಗ ಪರಿವರ್ತನೆ ಸಂಪೂರ್ಣವಾಗುತ್ತದೆ. ಬಾಹುಬಲಿಯ ಪರಿವೆಗೂ ತನ್ನ ತಪ್ಪು, ಪಾಪಗಳ, ಅರಿವು ಚೆನ್ನಾಗಿ ಮೂಡಿದೆ :

"ಗರುಡ ಮಂತ್ರಕೆ ವಿಷವಿಳಿವಂತೆ ಭರತ ಭೂ | ವರನ ವಾಕ್ಯವ ಕೇಳಲಾಗಿ ||
ಜರಿಜರಿದಂಗಜಗೆತ್ತಿದ ಕೋಪ ಪೈ | ಸರಿಸಿತು ಹೃದಯ ತಂಪಾಯ್ತು ||
(೫೧–೧೧೯)

ಏರಿದ ಹೆಡೆಯಿಳಿವಂತೆ ಮುನ್ನಿನಗರ್ವ | ಜಾರಿತು ಮೃದುವಾಯ್ತು ಚಿತ್ತ ||
ಗಾರಾಯ್ತು ಕಾರ್ಯ ನನ್ನಣ್ಣನಿಗಿದಿರಾಗಿ | ದೂರ ಹೊತ್ತೆನಲಾ
ಹಾಯೆಂದ || (೫೧–೧೨೦)

ಈ ಪದ್ಯಗಳಲ್ಲಿ ಮದನನ ಗರ್ವವನ್ನು ಹೆಡೆಯೆತ್ತಿದ ಸರ್ಪಕ್ಕೂ, ಅವನ ಕೋಪ ವನ್ನು ವಿಷಕ್ಕೂ ಹೋಲಿಸಿರುವುದು ಉಚಿತವಾಗಿದೆ. ಭರತನ ಮಾತುಗಳೆಂಬ ಗರುಡ ಮಂತ್ರಕ್ಕೆ ಬಾಹುಬಲಿಯ ಕೋಪ–ವಿಷವಿಳಿಯಿತು ; ಏರಿದ ಹೆಡೆಯಂಥ ಗರ್ವಜಾರಿ ಚಿತ್ತ ಮೃದುವಾಯಿತು. ಒಲೆದ ಮೋರೆಯನ್ನು ಸಮ್ಮುಖವಾಗಿ ತಿರುಗಿಸಿದ ; ತೋಳಿನ ತೊಡಕನ್ನು ಕಳೆದ ; ಅಣ್ಣನ ಮುಖ ನೋಡದೆ, ನಾಚಿ ತಲೆಗುಸಿದ.

ಈ ಬಾಹುಬಲಿಯ ಅಂತರಂಗ ಪರಿವರ್ತನೆಯ ಚಿತ್ರಣ, ರತ್ನಾಕರನಿಗೆ ತನ್ನ ಪಾತ್ರಗಳ ಬಗೆಗೆ ಇರುವ Psychololological insight ಎಂಥದು ಎನ್ನುವುದಕ್ಕೆ ಉದಾಹರಣೆಯಾಗಿದೆ. ಇಲ್ಲಿಯವರೆಗೆ ಮಾತನಾಡುವವನು ಭರತನೆ ಹೊರತು, ಭರತನ ಮಾತಿಗೆ ಒಂದು ಪ್ರತ್ಯುತ್ತರವನ್ನೂ ಬಾಹುಬಲಿ ಕೊಡುವುದಿಲ್ಲ ; ಅನಂತರ ಅವನ ಅಂತರಂಗ ಪರಿವರ್ತನೆಯಾದುದನ್ನು ಬಾಹುಬಲಿಯ ಬಾಹ್ಯಪ್ರಕ್ರಿಯೆಗಳ ಮೂಲಕ ಸೂಚಿಸುತ್ತಾನೆ. ಇಲ್ಲಿಂದಲೇ ಬಾಹುಬಲಿಯ ಪಾತ್ರ ಏರತೊಡಗುತ್ತದೆ ; ಅವನ ಹಿಂದಿನ ಕೆಲವು ಅಸಂಬದ್ಧ ನಡುವಳಿಕೆಗಳು ಮರೆಯತೊಡಗುತ್ತವೆ. ಭರತನನ್ನು ಮೊದಲಿಗೆ ತಪ್ಪು ತಿಳಿದಿದ್ದರ ಪರಿವೆ ಮೂಡಿದ ಕ್ಷಣದಲ್ಲಿಯೆ, ಬಾಹುಬಲಿಗೆ, ತನ್ನ ನಡ ವಳಿಕೆಯ ಬಗೆಗೆ ಹೇಸಿಕೆ ಹುಟ್ಟುತ್ತದೆ ; ಅದು ಹುಟ್ಟುತ್ತಿದ್ದಂತೆ ತೋಳ ತೊಡಕನ್ನು ಕಳೆಯುತ್ತಾನೆ, ತಲೆಗುಸಿಯುತ್ತಾನೆ ; ಬಲಗೈಯ್ಯನಿಳುಹಿ, ನಾಸಿಕಾಗ್ರಹದಲ್ಲಿ ತನ್ನೆಡ ಗೈಯ್ಯ ಬೆರಳನ್ನು ಸಂಗೊಳಿಸಿ, ತನ್ನ ಜ್ಯೇಷ್ಠನ ಬಗೆಗೆ ತಾನು ನಡೆದುಕೊಂಡ ರೀತಿ ಯನ್ನು ಪರಾಮರ್ಶಿಸಿಕೊಳ್ಳತೊಡಗುತ್ತಾನೆ ; ಇಲ್ಲಿಂದ ಮುಂದೆ, ಕವಿ, ಬಾಹುಬಲಿಯ ಅಂತರಂಗದಲ್ಲಿ ಏನಾಗುತ್ತಿದೆ ಎನ್ನುವುದನ್ನು ಹೇಳುತ್ತಾನೆ :

ಪಾಪಿನಾನೆನ್ನಣ್ಣಗಿದಿರಾಗಿ ಕುಲಕೆ ಲೋ | ಕಾಪವಾದವ ತಂದೆನಕಟ ||
ಕೋಪವರ್ಗಗಳಾರ ಕೆಡಿಸವೆಂದಾ ಪುಷ್ಪ | ಚಾಪತನ್ನೊಳು ಮರುಗಿದನು ||
(೫೧–೧೩೫)

ಅಗ್ರಜಪಗೆಯೆ ಹಾಹಾನೋಡುಕಷ್ಟ ಕೆ | ಮ್ಮಗ್ರಹ ಕಾಡಿತು ನನ್ನ ||
ಉಗ್ರಭಾವದೊಳೊಡ್ಡಿನಿಂದೆನ್ನ ದೊಂದುದು | ರಾಗ್ರಹವನು ಸುಡಲೆಂದ ||
(೫೧–೧೩೬)

ದಿವ್ಯಾತ್ಮ ತತ್ವಾನುಭವಿಯ ನೋಡೆನ್ನ ಭ್ರಾ | ತೃವ್ಯನ ಭ್ರಾತೃಕ್ಯನೆಂಬ ||
ಭಾವ್ಯವಾಯ್ತೆನಗೆ ಹಾ ಹಾ ಕಷ್ಟವೆಂದು ಮ | ನೋ, ವ್ಯಥೆವಟ್ಟನಾಮದನ ||
(೫೧–೧೩೭)

ಸನ್ಮತವಲ್ಲದ ಕಾರ್ಯವ ನೆಗಳ್ದೆನ್ನ | ನುನ್ಮತ್ತನೆನ್ನದೆ ಪಿತನು ||
ಮನ್ಮಥನೆಂದೇಕೆ ಕರೆದನೆಂದೆದೆಯೊಳು | ದ್ಯನ್ಮೋಕ್ಷಗಾಮಿ ಚಿಂತಿಸಿದ ||
(೫೧–೧೩೮)

ಪೃಥುಕಷಾಯವನಾಂತೆನದು ತಾನೆ ಮನ್ಮನೋ | ವ್ಯಥೆಯಾಯ್ತು ನನ್ನ
ನಾನೀಗ ||
ಮಥನಿಸಲಾಗಿ ನುನ್ಮಥನೆನಬಹುದೆಂದು | ಶಿಥಿಲಕಷಾಯಚಿಂತಿಸಿದ ||
(೫೯–೧೩೯)

ಸೆಣಸುವೆನೆಂದೊತ್ತಿ ಬಹುದೆತ್ತ ಯುದ್ಧಕೆ | ರಣರಂಗದೊಳು ನಿಲ್ವುದೆತ್ತ ||
ಗುಣವಚನದಿ ಶಾಂತನಹುದೆತ್ತ ಕರ್ಮಕೆ | ಕ್ಷಣಕೊಂದು ಪರಿಣಾಮವತ್ತೆ ||
(೫೯–೧೪೦)

ಸಖಿಮಂತ್ರಿಗಳು ಪೇಳೆಕೇಳ್ದೆನೆ ಜನನಿ ಸ | ಮ್ಮುಖದೋರಿದೋಜೆಗೊಪ್ಪಿದೆನೆ
ನಿಖಿಳನಾರಿಯರಾಡೆ ಚಾಳ್ಯೈಸಿ ಬಂದ ದು | ರ್ಮುಖನಲಾಜಿನಜಿನಯೆಂದ ||
(೫೯–೧೪೧)

ಅದುಹೋಗಲೆನ್ನಣ್ಣನಾತ್ಮಜರೆನ್ನ ಕಾ | ಣ್ಬುದಕೆಂದುಬರೆ ಕಂಡು ಹೃದಯ ||
ಮೃದುವಾಯ್ತು ಕಲ್ಲಮಾನಸನಲ್ಲದಾನೊಬ್ಬ | ಮದನನೆ ಜಿನಜಿನಯೆಂದ ||
(೫೯–೧೪೨)

ನೀತಿವೇಳ್ವಾಗ ನಿನ್ನಣ್ಣ ನಿನ್ನಣ್ಣನೆಂ | ದೋತೆಲ್ಲರೊರೆವಾಗ ನಾನು ||
ಆತನೀತನು ಚಕ್ರಿಯೆಂದೆನಗ್ರಜನೆಂಬ | ಮಾತನಾಡಿದೆನೆ ಹಾಯೆಂದ ||
(೫೯–೧೪೩)

ಲೋಕದ ಮುಂದಣ್ಣ ಸೋಲವೆಂದನುನೂಕು | ತಾಕಾಯ್ತು ಚಕ್ರಕೆನ್ನಿಂದ ||
ತೂಕವೆ ನನಗಿದು ಲಘುತೆಯೆಂದಾತ್ಮನಿ | ರಾಕರಣೆಯ ಮಾಡಿಕೊಂಡ ||
(೫೯–೧೪೪)

ಅಪಕೀರ್ತಿಯಾಯ್ತಿದು ಮನೆಯಲ್ಲಿ ಹೋಗದು | ತಪಸಿಂದ ತೊಳೆಯಬೇಕೆಂದು||
ಜಪಿಸಿದನಂಗಜನದು ಮೋಹಕರ್ಮದೊಂ | ದುಪಶಮದನುಭವವತ್ತೆ ||
(೫೯–೧೪೫)

ಕಲ್ಲಂತೆ ನಾನಣ್ಣಗಿದಿರಾಗಿ ಮುಂದೆರ | ವಿಲ್ಲದೆ ಹೊಕ್ಕುಬಾಳ್ವಾಗ ||
ಸೊಲ್ಲಿಸರ್ಸೈಸೆ ಮನ್ಮಥ ಕಷ್ಟನೆಂದೆದೆ | ಯಲ್ಲಿ ಯೋಚಿಸರೆ ಭೂಭುಜರು ||
(೫೯–೧೪೬)

ಅಣ್ಣಗೆ ಮಲೆತನು ಮೊನೆಯಿಂದಲೆರಗುವ | ನೆಣ್ಣೆ ತಾಗಿದ ಬಿದಿರಂತೆ ||
ಬಣ್ಣಗಾರನು ಕಾಮನೆನ್ನರೆ ಸಭೆಯಲ್ಲಿ | ಕಣ್ಣಿಟ್ಟುಕಂಡ ಭೂಮಿಪರು ||
(೫೯–೧೪೭)

ತನ್ನ ನಡವಳಿಕೆಯಿಂದ ಅಪಕೀರ್ತಿಯಾದ ಮೇಲೆ ಅದನ್ನು ತಪಸ್ಸಿನಿಂದಲೆ ತೊಳೆಯಬೇಕೆಂದು ನಿರ್ಧರಿಸಿದ ; ದೀಕ್ಷೆಗೆಯ್ದುವುದೆ ಲೇಸೆಂದು ನೆನೆದ. ತನ್ನ ನಿರ್ಧಾರ

ವನ್ನು ಅಣ್ಣಾಜಿಗೆ ಮರೆಮಾಡದೆ ತಿಳಿಸುವ ನಿರ್ಧಾರ ಮಾಡಿದ. ಈಗ ಬಾಹುಬಲಿಗೆ ಭರತ ನಿಜವಾದ ಅಣ್ಣಾಜಿಯಾಗಿ ಕಾಣುತ್ತಿದ್ದಾನೆ ; ಅಹಂಕಾರದ ಚಕ್ರವರ್ತಿಯಾಗಿ ಅಲ್ಲ.

ಭರತನನ್ನು ತಲೆಯೆತ್ತಿ ನೋಡಿದ ; ಭಾವಶುದ್ಧವಾಗಿ "ದೇವರು ಕ್ಷಮಿಸವು ದೆನ್ನದು ತಪ್ಪೆಂದು" ಕೈ ಮುಗಿದ.

ಯುದ್ಧಕ್ಕಾಗಿ ಬಂದು, ರಣರಂಗದಲ್ಲಿ ಮೊಗದಿರುಹಿ, ಕೈಕಟ್ಟಿ, ಯುದ್ಧ ಸೂಚನೆ ಗಾಗಿ ನಿರೀಕ್ಷಿಸುತ್ತಾ ನಿಂತ ಬಾಹುಬಲಿ, "ದೇವರು ಕ್ಷಮಿಸುವುದೆನ್ನದು ತಪ್ಪು" ಎಂದು ಹೇಳುವಲ್ಲಿಗೆ ಬದಲಾಗುತ್ತಾನೆ. ಈ ಬದಲಾವಣೆಯ ಚಿತ್ರಣವನ್ನು ರತ್ನಾಕರ ನಿರ್ವಹಿ ಸಿರುವ ರೀತಿ ಮಹಾಕವಿ ಯೋಗ್ಯವಾಗಿದೆ. ಬೇರೆ ಯಾರಾದರೂ ಅಲ್ಪಸಾಮರ್ಥ್ಯವುಳ್ಳ ಕವಿಯಾಗಿದ್ದಿದ್ದರೆ ಈ ಸಂದರ್ಭ ಹಾಸ್ಯಾಸ್ಪದವಾಗಿ ಬಿಡಬಹುದಿತ್ತು. ಇಲ್ಲಿ ಪಾತ್ರಗಳ ಅಂತರಂಗದ ಸೂಕ್ಷ್ಮ ಚಲನವಲನಗಳನ್ನು ಹಿಡಿದಿಡುವಲ್ಲಿ ಕವಿ ಯಶಸ್ವಿಯಾಗಿದ್ದಾನೆ. ಆದ್ದರಿಂದಲೇ ಬಾಹುಬಲಿಯ ಈ ಅಂತರಂಗಪರಿವರ್ತನೆ, ಕಾವ್ಯ ಸಂದರ್ಭದಲ್ಲಿ ಸಂಭವ ನೀಯವಾಗಿ ಗೋಚರಿಸುತ್ತದೆ.

ಇಲ್ಲಿಂದ ಮುಂದೆ, ಬಾಹುಬಲಿಯ ಪಾತ್ರ ಉರ್ಧ್ವಗಾಮಿಯಾದದ್ದು, ಮತ್ತೆ ಹಿಂತಿರುಗಿ ಕೆಳಕ್ಕೆ ನೋಡುವುದಿಲ್ಲ ; ಬಾಹುಬಲಿಯ ಚೇತನ ಉರ್ಧ್ವಾಭಿಮುಖವಾಗಿ ಗಮಿಸತೊಡಗುತ್ತದೆ.

ಅಣ್ಣನನ್ನು ಕುರಿತು ಬಾಹುಬಲಿ ಮಾತನಾಡುತ್ತಾನೆ : ದೀಕ್ಷೆಗೆ ಅನುಮತಿ ಕೊಡೆಂದು ಅಣ್ಣನನ್ನು ಕೇಳುತ್ತಾನೆ ; ಭರತ ಯಾವುದಾಗ ಬಾರದೆಂದು ಈ ಮಾರ್ಗ ಹಿಡಿದನೊ, ಅದನ್ನೇ ಬಾಹುಬಲಿ ಆಯ್ಕೆ ಮಾಡಿಕೊಂಡದ್ದನ್ನು ಕಂಡು, ಭರತ ಬಾಹು ಬಲಿಯನ್ನು ತಡೆಯುವ ಪ್ರಯತ್ನ ಮಾಡುತ್ತಾನೆ. ಆದರೆ ಬಾಹುಬಲಿಯ ನಿರ್ಧಾರ ಅಚಲವಾಗಿದೆ :

ದೂಷಣವನು ತೊಡಗಿದೆ ನಾನುದೇವರು । ಭೂಷಣಗೈದಿರಿನನ್ನ ॥
ದೋಷವೆನ್ನನೆ ಪುದಿದಲೆವುದು ಪರಮಸಂ । ತೋಷದೇವರಿಗಾಗಲೆಂದ ॥
(೫೨-೧೩)

ಅಂತಾಡದಿರು ನೀನು ಬೇರೆ ನಾ ಬೇರೆಯೇನೀ । ನಿಂತು ನೋವರೆ ಕಬ್ಬುವಿಲ್ಲ॥
ಕುಂತೆಂಬುದೆನಗಿಲ್ಲ ನೀನಿಂತು ಮನದೊಳು । ಚಿಂತೆದೋರದಿರಣ್ಣಯೆಂದ ॥
(೫೨-೧೪)

ನನಗಾವ ಚಿಂತೆಯಿಲ್ಲಿನ್ನ ಬಿನ್ನಹವನೊಂ । ದನೆ ಪಾಲಿಪುದುದೇವರೆಂದ ॥
ಅನುಜ ಪೇಳೇನೆಂದ ದೀಕ್ಷೆಗೆ ಪೋಪೆನೊ । ಪ್ಪೆನುತ ಕೈ ಮುಗಿದನಂಗಜನು ॥
(೫೨-೧೫)

ಭೋಂಕನೆದ್ದನು ಚಕ್ರಿಗಳಗಳನೆಂತೆಂದು | ಪಂಕಜಾಯುಧ ದೀಕ್ಷೆಗೀಗ ||
ಮುಂಕೊಂಡು ಪೋಪೆನೆಂಬುದ ಮರೆಯೆಂದುತ | ಳಂಕದಿತಕ್ಕೈಸಿಕೊಂಡ ||
(೫೨–೧೬)

ದೀಕ್ಷೆಗೆಯ್ದಲದೇಕೆ ಭಂಗವೇನಾಯ್ತು ಕ | ಟಾಕ್ಷಿಸಿ ನುಡಿದೆನೆ ನಿನ್ನ ||
ಮೋಕ್ಷ ಕಾರ್ಯವ ಮುಂದೆ ಯೋಚಿಸಿ ಕೊಂಬವಿಂ | ದೀಕ್ಷೋಭೆ ಬೇಡಪ್ಪ
ಯೆಂದ || (೫೨–೧೭)

ಭಂಗವಿಲ್ಲೆನಗೆ ದೇವರಿಗೊಡ್ಡಿನಿಂದಾಜಿ | ರಂಗದಿ ಲಘುತೆದೋರಿದೆನು ||
ಭಂಗುರ ಕರ್ಮತಂತ್ರದಿನೊಂದೆನೆನ್ನುತ | ರಂಗ ಹೇಸಿತುಪೋಪೆನೆಂದ ||
(೫೨–೧೮)

ನನ್ನ ಸೋದರನೆನಗೊಡ್ಡಿ ನಿಂದರೆ ದೊಡ್ಡ | ಬನ್ನವೆ ನನಗೊಂದು ಲೀಲೆ ||
ಸನ್ನೆಯ ಭೇರಿ ಸುಮ್ಮನೆ ಹೊಯ್ದರದು ತಾನೆ | ಬನ್ನ ಮುಚ್ಚಿದ ಕುರುಹೆಂದ ||
(೫೨–೧೯)

ಶುಷ್ಕ ಚರ್ಮದ ಭೇರಿ ಸುಮ್ಮನೆಯ್ದಿದರೇನು | ನಿಷ್ಕರುಣದನಾನುನೆಗಳ್ದ ||
ದುಷ್ಕರಾಚರಣೆಯ ಲೋಕದ ಮುಖಭೇರಿ | ಕಿಷ್ಕಿಂಡವೆನೆಪೇಳ್ವುದೆಂದ ||
(೫೨–೨೦)

ಕಡುಲಘುವಾಕ್ಯದೇವರ ಜಿಹ್ವೆಯಿಂದಲಿ | ನುಡಿಸಿದೆ ಕಳೆಗುಂದಿ ಚಕ್ರ ||
ಕಡೆಸಾರ್ದುದೆನ್ನಿಂದ ಭಂಗಕಿಂತಿದೆ ಕಟ್ಟ | ಕಡೆಯಲ್ತೆ ಸಾಕು ಸಾಕೆಂದ ||
(೫೨–೨೧)

ಭರತ, "ದರ್ಪಕ ನಿನ್ನೇನ ಮಾಡಿದ್ದೈ ಹುಂಡಾವ | ಸರ್ಪಿಣಿ ದೋಷದೊಳೆನಗೆ || ತೋರ್ಪುದೀ ಭಂಗವೆಂದೊರೆದನಯ್ಯನು ನೀನು | ಬೇರ್ಪಟ್ಟು ನೆನೆಯದಿರು" ಎಂದು ಹೇಳಿದಾಗ, ಬಾಹುಬಲಿ ಹೇಳುವ ಮುಂದಿನ ಮಾತುಗಳು ಬಹಳ ಅರ್ಥಪೂರ್ಣ ; ಮತ್ತು ಈಗ ಬಾಹುಬಲಿಯ ವ್ಯಕ್ತಿತ್ವ ಯಾವ ನೆಲೆಗೇರಿದೆ ಎಂಬುದಕ್ಕೆ ದ್ಯೋತಕ :

"ಕಾಲದೋಷದೊಳಾದರೆನ್ನಿಂದ ಪ್ರಕಟವಾ | ದೀಲೋಕವಾರ್ತೆ ಜಾರುವುದೇ."

ಕಾಲದೋಷದಿಂದಲೇ ಅದು ಘಟಿಸಿರಬಹುದು ; ಆದರೆ, ಅದು ನಡೆದದ್ದು ತನ್ನಿಂದ ; ಅಂದರೆ, ತನ್ನ ಜವಾಬ್ದಾರಿಯೂ ಅದರಲ್ಲಿದೆ, ಎನ್ನುವಂತೆ ಬಾಹುಬಲಿ ನುಡಿಯುತ್ತಾನೆ. ಆದ್ದರಿಂದ "ತಂದೆಯ ಬಳಿಗಿಂದೆ ಪೋಪೆನೊಪ್ಪಣ್ಣಾಜಿ" ಎನ್ನುತ್ತಾನೆ. ಬಾಯಿ ತುಂಬಾ 'ಅಣ್ಣಾಜಿ' ಎನ್ನುತ್ತಾನೆ. "ಮುರಿದ ಚಿತ್ತವ ನಿನ್ನು ಮೊನೆ ಮಾಡಬಹುದೆ"—ತನಗೆ ಅನುಮತಿ ಕೊಡು ಎಂದು ಬೇಡಿಕೊಳ್ಳುತ್ತಾನೆ. ಭರತ ಪರಿಪರಿಯಾಗಿ, ತಮ್ಮನನ್ನು ಈ ನಿರ್ಧಾರವನ್ನು ಬದಲಿಸುವಂತೆ ಕೇಳಿಕೊಳ್ಳುತ್ತಾನೆ.

ಅಣ್ಣನಿಗಿದಿರೊಡ್ಡಿನಿಂದ ದೇಹವ | ಮಸಿಮಾಳ್ಪೆನುತಪಕೊಡ್ಡಿ ||

ಉಣ್ಣೆ ದುರಿವ ಕರ್ಮಗಳ ಸುಟ್ಟುಮೋಕ್ಷ ಕೆ । ಪೊಣ್ಣನೆಯ್ದುವೆನು ನೋಡೆಂದ॥
(೫೨–೨೭)

ಶಕ್ತಿಯೆಂಬುದು ದಿನದಿನಕೆ ಹೆಚ್ಚುವುದೆ ವಿ । ರಕ್ತಿ ಬೇಕೆಂದಾಗ ಬಹುದೆ ॥
ಮುಕ್ತಿಗೆ ತಕ್ಕ ಸಾಧನಕೂಡಿತಿದು ಮಹಾ । ಯುಕ್ತಿಯಲ್ಲವೆ ಕಳುಹೆಂದ ॥
(೫೨–೨೮)

ಬೇಡವಪ್ಪ ನೀನು ನಾನು ಕೆಲವು ದಿನ । ಕೂಡಿರ್ದು ಮತ್ತೆ ದೀಕ್ಷೆಯನು ॥
ಜೋಡಿಪ ನಿನ್ನ ನಾ ನಂಬಿದ್ದೆನೆನ್ನ ನೀ । ಡಾಡಿಹೋಹರೆ ಕಬ್ಬುವಿಲ್ಲ ॥
(೫೨–೨೯)

ಮುನ್ನೆದ್ದರುವರು ತೊಂಬತ್ತಮೂವರು । ನಿನ್ನೆ ಹೋದರು ನೀನು ಹೋಗೆ ॥
ತನ್ನಗಾಗದೆಯೆನ್ನ ಭಾಗ್ಯ ಬೇಡಣ್ಣ ನೀ । ನೆನ್ನ ನುಡಿಯ ಮುನ್ನಿಸೆಂದ ॥
(೫೨–೩೦)

ಆರಿದ್ದು ದೇವರಿಗೇನ ಮೂಳ್ಪರು ಸುಕು । ಮಾರರು ನೆರೆದಿರ್ಪರಲ್ತೆ ॥
ಶ್ರೀರಮ್ಯವಲ್ಲದೆ ಭಿನ್ನಗಾಗದು ದೀಕ್ಷೆ । ಗೋರಂತೆ ಕಳುಹೆನ್ನ ನೆಂದ ॥
(೫೨–೩೧)

ಕೊನೆಗೆ "ಪುರುನಾಥನಾಣೆ ದೇವರ ಪಾದದಾಣೆ ಶ್ರೀ । ಗುರುಹಂಸನಾಥನೆ ಸಾಕ್ಷಿ ॥ ಇರೆನುದೀಕ್ಷೆಗೆ ಕಳುಹ ಚಿತ್ತೈಸೆಂದು । ಚರಣಾಬ್ಜದೊಳು ಮಂಡೆಯಿಟ್ಟ ॥"

ಅದಕ್ಕೆ ಭರತ,

"ಕಂಬನಿಗುಳಗುಳನೊಕ್ಕವೇಳೆಳಣ್ಣ । ನೀ ಬಯಸಿದುದಾಗಲೆಂದ ॥" ಅಣ್ಣನ ಒಪ್ಪಿಗೆ ಸಿಕ್ಕಿದ್ದೇ ತಡ. ಬಾಹುಬಲಿ, ಎದ್ದವನೆ ಹೊರಟೇ ಬಿಟ್ಟ ;

"ಅಳುತಿರ್ದನಣ್ಣನು, ನಗುತ ಕೈ ಮುಗಿದವ । ಕಳಭ ಸಂಕಲೆಬಿಟ್ಟುವನಕೆ ॥ ತಳರ್ವಂತೆ ಸಂಗವ ತೊರೆದೆಯ್ದುತಿರ್ದನು । ದಳವೆಲ್ಲ ಬೆರಗಾಗಿ ನೋಡೆ ॥"

ಎಂಥ ಭವ್ಯ ದೃಶ್ಯ ಇದು ! ಬಾಹುಬಲಿ ಎಷ್ಟೆತ್ತರಕ್ಕೆ ಇಲ್ಲಿ ಬೆಳೆದು ಬಿಟ್ಟ ! ಪೂರ್ವದ ಬಾಹುಬಲಿಗಿಂತ ಇವನು ಮಹಾನುಭಾವನಾಗಿ ಬಿಟ್ಟ ! ಅಷ್ಟೇ ಅಲ್ಲ ಈ ಸಂದರ್ಭದಲ್ಲಿ ಪೂರ್ವಪುರಾಣ, ಆದಿಪುರಾಣಗಳ ಬಾಹುಬಲಿಗಿಂತ ಮಹೋನ್ನತನಾಗಿ ಬಿಟ್ಟಿದ್ದಾನೆ. ಕಾರಣ ಮೂಲದ ಆ ಕೃತಿಗಳಲ್ಲಿನ ಬಾಹುಬಲಿ ರಾಜ್ಯತ್ಯಾಗ ಮಾಡು ವಾಗ ಚಂಚಲಳಾದ ರಾಜ್ಯಶ್ರೀ ಬಗ್ಗೆ ಆಡುವ ಮಾತುಗಳು ಅವನ ವಿರಕ್ತಿಗೆ ಮೆರಗು ಕೊಡುತ್ತಿರುವಂತೆಯೇ, ರಾಜ್ಯ ತ್ಯಾಗ ಮಾಡಿ ಹೋಗುವ ಕ್ಷಣದಲ್ಲಿ ಬಾಹುಬಲಿಯೇ ಖುದ್ದಾಗಿ ನಿಂತು ತನ್ನ ಮಗ ಮಹಾಬಲಿಗೆ ಪಟ್ಟಕಟ್ಟಿ ಹೋಗುವ ಚಿತ್ರಣ ಬಾಹು ಬಲಿಯ ವಿರಕ್ತಿಯ ಭವ್ಯತೆಯನ್ನೇ ಕೆಳಗು ಮಾಡಿಬಿಡುತ್ತದೆ. ಆದರೆ ರತ್ನಾಕರನ ಬಾಹುಬಲಿ ಹಾಗಲ್ಲ. ಅವನಿಗೆ ತಪಸ್ಸೊಂದೇ ಪರಮ ಉದ್ದೇಶವಾಯಿತು. ಅವನಿಗೆ

ಮಗನ ಚಿಂತೆಯೂ ಇದ್ದಂತಿಲ್ಲ. ಮುಂದೆ ಮಹಾಬಲನಿಗೆ ಪಟ್ಟ ಕಟ್ಟುವವನು ಭರತನೇ ವಿನಾ ಬಾಹುಬಲಿಯಲ್ಲ. ಇದೂ ರತ್ನಾಕರನ ಗಮನಾರ್ಹ ಬದಲಾವಣೆ.

ಭರತನಂತೂ, ರತ್ನಾಕರನ ಕಾವ್ಯಾರಂಭದಿಂದ ಹಿಡಿದು ಮಾಡಿದ ಪ್ರಜ್ಞಾ ಪೂರ್ವಕ ಪ್ರಯತ್ನದ ಫಲವಾಗಿ, ಮೂಲದ ಭರತನಿಗಿಂತ ಸಂಪೂರ್ಣ ಭಿನ್ನ ; ಬಹು ಆಯಾಮಗಳುಳ್ಳ ವ್ಯಕ್ತಿತ್ವ ಅವನದು. ಇಂಥ ಭರತನಿಗೆ ಸರಿಸಮವಾಗಿ ಬಾಹುಬಲಿಯ ವ್ಯಕ್ತಿತ್ವವೂ ಕೊನೆಯಲ್ಲಿ ನಿಲ್ಲುತ್ತದೆ. ಈಗ ಇಬ್ಬರು ಮಹಾನುಭಾವರ ಮುಖಾಮುಖಿ; ಎಷ್ಟೇ ಪ್ರಜ್ಞಾಪೂರ್ವಕವಾಗಿ, ರತ್ನಾಕರ ಬಾಹುಬಲಿಯನ್ನು ಭರತನಿಗಿಂತ ಕೆಳಕ್ಕಿಳಿ ಯಲು–ಪ್ರಯತ್ನಿಸಿದ್ದರೂ, ಅದು ಅವನ ಹಿಂದಿನ ನಡವಳಿಕೆಗಳ ಚಿತ್ರಣದಲ್ಲಿ ಸಾಧ್ಯ ವಾಗಿದ್ದರೂ—ಇಲ್ಲಿ, ಕವಿಯ ಉದ್ದೇಶವನ್ನೂ ಮೀರಿ, ಮಹಾನುಭಾವನಾಗಿ ಅವನು ಬೆಳೆದುಬಿಟ್ಟಿದ್ದಾನೆ. ಕವಿಯ ಉದ್ದೇಶದ ಸೋಲು ಕಾವ್ಯದ ಗೆಲುವಾಗಿ ಪರಿಣಮಿಸಿದ್ದು ಇಲ್ಲಿನ ವೈಶಿಷ್ಟ್ಯವಾಗಿದೆ.

"ಮಂದಿಯ ಕಳುಹಿ ಕಣ್ಣೀರುಕ್ಕುವಂಗಜ | ನಂದನರುಗಳ ಕೈವಿಡಿದು ||
ಕಂದಿದ ಮೊಗ ಕಣ್ಣೊಳುಗುವ ಕಂಬನಿಯಿಂದ | ಮಂದಿರವೊಕ್ಕನಾಚಕ್ರಿ ||"

(೫೨–೪೯)

ಮುಂದೆ, ಯಶಸ್ವತಿದೇವಿ, ಸುನಂದಾದೇವಿಯರ ದುಃಖ ; ಬಾಹುಬಲಿಯ ರಾಣಿ ಯರ ಕಂಬನಿ ; 'ಪತಿಪೋದದೆಸೆಗೆ' ಅವರೂ ಹೋಗುವ ನಿರ್ಧಾರ ; ಅವರ ನಿರ್ಗಮನ; ಎಲ್ಲಿ ನೋಡಿದರೆ ಅಲ್ಲಿ ಶೋಕ ; ಆ ಶೋಕನಾದವ ಕೇಳಿ, ಭರತ "ಏಕೆ ಚಕ್ರವೀ ರಾಜ್ಯ ಪದವಿನು | ಹಾ ಕಷ್ಟ ಹಾ ಹಾ ಸುಡು " ಎಂದು ಪರಿತಪಿಸುವಂತಾಯಿತು.

"ಪಲರನೋಯಿಪದೊರೆತನದಿಂದ ಪಸರದ | ಕಲಕದ ಚಿತ್ತದಿಂದಾತ್ಮನ ನೋಡುತ |
ಪಲರ ಬಾಳುವೆ ಲೇಸು ಮತ್ತೆ || ಮಲೆಯೊಳಿಹುದೆ ಸುಖವೆಂದ || "

(೫೨–೧೧೩)

ಇಂಥ ಮಾತು ಭರತನಿಂದ ಬರುವಂಥ, ದುಃಖಾನುಭವ ಅವನಿಗಾಯಿತು. ರತ್ನಾಕರ, ಯಾವುದು ಜೀವನದ ಆದರ್ಶ ಎನ್ನುವುದಕ್ಕೆ ಇಹದಲ್ಲಿದ್ದು ಆತ್ಮಾನು ಸಂಧಾನದಲ್ಲಿ ನಿರತನಾಗಿರುವ ಯಾವ ಭರತನ ಜೀವನ ಉದಾಹರಣೆ ಎನ್ನುವಂತೆ ಚಿತ್ರಿಸಿದ್ದನೊ, ಅಂಥ ಭರತ "ಮಲೆಯೊಳಿಹುದೆ ಸುಖ" ಎಂಬ ಮಾತನ್ನು ಆಡುವಂತಾ ಯಿತು.

ಸಮಾಧಾನ ಮಾಡಿಕೊಂಡ ಭರತ ; ಶೋಕವನ್ನು ಕಳೆಯಕೊಳ್ಳಲು, "ಏಳದಿ ದ್ದನು ಮೂರು ದಿವಸ ಧ್ಯಾನದಲ್ಲಿ". ಚಿಕ್ಕಮ್ಮ ಬಂದು ಸಮಾಧಾನ ಮಾಡಿದಾಗ ಕಣ್ದೆರೆದೆದ್ದ ಭರತ.

ಈ ವಿಷಾದವೇ, ಮುಂದೆ ಭರತೇಶವೈಭವದ ಸ್ಥಾಯಿ ; ಅದು ಅನಂತರ ಲೋಕ

ವಿಷಾದವಾಗಿ ಮುಕ್ತಾಯವಾಗುವುದು, ಭರತನ ನಿರ್ವೇಗದಲ್ಲಿ ; ದಿವ್ಯವಿಷಾದವಾಗುವುದು ಅವನ ಮುಕ್ತಿಯಲ್ಲಿ.

ರತ್ನಾಕರ ಭರತ ಮತ್ತು ಬಾಹುಬಲಿಯರ "ಈ ಎರಡು ಪಾತ್ರಗಳನ್ನೂ ಮಹಾನುಭಾವರನ್ನಾಗಿಸಿ ಕಡೆದು ನಿಲ್ಲಿಸಿದ್ದಾನೆ"—ಎಂಬ ರಂಗಣ್ಣನವರ ಮಾತು ಸಮರ್ಪಕವಾಗಿದೆ. ಅದು ಸಾಧ್ಯವಾಗಿರುವುದೇ, ರತ್ನಾಕರನ ಭರತೇಶ ವೈಭವದ ಮಹತ್ತಿಗೆ ಕಾರಣವಾಗಿದೆ.

ಅಡಿಟಿಪ್ಪಣಿಗಳು

1 "ಬಾಹುಬಲಿ ಪ್ರಕರಣದಲ್ಲಿ ಮಹೋನ್ನ ತಿಗೇರಿದ್ದಾನೆ ರತ್ನಾಕರ. ಆ ಕಥಾನಕದಲ್ಲಿ ಅವನು ರನ್ನನಿಗಿಂತ ಮಿಗಿಲು. ಆಗ ಅವನಿಗೆ ಭಾರತದ ಪಂಪ, ಭಾರತದ ಕುಮಾರವ್ಯಾಸರ ಜೊತೆಯಲ್ಲಿ ತಾತ್ಕಾಲಿಕ ಪೀಠ. ಪಾಶ್ಚಾತ್ಯರಿಗೆ ಅತಿ ಪ್ರಿಯವಾದ ಗಂಭೀರ ನಾಟಕ (Tragedy)ವನ್ನು ಸುಲಕ್ಷಣವಾಗಿ ಹೋಲುತ್ತದೆ, ಆ ಪ್ರಕರಣ; ಪಂಪನ ಆದಿಪುರಾಣದಲ್ಲೂ ಅದೇ ಆಖ್ಯಾಯಿಕೆ ಬರುತ್ತದೆ. ಆದರೆ ನಿಯೋಜನೆ ಬೇರೆ. ಸಾಂಪ್ರದಾಯಿಕ ಕಥೆಯ ಅನುವಾದವನ್ನು ಕೊಡುತ್ತಾನೆ ಪಂಪ. ಭರತ ನೀಚ ಪಾತ್ರ ; ಭ್ರಾತೃಕಾಳಗ ನಡೆಸೇ ನಡೆಯುತ್ತದೆ ; ಗೆದ್ದರೂ ಜುಗುಪ್ಸೆಪಟ್ಟು ತಪಸ್ಸಿಗೆ ಹೊರಡುವ ಭುಜಬಲಿ ಉತ್ತಮಪಾತ್ರ. ಇಬ್ಬರಿಗೂ ಇಲ್ಲ ಬಹುಮುಖದ ವ್ಯಕ್ತಿಗುಣ, ಒಳತೋಟಿಗಳ ಚಿತ್ತಕ್ಷೋಭೆ, ಅಂತಃಕರಣದ ಸೂಕ್ಷ್ಮತ್ವ. ರತ್ನಾಕರ ಈ ಎರಡು ಪಾತ್ರಗಳನ್ನೂ ಮಹಾನುಭಾವರನ್ನಾಗಿಸಿ ಕಡೆದು ನಿಲ್ಲಿಸಿದ್ದಾನೆ.

—ಎಸ್. ವಿ. ರಂಗಣ್ಣ, ಶೈಲಿ, ೩. ರತ್ನಾಕರನ ಶೈಲಿ, ಪುಟ, 144–5

2 "ಸಂಪ್ರದಾಯವನ್ನು ಮುರಿದ ಮಾತ್ರಕ್ಕೆ ಎಲ್ಲವೂ ಮಹಾನುಭಾವವಾಗಲಾರದು, ... ಶತಮಾನಗಳಿಂದ ಮಹಾಕವಿಗಳ ಮತ್ತು ಮಹಾಶಿಲ್ಪಿಗಳ ಪ್ರತಿಭಾ ಮಾನಸ ಗಂಗೋತ್ರಿಯಲ್ಲಿ ಮಹೋನ್ನತ ಪಾತ್ರವಾಗಿ ರೂಪುಗೊಂಡು ಜನತಾಂರಂಗದಲ್ಲಿ ಅನುಪಮ ಪಾತ್ರವಾಗಿ ಚಿರಸ್ಥಾಯಿಯಾದ ಬಾಹುಬಲಿ ರತ್ನಾಕರನ ಕೈಯಲ್ಲಿ ತಿಳಿಗೇಡಿಯಾಗಿ ಹೊಣೆಗೇಡಿಯಾಗಿ, ಬಣ್ಣ ಕೆಟ್ಟಿರುವನೆಂದು ಹೇಳದೇ ವಿಧಿಯಿಲ್ಲ,"

—ಬ್ರಹ್ಮಪ್ಪ, ಭರತೇಶ ವೈಭವ, ಕವಿಕಾವ್ಯ ವಿಮರ್ಶೆ ಪುಟ ; ೮೭

". . . . . ರತ್ನಾಕರನು ಧೀರೊದಾತ್ತನಾದ ತನ್ನ ಕಥಾನಾಯಕನಿಗೆ ಹೆಚ್ಚು ಮಹತ್ತನ್ನು ಕಲ್ಪಿಸುವುದಕ್ಕಾಗಿ ಬಾಹುಬಲಿಯ ಪ್ರಭೆಯನ್ನು ತಗ್ಗಿಸಿದ್ದಾನೆ."

—ಟಿ. ಎಸ್. ಶಾಮರಾವ್, 'ಭರತೇಶ ವೈಭವ : ಸಂಗ್ರಹ ; ಪುಟ : 79

3 ಹೋಲಿಸಿ : ಜ್ಯೇಷ್ಠ ಃ ಪ್ರಣಮ್ಯ ಇತ್ಸೇತತ್ಕಾಮಮಸ್ತ್ವನ್ಯದಾ ಸದಾ ।
ಮೂರ್ಧ್ನ್ಯಾರೋಪಿತ ಖಡ್ಗಸ್ಯ ಕಃ ಪ್ರಣಾಮಇತಿ ಕ್ರಮ ಃ॥
(೩೫–೧೦೭)

ದೂತನೋ ದೂಯತೇ ಚಿತ್ತಮನ್ಯೋತ್ಸೇ ತಾನುವರ್ಣನೈಃ।
ತೇಜಸ್ವೀಭಾನುರೇವೈಕಃ ಕಿಮದ್ಯೋಷ್ಮ್ಯತಃ ಪರಂ ||
(೩೫–೧೦೮)

ಪಿರಿಯಣ್ಣಂಗೆಱಗುವುದೇಂ
ಪರಿಭವಮೋ ಕೇಱಿನೆತ್ತಿಯೊಳ್ ಬಾಳಂ ನಿ
ರ್ನೆರಮೂಱು ಚಲದಿನೆಱಗಿಸ
ಲಿರೆ ಭರತಂಗೆಱಗುವೆಱಕಮುಂಜಮೆಯಲ್ತೇ (; ೧೪–೭೫
ಆದಿಪು)

4 ಮುಂದಿಟ್ಟು ಚಕ್ರಮಂ ತಿರಿ
ತಂದುದುಮಂ ಪಾಳಮಿರ್ದು ಬೈಕಂಗೊಳ್ವಂ
ದಂದದೆ ಕೊಂಡುದುಮನದೇ
ನೆಂದುನ್ನತಿಮಾಡಿ ಪೊಗೞ್ವಯೊಳಗಱಿಯದುದೇ (೧೪–೬೭ ಆದಿಪು)

ಪಸಿದುಣ್ಣಪಟ್ಟು ಬಿರ್ದ
ರ್ದುಸಮುದ್ರದ ತಡಿಯೊಳುದಕಮಂತ್ರದ ಬಲದಿಂ
ನುಸುಳ್ದೊಡೆ ಜಳನಿಧಿಯುಂ ಕರು
ಣಿಸಿ ಕೊಟ್ಟರ್ ಧನಮನಂಜಿಕೊಟ್ಟರೆ ದಿವಿಜರ್ (೧೪–೬೮ ಆದಿಪು)

ಧರೆಯೊಳ್ ಕುಲಾಲಚಕ್ರಂ
ತಿರಿವಂತಿರೆ ತಿರಿಯೆ ಚಕ್ರಮದಱಿಯೆ ಬೞಿಯಿಂ
ಕಿರಿಕಿರಿದು ಮಾಡಿದಂ ಕುಲ
ಧರ ಕುಲದೊಳ್ ಪಿರಿದುಮಯಶಮಂ ನಿಮ್ಮರಸಂ (೧೪–೬೯)

5 ಕಲ್ಪಾನೋಕಹಸೇವೇವ ಕತ್ಸೇವಾಭೀಷ್ಟದಾಯಿನೀ ।
ಗುರುಕಲ್ಪೋಗ್ರಜಸ್ತಕ್ರೀ ಸಮಾನ್ಯಃ ಸರ್ವಥಾಪಿವಃ || (೩೪–೮೧)

ವಿದೂರಸ್ಥೈರ್ನ ಯುಷ್ಮಾಭಿರ್ಶ್ವೈಶ್ವರ್ಯಂ ತಸ್ಯರಾಜಕೆ ।
ತಾರಾಗಣೈರನಾಸನ್ನೈರಿವ ಬಿಂಬಂ ನಿಶಾಪಕೇಃ || (೩೪–೮೨)

ಸಾಮ್ರಾಜ್ಯಂ ನ್ಯಾಸ್ಯ ತೋಷಾಯ ಯುದ್ಧವದ್ಭಿರ್ವಿನಾ ಭವೇತ್ ।
ಸಹ ಭೋಗ್ಯಂ ಹಿ ಬಂಧೂನಾಮಾಧಿರಾಜ್ಯಂ ಸಕಾಂ ಮುದೆ || (೩೪–೮೩)

ಎನಗೊರ್ವಂಗುಪಭೋಗ್ಯ ಮಲ್ತು ವಸುಧಾಸಾಮ್ರಾಜ್ಯಮೋರಂತೆ ನಿ
ಮ್ಮನಿಬರ್ಗಂ ಪಿರಿಯಣ್ಣನೇಂ ಜನಕನೇನೆಂಬೊಂದು ಕೊಂಡಾಟದಿಂ
ವಿನಯಂ ಸಲ್ವುದು ತಾಮುಮಾಮುಮೊಡನಿರ್ಪಂ ಬರ್ಪುದೆಂಬೀಶಶಾ

ಸನವಮಂ ನೆತ್ತಿಯೊಳಾಂತು ಬನ್ನಿಮೆಱಗಿಂ ಚಕ್ರೇಶಪಾದಾಬ್ಜದೊಳ್ ||
(ಆದಿ ; ೧೪-೩೧ ಆದಿಪು)

ವ|| ಸ್ವಸ್ತಿಸಮಸ್ತವಿಶ್ವಪಾಧೀಶ್ವರಪುರುಪರಮೇಶ್ವರ ಚರಣಸರಸಿಜರಜೋರಂಜಿತಮಣಿಕಿರೀಟಮಕರಿಕಾಚಕ್ರಂ ಚಕ್ರರತ್ನಪ್ರಭಾಪ್ರಸಾದಿತನಿಖಿಲದಿಕ್ಚಕ್ರಂ ಭರತೇಶ್ವರ ಚಕ್ರವರ್ತಿ ನಿಜಪ್ರಿಯಾನುಜ ಬಾಹುಬಲಿಕುಮಾರನಂ ಪರಮಾ-ಶೀರ್ವಾದದಿಂ ಪರಸಿ ಕನಕ ಪತ್ರಾಂಕಿತ ತಾಮ್ರಕಲತಾಲಂಬನಂಗಳುಂ ವಿಜಯೋತ್ಸವತೋರಣಸ್ತಂಭಂಗಳುಂ ವೀರಶ್ರೀಭುಜಂಗೀ ಸಮಾಶ್ರಯಶ್ರೀಖಂಡಕಾಂಡಗಳುಮಪ್ಪ ದೋರ್ದಂಡಂಗ ಳಿಂದಮತಿನಿಬಿಡಾಲಿಂಗನಂಗೆಯ್ದು ಕಾರ್ಯಮಂ ಬೆಸಸಿರ್ದ

6 ಖರಕಿರಣಸ್ಫುರಿತಕ್ಕಿದಿ
ರುರಿವಂತಿರೆ ಸೂರ್ಯಕಾಂತಮೆನ್ನೀತೇಜ
ಸ್ಫುರಿತಕ್ಕೆ ಸೆಣಸಿನೊಳ್ ಮಾ
ಱುರಿಗುಂ ಸೈರಿಸದ. ತೇಜಮಾ ಭುಜಬಲಿಯಾ (೧೪-೪೨ ಆದಿಪು)

7 ಡಾ. ಬಿ.ಎಸ್. ಕುಲಕರ್ಣಿ, ರತ್ನಾಕರವರ್ಣಿ – ಕವಿ ಕಾವ್ಯ ವಿಚಾರ ; ಪಂಪ-ರತ್ನಾಕರರಲ್ಲಿ 'ಭರತ-ಬಾಹುಬಲಿ'. ಪುಟ : ೨೬

ಅನು : ಎಚ್. ಎಸ್. ಚನ್ನಯ್ಯ

ಚಾರ್ಲ್ಸ್ ಬಾದಲೇರನ ಮೂರು ಪದ್ಯಗಳು

ಸೌಂದರ್ಯ ಸಂಕೀರ್ತನೆ

ಏ ಸೌಂದರ್ಯವೇ, ಸ್ವರ್ಗದೆತ್ತರದಿಂದಿಳಿದು ಬಂದವಳೊ ನೀನು
ಅಥವಾ ತಳವಿಲ್ಲದ ನರಕದಾಳದಿಂದಲೊ ?
ನಿನ್ನ ನೋಟ ದಿವ್ಯ ಮತ್ತು ಸೈತಾನಿಕ ;
ಸತ್ಕಾರ್ಯ ಮತ್ತು ದುಷ್ಕೃತ್ಯ ಪ್ರಚೋದಕ :
ದ್ರಾಕ್ಷಾ ಮದ್ಯಕ್ಕೆ ಸಮ ಅದು.

ನಿನ್ನ ಕಣ್ಣುಗಳಲ್ಲಿ ಸೂರ್ಯಾಸ್ತ ಸೂರ್ಯೋದಯಗಳಿವೆ ;
ನೀನು ಬಿರುಗಾಳಿ–ಸಂಜೆಯಂತೆ ಸುಗಂಧ ಬೀರುತ್ತೀ ;
ನಿನ್ನ ಮುತ್ತುಗಳು ಮದಿರೆಗೆ ಸಮ ;
ನಿನ್ನ ಬಾಯೊಂದು ಆ್ಯಂಫೋರಾ :–ಇವು
ವೀರರನ್ನ ಹೇಡಿಗಳನ್ನಾಗಿಸುತ್ತವೆ ;
ವೀರರನ್ನಾಗಿಸುತ್ತವೆ ರಣಹೇಡಿಗಳನ್ನ.

ನೀನು ನರಕದಾಳದಿಂದೆದ್ದು ಬಂದೆಯೊ
ನಕ್ಷತ್ರಗಳಿಂದಿಳಿದು ಬಂದೆಯೊ ?
ಮರುಳಾದ ವಿಧಿ ನಿನ್ನ ಲಂಗದಂಚನ್ನು
ನಾಯಿಯಂತೆ ಅನುಸರಿಸುತ್ತದೆ ;
ನೀನು ಆನಂದದ–ನಾಶದ ಬಿತ್ತ ಬಿತ್ತುತ್ತೀ.
ಎಲ್ಲವನ್ನಾಳುವೆ ನೀನು

ಹೆಣಗಳ ತುಳಿದು ನಡೆಯುವೆ ಸತ್ತವರನ್ನಣಕಿಸುತ್ತಾ,
ರೌದ್ರವೊಂದೆ ನೀ ತೊಡುವ ತೊಡವಲ್ಲ ;
ಕೊಲೆ, ನಿನ್ನ ಹೊಕ್ಕಳ ಮೇಲೆ ನೀನು

ಅಭಿಮಾನದಿಂದ ಧರಿಸಿ ಮೆರೆವ
ಥಳಕು ಪಳುಕಿನ ಒಡವೆ.

ಕೂದಲು

ಅವಳ ಕತ್ತಿನ ಮೇಲೆ ಅಲೆಯಲೆಯಾಗಿ
ಉರುಳುರುಳುವ ತುಪ್ಪುಳ ಪೊದೆಗೂದಲೆ !
ಉದ್ವೇಗರಹಿತ ಗಂಧವೆ, ಗುಂಗುರು ಕೂದಲೆ ;
ಎಂಥ ಸುಖ ! ನಿಮ್ಮ ಕಪ್ಪಲ್ಲಿ ನೆನಪುಗಳ ತುಂಬಿ
ಈ ಕೋಣೆಯಲ್ಲಿ ಚೆಲ್ಲಾಡುತ್ತಿದ್ದೀರಿ ;
ಬಾವುಟವಾಗಿ ಆಡಿಸುತ್ತೇನೆ ನಿಮ್ಮನ್ನು ಗಾಳಿಯಲ್ಲಿ

ಸುಡುವ ಆಫ್ರಿಕಾ, ಪ್ರಶಾಂತ ಏಷ್ಯಾ
(ಇಲ್ಲಿರದ ದೂರದ ಆ ಪ್ರಪಂಚ)
ಸುವಾಸನೆಯ ಕಾಡಿನೀ ಗಾಢ ಕತ್ತಲಲ್ಲಿ
ಬದುಕುತ್ತವೆ ; ಇತರ ಚೇತನಗಳು
ಸಂಗೀತದಲೆ ಮೇಲೆ ತೇಲುವಂತೆ,
ನನ್ನ ಚೇತನ, ನಿಮ್ಮ ಸುಗಂಧದಲೆ ಮೇಲೆ
ಪ್ರಮತ್ತವಾಗಿ ತೇಲುತ್ತದೆ.

ಜೀವರಸ ಚಿಮ್ಮುವ ವೃಕ್ಷಗಳು, ಮನುಷ್ಯರು,
ಸುಡುವ ಆ ಬೆಳಕಿನಲ್ಲಿ ಮೂರ್ಛೆ ಹೋಗುವಲ್ಲಿಗೆ
ಯಾನ ಮಾಡುತ್ತೇನೆ : ತೊಂಗುವ ಸುರುಳಿಗಳೆ
ನನ್ನ ಕಡಲಾಗಿ, ನನ್ನನ್ನಲ್ಲಿಗೊಯ್ಯುವ
ಹೊರಳು–ತೆರೆಗಳಾಗಿ, ಬಿರುಗಾಳಿಗಳಾಗಿ ;
ಕಪ್ಪುತೊರೆ ನನಗಾಗಿ, ಕೂವೆಗಳ, ದೋಣಿಗಳ,
ಜ್ವಾಲೆಗಳ ಪಟಗಳ ಹಿಡಿದಿಟ್ಟಿದೆ.

ಪ್ರತಿಧ್ವನಿಸುವ ಆ ಬಂದರಲ್ಲಿ ನನ್ನ ಚೇತನ
ಕಪ್ಪು ಸುಗಂಧದ ನಾದವನ್ನ ಹೀರಿ ಕುಡಿಯಲಿ;
ಹಡಗುಗಳು ಸುವರ್ಣದ ಕೆನ್ನೀಲಿ ನದಿಗಳಲ್ಲಿ
ತೇಲುತ್ತಾ, ನೀಳತೋಳುಗಳನ್ನು ಚಾಚಿ
ಆಗಸದ ವೈಭವವನ್ನಾಲಂಗಿಸಲು
ಎಲ್ಲಿ ಬೆಚ್ಚನೆಯ ಬಿಸಿ ನಿರಂತರ
ಕಂಪಿಸುತ್ತದೆಯೊ ಅಲ್ಲಿ ತೆರೆಯುತ್ತವೆ

ಸುಖ ಹೀರಿ ಅರೆಮತ್ತನಾಗಿ, ಅವಳನ್ನಾವರಿಸಿರುವ
ಕೂದಲ ಕಪ್ಪು ಕಡಲಲ್ಲಿ ನನ್ನ ಮುಖ ಮುಳುಗಿರಲು,
ಪುಟ್ಟ ಅಲೆಗಳು ನೇವರಿಸುತ್ತವೆ: ನನ್ನ ಚೇತನ,
ಅನಂತ ಸುಗಂಧದ ಒಲಿತಗಳಲ್ಲಿ ಸೃಷ್ಟಿಯಾಲಸ್ಯವನ್ನ
ಬಿರುಗಾಳಿಯು ಭಯವಿಲ್ಲದೆ ಅಳೆಯುತ್ತದೆ

ನೀಲಕೇಶಗಳೇ–ನೆರಳೆಸೆವ ಗೂಡಾರಗಳಂತೆ
ಆಗಸದ ನೀಲಿಯನ್ನ ಸುತ್ತಮುತ್ತ ಚೆಲ್ಲುತ್ತೀರಿ ;
ನಿಮ್ಮ ಕೊನೆಜಾಡ ಹಿಡಿದು ನಡೆದಾಗ
ತೆಂಗಿನೆಣ್ಣೆಯ ಗಂಧ, ಕಸ್ತೂರಿ ಟಾರೆಣ್ಣೆಗಂಧದೊಂದಿಗೆ
ಸಂಲಗ್ನವಾದ ಆ ತಾಣದಲ್ಲಿ
ಅರೆಮತ್ತನಾಗಿ, ಕಕ್ಕಾಬಿಕ್ಕಿಯಾಗಿ ತತ್ತರಿಸುತ್ತೇನೆ.

ನನ್ನ ಕೈ ನಿನ್ನ ಸಮೃದ್ಧ ಕೇಶ–ಕೇಸರ ಪ್ರಪಂಚದಲ್ಲಿ
ನಿನ್ನ ಆಲಸ್ಯವಳಿದು ನನ್ನ ಕಾರ್ಯಕ್ಕೆ ಚುರುಕಾಗುವಂತೆ
ವಜ್ರವೈಢೂರ್ಯ, ರತ್ನ ಪಚ್ಚೆಗಳ ಬಿತ್ತುತ್ತವೆ ;
ನೀನೆನ್ನ ಕನಸುಗಳ ಓಯಿಸಿಸ್, ಅಲ್ಲಿ,
ನೆನಪಿನ ನೀಳದ್ರಾಕ್ಷಿಗಳು ಬೆಳೆದು ತೊನೆಯುತ್ತವೆ.

ಸೈತಾನನ ಸ್ತೋತ್ರ ಗೀತೆ

ಸರ್ವಜ್ಞ ಸೈತಾನ್, ದಿವ್ಯಪುರುಷರಲ್ಲಿ ಅತ್ಯಂತ ಚೆಲುವ
ವಿಧಿಯಿಂದ ವಂಚಿತನಾಗಿ ಪೂಜೆಗೆ ಎರವಾದವ
ದೇವ, ಸೈತಾನ್ ನನ್ನ ಕೊನೆಯಿಲ್ಲದ ಸಂಕಟಕ್ಕೆ ಕನಿಕರಿಸು.

ಸ್ವರ್ಗಚ್ಯುತರಾಜಕುವರ ಅನ್ಯಾಯವಾಯಿತು ನಿನಗೆ
ಸೋಲಿನಲ್ಲೂ ದೃಢವಾಗಿ ನಿಂತವ ನೀನು
ದೇವ, ಸೈತಾನ್ ನನ್ನ ಕೊನೆಯಿಲ್ಲದ ಸಂಕಟಕ್ಕೆ ಕನಿಕರಿಸು.

ಅಧೋ ಲೋಕದ ಎಲ್ಲ ಬಲ್ಲ ಸಾಮ್ರಾಟ ನೀನು ;
ಮಾನವರ ಬೇಗುದಿಗಳನ್ನಾರಿಸುಪವ ನೀನು ;
ದೇವ, ಸೈತಾನ್ ನನ್ನ ಕೊನೆಯಿಲ್ಲದ ಸಂಕಟಕ್ಕೆ ಕನಿಕರಿಸು.

ನೀತಿಭ್ರಷ್ಟ ಬಹಿಷ್ಕೃತರಾದ ನಮಗೆ
ಪ್ರೀತಿಯ ಮೂಲಕ ಸ್ವರ್ಗದ ರುಚಿ ತೋರಿಸುವವ ನೀನು
ದೇವ, ಸೈತಾನ್ ನನ್ನ ಕೊನೆಯಿಲ್ಲದ ಸಂಕಟಕ್ಕೆ ಕನಿಕರಿಸು.

ನಿನ್ನ ಆದಿಪ್ರೇಯಿಸಿ 'ಮೃತ್ಯು'ವಿನಲ್ಲಿ
ಮೋಹಕ ಹುಚ್ಚ 'ಬರವಸೆ'ಯನ್ನ ಪಡೆದೆ ;
ದೇವ, ಸೈತಾನ್ ನನ್ನ ಕೊನೆಯಿಲ್ಲದ ಸಂಕಟಕ್ಕೆ ಕನಿಕರಿಸು.

ತನ್ನ ಗಲ್ಲುಕಂಭದ ಸುತ್ತಮುತ್ತಿದ ಇಡೀ ಜನಾಂಗ ಜಂಗುಳಿಗೆ
ಶಪಿಸುವ ಪ್ರಸನ್ನ ಸೊಕ್ಕನ್ನ ಪಾಪಿಗೆ ಕೊಟ್ಟವನು ನೀನು ;
ದೇವ, ಸೈತಾನ್ ನನ್ನ ಕೊನೆಯಿಲ್ಲದ ಸಂಕಟಕ್ಕೆ ಕನಿಕರಿಸು.

ನಿನಗೆ ಗೊತ್ತು ಹೊಟ್ಟೆಕಿಚ್ಚಿನ ಆ "ದೇವ" ತನ್ನೆಲ್ಲ ಅಮೂಲ್ಯ ಮುತ್ತು ರತ್ನಗಳನ್ನು
ಯಾವ ಗುಹ್ಯಾತ್‌ಗುಹ್ಯದಲ್ಲಿಟ್ಟಿದ್ದಾನೆನ್ನುವುದು ;
ದೇವ, ಸೈತಾನ್ ನನ್ನ ಕೊನೆಯಿಲ್ಲದ ಸಂಕಟಕ್ಕೆ ಕನಿಕರಿಸು.

ನಿನ್ನ ಹರಿತವಾದ ದೃಷ್ಟಿಗೆ ಗೊತ್ತು ಯಾವ ಗುಪ್ತ ಆಳದ ಆಯುಧಾಗಾರಗಳಲ್ಲಿ
ಲೋಹದ ನೆಲೆಗಳು ಅಡಗಿವೆ ಎನ್ನುವುದು.
ದೇವ, ಸೈತಾನ್ ನನ್ನ ಕೊನೆಯಿಲ್ಲದ ಸಂಕಟಕ್ಕೆ ಕನಿಕರಿಸು.

ಎತ್ತರದ ಸೌಧಗಳಲ್ಲಿ ಅಲೆಯುವ ನಿದ್ದೆ-ನಡಿಗೆಯುವರಿಗೆ
ಪ್ರಪಾತಕ್ಕೆ ಬೀಳದಂತೆ ನಿನ್ನ ಬೃಹತ್ ಹಸ್ತಗಳು ಸೇತುವೆಯಾಗುತ್ತವೆ;
ದೇವ, ಸೈತಾನ್ ನನ್ನ ಕೊನೆಯಿಲ್ಲದ ಸಂಕಟಕ್ಕೆ ಕನಿಕರಿಸು

ಕುದುರೆಗೊರಸುಗಳಡಿಗೆ ಸಿಕ್ಕ ಇರುಳಲೆವ ಕುಡುಕರ ಎಲುಬುಗಳನ್ನು
ಮುರಿಯದಂತೆ ನಮ್ಯಗೊಳಿಸುವೆ ಮಾಂತ್ರಿಕ ಪ್ರಭುವೆ
ದೇವ, ಸೈತಾನ್ ನನ್ನ ಕೊನೆಯಿಲ್ಲದ ಸಂಕಟಕ್ಕೆ ಕನಿಕರಿಸು.

ಹೆಣ್ಣಿನ ಕಣ್ಣು ಹೃದಯಗಳಲ್ಲಿ ಗಾಯದ ಪಥವನ್ನು
ಚಿಂದಿಯ ಬಯಕೆಯನ್ನು ಬಿತ್ತುವೆ ನೀನು.
ದೇವ, ಸೈತಾನ್ ನನ್ನ ಕೊನೆಯಿಲ್ಲದ ಸಂಕಟಕ್ಕೆ ಕನಿಕರಿಸು

ಬೃಷ್ಟರ ಊರುಗೋಲೆ, ನಿರ್ಮಾಪಕರ ದೀಪವೆ,
ಪಿತೂರಿಗರ, ಗಲ್ಲಿಗೇರುವವರ ಪಾಪ ನಿವೇದನೆಯನ್ನಾಲಿಸುವ ಪುರೋಹಿತನೆ
ದೇವ, ಸೈತಾನ್ ನನ್ನ ಕೊನೆಯಿಲ್ಲದೆ ಸಂಕಟಕ್ಕೆ ಕನಿಕರಿಸು,

ಆ ತಂದೆ 'ದೇವ'ನ ಕರಾಳಕೋಪಕ್ಕೆ ಪಕ್ಕಾಗಿ ಭೂಸ್ವರ್ಗದಿಂದ ಚ್ಯುತರಾದ

ಮಾನವರಿಗೆ ಮಲತಂದೆಯಾದವನು ನೀನು ;
ಓ ಸೈತಾನ್ ನನ್ನ ಕೊನೆಯಿಲ್ಲದ ಸಂಕಟಕ್ಕೆ ಕನಿಕರಿಸು.

ಪ್ರಾರ್ಥನೆ

ಓ ಸೈತಾನ್ ಸ್ವರ್ಗದೆತ್ತರದಲ್ಲಿ ಒಮ್ಮೆ, ವೈಭವಿಸಿದ ನಿನ್ನನ್ನು
ಕೀರ್ತಿಸುತ್ತೇನೆ ;
ಸೋತು, ನರಕದದಃಪಾತಾಲದಲ್ಲಿರುವಾಗಲೂ ಮೌನವಾಗಿ ಕನಸು
ಕಾಣುವ ನಿನ್ನನ್ನು ಕೀರ್ತಿಸುತ್ತೇನೆ ;
ಜ್ಞಾನವೃಕ್ಷ ನಿನ್ನ ಬ್ರೂರೇಖೆಯ ಮೇಲೆ, ತನ್ನ ರೆಂಬೆಗಳನ್ನು
ದೇವಾಲಯದಂತೆ ಹರಹುತ್ತಿರುವಾಗ, ಒಂದು ದಿನ,
ನನ್ನ ಚೇತನ ಅದರ ನೆರಳಲ್ಲಿ ನಿನ್ನ ಪಕ್ಕದಲ್ಲಿ
ವಿಶ್ರಾಂತವಾಗುವಂತೆ, ಓ ಸೈತಾನ್, ನನಗೆ ಅನುಗ್ರಹಿಸು

ನರೆ ಕೆನ್ನೆಗೆ, ತೆರೆಗಲ್ಲಕೆ,
ಶರೀರ ಗೂಡುವೋಗದ ಮುನ್ನ
ಹಲ್ಲು ಹೋಗಿ, ಬೆನ್ನುಬಾಗಿ
ಅನ್ಯರಿಗೆ ಹಂಗಾಗದ ಮುನ್ನ
ಕಾಲಮೇಲೆ ಕೈಯ್ಯನೂರಿ
ಕೋಲ ಹಿಡಿಯದ ಮುನ್ನ
ಮೃತ್ಯು ಮುಟ್ಟದ ಮುನ್ನ
ಪೂಜಿಸುವೋ ಕೂಡಲ ಸಂಗಮದೇವನ

—ಬಸವಣ್ಣ

ಇಂಗ್ಲಿಷ್ ಮೂಲ : ಜೆ. ಮಿಡ್ಲ್‌ಟನ್ ಮರಿ
ಅನುವಾದ : ಎಡ್ವರ್ಡ್ ಸೊರೋನ

ಇಂಗ್ಲಿಷ್ ಬೈಬಲ್ ; ಮತ್ತು ಭವ್ಯ ಶೈಲಿ

ಈ ಪ್ರವಚನವನ್ನು ಒಂದು ಕಲಬೆರಕೆ ಪ್ರವಚನವನ್ನಾಗಿ ಮಾಡಬೇಕೆಂದಿದ್ದೇನೆ ; ನೆಲೆಗಾಣದೆ ಹಾರಾಡುತ್ತಿರುವ ಸಾಧ್ಯವಾದಷ್ಟು ಎಳೆಗಳನ್ನೆಲ್ಲ ಹೆಕ್ಕಿ ಕಟ್ಟಬೇಕೆಂದಿದ್ದೇನೆ–ಅವು ಎಲ್ಲ ಕಡೆಗಳಲ್ಲಿ ಚೆಲ್ಲಾಪಿಲ್ಲಿಯಾಗಿ ಬಿದ್ದಿವೆ, ನಿರ್ಗತಿಕರಾಗಿ ಹಾರಾಡುತ್ತಿವೆ ನನಗನಿಸುತ್ತದೆ.

ಇಂಥದೊಂದು ಅಧ್ಯಯನದಲ್ಲಿ ಈ ಕ್ಷಣದಲ್ಲಿ ನಮಗೆ ಅತ್ಯಂತ ಹೆಚ್ಚು ಪ್ರಾಮುಖ್ಯವುಳ್ಳ ಅಂಶಗಳನ್ನು ನಾವು, ಸಹಜ ಪ್ರವೃತ್ತಿಯಿಂದ, ಒತ್ತಿ ಹೇಳುತ್ತೇವೆ ; ನಾನು ಹೀಗೆ ಮಾಡಿದ್ದೇನೆ ಎಂದು ನನಗೆ ಗೊತ್ತು ; ಈಗ ಪುನಃ ಸಮತೂಕವನ್ನು ಸ್ಥಾಪಿಸುವ ಸಾಧ್ಯತೆಗಳು ಬಹಳ ಕಡಿಮೆ ಎನ್ನಬಹುದು. ಆದರೂ ನನ್ನ ಮನಸ್ಸಾಕ್ಷಿಯನ್ನು ಪೀಡಿಸುತ್ತಿರುವ ಕೆಲವೊಂದು ವಿಷಯಗಳ ಬಗೆಗೆ ಇನ್ನಷ್ಟು ಸ್ಪಷ್ಟವಾಗಿರಲು ಕೈಲಾದಷ್ಟು ಪ್ರಯತ್ನಿಸುವೆನು.

ಗದ್ಯ ಮತ್ತು ಪದ್ಯ ಒಂದೇ ಎಂದು ನಾನು ಪರಿಗಣಿಸಿದುದು ಯಾದೃಚ್ಛಿಕವಾದುದು ಎಂದು ನಿಮಗೆ ಕಂಡಿರಬೇಕು—ಇದು ನನ್ನೆಣಿಕೆ. ಆದರೆ, ಒಂದು ವೇಳೆ ಆ ಬಗೆಗೆ ನನ್ನ ಧೋರಣೆಯನ್ನೂ ಅದಕ್ಕೆ ನಾನು ಕೊಡುವ ಕಾರಣವನ್ನೂ ಅಲ್ಲಿಯೇ ಸ್ಪಷ್ಟಪಡಿಸಿದ್ದರೆ, ನನ್ನ ವಾದವನ್ನು ಮೊದಲೇ ಮಂಡಿಸಬೇಕಾಗುತ್ತಿತ್ತು. ಆದುದರಿಂದ ಸಾಹಿತಿಕ ಸೃಷ್ಟಿಯ ಪ್ರಕ್ರಿಯೆಗಳು ಎಂಬ ದೃಷ್ಟಿಯಲ್ಲಿ ಗದ್ಯದ ನಿರ್ಮಿತಿಗೂ ಪದ್ಯದ ನಿರ್ಮಿತಿಗೂ ವ್ಯತ್ಯಾಸವಿಲ್ಲ–ಇಷ್ಟನ್ನೇ ಹೇಳಿ ನಾನು ತೃಪ್ತನಾಗಿದ್ದೆನು. ಆ ನಿರಾಡಂಬರದ ಹೇಳಿಕೆಗೆ ಇನ್ನಷ್ಟು ವಿಷಯವನ್ನು ಸೇರಿಸುವುದು ಈಗ ಸಾಧ್ಯವಾಗಬಹುದೇನೋ.

ಕಾವ್ಯವನ್ನು ಪ್ರತ್ಯೇಕವಾಗಿರಿಸುವ ರೂಪ್ಯಕ ಗುರುತುಗಳಾದ ಲಯ ಮತ್ತು ಛಂದಸ್ಸುಗಳು, ಭಾವಾತ್ಮಕ ಧ್ವನಿಯನ್ನು ಸ್ವೀಕರಿಸುವಂಥ ವೇದನಿಯತೆ ಉತ್ಕರ್ಷಗೊಂಡಿರುವ ಒಂದು ಸ್ಥಿತಿಗೆ ಓದುಗನನ್ನು ಕೊಂಡೊಯ್ಯುವ ಶಕ್ತಿಯನ್ನು ಪಡೆದಿವೆ. ಇಂಥ ಶಕ್ತಿಯನ್ನು ಅವೇಕೆ ಪಡೆದಿವೆ ಎಂಬುದು ದೀರ್ಘವಾದ ಮತ್ತು, ಬಹುಶಃ, ಪ್ರಧಾನವಾಗಿ ಶರೀರ-ವಿಜ್ಞಾನಕ್ಕೆ ಸಂಬಂಧಿಸಿದ ಒಂದು ಕಥೆಯಾಗುವುದು. ಆದರೆ,

ಇಲ್ಲಿರುವ ಸರಳವಾದ ಮನಃಶಾಸ್ತ್ರದ ಸತ್ಯವೆಂದರೆ : ನಿಯತ ಲಯದ ಒಂದು ಘಾತ
ಪುನರಾವರ್ತನೆಗೊಳ್ಳುವಾಗ, ಹೆಚ್ಚುಕಡಿಮೆ, ಒಂದು ಸಂಮೋಹಕ ಪರಿಣಾಮವನ್ನು
ಅದು ಉಂಟುಮಾಡುತ್ತದೆ ; ದೈನಂದಿನ ಪ್ರಪಂಚದಿಂದ ನಮ್ಮ ಗಮನವನ್ನು ಪೂರ್ತಿ
ಯಾಗಿ ಕಿತ್ತು ತೆಗೆಯುತ್ತದೆ, ಆ ಪ್ರಪಂಚ ನಮ್ಮಿಂದ ನಿರ್ಬಂಧಪೂರ್ವಕವಾಗಿ ಕೇಳುವ
ವ್ಯಾವಹಾರಿಕ ಜಾಗರೂಕತೆಯನ್ನು ಮಂದಗೊಳಿಸುತ್ತದೆ ಮತ್ತು, ಅದು ಸಾಕಷ್ಟು
ನಿಯತವೂ ಏಕತಾನವುಳ್ಳದ್ದೂ ಆಗಿದ್ದರೆ, ನಾವು ನಿದ್ದೆ ಹೋಗುವಂತೆಯೇ ಮಾಡುತ್ತದೆ.
ಇದು, ಲಯ ಮತ್ತು ಛಂದಸ್ಸುಗಳ ಪರಮ ಪರಿಣಾಮ. ಈ ಪ್ರವೃತ್ತಿಯ ಸದುಪಯೋಗ
ವನ್ನು ಮಾಡಿ ಅದು ತನ್ನ ಸಹಜವಾದ ಶಾರೀರಿಕ ಸಮಾಪ್ತಿಯನ್ನು ತಲಪದಂತೆ ತಡೆದು,
ಛಂದಸ್ಸಿನ ಚೌಕಟ್ಟಿನಲ್ಲಿಯೇ ಲಯದ ಅಮಿತ ವೈವಿಧ್ಯಗಳನ್ನು ಬಳಸಿ, ನಾವು ಗಾಢವಾದ
ಜಾಗೃತ ಸ್ಥಿತಿಯಲ್ಲಿರುವಂತೆ ಮಾಡುವುದು ಕವಿಯಾದವನ ಕೆಲಸ. ಈ ಪರಿಸ್ಥಿತಿಯಲ್ಲಿ,
ವಾಸ್ತವ ಪ್ರಪಂಚದಿಂದ ನಮ್ಮನ್ನು ಬೇರ್ಪಡಿಸುವ ಪರದೆಯಂತಿರುವ ಛಂದಸ್ಸಿನ ಏಕ
ರೂಪತೆಯ ಹಿನ್ನೆಲೆ ಒಂದಿರುತ್ತದೆ ; ನಾವಿರುವ ಪ್ರಪಂಚವನ್ನು ತುಂಬ ಪ್ರೀತಿಯಿಂದ
ನಾವು ನೋಡುವಂತೆ ಮಾಡುವ ಲಯಾತ್ಮಕ ವೈವಿಧ್ಯದ ಶ್ರೀಮಂತತೆ ಒಂದಿರುತ್ತದೆ.

ಈ ಪರಿಸ್ಥಿತಿಯಲ್ಲಿ, ಭಾವಗಳು ಮತ್ತು ಚಿಂತನೆಗಳು ಕೊಡುವ ಸೂಕ್ಷ್ಮ ಸೂಚನೆ
ಗಳನ್ನು ಸ್ವೀಕರಿಸಲು ನಾವು ಸಿದ್ಧರಾಗಿರುತ್ತೇವೆ ; ಗದ್ಯದ ಮಟ್ಟದಲ್ಲಾದರೆ ಪ್ರಸಕ್ತ
ವಾಗಿದ್ದ ಬಹಳಷ್ಟು ಪರಿಸ್ಥಿತಿಗಳ ಬೆಂಬಲವನ್ನು ಪಡೆದಿದ್ದರೆ ಮಾತ್ರ ಈ ಸೂಚನೆಗಳು
ನಮ್ಮ ಪ್ರಜ್ಞೆಯನ್ನು ತೂರಿ ಪ್ರವೇಶಿಸುವುದು ಸಾಧ್ಯ. ಇಷ್ಟೇ ಪ್ರಬಲವಾಗಿ ಈ
ಸೂಚನೆಗಳು ನಮ್ಮ ಮೇಲೆ ಪರಿಣಾಮಕಾರಿಯಾಗಬೇಕಾದರೆ ಗದ್ಯ ಲೇಖಕ, ನಿಧಾನ
ವಾಗಿ, ಹಂತ ಹಂತವಾಗಿ ನಮ್ಮನ್ನೊಂದು ಕಾಲ್ಪನಿಕ ಪ್ರಪಂಚಕ್ಕೆ ಕೊಂಡೊಯ್ಯಬೇಕು.
ಹೀಗೆಂದ ಮಾತ್ರಕ್ಕೆ ಪದ್ಯವನ್ನು ಬರೆಯುವುದು ಗದ್ಯವನ್ನು ಬರೆಯುವುದಕ್ಕಿಂತ ಹೆಚ್ಚು
ಸುಲಭ ಎಂದಲ್ಲ ; ಪ್ರಸಕ್ತ ಪರಿಸ್ಥಿತಿಗಳನ್ನು ಕಲೆಹಾಕುವ ಪ್ರಕ್ರಿಯೆಯಲ್ಲಿ ಗದ್ಯ ಲೇಖಕ
ಪಡುವ ಶ್ರಮ, ಅದೇ ಪ್ರಕ್ರಿಯೆಯಲ್ಲಿ ಪದ್ಯಲೇಖಕ ಪಡುವ ಶ್ರಮಕ್ಕಿಂತ ಕಿಂಚಿತ್ತಾದರೂ
ಹೆಚ್ಚಲ್ಲ ; ಇದ್ದ ವಿಷಯವೆಂದರೆ, ಪದ್ಯವನ್ನು ಬರೆಯುವವನು ನಿದ್ದೆ ಬರುವಂತೆ ಮಾಡುವ
ಅಥವಾ, ಕನಿಷ್ಠ ಪಕ್ಷ, ಪ್ರಜ್ಞೆಯ ಎಲ್ಲ ಶಕ್ತಿಗಳನ್ನು ಅವನತಿನಲ್ಲಿಡುವ ಅಪಾಯವನ್ನು
ಸದಾಕಾಲ ಎದುರಿಸುತ್ತಿದ್ದಾನೆ. ಮಹಾ ಕವಿಗಳು ಈ ಅಪಾಯದಿಂದ ಯಾವಾಗಲೂ
ತಪ್ಪಿಸಿಕೊಂಡಿಲ್ಲ. ಯಶಸ್ವಿಯಾದ ಗದ್ಯದ ವಿಧಾನಕ್ಕಿಂತ ಯಶಸ್ವಿಯಾದ ಪದ್ಯದ
ವಿಧಾನ ಹೆಚ್ಚು ತ್ವರಿತವಾದುದು—ಇದೇ ಇವೆರಡು ವಿಧಾನಗಳ ನಡುವೆ ಇರುವ ಸಾರ
ಭೂತವಾದ ವ್ಯತ್ಯಾಸ. ಪದ್ಯದ ವಿಧಾನ ಹೆಚ್ಚು ಶ್ರೇಷ್ಠವಾದ ಮತ್ತು ತ್ವರಿತವಾದ ರೀತಿ
ಯಲ್ಲಿ ಏಕಾಗ್ರತೆಯನ್ನು ಒದಗಿಸುವ ಸಾಧನವಾಗಿದೆ. ನಿಮ್ಮ ವೇದನೀಯತೆ ಇರುವ ಸ್ಥಿತಿ
ಯನ್ನು ಅದು ಸದುಪಯೋಗಗೊಳಿಸಬಲ್ಲುದು ; ಬಹಳ ಕ್ಷಿಪ್ರವಾಗಿ ಕೆಲಸ ಮಾಡ
ಬಲ್ಲುದು. ಆದರೆ ಕ್ರಿಯಾಕ್ಷಿಪ್ರತೆಯ ವೇಗ ಭಿನ್ನವಾಗಿದ್ದ ಮಾತ್ರಕ್ಕೆ ಬೇರೆಯೇ
ಒಂದು ಕ್ರಿಯೆ ಇದೆ ಎಂದಾಗುವುದಿಲ್ಲ.

ಪ್ರಜ್ಞಾಪೂರ್ವಕವಾಗಿಯೋ ಅಪ್ರಜ್ಞಾಪೂರ್ವಕವಾಗಿಯೋ ಪದ್ಯ ವಿಧಾನವನ್ನು ಬಳಸುವ ಗದ್ಯ ಬೃಹತ್ ಪ್ರಮಾಣನಲ್ಲಿ ಇದ್ದೇ ಇದೆ. ಛಂದಸ್ಸಿನ ಏಕರೂಪತೆಯ ಹಿನ್ನೆಲೆ ಪದ್ಯದಲ್ಲಿದ್ದಷ್ಟೇನು ನಿಯತವಲ್ಲ ; ಇನ್ನೊಂದೆಡೆ, ಲಯಾತ್ಮಕ ವೈವಿಧ್ಯಗಳ ಸಾಧ್ಯತೆಗಳೂ ಅಲ್ಲಿದ್ದಷ್ಟು ಹೆಚ್ಚಾಗಿಲ್ಲ ; ಏಕರೂಪತೆಯಲ್ಲಿ ಕೊರತೆ ಇರುವುದೇ ಇದಕ್ಕೆ ಕಾರಣ. ಪದ್ಯಾತ್ಮಕ ಗದ್ಯದ ವಿಲಕ್ಷಣ ಅಪಾಯಗಳಿಗೆ ಇದೇ ಮೂಲ ; ಲಯಾತ್ಮಕ ವೈವಿಧ್ಯವನ್ನು ಗೋಚರಪಡಿಸುವ ಕೆಲಸ ಇಂಥ ಗದ್ಯದಲ್ಲಿ ಪದ್ಯಕ್ಕಿಂತ ಬಹಳ ಹೆಚ್ಚು ಕಷ್ಟ. ಮಿಲ್ಟನನ *Areopagitica* ಪದ್ಯಾತ್ಮಕ ಗದ್ಯದ ಅಪೂರ್ವ ಉದಾಹರಣೆಯೂ ಹೌದು ಅಪೂರ್ವ ವಿಜಯವೂ ಹೌದು ಒಂದು ಭಾವಾತ್ಮಕ ವೇದನೀಯತೆಯಲ್ಲಿ ಓದುಗನನ್ನು ಅದು ಮುಳುಗಿಸುತ್ತದೆ.—ಈ ವೇದನೀಯತೆಯ ಸ್ವರೂಪ ಅಸಾಮಾನ್ಯವಾದುದು. ತನ್ನ ಗುರಿಯನ್ನು ಸಾಧಿಸಲಾರದೆ ಅದು ಸೋಲುತ್ತದೆ ಎಂದು ನನಗೆ ಅನುಮಾನ. ಅದೇನಿದ್ದರೂ, ಅದನ್ನು ಓದುತ್ತಿರುವಾಗ ಆಗಲಿ, ಓದಿ ಮುಗಿಸಿದ ಮೇಲೆ ಆಗಲಿ, ರಹದಾರಿ ಇಲ್ಲದೆ ಪುಸ್ತಕಗಳನ್ನು ಅಚ್ಚುಹಾಕುವ ಸ್ವಾತಂತ್ರ್ಯದ ವಿಷಯವನ್ನು ಕುರಿತು ನಾನು ಯೋಚಿಸುತ್ತಾ ಇದ್ದೆ ಎಂದು ನನಗೆಂದೂ ಅನಿಸಲಿಲ್ಲ. ಆತ್ಮದ ಅಮರತೆಯ ಬಗೆಗಿನ ಕವನವೇ ಅದಾಗಿರಬಹುದು ಎಂಬುದು ಎಷ್ಟೋಪಾಲು ಹೆಚ್ಚು ಸಂಭವನೀಯ. 'They who to States and Governors of the Commonwealth direct their speech, High Court of Parliament ...' ಇದು ತಡೆಯಲಾರದಷ್ಟು ಆಕರ್ಷಕವಾಗಿದೆ.

'For this is not the liberty which we can hope, that no grievance ever should arise in the Commonwealth, that let no man in this World expect ; but when complaints are freely heard, deeply considered, and speedily reformed, then is the Atmost bound of civil liberty attained, that wise men look for. To which if I now manifest by the very sound of this which I shall utter, that we are already in good part arrived, and yet from such a steep disadvantage of tyranny and superstition grounded into our principles as was beyond the manhood of a Roman recovery, it will be attributed first, as is most due, to the strong assistance of God our deliverer, next to your faithful guidance and undaunted wisdom, Lords and Commons of England.'

ಅತ್ಯುತ್ಕೃಷ್ಟ ಸಂಗೀತ, ಇಲ್ಲಿ, ಅತಿಯಾಗಿ ಪ್ರಧಾನವಾಗಿದೆ. ಪಕ್ಕವಾದ್ಯಗಳ ಇಂಥ ಮೇಳದಲ್ಲಿ ನಡೆಸಬಹುದಾದ ಒಂದೇ ಒಂದು ಚರ್ಚೆ ಎಂದರೆ ಆರ್ಕೇಂಜಲ್ ದೇವದೂತರು ನಡೆಸುವ ಚರ್ಚೆ ; *Areopagitica* ನಿಜಕ್ಕೂ ಅದೇ. ವಾದ್ಯ ಮೇಳದ ಸ್ವರಸಾಂಗತ್ಯದ ಶುದ್ಧ ಸೌಂದರ್ಯ ನಮ್ಮಲ್ಲಿ ಆನಂದಭಾಷ್ಪಗಳನ್ನು ಸುರಿಸುತ್ತದೆ. ಆದರೆ ಒತ್ತಾಯಪೂರ್ವಕವಾದ ರಾಜಕೀಯ ಬೇಡಿಕೆಯನ್ನು ಕುರಿತ ಬರವಣಿಗೆಯನ್ನು ಮೆಚ್ಚಲು ಬೇಕಾದ ಮನೋಸ್ಥಿತಿ ಇದಲ್ಲ.

ಹೀಗೆ ಗದ್ಯ ಮತ್ತು ಪದ್ಯಗಳ ನಡುವೆ ಕಾಣಬಹುದಾದ ವ್ಯತ್ಯಾಸ ಇಷ್ಟಾಗುತ್ತದೆ: ಭಾವಗಳನ್ನು ಮತ್ತು ಚಿಂತನೆಗಳನ್ನು ಸ್ವೀಕರಿಸುವ ವೇದನೀಯತೆಯ ಸ್ಥಿತಿಗೆ ನಮ್ಮನ್ನು ತರಲು, ಛಂದಸ್ಸನ್ನು ಮತ್ತು ಲಯವನ್ನು ಪ್ರಾಥಮಿಕ ಸಾಧನವನ್ನಾಗಿ ಪದ್ಯ ಉಪಯೋಗಿಸುತ್ತದೆ. ಈ ಸಾಧನವನ್ನು ಬಳಸಿದುದರಿಂದ ಭಾವವನ್ನು ಮತ್ತು ಚಿಂತನೆಗಳನ್ನು ಸಂವಹಿಸಲು ಉಪಯೋಗಿಸುವ ವಿಧಾನಗಳ ಮೇಲೆ ಒಂದು ಪ್ರಭಾವ ಉಂಟಾಗುತ್ತದೆ. ಏಕೆಂದರೆ ಓದುಗನ ಪ್ರತಿಕ್ರಿಯೆ ಬಹಳ ಚುರುಕಾಗಿರುತ್ತದೆ ಎಂದು ಮೊದಲೇ ಭಾವಿಸಿ ಈ ಸಾಧನವನ್ನು ಬಳಸುವುದು; ಗದ್ಯವನ್ನು ಬರೆಯುವವನು ಇಂಥ ಭಾವನೆಯನ್ನು ಮೊದಲೇ ಇಟ್ಟುಕೊಳ್ಳುವುದಕ್ಕಾಗದು. ಕವಿಯಾದವನು ಪ್ರತಿಮೆಯ ಮೇಲೆ ಪ್ರತಿಮೆಯನ್ನು ಕಿಕ್ಕಿರಿಸಿ ತುಂಬಬಹುದು — ಗದ್ಯದ ಮಟ್ಟಿಗೆ ಅದು ಅಸಮ್ಮತ ; ಗದ್ಯದಲ್ಲಿ ಓದುಗನ ಮನಸ್ಸು ಅಷ್ಟು ವೇಗವಾಗಿ ಓಡುವುದಿಲ್ಲ, ಆದರೆ ಅದು ಹೆಚ್ಚು ಕೂಲಂಕಷವಾಗಿ ವಿಚಾರ ಮಾಡುತ್ತದೆ. ಆದರೆ ಇವೆರಡರ ನಡುವಿನ ವ್ಯತ್ಯಾಸ ಸಾರಭೂತ ವ್ಯತ್ಯಾಸವೇನಲ್ಲ ; ವಿಚಾರಶಕ್ತಿಯನ್ನೇ ನೇರವಾಗಿ ಉದ್ದೇಶಿಸುವ, ವಿಷಯಗಳನ್ನು ಹೋಲಿಸಿ ಅವುಗಳ ಮೇಲೆ ತೀರ್ಪನ್ನೀಯುವಂತೆ ನಮ್ಮನ್ನು ಕೇಳಿಕೊಳ್ಳುವ ಒಂದು ವರ್ಗದ ಗದ್ಯವನ್ನು ಬಿಟ್ಟರೆ, ಇಲ್ಲಿರುವ ವ್ಯತ್ಯಾಸ ಗತಿಯಲ್ಲಿರುವ ವ್ಯತ್ಯಾಸವಲ್ಲದೆ ರಚನೆಯಲ್ಲಿ ಅಲ್ಲ.

ಆದುದರಿಂದ ಸಾಹಿತ್ಯ ಕೃತಿಯೆಂದರೆ ಪ್ರತ್ಯೇಕ ಚಿಂತನೆಯ ಮತ್ತು ಸಂವೇದನೆಯ ಸಂವಹನೆ ಎಂದು ಭಾವಿಸುವುದರಲ್ಲಿ ಆಗಲಿ ; ಎಲ್ಲಾ ವರ್ಗದ ಶೈಲಿಗಳಿಗೆ — ಆ ವರ್ಗದಲ್ಲಿ ಅವು ಅತ್ಯುತ್ತಮ ಶೈಲಿಗಳಾಗಿದ್ದರೆ—ಸ್ಟೆಂಡಾಲನ ವ್ಯಾಖ್ಯೆ, ಅದರ ವ್ಯಾಪಕಾರ್ಥದಲ್ಲಿ, ಅನ್ವಯಿಸುತ್ತದೆ ಎಂದು ಒಪ್ಪುವುದರಲ್ಲಾಗಲಿ ಯಾವುದೇ ಬಗೆಯಲ್ಲಿ ತಪ್ಪಾಗುವಂಥ ಸರಳೀಕರಣ ಇಲ್ಲವೆಂದು ನನಗನಿಸುತ್ತದೆ. ಶೈಲಿಯ ಶ್ರೇಷ್ಠತೆ ಅವಲಂಬಿಸಿರುವ, ಚಿಂತನೆಗಳ ಮತ್ತು ಸಂವೇದನೆಗಳಲ್ಲಿರುವ ವ್ಯಾಪಕತೆಯ ಪ್ರಶ್ನೆಯನ್ನಾಗಲಿ, ಸೃಜನೆಯ ಅತ್ಯಂತ ಜೀವಂತ ಹಾಗೂ ಸಾಮಾನ್ಯ ವಿಧಾನವಾದ ಹರಳುಗಟ್ಟುವಿಕೆಯ ಪ್ರಶ್ನೆಯನ್ನಾಗಲಿ ನಾನು ಮತ್ತೆ ತೆಗೆದುಕೊಳ್ಳಬೇಕಾಗಿಲ್ಲ ; ಆದರೆ ಗದ್ಯ ಮತ್ತು ಪದ್ಯದ ನಡುವೆ ನಾನು ಮಾಡಿರುವ ವ್ಯತ್ಯಾಸ, ಓದುಗರ ವೇದನೀಯತೆಯ ಸ್ಥಿತಿ ನಿರ್ವಹಿಸುವ ಪಾತ್ರವನ್ನು ಇನ್ನಷ್ಟು ಪರಿಶೀಲಿಸಬೇಕೆಂದು ಸೂಚಿಸುತ್ತದೆ.

ಬರವಣಿಗೆಯೆಂದರೆ ಕರ್ತೃ ಮತ್ತು ಅವನ ಓದುಗ ವರ್ಗದೊಡನೆ ಸ್ಥಾಪಿತವಾಗುವ

ಸಂಬಂಧವೆಂದು ನಾವು ಭಾವಿಸಿದರೆ, ನಿರ್ಬಂಧಪಡಿಸುವ ಗುಣವನ್ನು ಯಾವ ಪ್ರಮಾಣ ದಲ್ಲಿ ತನ್ನ ಭಾಷೆಯಲ್ಲಿ ಅಳವಡಿಸಬೇಕೆಂಬುದು ಅವನು ಸಂವಹಿಸಲು ಅಪೇಕ್ಷಿಸುವ ಚಿಂತನೆಗಳು ಮತ್ತು ಸಂವೇದನೆಗಳು ಎಷ್ಟರ ಮಟ್ಟಿಗೆ ಓದುಗರಿಗೆ ಪರಿಚಿತವಾಗಿವೆ ಅಥವಾ ಅಪರಿಚಿತವಾಗಿವೆ ಎಂಬುದರ ಮೇಲೆ ಹೋಗುತ್ತದೆ. ಭಾವ ನಿರ್ದಿಷ್ಟವಾಗಿರು ವಲ್ಲಿ, ಏಕಮೇವವಾಗಿರುವ ಒಂದು ಪರಿಸ್ಥಿತಿಯೊಡನೆ ಅವನ ಚಿಂತನೆ ಮತ್ತು ಭಾವ ಬೇರ್ಪಡಿಸಲಾಗದಂತೆ ಬೆರೆತುಕೊಂಡಿದ್ದರೆ, ಅವನ ಶ್ರದ್ಧೆಗಳ ಇಡೀ ವ್ಯವಸ್ಥೆ ಪ್ರತ್ಯೇಕವಾಗಿರುವಾಗ ಅಥವಾ ಒಂದು ರೀತಿಯಲ್ಲಿ ಇನ್ನು ಯಾವುದರೊಡನೆಂ ಹೋಲಿಸಲು ಆಗದಂಥದು ಆಗಿರುವಾಗ, ಅಂಥ ಸಂದರ್ಭಗಳಲ್ಲಿ ತಾನು ಇಷ್ಟಪಟ್ಟ ನಾವು ಯೋಚಿಸುವ ಹಾಗೆ ಮತ್ತು ಸಂವೇದಿಸುವ ಹಾಗೆ ಅವನು ನಮ್ಮನ್ನು ನಿರ್ಬಂಧ ಪಡಿಸದೆ ಅವನಿಗೆ ವಿಧಿ ಇಲ್ಲ. ಒಂದು ನಿರ್ದಿಷ್ಟ ರೀತಿಯಲ್ಲಿ ನಾವು ಪ್ರತಿಕ್ರಿಯೆ ತೋರಿ ಸಬೇಕಾದಂಥ ಅಥವಾ ಯಾವ ಪ್ರತಿಕ್ರಿಯೆಯನ್ನೇ ತೋರಿಸಬಾರದಂಥ ಯಾವುದೋ ಒಂದು ವಿಷಯವನ್ನು ಅವನು ನಮ್ಮ ಮುಂದಿರಿಸಬೇಕಾಗಿದೆ. ಈ ಪ್ರತಿಕ್ರಿಯೆಗಳು ನಮ್ಮ ಎಂದಿನ ಚಿಂತನಾಕ್ರಮ, ಸಂವೇದನಾ ಕ್ರಮದಿಂದ ಎಷ್ಟು ದೂರವಾಗಿರುತ್ತ ವೆಯೋ, ಅಷ್ಟು ಪ್ರಮಾಣದಲ್ಲಿ ಅವನ ಕೆಲಸ ಹೆಚ್ಚು ಕಷ್ಟವಾಗುತ್ತದೆ ಮತ್ತು ಅವನ ಶೈಲಿ ಹೆಚ್ಚು ಮೂರ್ತವಾಗಿರಬೇಕಾಗುತ್ತದೆ. ಇದು ಅವನಿಗೆ ಅಪರಿಚಿತ ಶ್ರಮವೇನಲ್ಲ. ಸಾಮಾನ್ಯ ಅನುಭವದಿಂದ ಬಹಳ ದೂರವಿದ್ದ ಚಿಂತನೆಗಳನ್ನು ಮತ್ತು ಸಂವೇದನೆ ಗಳನ್ನು ಅಭಿವ್ಯಕ್ತಿಗೊಳಿಸುವಾಗ, ತಮ್ಮಲ್ಲಿರುವ ಖಚಿತತೆಯನ್ನು ಅತ್ಯಂತ ಕಳಕಳಿ ಯಿಂದ ಉಪಯೋಗಿಸುವುದು ಅವಶ್ಯ ಎಂಬುದನ್ನು ಮನಗಾಣುವಷ್ಟು ಸಾಧಾರಣ ಮಾನವೀಯತೆ ಲೇಖಕರಿಗಿರುತ್ತದೆ. ಈ ಅವಶ್ಯಕತೆಯನ್ನು ಅವರು ಮನಗಾಣದಿದ್ದರೆ, ಅವರು ಅನುಭಾವಿಗಳು ಇಲ್ಲವೆ ಮತಿಭ್ರಷ್ಟರು ; ಕೆಲವೊಮ್ಮೆ ತನ್ನ ಪಾಲಿನ ಪ್ರಯತ್ನ ವನ್ನು ಮಾಡಿದ ಮೇಲೂ, ಲೇಖಕನನ್ನು ಹುಚ್ಚನೆಂದು ಪರಿಗಣಿಸುವಷ್ಟು ಕೆಳಮಟ್ಟ ದಲ್ಲಿ ಸಾಮಾನ್ಯ ಅನುಭವದ ಪ್ರಮಾಣವನ್ನು ಇಟ್ಟಿರುತ್ತಾರೆ ಎಂಬುದು ಶೋಚನೀಯ ಸಂಗತಿ. ನನಗೆ ತಿಳಿದ ಮಟ್ಟಿಗೆ, ದ್ವಿತೀಯ ಮಟ್ಟದ, ನಿಜಕ್ಕೂ ಪ್ರತಿಭಾವಂತರಾದ ಇಬ್ಬರು ಕವಿಗಳನ್ನು—ಕ್ರಿಸ್ಟಫರ್ ಸ್ಮಾರ್ಟ್ ಮತ್ತು ಜಾನ್ ಕ್ಲೇರ್—ಹುಚ್ಚಾಸ್ಪತ್ರೆಗೆ ಸೇರಿಸಿದುದಕ್ಕೆ ಮುಖ್ಯವಾಗಿ ಅವರ ಪ್ರತಿಭೆಯೇ ಕಾರಣ.

ಆದರೆ ಅನುಭವದ ಕೆಲವು ಕ್ಷೇತ್ರಗಳಲ್ಲಿ, ಓದುಗರ ಭಾವಾತ್ಮಕ ವೇದನೀಯತೆಯ ಮಟ್ಟ ಅಂಥ ಇತರ ಕ್ಷೇತ್ರಗಳಲ್ಲಿರುವ ಮಟ್ಟಕ್ಕಿಂತಲೂ ಮೇಲಿರುತ್ತದೆ. ಉದಾಹರಣೆಗೆ, ಧರ್ಮದ ಕ್ಷೇತ್ರ. ವಾಸ್ತವ ಜೀವನದ ಚಿಂತನೆಗಳಿಗೂ ಸಂವೇದನೆಗಳಿಗೂ ತೀರಾ ದೂರವಾಗಿದ್ದಂಥ ಚಿಂತನೆಗಳನ್ನು ಮತ್ತು ಸಂವೇದನೆಗಳನ್ನು ಪಡೆದಿರುವುದು, ಗಾಢವಾಗಿ ಧಾರ್ಮಿಕನಾಗಿದ್ದ ವ್ಯಕ್ತಿಗೆ ಅಭ್ಯಾಸವಾಗಿರುತ್ತದೆ. ನ್ಯಾಯನಿಷ್ಠನಾದ, ಸರ್ವಶಕ್ತನಾದ, ಕರುಣಾಮಯ ಹಾಗೂ ಸರ್ವಜ್ಞನಾದ ದೇವರ ಬಗೆಗೆ ನಿಜವಾದ ಶ್ರದ್ಧೆಯನ್ನು ತಾಳಿದವನ ಸಂಗಾತಿಯಾಗಿ ಒಂದು ಪ್ರಚಂಡ ಪರಿಕಲ್ಪನೆ ಹಾಗೂ ಭಾವ

ಸದಾಕಾಲ ಇರುತ್ತವೆ. ಯಾವುದೇ ಕವಿಯ ಅಥವಾ ಗದ್ಯ ಲೇಖಕನ ಸೂಕ್ಷ್ಮಸೂಚನೆ ಶಕ್ತಿಯಲ್ಲಿ ಅಥವಾ ಒತ್ತಡದಲ್ಲಿ, ಇವನ್ನು ಮೀರಿಸುವ ಸಾಧ್ಯತೆ ಇಲ್ಲ. 'And the Lord said', ಎಂದು ಒಬ್ಬ ಹಳೆಯ ಹೀಬ್ರು ಕವಿ ಬರೆದಾಗ, ಆದಷ್ಟೇ ಮಾತಿನಲ್ಲಿ ಮಾಡಬೇಕಾದುದನ್ನೆಲ್ಲವನ್ನು ಅವನು ಮಾಡಿದ್ದನು. ನಮ್ಮನ್ನು ಭಾವಪರವಶರನ್ನಾಗಿ ಮಾಡುವ ಪದಪುಂಜವಿದು. *Paradise Lost* ನಲ್ಲಿ ಇದಕ್ಕೆ ಸರಿದೊರೆಯಾದುದು ಏನೂ ಇಲ್ಲ. ಅದರೊಡನೆ,

When the most high
Eternal Father from his secret cloud,
Amidst in thunder uttered thus his voice — ಈ ಭಾಗ ಬಹುಮಟ್ಟಿಗೆ ಕ್ಷುಲ್ಲಕವಾಗಿದೆ. 'And they heard the voice of the Lord God walking in the garden in the cool of the day.' ಎರಡು ಸಾವಿರ ವರ್ಷಗಳ ಅವಧಿಯ ಕ್ರೈಸ್ತ ನಾಗರಿಕತೆ ಈ ಮಾತುಗಳ ಕಡೆಗೆ ನಮ್ಮ ಮನಸ್ಸುಗಳು ಬಾಗುವಂತೆ ಮಾಡುತ್ತವೆ ; ಅವುಗಳ ಆಕರ್ಷಣೆಯನ್ನು ತಡೆಯುವುದು ಅಸಾಧ್ಯ. ಶ್ರೇಷ್ಠ ಶೈಲಿ ಎಂಬ ಗೌರವವನ್ನು ಅವುಗಳಿಗೆ ಕೊಡದಿರುವುದೂ ಅಸಾಧ್ಯ. ಸಾಹಿತ್ಯದ ವಿಮರ್ಶಕರಾಗಿದ್ದ ನಾವು ನೆನಪಿಡಬೇಕಾದುದಿಷ್ಟೇ : ಧರ್ಮಕ್ಕೆ ವಿಶಿಷ್ಟವಾಗಿರುವ ಸಂವೇದನೆಯ ಮತ್ತು ಚಿಂತನೆಯ ಒಂದು ಮನೋವೃತ್ತಿಯನ್ನು ಉದ್ದೇಶಿಸಿದಾಗ ಮಾತ್ರ ಈ ಬಗೆಯ ಶೈಲಿ ಸಾಧ್ಯವಾಗುತ್ತದೆ. ಹೊಸ ಒಡಂಬಡಿಕೆಯ ಅತಿ ತೀಕ್ಷ್ಣವಾದ ಕೆಲವು ವಚನಗಳು ಸುಶಿಕ್ಷಿತ ಮುಹಮ್ಮದೀಯನಿಗೆ ವಿಕಾರವಾಗಿ ಕಾಣುತ್ತವೆಯಂತೆ. ಹಾಗೆಯೇ, 'And the Lord said' ಎಂಬ ಮಾತುಗಳು ಯಾವುದಾದರೊಂದು ಪೌರ್ವಾತ್ಯ ಅತೀಂದ್ರಿಯ ಧರ್ಮಗಳಲ್ಲಿ ಬೆಳೆದವನಿಗೆ ಹಾಸ್ಯಾಸ್ಪದವಾಗಿ ಕಾಣಬಹುದು.

ಈ ಕಾರಣಕ್ಕೋಸ್ಕರ, ಇಡಿಯಾಗಿ ಇಂಗ್ಲಿಷ್ ಬೈಬಲ್, ಇಂಗ್ಲಿಷ್ ಗದ್ಯ ಶೈಲಿಯ ಅತಿ ಶ್ರೇಷ್ಠ ಸಾಧನೆ ಎಂದು ಸೂಚ್ಯವಾಗಿ ಹೇಳುವಂಥ ಸುಪರಿಚಿತ ಮಾತಿನ ಬಗೆಗೆ ನಾವು ಎಚ್ಚರ ವಹಿಸಬೇಕೆಂದು ನಾನು ಭಾವಿಸುತ್ತೇನೆ. ಇದು ಸಂಪೂರ್ಣವಾಗಿ ಸುಳ್ಳು ಮಾತು ಎಂದಲ್ಲ, ಆದರೆ ಅನೇಕ ವೇಳೆ ಈ ತೀರ್ಮಾನವನ್ನು ಹೇಳುವ ರೀತಿ ಅಪಾಯಕಾರಿ ಎಂದು ನನಗೆ ತೋರುತ್ತದೆ. ಬೈಬಲ್ ಅನೇಕ ಭಿನ್ನಾಂಶಗಳನ್ನು ಒಳಗೊಂಡ ಗ್ರಂಥ. ಆಥರೈಜ್ಡ್ ಆವೃತ್ತಿಯ ಉದ್ದಕ್ಕೂ ಪದಗಳ ಜೋಡಣೆಯಲ್ಲಿ ಸರಳತೆ ಮತ್ತು ದೃಢತೆ — ಈ ಶ್ರೇಷ್ಠ ಗುಣಗಳಿವೆ. ಆದರೆ ಜೆನೆಸಿಸ್, ಜೋಬ್, ಮ್ಯಾಥ್ಯು — ಇವುಗಳ ಅಡಿಗಟ್ಟಾಗಿರುವ ಶೈಲಿಗಳ ನಡುವೆ ಬಹಳ ದೊಡ್ಡ ವ್ಯತ್ಯಾಸಗಳಿವೆ. ಜೆನೆಸಿಸ್‌ನ ಶೈಲಿ ಕಟ್ಟುನಿಟ್ಟಾದ, ಹೆಚ್ಚುಕಡಿಮೆ ಧರ್ಮಾಂಧತೆಯಿಂದ ಕೂಡಿರುವ ಏಕದೇವವಾದಕ್ಕೆ ಮಾತ್ರ ಸಾಧ್ಯವಾದುದು; ಇದರಲ್ಲಿರುವ ಅತಿ ಗಾಢವಾಗಿರುವ ಸರಳತೆ ನಮ್ಮನ್ನು ಭಾವಪರವಶರನ್ನಾಗಿ ಮಾಡುತ್ತದೆ, ಒಬ್ಬ ಯೆಹೂದ್ಯ

ನನ್ನು ಅದು ಇನ್ನೂ ಹೆಚ್ಚು ಭಾವಪರವಶನನ್ನಾಗಿ ಮಾಡುತ್ತದೆ ಎಂದು ಕಾಣುತ್ತದೆ. ಇನ್ನೊಂದೆಡೆ, ಜೋಬ್‌ನಲ್ಲಿರುವ ಶೈಲಿ, ಉನ್ನತ ಹಾಗೂ ಸಾರ್ವತ್ರಿಕ ಕಾವ್ಯದ ಶೈಲಿ. ಜೋಬನ ದೇವರು ನಮ್ಮ ಧಾರ್ಮಿಕ ಕಲ್ಪನಾಶಕ್ತಿಗೆ ಬಿಟ್ಟ ದೇವರಲ್ಲ, ಎಷ್ಟು ಸೃಜನಾತ್ಮಕ ಹಾಗೂ ಸಶಕ್ತವಾದ ಭಾಷೆಯಿಂದ ಅವನು ತನ್ನನ್ನು ಅಭಿವ್ಯಕ್ತಿಗೊಳಿಸುತ್ತಾ ಎಂದರೆ — ವಾಲ್ಟೇರನ ಮಾತುಗಳಲ್ಲಿ ಹೇಳುವುದಾದರೆ—ಒಂದು ವೇಳೆ ಅವನು ದಿದ್ದರೆ, ಅವನನ್ನು ಸೃಷ್ಟಿಸಿಕೊಳ್ಳುವುದು ಅವಶ್ಯವಾಗುತ್ತಿತ್ತು. ಮೂರನೆಯ ಬೇರೆಯೇ ಬಗೆಯ ಶೈಲಿ ಬೇಕಾದರೆ, ಹೊಸ ಒಡಂಬಡಿಕೆಯ ಸುವಾರ್ತೆಗಳ ಮ್ಯಾತ್ಯುವಿನ 27 ನೇ ಅಧ್ಯಾಯದಲ್ಲಿ ಎರಡು ಅತ್ಯದ್ಭುತವಾಗಿರುವ ಪರಿಣಾಮ ಶೈಲಿಯ ಪರಿಣಾಮಗಳೆಂದು ಇವುಗಳನ್ನು ಕರೆಯಬೇಕೋ, ತಿಳಿಯದು. ಸರಳವಾದ ಎರಡು ಹೇಳಿಕೆಗಳಲ್ಲಿ ಅವು ಇವೆ : 'then all the disciples left Him, and fled' ಮತ್ತು ಮೂರನೆಯ ಬಾರಿ ಪೀಟರ್ ಯೇಸುವನ್ನು ಅಲ್ಲಗಳೆದ ಮೇಲೆ ಅವನನ್ನು ಕುರಿತ ಮಾತುಗಳು, 'And he went out and wept bitterly'. ಇಲ್ಲಿಯ ಭಾವಾತ್ಮಕ ಧ್ವನಿ ಇಲ್ಲಿಯೇ ಪದಗಳಲ್ಲಿಯೇ ಇರುವಂಥದಲ್ಲ—ಈ ದೃಷ್ಟಿಯಲ್ಲಿ ಇವು ಜೆನೆಸಿಸನ 'And the Lord Said' ಎಂಬುದರ ಸ್ಥಿತಿಗೆ ಹತ್ತಿರವಾದಂಥವು ; ಆದರೆ ದೇವರ ಭಯಭಕ್ತಿಯನ್ನು ಹುಟ್ಟಿಸುವ ಪರಿಕಲ್ಪನೆಯನ್ನು ಜಾಗೃತಗೊಳಿಸುವ ಆ ಸರಳ ಮಾತುಗಳಿಗೂ ಇವುಗಳಿಗೂ ವ್ಯತ್ಯಾಸವಿದೆ ; ಮ್ಯಾತ್ಯುವಿನ ಸರಳವಾದ ಹೇಳಿಕೆಗಳು ನಮ್ಮಲ್ಲಿ ಉಂಟುಮಾಡುವ ಭಾವಗಳ ಸಮೃದ್ಧಿ, ಕಥಾನಕವನ್ನು ನಾವು ಓದಿದಾಗ ಸಂಚಯಗೊಂಡಂಥದು. ಕ್ರಿಸ್ತನ ವ್ಯಕ್ತಿತ್ವವನ್ನು ಮತ್ತು ಪರಿಸ್ಥಿತಿಗಳನ್ನು ನಮಗೆ ಕೊಟ್ಟಾಗಿದೆ : ಆಗ,– then all the disciples left him, and fled'—ತೀರಾ ಅನಿರೀಕ್ಷಿತವಾದ ಈ ಹೇಳಿಕೆಯ ಪರಿಣಾಮವನ್ನು ಬೇರಾವ ಪದಗಳಾಗಲಿ, ಕಲೆಯಾಗಲಿ ಹೆಚ್ಚಿಸುವುದು ಅಸಾಧ್ಯ. ಇಂಥ ಒಂದು ಸಂದರ್ಭದಲ್ಲಿ, ಇಲ್ಲಿರುವ ಪದಗಳ ಶಕ್ತಿ ಪ್ರಕೃತಿಯ ಶಕ್ತಿಗಳಿಗೆ ಹೋಲಿಸಬಹುದಾದ ಶಕ್ತಿ. ಹೀಗೆಯೇ 'Then he went out and wept bitterly' ಎನ್ನುವುದಕ್ಕಿಂತ ಹೆಚ್ಚೇನನ್ನು ಪೀಟರನ ಬಗೆಗೆ ತಿಳಿಸುವ ಆವಶ್ಯಕತೆ ಇಲ್ಲ. ಅವನ ಸಂವೇದನೆಗಳು ಏನಾಗಿದ್ದವೆಂಬುದು ನಮಗೆ ತಿಳಿದಿದೆ ; ಅವುಗಳನ್ನು ವರ್ಣಿಸಲು ಅಥವಾ ವ್ಯಾಖ್ಯೆಯ ರೂಪದಲ್ಲಿ ಹಿಡಿದಿಡಲು ಪ್ರಯತ್ನಿಸುವುದೆಂದರೆ ನಮಗೆ ತಿಳಿದಿದ್ದ ವಿಷಯಗಳಿಂದ ಕೆಲವನ್ನು ಕಳೆದಂತೆ. ಸುವಾರ್ತಾ ಕಥನಗಳ ಉದ್ದಕ್ಕೂ ಇಂಥದೇ ಭಾವಾತ್ಮಕ ಅರ್ಥಪೂರ್ಣತೆಯಿಂದ ಉದ್ದೀಪ್ತವಾದ ಮಾತುಗಳಿವೆ. 'My God, My God why hast thou forsaken me ?' — ಇದು ಪ್ರಪಂಚ ಇದುವರೆಗೆ ಕೇಳಿದ ಆರ್ತಧ್ವನಿಗಳಲ್ಲಿ ಅತಿ ಭಯಂಕರವಾದುದು. ಹೀಬ್ರುವಿನಲ್ಲಿ ಇದನ್ನು ಹೇಳಿದಾಗಲೂ— ನಮ್ಮಲ್ಲಿ ಹೆಚ್ಚಿನವರಿಗೆ ತಿಳಿದಿರುವ ಹೀಬ್ರು ಪದಗಳು ಇವಿಷ್ಟೆ: ಎಲಿ ಎಲಿಲಮ ಸಬಕ್ತಾನಿ—ಇದರ ಶಕ್ತಿ ಕಡಿಮೆ ಏನಲ್ಲ. ಅರ್ಥ ತಿಳಿದಿದ್ದೇ ಇದೆ.

ಹಾಗೆಯೇ, ಇನ್ನೊಂದು ಬಗೆಯ ಶೈಲಿಯಲ್ಲಿ, ಕಳೆದ ಪ್ರವಚನದಲ್ಲಿ ನಾನು ಅಷ್ಟಕ್ಕೆ ಬಿಟ್ಟ ಒಂದು ವಾಕ್ಯವಿದೆ ; ವಾಲ್ಟರ್ ಪೇಟರ್ ಈ ವಾಕ್ಯದ ಬಗೆಗೆ 'ಅದರಲ್ಲೊಂದು ರಹಸ್ಯವಿದೆ—ಏನೋ ಪಾರಲೌಕಿಕವಾದುದು ಇದೆ,' ಎಂದಿದ್ದನು.

Come unto me all ye that labour and are heavy ·n, and I will give you rest. Take my yoke upon and learn of me ; for I am meek and lowly in : and ye shall find rest unto your souls. For my s easy and my burden is light.

ಇಲ್ಲಿ ಭಾಷೆಯೇ ಅತಿ ಸುಂದರವಾದುದು. ಮೊದಲನೆ ವಾಕ್ಯದ ಗತಿ, ನಾದ ಅತಿ ನಾಜೂಕಾದುದು ; ಇದು ಗ್ರೀಕಿಗಿಂತ ಸಾವಿರ ಪಟ್ಟು ಹೆಚ್ಚು ಸುಂದರವಾದುದು ಎಂಬುದರ ಬಗೆಗೆ ನನಗೆ ಸಂದೇಹವಿಲ್ಲ—ನನಗೆ ಗ್ರೀಕ್ ಎಂದಾದರೂ ತಿಳಿದಿತ್ತಾದರೆ, ಈಗ ನಾನದನ್ನು ಮರೆತಿದ್ದೇನೆ. ಆದರೂ, ಆದರೂ—ಗ್ರೀಕ್‌ನಲ್ಲಿ ಇದರ ಒಟ್ಟು ಪರಿಣಾಮ ಅಷ್ಟೊಂದು ಭಿನ್ನವಾಗಿರುವುದೇ ? ನನಗೇನೋ ಅನುಮಾನ. ಈ ವಾಕ್ಯವನ್ನು ಯಾವ ಭಾಷೆಯಲ್ಲಿ ಆಡಿದರೂ, ಅದು ನಿಮ್ಮನ್ನು ಆಳವಾಗಿ ಭಾವಪರವಶರನ್ನಾಗಿ ಮಾಡುವುದು. ಎಲ್ಲರಲ್ಲೂ ಇರುವಂಥ ಮತ್ತು ನೀವು ಪಡೆದಿರುವ ಮಾನವೀಯತೆ ಈ ಪದಗಳು ನೀಡುವ ಸಾಂತ್ವನವನ್ನು ಅರಸಿ ಕೈ ಚಾಚುತ್ತದೆ ; ಎಲ್ಲ ಮನುಷ್ಯರಲ್ಲಿ ಇರುವ ಎಲ್ಲ ದಣಿವು ಮತ್ತು ಆಶಾಭಂಗಗಳು, ವೇದನೆ ಮತ್ತು ಸಂದೇಹಗಳು, ಪ್ರಪಂಚವನ್ನೇ ಪರಿವರ್ತಿಸಬಹುದಾದ ಈ ಪ್ರೀತಿಯಲ್ಲಿ ಸಣ್ಣವಾದ ಒಂದು ಪಾಲನ್ನು ಪಡೆಯಲು ಕೈ ಚಾಚುತ್ತವೆ. ಅತ್ಯಂತ ನಿರ್ಭಾವ ಪರೀಕ್ಷೆಗೊಳಪಡಿಸಿದರೂ, ಇದು ಶ್ರೇಷ್ಠ ಶೈಲಿಯಾಗಿಯೇ ಉಳಿಯುವಂಥದು. ಇದನ್ನು ಮತ್ತೊಮ್ಮೆ ಹೇಳಬಲ್ಲ ವ್ಯಕ್ತಿ ಹುಟ್ಟಿಬಂದಾಗ ಪ್ರಪಂಚದ ಮುಖವೇ, ಬಹುಶಃ, ಬದಲಾಗುವುದು. ಏಕೆಂದರೆ ಇಲ್ಲಿ ಅಭಿವ್ಯಕ್ತಗೊಂಡ ಪ್ರೀತಿಯಲ್ಲಿ ಒಂದು ಗಾಢ ರಹಸ್ಯವಿದೆ ಎಂಬುದು ನಿರ್ವಿವಾದ.

ಆದರೆ ನಮ್ಮ ಆಧುನಿಕ ಲೆಕ್ಕಾಚಾರದಲ್ಲಿ ಇಂಥ ಭಾವಗಳನ್ನು ಗಣನೆಗೆ ತೆಗೆದುಕೊಳ್ಳಬೇಕಾಗಿದೆ ಎಂಬ ಭಯ ಅಷ್ಟೇನಿಲ್ಲ. ತನ್ನ ಓದುಗ ವರ್ಗದ ಧಾರ್ಮಿಕ ಪರಿಕಲ್ಪನೆಗಳನ್ನು ಮತ್ತು ಸಂವೇದನೆಗಳನ್ನು ಒಬ್ಬ ಆಧುನಿಕ ಲೇಖಕ ಅವಲಂಬಿಸಿರುವ ಸಾಧ್ಯತೆಯೂ ಅಂಥ ಪರಿಕಲ್ಪನೆಗಳು ಮತ್ತು ಸಂವೇದನೆಗಳು ಅವನಲ್ಲಿಯೇ ಪ್ರಬಲವಾಗಿರುವುದೂ ಅಷ್ಟಕಷ್ಟೆ. ಕೆಲವೊಂದು ನಿರ್ದಿಷ್ಟ ಬಗೆಗಳ ಭಾವಾತ್ಮಕ ಅನುಭವಗಳಿಗೆ ಮನಸ್ಸು ಮೊದಲೇ ಒಲಿದಿರುವುದು ಇಂಗ್ಲಿಷ್ ಬೈಬಲಿನ ಶೈಲಿಯನ್ನು ರೂಪಿಸುವುದರಲ್ಲಿ ಎಷ್ಟರಮಟ್ಟಿಗೆ ಪಾತ್ರವನ್ನು ವಹಿಸುತ್ತದೆಯೋ, ಅಷ್ಟರಮಟ್ಟಿಗೆ ನಾವದನ್ನು ಲೆಕ್ಕಕ್ಕೆ ಸೇರಿಸಬೇಕಾಗಿಲ್ಲ.

ಸಮಕಾಲೀನ ಸಮಾಜದ ಮುನ್ನೊಲವು ಬೇರೆಯೇ ವರ್ಗದಲ್ಲಿ, ಮತ್ತು, ಒಟ್ಟಿನಲ್ಲಿ ಕೆಳಮಟ್ಟದಲ್ಲಿ ಇರುವಂಥದು ; ಅದನ್ನು ಅವಲಂಬಿಸಿ ಇರಬೇಕು ಎಂದು

ಪ್ರಾಮಾಣಿಕ ಲೇಖಕನಿಗೆ ಅನಿಸುವುದೇ ಇಲ್ಲ—ಎಷ್ಟರಮಟ್ಟಿಗೆ ಇದು ಹೀಗೆ ಎಂದರೆ, ಆ ಮುನ್ನೋಲವನ್ನು ಉದ್ದೇಶಿಸುವ ಯಾವುದೇ ಪ್ರವೃತ್ತಿಯನ್ನು ತಾನು ಸದಾಕಾಲ ವಿರೋಧಿಸುತ್ತಿರುವುದು ಅವನ ಗಮನಕ್ಕೆ ಬರುತ್ತದೆ. ಸತ್ತ್ವರಹಿತವಾದ ಅನೆ ಅಮೂರ್ತ ಕಲ್ಪನೆಗಳು ಆಧುನಿಕರ ಮನಸ್ಸನ್ನು ಭ್ರಾಂತಗೊಳಿಸಿವೆ—ಪ್ರಜಾಪ್ರ ಸ್ವಾತಂತ್ರ್ಯ, ಕ್ರಾಂತಿ, ಗೌರವ—ಈ ಪದಗಳನ್ನು ಉಪಯೋಗಿಸುವವರಲ್ಲಿ ಅವುಗಳ ಅರ್ಥದ ಕಲ್ಪನೆ ಕಿಂಚಿತ್ತಾದರೂ ಇಲ್ಲ ; ಅವು ಅರ್ಥಪೂರ್ಣವಾಗಿ ಇ ಅಪೇಕ್ಷೆಯೂ ಇಲ್ಲ. ಸುವೇದ್ಯವಾಗಿರುವ ಈ ಉದಾಹರಣೆಗಳು ಅಷ್ಟೊಂ ವಾಗಿ ವಿಶಿಷ್ಟವಾದುವು ಏನಲ್ಲ ; ಆಧುನಿಕರ ಸಂವೇದನೆಯು ಪಡಪೋ ಆಧುನಿಕರು ಯೋಚಿಸುವ ವಿಧಾನದ ನಿಸ್ಸತ್ತ್ವಕ್ಕೆ ನಿಜವಾಗಿ ಹೋಲಿಸುವುದು ಸಾಧ್ಯ ವಾಗದು. ಪ್ರಖ್ಯಾತನಾಗಿರುವ ಮತ್ತು ತಕ್ಕಮಟ್ಟಿಗೆ ಸುಪರಿಚಿತನಾಗಿರುವ ಒಬ್ಬ ಕಾದಂಬರಿಕಾರನ ಕೆಲವು ವಾಕ್ಯಗಳನ್ನು ನಾನು ತೆಗೆದುಕೊಳ್ಳಬಹುದು, ಅಷ್ಟೆ — ಅವನ ಪುಸ್ತಕ ಹತ್ತಿರವೇ ಸಿಕ್ಕಿತು. ನಾವು ಗಮನಿಸಬೇಕಾದ ಪದಗಳು ಕಾಣಿಸಿ ಕೊಳ್ಳುವ ಪ್ರಣಯ ದೃಶ್ಯ ಅಷ್ಟೊಂದು ಹಾಸ್ಯಾಸ್ಪದವಾಗಿರದಿದ್ದರೆ, ಬಹುಮಟ್ಟಿಗೆ, ಅದು ಜುಗುಪ್ಸೆಯನ್ನು ಉಂಟುಮಾಡುವಂಥದು ಆಗುತ್ತಿತ್ತು. ಗಂಡಸು 'You royal creature' ಎಂದು ಎರಡು ಬಾರಿ, ಮತ್ತು' 'you unutterable queen' ಎಂದು ಒಮ್ಮೆ ಹೆಂಗಸನ್ನು ಸಂಭೋಧಿಸಿದ್ದಾನೆ. ಈ ಕೊನೆಯದಕ್ಕೆ, 'Oh no ! I'm tiny child' ಎಂದು ಅವಳು ಉತ್ತರ ಕೊಟ್ಟಿದ್ದಾಳೆ. ಈಗ ನನ್ನ ಅವತರಣಿಕೆ ಬರುತ್ತದೆ.

He laid his cheek against her. ' I am your baby and your father. Your baby taken home again and reborn. Your father to tend you always.'

ಆಧುನಿಕ ಭಾವಾತಿರೇಕದ ಅತಿ ಅಪ್ರಿಯವಾದ ಒಂದು ಉದಾಹರಣೆ ಇದು ಎಂದು ನಾನು ಒಪ್ಪಿಕೊಳ್ಳುತ್ತೇನೆ ; ಆದರೆ ಇಂಥ ವಿಪರೀತ ಅಭಿವ್ಯಕ್ತಿಗಳಲ್ಲಿ ಮಾತ್ರ ಭಾವಾತಿರೇಕದ ಒಂದು ಪ್ರವೃತ್ತಿಯನ್ನು ಗುರುತಿಸುವುದು ಸಾಧ್ಯ. ಈ ಸಂಭಾಷಣೆ ನಿಜವೆಂದು ಓದುಗರಿಗೆ ತೋರುವುದೆಂದು ಲೇಖಕ ನಂಬಿದ್ದನೋ, ನಾಕಾಣೆ, ಏನಿದ್ದರೂ ಇಂದು ಪ್ರಚಲಿತವಾಗಿರುವ ಟೊಳ್ಳು ಭಾವಾತ್ಮಕತೆಯನ್ನು ಅವನು ಉದ್ದೇಶಿಸುತ್ತಿದ್ದನು. ಸಮಾಜದ ಬೇರಾವ ಸ್ಥಿತಿ ಲೇಖಕನಿಗೆ ಇದಕ್ಕಿಂತ ಹೆಚ್ಚು ಅಪಾಯಕಾರಿಯಲ್ಲ ; ಪ್ರತಿ ಯೊಂದು ಬೆಣೆಯೂ ಒಂದೇ ಸ್ವರವನ್ನು ಹೊರಡಿಸುವಂಥ ಪಿಯಾನೊ ವಾದ್ಯವನ್ನು ತಾನು ನುಡಿಸುತ್ತಿದ್ದೇನೆ ಎಂದು ಅವನು ಕಂಡುಕೊಂಡ ಪರಿಸ್ಥಿತಿ ಇದು. ಅದರಿಂದ ಸ್ವಲ್ಪವಾದರೂ ವೈವಿಧ್ಯವುಳ್ಳ ಪ್ರತಿಧ್ವನಿಯನ್ನು ಪಡೆಯಬೇಕೆಂಬ ಹತಾಶ ಪ್ರಯತ್ನದಲ್ಲಿ ಇದ್ದ ವಿಷಯ ಉತ್ಪ್ರೇಕ್ಷಿಸಬೇಕೆಂಬ, ಬೆಣೆಗಳನ್ನು ಸುತ್ತಿಗೆಯಿಂದ ಬಡಿದುಹಾಕಬೇಕೆಂಬ ಆಸೆ ಅವನನ್ನು ಬಲವಾಗಿ ಸೆಳೆಯುತ್ತದೆ. ಈ ಬಗೆಯ ನಿರ್ಬಂಧ — ಆಧುನಿಕ

ಬರವಣಿಗೆಯ ವಿಶಿಷ್ಟ ದುರ್ಗುಣವಿದು—ಲೇಖಕ ಉಪಯೋಗಿಸತಕ್ಕಂಥ ನಿರ್ಬಂಧದಿಂದ ಸಂಪೂರ್ಣವಾಗಿ ಭಿನ್ನವಾದುದು. ಅಲಂಕಾರ ಶಾಸ್ತ್ರದಲ್ಲಿ ಪ್ರತಿಯೊಂದು ಯುಗವೂ [illegible]ನಗೆ ವಿಶಿಷ್ಟವಾಗಿರುವ ಒಂದು ರೂಪವನ್ನು ಪಡೆದಿರುತ್ತದೆ, ನಿಜ, ಆದರೆ ಮೇಲೆ [illegible]ವಂಥ ಸೆಳೆತ ಇಷ್ಟು ಬಲವಂತವೂ ಮೋಸಗೊಳಿಸು[illegible]ಂಥದೂ ಆಗಿದ್ದ ಯುಗ [illegible]ದು ಇತ್ತೇ ಎಂಬುದು ನನಗೆ ಅನುಮಾನ.

[illegible]ರಳುಗಟ್ಟುವಿಕೆ ಎ[illegible] [illegible]ಯೆಗೆ ವಿರೋಧವಾದುದು [illegible]ಶಾಸ್ತ್ರ. ಭಾವವನ[illegible] [illegible]ಣದ ಮೇಲೆ—ಮೂಲಕಾರಣವೇ [illegible]ಕೊಳ್ಳಾಗುತ್ತದೆ — [illegible]ಲು, ಐಂದ್ರಿಯಿಕ ಕಾಣ್ಕೆಗಳ ಹಾಯದಿಂದ ನಿಮ್ಮ ಚಿಂತನೆಯನ್ನು [illegible]ಗೊಳಿಸಿ ಅದಕ್ಕೆ ಖಚಿತ ರೂಪರೇಷೆಕೆ ಸಯನ್ನು ಕೊಡುವ ಬದಲು, ಭಾವ[illegible] ಅಥವಾ ಚಿಂತನೆಯನ್ನು ಪದಗಳ ಮೂಲ ಉತ್ಪ್ರೇಕ್ಷಿಸುವ ಚಟಕ್ಕೆ ನೀವು ಬಲಿ ಬೀಳುತ್ತೀರಿ. ನಿಮ್ಮ ಅಭಿವ್ಯಕ್ತಿಯನ್ನು ಹೆಚ್ಚು ಖಚಿತ ಮತ್ತು ಸಾಚಾ ಆಗಿ ಮಾಡಲು ಪ್ರಯತ್ನಿಸುವ ಬದಲು ಯಾವುದೋ ಒಂದು ಶೋಕಿಗಾಗಿ ಅದನ್ನು ನೀವು ಸುಳ್ಳಾಗಿಸುತ್ತೀರಿ. ಇದರ ಪರಿಣಾಮವೆಂದರೆ ಸೂಕ್ಷ್ಮ ವಿವೇಚನೆಯ ಶಕ್ತಿಯನ್ನು ಸಂಪೂರ್ಣವಾಗಿ ಕಳೆದುಕೊಳ್ಳುವುದು ; ನಿಮ್ಮ ಭಾವವನ್ನು ಗಟ್ಟಿಯಾದ ಮತ್ತು ನಿರ್ದಿಷ್ಟ ನೆಲೆಗೆ ಕೊಂಡೊಯ್ಯುವ ಬದಲು—ಹೀಗೆ ಆ ಭಾವ ಶಾಶ್ವತವಾಗಿ ಬೇರ್ಪಟ್ಟು ನಿಲ್ಲುತ್ತದೆ—ನೀವಿದನ್ನು ಅಮಿತ ಶಕ್ತಿಯ ಮಟ್ಟಕ್ಕೇರಿಸುತ್ತೀರಿ. ಗುಣಮಟ್ಟದ ಸ್ಥಾನದಲ್ಲಿ ಪರಿಮಾಣವನ್ನು ಇರಿಸುವ ಪ್ರಯತ್ನ ಮಾಡುತ್ತೀರಿ ಮತ್ತು ಅಮಿತ ಶಕ್ತಿಯ ಮಟ್ಟಕ್ಕೇರಿಸಿದ ಎಲ್ಲ ಪರಿಮಾಣಗಳು ಒಂದೇ ಎಂಬುದನ್ನು ಮರೆಯುತ್ತೀರಿ. ಬೆಣೆಗಳನ್ನು ಸುತ್ತಿಗೆಯಿಂದ ಬಡಿದು ಹಾಕಿದರೆ ತಂತಿಗಳು ಮುರಿದು ಹೋಗುತ್ತವೆ ಅಷ್ಟೆ.

ಇಂಗ್ಲಿಷ್ ಬೈಬಲಿನ ಶೈಲಿಯ ಚರ್ಚೆಯನ್ನು ಪುನಃ ಎತ್ತಿಕೊಳ್ಳುವುದಾದರೆ: ಶಬ್ದ ಕೋಶದ ಶುದ್ಧತೆಯನ್ನು ಸದ್ಯಕ್ಕೆ ಬದಿಗಿರಿಸಿಕೊಂಡರೆ—ಅದನ್ನು ಉದ್ದೇಶಪೂರ್ವಕವಾಗಿ ಅಂದಿನ ಗದ್ಯಕ್ಕಿಂತ ಹೆಚ್ಚು ಸರಳವನ್ನಾಗಿ ಮತ್ತು ಪರಿಶುದ್ಧವನ್ನಾಗಿ ಮಾಡಿದ್ದರು ಎಂದು ನನ್ನಣಿಕೆ—ಈ ಗ್ರಂಥದ ಅಡಿಗಟ್ಟಾಗಿರುವ ಶೈಲಿಗಳಲ್ಲಿ ಶೇಕ್ಸ್‌ಪಿಯರ್, ಬನ್ಯನ್ ಮತ್ತು ಜನಪ್ರಿಯ ಸಾಹಿತ್ಯಗಳಿಗೆ ಇರುವಷ್ಟಾದರೂ ವ್ಯತ್ಯಾಸ ಇದೆ. ಇಲ್ಲಿ ಅತ್ಯುನ್ನತ ಮಟ್ಟದ ಕಾವ್ಯವಿದೆ ; ಅತ್ಯಂತ ಸರಳ ರೂಪದ ಮತ್ತು ಅತ್ಯಂತ ಒರಟು ರೂಪದ ನಾಟಕೀಯ ಕಥನವಿದೆ ; ಲೇಖಕನಂತೆ, ಓದುಗರೂ ನಂಬಿದ್ದ ಕಳಕಳಿಯ ಏಕದೇವವಾದದಿಂದ ತನ್ನ ಭಾವಾತ್ಮಕ ಪ್ರಖರತೆಯನ್ನು ಪಡೆಯುವ ಧಾರ್ಮಿಕ ಕಥೆಯಿದೆ. ಇವನ್ನು ಪರಸ್ಪರ ಹೋಲಿಸುವುದಕ್ಕಿಂತ, ಇವುಗಳ ನಡುವಿನ ವ್ಯತ್ಯಾಸಗಳನ್ನು ಗುರುತಿಸುವುದೇ—ಹೀಗೆ ಮಾಡುವಾಗ ತೋರಿಕೆಯ ಅಗೌರವದ ಅಪಾಯವಿದ್ದರೂ ಒಳ್ಳೆಯದು. ಓದುಗನ ನಂಬಿಕೆಯ ಪ್ರಮಾಣವನ್ನು ಅನುಸರಿಸಿ ಅವನ ಭಾವಾತ್ಮಕ ವೇದನೀಯತೆ ಹೆಚ್ಚು ಕಡಿಮೆಯಾಗುತ್ತದೆ ಎಂಬುದು ಸುವೇದ್ಯ. ವಿಕಾಸವಾದವನ್ನು

ಅಥವಾ ನೀಹಾರಿಕಾವಾದವನ್ನು ನಂಬಿರುವವನಿಗಿಂತ, ಜೆನೆಸಿಸ್‌ನಲ್ಲಿ ಹೇಳಿರುವ ಸೃಷ್ಟಿ ಕ್ರಮವನ್ನು ನಂಬಿರುವವನಿಗೆ ಆ ಗ್ರಂಥ ಹೆಚ್ಚು ಹೃದಯ ಸ್ಪರ್ಶಿಯಾಗಿ ಇರುತ್ತದೆ ; ಯೇಸುವಿನಲ್ಲಿ ನಂಬಿಕೆ ಇಲ್ಲದವನಿಗಿಂತ ಅವನನ್ನು ನಂಬಿದವನು ಸುವಾರ್ತಾಕಥನದಿಂದ ಹೆಚ್ಚು ಆಳವಾಗಿ ಭಾವಪರವಶನಾಗುವನು. ಹೀಗಿದ್ದರೂ, ನನಗಿನ್ನೂ ಅನುಮಾನ ; ಒಟ್ಟಿನಲ್ಲಿ, ಸುವಾರ್ತಾಕಥನದ ಒಂದೊಂದು ಪುಟವೂ ವಿಶ್ವಾಸಿಯ ಮನಸ್ಸನ್ನು ಹೆಚ್ಚು ಆಳವಾಗಿ ಸ್ಪರ್ಶಿಸುತ್ತದೆ ; ಸಾಹಿತ್ಯವಾಗಿ ಸುವಾರ್ತೆಯನ್ನು ಓದುವವನ ಮನಸ್ಸನ್ನು ಅಲ್ಲಿಯ ಕೆಲವು ನಿರ್ದಿಷ್ಟ ಪುಟಗಳು ಹೆಚ್ಚು ಆಳವಾಗಿ ಸ್ಪರ್ಶಿಸುತ್ತವೆ ಎಂದು ಹೇಳುವುದು ಮೇಲು ಎಂದು ನನ್ನ ಭಾವನೆ. 'My God, my God why hast thou forsaken me ?' — ಈ ಮಾತುಗಳು ಕ್ರಿಸ್ತನಿಗಿಂತಲೂ ಅಜ್ಞೇಯತಾವಾದಿಯ ಮನಸ್ಸನ್ನು ಹೆಚ್ಚು ವಿಕ್ಷಿಪ್ತಗೊಳಿಸುವಂಥವು.

ಸಂಕ್ಷಿಪ್ತವಾದ ಮತ್ತು ಕೊರತೆಗಳು ಇನ್ನೂ ಉಳಿದಿರುವ, ಬೈಬಲ್ಲಿನ ವಿಷಯದ ಈ ಚರ್ಚೆ ಇದೊಂದು ಅಂಶವನ್ನಾದರೂ ಸೂಚಿಸುತ್ತದೆ : ಓದುಗರು ಬೈಬಲನ್ನು ಓದುವಾಗ ತಮ್ಮೊಡನೆ ತರುವಂಥ ಭಾವಾತ್ಮಕ ಮತ್ತು ಬೌದ್ಧಿಕ ಮುನ್ನೊಲವುಗಳು ಬೈಬಲನ್ನು ರೂಪಿಸುತ್ತವೆ ಎಂಬ ದೃಷ್ಟಿಯಿಂದ ಈ ಗ್ರಂಥವನ್ನು ನೋಡಿದರೆ, ಎಲ್ಲ ಸಾಹಿತ್ಯ ಪ್ರಕಾರಗಳ, ಉಪಯುಕ್ತವಾದ, ಪ್ರಾತಿನಿಧಿಕ ಸಂಗ್ರಹವೊಂದು ನಮಗೆ ಸಿಗುತ್ತದೆ. ಇಂಥ ಸಾಹಿತ್ಯ ಸಂಗ್ರಹವನ್ನು ಪ್ರಕಟಿಸುವ ಯೋಚನೆಯನ್ನು ಮಾಡುವಷ್ಟು ದೂರ ಈ ಪರಿಗಮನಕ್ರಮ ಯಾರನ್ನೂ ಕೊಂಡೊಯ್ಯಲಾರದೆಂದು ನನ್ನ ಭಾವನೆ ; ಆದರೆ, ಆದರ ಉಪಫಲಿತವಾಗಿ ದೊರಕುವ ಶೈಲಿಯ ಅಂಗವಿನ್ಯಾಸ ಉಪಯುಕ್ತವಾದುದು. ಎಂದರೆ, 'He went out and wept bitterly'— ಈ ವಾಕ್ಯ ಗಮನಾರ್ಹವಾದ ಒಂದು ಉದಾಹರಣೆಯಾಗಿರುವ ಸರಳ, ಹಾಗೂ ವಿಶೇಷವಾಗಿ ನಮ್ಮನ್ನು ಭಾವಪರವಶರನ್ನಾಗಿ ಮಾಡುವ ನಾಟಕೀಯ ಪರಿಣಾಮಗಳನ್ನು ಸಾಹಿತಿಕ ಶೈಲಿಯ ಪ್ರಮಾಣಗಳೆಂದು ಪರಿಗಣಿಸಲು ನಾವು ಆರಂಭಿಸಬಹುದು ಎಂದು ನಾನು ಹೇಳುತ್ತಿರುವುದು. ಅವುಗಳಿಗೆ ಪೂರ್ವಭಾವಿಯಾಗಿ ಬಂದಿದ್ದ ಕಥಾನಕಗಳು ಅವುಗಳಿಗೆ ಶಕ್ತಿಯನ್ನು ಸರಬರಾಜು ಮಾಡುತ್ತವೆ ; ಪರಿಸ್ಥಿತಿಗಳ ಒಂದು ಚಿತ್ರವನ್ನು ನಾವು ಮನಸ್ಸಿನಲ್ಲಿ ರೂಪಿಸಿರುತ್ತೇವೆ ; ವಿಶ್ವಾಸದ್ರೋಹಕ್ಕೆ ಒಳಗಾದ ವ್ಯಕ್ತಿಯ ಸ್ವಭಾವವನ್ನು ಅವನ ಮಾತಿನಲ್ಲಿಯೇ ನಾವು ತಿಳಿದುಕೊಂಡಿದ್ದೇವೆ. ಒಬ್ಬ ವಿಮರ್ಶಕ ಹೇಳಿದಂತೆ 'ವಿಭವ' ಮತ್ತು 'ಚಲನ' ಭಾಷೆಗಳೆಂಬ ಭೇದವನ್ನು ನಾವು ಬಳಸುವುದಾದರೆ, ಪೀಟರನನ್ನು ವರ್ಣಿಸುವ ಈ ಆರು ಪದಗಳು 'ವಿಭವ' ಪದಗಳು ಅಷ್ಟೆ ಎಂದು ಹೇಳಬಹುದು.

'And the Lord said' ಇದು ವಿಭವ ಭಾಷೆಯ ಒಂದು ಉದಾಹರಣೆ. ಇದರ ಶಕ್ತಿ ಬರುವುದು ಸಂಪೂರ್ಣವಾಗಿ ಓದುಗರ ಮನಸ್ಸಿನಿಂದ. 'Come unto me all ye that labour' ಇದು ಭಾಗಶಃ ಚಲನ — ಪದಗಳಲ್ಲಿರುವ ಸೌಂದರ್ಯ ಧನಾತ್ಮಕ ಪರಿಣಾಮವನ್ನು ಪಡೆದಿದೆ — ಮತ್ತು ಭಾಗಶಃ ವಿಭವ :

ಇಲ್ಲಿ ಉದ್ದೇಶಿಸಿದ ಹಂಬಲ ಮನುಷ್ಯರಲ್ಲಿ ಸಾರ್ವತ್ರಿಕವಾದುದು. ವಿಭವದಿಂದ ಚಲನಾಂಶಗಳನ್ನು ಬೇರ್ಪಡಿಸಲು ಪ್ರಯತ್ನಿಸಿದರೆ ಶೈಲಿಯನ್ನು ವಿಶ್ಲೇಷಿಸಲು ಸಾಧ್ಯವಾಗಬಹುದು ; ಆದರೂ ಇವೆರಡು ಅಂಶಗಳು ಬೇರ್ಪಡಿಸಲಾರದಷ್ಟು ಪರಸ್ಪರ ಹೆಣೆದುಕೊಂಡಿರುವುದನ್ನು ನೋಡಿದಾಗ ಒಂದು ಅಂಶ ಇನ್ನೊಂದಕ್ಕಿಂತ ಹೆಚ್ಚು ಪ್ರಧಾನವಾಗಿದೆ ಎಂದು ಸೂಚಿಸುವುದಷ್ಟನ್ನೇ ಅಲ್ಲದೆ ಹೆಚ್ಚೇನನ್ನು ಮಾಡುವ ಸಾಧ್ಯತೆ ನನಗೆ ತೋಚುವುದಿಲ್ಲ. 'But the iniquity of oblivion blindly scattereth her poppy'—ಇದು ಪೂರ್ಣವಾಗಿ ಚಲನ ಎಂದು ಕಾಣುತ್ತದೆ, ಎಂದರೆ, ತನ್ನ ಭಾವವನ್ನು ಅದು ತಾನೇ ಪೂರ್ತಿಯಾಗಿ ಸೃಷ್ಟಿಸುತ್ತದೆ : ಯಾವ ಸನ್ನಿವೇಶದ ಆವಶ್ಯಕತೆಯೂ ಇಲ್ಲ, ಮತ್ತು ನಾವದನ್ನು ಓದುವಾಗ ಯಾವ ಭಾವವನ್ನೂ ನಮ್ಮ ಜೊತೆಯಲ್ಲಿ ನಾವು ತರಬೇಕಿಲ್ಲ. ಮಿ. ಬೆರ್ಗ್‌ಸೊನನ ಮಾತುಗಳಲ್ಲಿ, ಇದು ಬಿಡುಗಡೆಗೊಳಿಸುವ ಕಾರಣವಷ್ಟೆ ಅಲ್ಲ, ಇದೊಂದು ಸೃಜನಾತ್ಮಕ ಕಾರಣ. ಆದರೆ, ಇಂಥ ವಿಶ್ಲೇಷಣೆಯನ್ನು ಎಷ್ಟೇ ದೂರ ನಾವು ಕೊಂಡೊಯ್ದರೂ, ಅದು ನಮಗೆ ಹೆಚ್ಚು ಸಹಾಯವನ್ನು ಮಾಡಲಾರದು. ಒಂದು ಒಟ್ಟು ತೀರ್ಮಾನ ಬೇಕಿದ್ದರೆ, ಬೇರೆಲ್ಲ ಅಂಶಗಳು ಸಮಾನವಾಗಿದ್ದಾಗ, ಚಲನಾಂಶಗಳು ಹೆಚ್ಚು ಪ್ರಧಾನವಾಗಿರುವ ಶೈಲಿ ಹೆಚ್ಚು ಅಪೇಕ್ಷಣೀಯವೆಂದು ಹೇಳಬಹುದು ; ಆದರೆ, ಬೇರೆಲ್ಲ ಅಂಶಗಳೆಂದಾಗ, ಒಂದು ಉಚಿತವಾದ ಕಥಾವಸ್ತುವಿನಲ್ಲಿ ಅಥವಾ ಪುರಾಣಕಥೆಯಲ್ಲಿ ಕಂಡುಬರುವ ಲೇಖಕನ ಸರ್ವ ವ್ಯಾಪಕ ಧೋರಣೆಯೂ ಅದರಲ್ಲಿ ಸೇರುವುದರಿಂದ, ಪ್ರಧಾನವಾಗಿ ಭಾಷೆಯ ವಿಶ್ಲೇಷಣೆಯ ಆಧಾರದ ಮೇಲೆ ಶೈಲಿಗೆ ಬೆಲೆ ಕಟ್ಟುವುದೆಂದರೆ, ಹೆಚ್ಚು ಕಡಿಮೆ, ಉಡುಪನ್ನು ನೋಡಿ ವ್ಯಕ್ತಿಗೆ ಬೆಲೆಕಟ್ಟಿದಂತೆಯೇ.

ಇಂಗ್ಲಿಷ್ ಬೈಬಲಿನ ಶೈಲಿಯಲ್ಲಿ ತಪ್ಪೇ ಇರುವುದಿಲ್ಲ ಎಂಬ ಧಾರ್ಮಿಕ ನಿಷ್ಠೆಯ ನಂಬಿಕೆಯನ್ನು ಆಕ್ಷೇಪಿಸದೆ ಬಿಡುವುದರಲ್ಲಿ ಇರುವ ಮುಖ್ಯವಾದ ಅಪಾಯವೇ ಇದು. ಹಾಗೆ ಮಾಡಿದಾಗ, ಶೈಲಿಯ ಅವಶ್ಯ ಅಂಶಗಳನ್ನು ಬಿಟ್ಟು ಗೌಣತೆಗಳ ಮೇಲೆ ನಮ್ಮ ಗಮನ ಕೇಂದ್ರೀಕೃತವಾಗಲು ನಾವು ಬಿಡುತ್ತೇವೆ. ಇಂಗ್ಲಿಷ್‌ನಲ್ಲಿ ಅತ್ಯುತ್ಕೃಷ್ಟವಾದ ಎರಡು ಸಾಹಿತ್ಯ ಕೃತಿಗಳಿವೆ—ಬೈಬಲ್ ಮತ್ತು ಶೇಕ್ಸ್‌ಪಿಯರ್ : ಈ ಮಾತಿಗೆ—ಅನೇಕಾವರ್ತಿ ಕೇಳಿಬರುವ ಮಾತಿದು — ಆಕ್ಷೇಪಣೆಯನ್ನು ಎತ್ತುವುದು ಕಷ್ಟ ; ಆದರೆ ಇದನ್ನು ಕೇಳಿದಾಗಲೆಲ್ಲ ನನಗೇನೋ ಮುಜುಗರ ಎಂದೆನಿಸುತ್ತದೆ. ಈ ಮಾತನ್ನು ಹೇಳುವ ವ್ಯಕ್ತಿ ಶೇಕ್ಸ್‌ಪಿಯರನನ್ನು ಹೇಗೆ ಮೆಚ್ಚಬೇಕೋ ಹಾಗೆ ಮೆಚ್ಚುವುದಿಲ್ಲ ಮತ್ತು ಬೈಬಲಿನ ವಿಷಯ ತೀರಾ ಪ್ರಾಮಾಣಿಕವಾಗಿಲ್ಲ ಎಂಬ ಸಂದೇಹ ನನಗಿದೆ. ಆಕ್ಷೇಪಣೆ ಎತ್ತುವುದು ಕಷ್ಟ, ಏಕೆಂದರೆ, ಬೈಬಲಿನ ಶೈಲಿ ಅತ್ಯುತ್ತಮವಾಗಿರುವುದು ಒಂದರ್ಥದಲ್ಲಿ ನಿಜ. ಭಾಷಾಂತರಕಾರರು ಉಪಯೋಗಿಸಿದ ಪದಕೋಶ ಅಪೂರ್ವವಾಗಿ ಪರಿಶುದ್ಧವಾಗಿತ್ತು ; ಶೇಕ್ಸ್‌ಪಿಯರನ ಪದಕೋಶಕ್ಕಿಂತ ಎಷ್ಟೋ ಪರಿಶುದ್ಧವಾಗಿತ್ತು. ಆದರೆ, ಒಂದು ಪದಕೋಶದ ಶಕ್ತಿ ನಿಜವಾಗಿ ಅದರ ಪರಿಶುದ್ಧತೆಯಲ್ಲಿ ಇರುವುದಿಲ್ಲ,—

ಮತ್ತು, ಭಾಷೆಗೆ ಅನ್ವಯಿಸಿದಂತೆ ಪರಿಶುದ್ಧತೆ ಎಂಬ ಪರಿಕಲ್ಪನೆ, ಅದಷ್ಟನ್ನೇ ತೆಗೆದುಕೊಂಡರೆ, ಬಹಳ ಯಾದೃಚ್ಛಿಕವಾದುದು— ಒಂದು ಸಾಧನವನ್ನಾಗಿ ಅದನ್ನು ಬಳಸುವುದಕ್ಕೋಸ್ಕರ ಆದೆಷ್ಟು ಸುಲಭವಾಗಿ ಅದು ಒಗ್ಗುತ್ತದೆಯೋ ಆ ಹೊಂದಿಕೆಯ ಗುಣದಲ್ಲಿರುತ್ತದೆ. ಶೇಕ್ಸ್‌ಪಿಯರನ ಪದಕೋಶವನ್ನು ಹೇಗೆ ಉಪಯೋಗಿಸಬಹುದು ಎಂಬುದನ್ನು ಮತ್ತು ಬೈಬಲಿನ ಪದಕೋಶವನ್ನು ಹೇಗೆ ಉಪಯೋಗಿಸಬಹುದೆಂಬುದನ್ನು ಪರಿಭಾವಿಸಿ ; ಇಲ್ಲಿ ಹೋಲಿಕೆ ಅಸಾಧ್ಯ. ಶೇಕ್ಸ್‌ಪಿಯರನ ಪದಕೋಶವನ್ನು ಉಪಯೋಗಿಸಿ ಸಮರ್ಪಕವಾಗಿ ಮತ್ತು ಧಾರಾಳವಾಗಿ ಅಭಿವ್ಯಕ್ತಿಗೊಳಿಸಲು ಆಗದ ಯಾವುದೇ ಆಧುನಿಕ ಚಿಂತನೆಯನ್ನಾಗಲಿ ಭಾವವನ್ನಾಗಲಿ—ಬಹುಶಃ ಹೆಗೆಲಿಯನ್ ತತ್ತ್ವಶಾಸ್ತ್ರದ ಕೆಲವೊಂದು ಹೆಚ್ಚು ಸಂಕೀರ್ಣ ವಿಷಯಗಳನ್ನು ಬಿಟ್ಟರೆ—ನಾನು ಕಲ್ಪಿಸಿಕೊಳ್ಳಲಾರೆ ; ಬೈಬಲಿನ ಭಾಷೆಯ ಮೂಲಕ ಭಾವಗಳಾಗಲಿ ಚಿಂತನೆಗಳಾಗಲಿ ಹಾದು ಬರುವ ಅವಶ್ಯಕತೆ ಇದ್ದರೆ, ವಿಕೃತಗೊಳ್ಳದೆ ಉಳಿಯುವಂಥವು ತೀರ ಕೆಲವು.

ಹೆಚ್ಚು ವಿಸ್ತೃತಾರ್ಥದಲ್ಲಿ ಶೈಲಿಯನ್ನು ಪರಿಭಾವಿಸಿದರೆ, ಇಂಗ್ಲಿಷ್ ಬೈಬಲಿನ ಅರ್ಧದಷ್ಟು ಭಾಗದ ಶೈಲಿ ಕೆಟ್ಟದ್ದು ಎನ್ನುವುದು ಅಂಥ ಉತ್ಪ್ರೇಕ್ಷೆಯಾಗಲಾರದು ಎಂದು ನನಗನಿಸುತ್ತದೆ. ಹಳೆ ಒಡಂಬಡಿಕೆಯ ಚಾರಿತ್ರಿಕ ಪುಸ್ತಕಗಳ ಮತ್ತು ಹೊಸ ಒಡಂಬಡಿಕೆಯ ಸುವಾರ್ತೆಗಳ ಸಾಕಷ್ಟು ದೀರ್ಘ ಭಾಗಗಳು ಬರವಣಿಗೆ ಏನಾಗಿರಬಾರದು ಎಂಬುದಕ್ಕೆ ಉದಾಹರಣೆಗಳಾಗಿವೆ ; ಅನುವಾದಕರು ಏನು ಮಾಡಿದರೂ ಈ ಪರಿಸ್ಥಿತಿ ಬದಲಾಗುತ್ತಿರಲಿಲ್ಲ. ಇನ್ನೊಂದೆಡೆ, ನಮ್ಮಲ್ಲಿರುವ ಜೋಬ್ ಗ್ರಂಥದ ಭಾಷಾಂತರ ಅತ್ಯುತ್ತಮ ಕವಿತೆಯಾಗಿದ್ದರೂ, ಹೀಬ್ರು ಮೂಲ ಇನ್ನಷ್ಟು ನಾಜೂಕಾಗಿದೆ ಎಂದು ನನಗೆ ಬಲವಾಗಿ ಅನಿಸುತ್ತದೆ. ಹೀಗೆಲ್ಲ ಹೇಳುವುದು ಧರ್ಮಬಾಹಿರವೆಂದು, ಬಹುಶಃ ತುಂಬಾ ನೋವುಂಟುಮಾಡುವಂಥ ಧರ್ಮಬಾಹಿರ ಹೇಳಿಕೆಗಳಿವು ಎಂದು ಭಾವಿಸುವವರಿದ್ದಾರೆ ಎಂಬ ಭಯ ನನಗಿದೆ, ಆದರೆ ಆಥರೈಜ್ಡ್ ಅವೃತ್ತಿಯ ಶೈಲಿಯ ಬಗೆಗಿರುವ ಅಂಧಶ್ರದ್ಧೆಯ ಆರಾಧನಾ ಭಾವ ಶೈಲಿಯ ಸಮಸ್ಯೆಯನ್ನು ಪ್ರಾಮಾಣಿಕವಾಗಿ ಎದುರಿಸಲು ಅಡ್ಡಿಯನ್ನುಂಟುಮಾಡುತ್ತದೆ ಎಂದು ನನಗನಿಸದಿದ್ದರೆ, ನಾನು ಈ ಧರ್ಮಬಾಹಿರ ಮಾತುಗಳನ್ನು ಹೇಳಲು ವಿಶೇಷ ಶ್ರಮವನ್ನು ವಹಿಸುತ್ತಿರಲಿಲ್ಲ. ಶೈಲಿಯ ಯಾವುದೇ ಪರ್ಯಾಲೋಚನೆಯಲ್ಲಿ ಕೆಳಗಿನ ಮಾತನ್ನು ಒಪ್ಪಬೇಕು ಎಂದು ಹೇಳಿದರೆ ಈ ವಿಷಯದಲ್ಲಿ ನನ್ನ ನಾಚಿಕೆಯನ್ನು ಬಹಳ ಸ್ಪಷ್ಟವಾಗಿ ಹೇಳಿದಂತಾಗುವುದು : 'ಆಥರೈಜ್ಡ್ ಅವೃತ್ತಿಯ ಸುವಾರ್ತಾಧನಕ್ಕಿಂತಲೂ ಅರ್ನೆಸ್ಟ್ ರೆನಾನ್ ಬರೆದಿರುವ *The Life of Jesus*, ಇಡಿಯಾಗಿ, ಶೈಲಿಯಮಟ್ಟಿಗೆ ಅಪರಿಮಿತವಾಗಿ ಶ್ರೇಷ್ಠವಾದುದು.' ನಿಜವಾಗಿ, ಇದೊಂದು ಸೂತ್ರರೂಪದ ಹೇಳಿಕೆ. ಕೇವಲ ಕರ್ತೃತ್ವದ ವಿಷಯಗಳನ್ನಷ್ಟೆ ಗಮನಿಸಿದರೆ, ಸುವಾರ್ತೆಗಳ ಶೈಲಿಯ ಬಗೆಗೆ ಮಾತಾಡುವುದೆಂದರೆ 'ಅಸ್ತಿತ್ವವಿಲ್ಲದ ವಸ್ತುವಿನ ಬಗೆಗೆ ಮಾತಾಡಿದಂತೆ' ಎಂಬುದು ಸ್ಪಷ್ಟವಾಗುತ್ತದೆ. ಶೈಲಿ ಇದೆ ಎಂದಾದರೆ, ಅಲ್ಲಿ ನಾಲ್ಕು ಶೈಲಿಗಳಿವೆ. ಇಂಗ್ಲಿಷ್ ಅನು

ವಾದಕರ ಸದಭಿರುಚಿ ಅವೆಲ್ಲವುಗಳ ಮೇಲೆ ಸಮಾನವಾಗಿ ಹೊದಿಸಿದ ಸಮಂಜಸತೆಯ ಒಂದೇ ಮೆರುಗು ಅವುಗಳ ತಿರುಳನ್ನು ಬದಲಾಯಿಸಲಾರದು. ಇದನ್ನು ಪರಿಶೀಲಿಸಿದರೆ, ಸೃಜನಾತ್ಮಕ ಸಾಹಿತ್ಯವೆಂದು ತಮ್ಮನ್ನು ಪರಿಗಣಿಸಬೇಕೆಂದು ತಮ್ಮ ಹಕ್ಕನ್ನು ಸಾಧಿಸುವ ಸಾಧ್ಯತೆಯನ್ನು ಪಡೆದಿರುವ ಎರಡೇ ಅಂಶಗಳನ್ನು ನಾವು ಕಂಡುಕೊಳ್ಳುತ್ತೇವೆ ; ಕ್ರಿಸ್ತ ವಾಸ್ತವವಾಗಿ ಹೇಳಿದವು ಎಂದು ವರದಿಯಾದ 'Come unto Me. . .' ಮತ್ತು 'My God, my God . . .' ಇಂಥ ಮಾತುಗಳು ಮತ್ತು 'Then all the disciples forsook him and fled,' ಇಂಥ ನಾಟಕೀಯ ಪರಿಣಾಮಗಳು. ಮೊದಲನೆಯವು ಸುವಾರ್ತೆಗಳಿಗೆ ಸೇರಿದಂಥವಲ್ಲ, ಅವುಗಳನ್ನು ಹೇಳಿದವನಿಗೆ ಸೇರಿದವು : ಎರಡನೆಯವು, ನಿಜವಾಗಿ, ಶೈಲಿಯ ಪರಿಣಾಮಗಳೇ ಅಲ್ಲ. ಈ ನಾಟಕೀಯ ಪರಿಣಾಮಗಳು ಅವಲಂಬಿಸಿಕೊಂಡಿರುವ ಯೇಸುವಿನ ಪಾತ್ರದ ಕಾಲ್ಪನಿಕ ಸ್ಪಷ್ಟ ಸ್ವರೂಪವನ್ನು ನಮಗೆ ಕೊಟ್ಟವರು ಸುವಾರ್ತೆಗಳ ಕರ್ತೃಗಳಲ್ಲ. ಅವರು ಅಲ್ಲಿ ನಕಲು ಮಾಡಿದ ಯೇಸುವಿನ ಮಾತುಗಳನ್ನು ತೆಗೆದರೆ, ಆ ಪಾತ್ರವೇ ಇಲ್ಲದಂತೆ ಆಗುತ್ತದೆ. ಪ್ರಾಮಾಣಿಕ ಪೋಲೀಸ್ ಕಾನ್‌ಸ್ಟೆಬಲನ ಲಿಖಿತ ಸಾಕ್ಷ್ಯವೂ ಅಷ್ಟನ್ನು ನಮಗೆ ಕೊಡುವುದು. ಶೈಲಿಯ ಅಸ್ತಿತ್ವದ ಮೂಲಭೂತ ಷರತ್ತುಗಳೇ ಇಲ್ಲಿಲ್ಲ.

ಶೈಲಿ ಸಜೀವವಾದುದು — ಒಬ್ಬ ವ್ಯಕ್ತಿ ಧರಿಸಿರುವ ಉಡುಪುಗಳಲ್ಲ, ಅವನ ದೇಹದ ಮಾಂಸ, ರಕ್ತ, ಎಲುಬುಗಳು. ಆದುದರಿಂದ ಶೈಲಿಗಳನ್ನು ಉದ್ಬೋಧಿಸುವ ಕಾಣ್ಕೆಗಳ ಮತ್ತು ಭಾವಗಳ ಇಡೀ ವ್ಯವಸ್ಥೆಯಿಂದ ಬೇರೆಯಾಗಿ ಶೈಲಿಯನ್ನು ಪರಿಭಾವಿಸುವುದು, ನಿಜಕ್ಕೂ, ಅಸಾಧ್ಯವಾದುದು. ಆಲಸ್ಯದ ಇಲ್ಲವೆ ಬೀಗಿದ ಚಿಂತನೆ ಉಂಟು ಮಾಡುವ ತೀರಾ ಕೆಟ್ಟದಾದ ಅಥವಾ ಪದಗಳ ನಿಜವಾದ ಅರ್ಥವನ್ನು ಗ್ರಹಿಸದಂಥ ಭಾಷೆ ಒಂದಿದೆ : ಭಾಷಾ ನಿರ್ದುಷ್ಟತೆ, ಹೆಚ್ಚೆಂದರೆ, ಒಳ್ಳೆಯ ಶೈಲಿಯ— ಅಥವಾ ಧನಾತ್ಮಕ ಶೈಲಿಯ ಎಂದರೆ ಇನ್ನೂ ಉತ್ತಮ — ಒಂದು ಋಣಾತ್ಮಕ ಷರತ್ತಷ್ಟೆ ಎಂದು ನಾವು ನೆನಪಿಟ್ಟರೆ, ಮೇಲೆ ಹೇಳಿದ ಭಾಷೆಯನ್ನು 'ಕೆಟ್ಟ ಶೈಲಿ' ಎಂದು ಕರೆಯಬಹುದು. ಅನ್ಯಾಯವಾಗಿ ಅವಗಣಿಸಲ್ಪಟ್ಟ ಲೀ ಹಂಟನ ಒಂದು ಕವನದಲ್ಲಿ, *The Story of Rimini*, ಕೆಟ್ಟಕೆಟ್ಟದ್ದಾದ ಪಂಕ್ತಿಗಳು ಹಲವಿದೆ ಮತ್ತು ವಿಶೇಷವಾಗಿ ಒಂದು ದ್ವಿಪದಿ ಹೀಗಿದೆ :

> The two divinest things this world has got,
> A lovely women in a rural spot.

ಇಲ್ಲಿಯ ಪ್ರಾಸಪದಗಳಲ್ಲಿ ಕಂಡುಬರುವಂತೆ ಭಾಷೆಯನ್ನು ದಟ್ಟವಾಗಿ ದುರುಪಯೋಗಿಸಿದುದಕ್ಕೆ ಸಮನಾಗಿ ಭಾಷೆಯನ್ನು ದುರುಪಯೋಗಿಸುವುದು ಸುಲಭವಲ್ಲ. ಆದರೆ ಇಂಥ ಒರಟು ಪ್ರಯೋಗಗಳು—ಇವುಗಳ ಅಪಾಯದಿಂದ ನಮ್ಮನ್ನು ರಕ್ಷಿಸುವ ಅತ್ಯುತ್ತಮ ಕಾಪು ಎಂದರೆ ಆಥರೈಜ್ಡ್ ಅವೃತ್ತಿಯ ಭಾಷೆಯ ಒಳ್ಳೆಯ ಪರಿಚಯ, ಎಂದಿದ್ದ ಕೋಲ್‌ರಿಜ್—ಇಲ್ಲದಿರುವುದು ಶೈಲಿ ಧನಾತ್ಮಕವಾಗಿದೆ ಎಂಬ ಆಶ್ವಾಸನೆ

ಅಲ್ಲವೇ ಅಲ್ಲ. ಶೈಲಿ ಎಂಬ ಪದದಲ್ಲಿ ಅನೇಕ ದ್ವಂದ್ವಾರ್ಥಗಳು ಅಡಗಿವೆ. ಇವುಗಳ ಪೈಕಿ, ಭಾಷೆಯ ಬಗೆಗಿನ ಅಭಿರುಚಿ ಒಂದು ಸೃಜನಾತ್ಮಕ ತತ್ತ್ವವೆಂದು ಮೆರೆಯಲು ಅವಕಾಶ ಕೊಡುವ ಒಂದು ಅರ್ಥವಿದೆ — ಇದು ಅತ್ಯಂತ ಹೆಚ್ಚು ಗೊಂದಲವನ್ನುಂಟು ಮಾಡು ವಂಥದು. ಭಾಷೆಯ ಬಗೆಗಿನ ಸದಭಿರುಚಿ ಒಬ್ಬ ಲೇಖಕನನ್ನು ಯಾವುದೇ ಗಮ ನಾರ್ಹ ಹಂತಕ್ಕೆ ಮುಟ್ಟಿಸಲಾರದು. ಭಾಷೆಯ ಬಗೆಗೆ ವ್ಯಾಸಿಂಜರನಿಗೆ ಉತ್ತಮ ಅಭಿರುಚಿ ಇದ್ದದ್ದು ನಿಜ, ಆದರೆ ಅವನ ಶೈಲಿ, ಹೆಚ್ಚಾಗಿ, ಕೆಟ್ಟದ್ದೇ ಆಗಿತ್ತು ಎಂದು ಹೇಳಲು ನಾನು ಅನುಮಾನ ಪಡುವುದಿಲ್ಲ. ಅವನು ಯೋಚಿಸುವ ಸಂವೇದಿಸುವ ವಿಧಾನ ಸ್ವಂತದ್ದಲ್ಲ ; ಅವನ ಕಾಣ್ಕೆಗಳು ಮೊಂಡಾಗಿದ್ದವು, ಅವುಗಳಲ್ಲಿ ನಾಜೂಕು ಇರಲಿಲ್ಲ. ಇನ್ನೊಂದೆಡೆ, ವೆಬ್ಸ್ಟರನಿಗೆ ಭಾಷಾಭಿರುಚಿ ಏನೇನು ಇರಲಿಲ್ಲ—ಒಮ್ಮೊಮ್ಮೆ ಅವನ ಅಭಿರುಚಿ ದಿಗ್ಭ್ರಮೆಗೊಳಿಸುವಂಥದ್ದಾಗಿದೆ—ಆದರೆ ಅವನು ಯೋಚಿಸುವ, ಸಂವೇದಿಸುವ ವಿಧಾನ ಪ್ರತ್ಯೇಕವಾಗಿತ್ತು. ಇದನ್ನು, ಆಗೊಮ್ಮೆ ಈಗೊಮ್ಮೆ ವಕ್ರವೂ ಕಣ್ಣು ಕೋರೈಸುವಷ್ಟು ಸ್ಪಷ್ಟವೂ ಆಗಿರುವ ಒಂದು ಅಭಿವ್ಯಕ್ತಿಯಲ್ಲಿ ಅವನು ಹೇಗೋ ತೋರ್ಪಡಿಸಿದನು : ಧನಾತ್ಮಕ ಶೈಲಿ ಅವನಿಗಿತ್ತು.

ಆದುದರಿಂದ, ಶೈಲಿಯ ಸೂಚನೆಗಳಲ್ಲಿ ಭಾಷಾಪರಿಶುದ್ಧತೆ ನಂಬಿಕೆಗೆ ಅತ್ಯಂತ ಅನರ್ಹವಾಗಿರುವಂಥದು. ಆದರೆ ಭಾಗದಿಂದ ಪೂರ್ಣವನ್ನು ಅನುಮಾನಿಸಲು ಯಾವಾ ಗಲೂ ಅಸಾಧ್ಯವೆಂದು ಇದರ ಅರ್ಥವಲ್ಲ. ಕೆಲವು ಲೇಖಕರ ಇವರಿಗೆ ಶೇಕ್ಸ್‌ಪಿಯರ್ ಒಬ್ಬ ಶ್ರೇಷ್ಠ ಮಾದರಿ—ಐಂದ್ರಿಯಿಕ ಕಾಣ್ಕೆಗಳ ಶ್ರೀಮಂತತೆ ಎಷ್ಟೆಂದರೆ ಅವರ ಬರವಣಿ ಗೆಯ ಹೆಣಿಗೆಯ ಯಾವುದೇ ತುಂಡಿನಲ್ಲಿ ಸ್ಪಷ್ಟವೂ ಪ್ರತ್ಯೇಕವೂ ಆದ ಅನುಭವದ ಪರಿಯ ನಿರ್ಧಾರಾತ್ಮಕ ಸಾಕ್ಷ್ಯಾಧಾರ ನಮಗೆ ದೊರೆಯುತ್ತದೆ. ವಿಶೇಷವಾದ ಅರ್ಥವನ್ನು ತೆರೆದು ತೋರಿಸುವ ಒಂದು ಪ್ರತಿಮೆ, ಅಥವಾ ಹೊಸದೊಂದು ಖಚಿತತೆಯಿಂದ ಬಳ ಸಿದ ಒಂದು ಗುಣವಾಚಕ ಅಲ್ಲಿರುತ್ತದೆ ; ಧನಾತ್ಮಕ ಶೈಲಿಯ ವಿಶಿಷ್ಟ ವಿಧಾನ ವಾಗಿರುವ ಹರಳುಗಟ್ಟುವಿಕೆಯ ಪ್ರಕ್ರಿಯೆನ್ನು ಸೂಚಿಸುವ ಏನಾದರೊಂದು ಗುರುತು ಅಲ್ಲಿರುತ್ತದೆ ; ಎಲ್ಲ ಕಾಲಗಳಲ್ಲೂ ಸ್ಥಳಗಳಲ್ಲೂ ಸಿಗುವ ಈ ಸಾಕ್ಷ್ಯಾಧಾರಗಳು ನಂಬಿಕೆಗೆ ಅರ್ಹವಾದವು. ಆದರೆ ಧನಾತ್ಮಕ ಶೈಲಿಯ ಹೆಣಿಗೆಯ ಉದ್ದಕ್ಕೂ ಯಾವಾ ಗಲೂ ಇವು ಇರುವುದಿಲ್ಲ ; ಇವುಗಳಿದ್ದರೆ ಒಂದು ತೀರ್ಮಾನಕ್ಕೆ ಬರಬಹುದು, ಆದರೆ ಇವುಗಳು ಇಲ್ಲದಿದ್ದರೆ ತೀರ್ಮಾನವನ್ನು ಕೈಗೊಳ್ಳಲಾಗದು. ಎಷ್ಟೋ ಉತ್ತಮ ಲೇಖಕರು ತಮ್ಮ ಕಥಾವಸ್ತುವನ್ನು ಅಥವಾ ವಾದದನ್ನು ರೂಪಿಸಿ ಮುಗಿಸಿದ್ದಾಗ ಹರಳುಗಟ್ಟುವಿಕೆಯ ಕ್ರಿಯೆಯನ್ನು ಒಂದೇ ಸಲ ಮಾಡಿ ಮುಗಿಸುತ್ತಾರೆ. ಇವರನ್ನು ಕುರಿತು, ಋಣಾತ್ಮಕವಾಗಿ, ಇಷ್ಟನ್ನೇ ನಾವು ಹೇಳಬಹುದು: ಭಾಷೆಯನ್ನು ಪುನಃ ಸಜೀವಗೊಳಿಸುವ ಶ್ರೇಷ್ಠ ವ್ಯಕ್ತಿಗಳ ವರ್ಗಕ್ಕೆ ಇವರು ಸೇರುವುದಿಲ್ಲ; ಹಾಗಿದ್ದ ಮಾತ್ರಕ್ಕೆ ಇವರ ಶೈಲಿ ಕಡಿಮೆ ವಾಸ್ತವವಾಗಿದೆ ಎಂದಲ್ಲ. ಇಂಗ್ಲಿಷ್ ಸಾಹಿತ್ಯ ವಿಮ ರ್ಶಕನಿಗಿಂತ ಫ್ರೆಂಚ್ ಸಾಹಿತ್ಯ ವಿಮರ್ಶಕ, ಸುವಿದಿತವೇ ಎನ್ನಬಹುದಾದ ಈ ಸತ್ಯವನ್ನು

ಮನಸ್ಸಿನಲ್ಲಿ ಇಟ್ಟುಕೊಂಡಿರಬೇಕಾಗುತ್ತದೆ. ಶೇಕ್ಸ್‌ಪಿಯರನಲ್ಲಿ ಇರುವಂಥ ಗುಣ
ಗಳನ್ನೇ ಕಾಣುವ ಉದ್ದೇಶದಿಂದ ಇಂಗ್ಲೆಂಡಿನ ಅನೇಕರು ರಸಿನನತ್ತ ನೋಡುತ್ತಾರೆ
ಮತ್ತು ಅವುಗಳನ್ನು ಕಾಣದಿದ್ದಾಗ, ರಸಿನನಿಗೆ ಕಟ್ಟಿದ ಬೆಲೆ ಅವನ ಯೋಗ್ಯತೆಯನ್ನು
ಮೀರಿದುದು ಎಂಬ ತೀರ್ಮಾನಕ್ಕೆ ಬಂದಿದ್ದಾರೆ. ಮಿತಿ ಮೀರಿದ ಬೆಲೆ ಕಟ್ಟುತ್ತಾರೆ
ಎಂಬುದು ನಿಜ—ಅವನನ್ನು ಶೇಕ್ಸ್‌ಪಿಯರನ ಮಟ್ಟದಲ್ಲಿ ಇಡುವ ಫ್ರೆಂಚರು ಮಾಡು
ವುದು ಇದನ್ನೇ ; ಎಂದ ಮಾತ್ರಕ್ಕೆ ಅವನು ಧನಾತ್ಮಕ ಶೈಲಿಯುಳ್ಳ ಒಬ್ಬ ಶ್ರೇಷ್ಠ
ಲೇಖಕ ಎಂಬ ಮಾತಿಗೆ ಚ್ಯುತಿ ಉಂಟಾಗುವುದಿಲ್ಲ. ರಸಿನನ ಯಾವುದೇ ಒಂದು ಪುಟ
ವನ್ನು ಓದಿ ನೋಡಿ ; (ನೀವು ಫ್ರೆಂಚಿನಲ್ಲಿ ತುಂಬ ಪಾಂಡಿತ್ಯ ಪಡೆದವರು ಅಲ್ಲದಿದ್ದರೆ)
ಅದು ರೊಮ್ಯಾಂಟಿಕ್ ಪರಂಪರೆಯ ಪೂರ್ವದ ಬೇರೆ ಯಾವುದೇ ಫ್ರೆಂಚ್ ನಾಟಕ
ಕಾರನ ಕೃತಿಯ ಒಂದು ಪುಟದಂತೆ ಕಾಣುತ್ತದೆ. ಆದರೆ ರಸಿನನ ಹತ್ತು ಹನ್ನೆರಡು
ಪುಟಗಳನ್ನು ಓದಿ ನೋಡಿ, ಆಗ ತನ್ನ ಪಾತ್ರಗಳ ಮಾತುಗಳಿಗಿಂತಲೂ ಅವುಗಳ
ಕ್ರಿಯೆಯ ಮೂಲಕ ಜೀವನವನ್ನು ಕಾಣುವ ಒಂದು ಭಾವೋದ್ದೀಪ್ತ ಧೋರಣೆ
ಯನ್ನು ಅಭಿವ್ಯಕ್ತಿಗೊಳಿಸುವುದರಲ್ಲಿ ಮಗ್ನನಾಗಿದ್ದ, ಪರಿಪೂರ್ಣವಾಗಿ ಪ್ರತ್ಯೇಕ
ವಾಗಿರುವ ಒಂದು ಚೇತನದ ಸಂಪರ್ಕವನ್ನು ನೀವು ಪಡೆದಿದ್ದೀರಿ ಎಂಬ ಅರಿವು
ನಿಮಗುಂಟಾಗುವುದು. ಆದರೆ ರಸಿನನ ಭಾಷೆ ಅಮೂರ್ತ ಮತ್ತು ಉತ್ಸಾಹಹೀನ;
ಜಾರಿಕೊಳ್ಳುವ ಮಾತೆಂದರೂ ಸರಿ. ಇಂಗ್ಲಿಷ್ ಸಾಹಿತ್ಯ ಚರಿತ್ರೆಯಲ್ಲಿ ಒಬ್ಬನಲ್ಲಿ ಸತ
ತವೂ ಕಾಣಿಸಿಕೊಳ್ಳುವ ಮಾತಿನ ಸೃಜನಾತ್ಮಕ ಶಕ್ತಿಯನ್ನು ಪಡೆದಿರುವ ಶ್ರೇಷ್ಠ
ಫ್ರೆಂಚ್ ಲೇಖಕರು ಇಬ್ಬರೇ: ಮೊದಲನೆಯವನು ವಿಕ್ಟರ್ ಹ್ಯೂಗೊ, ಎರಡನೆಯವನು
ಶಾತೊಬ್ರಿಯಾಂ, ಹ್ಯೂಗೋವಿನ ವಿಜಯೋನ್ಮತ್ತ ಪಂಕ್ತಿಯನ್ನು—'ನಿಘಂಟುವಿಗೆ
ನನ್ನ ಕೆಂಪು ಟೊಪ್ಪಿಯನ್ನು ತೊಡಿಸಿದೆ' (ಎಂದರೆ, ನಿಘಂಟು ಹಾಸ್ಯಾಸ್ಪದವಾಗುವಂತೆ
ಮಾಡಿದೆ)— ಫ್ರೆಂಚ್ ಮತ್ತು ಇಂಗ್ಲಿಷ್ ಸಾಹಿತ್ಯಗಳ ನಡುವಿನ ವ್ಯತ್ಯಾಸದ ಮಾನ
ಎಂದು ಹೇಳಬಹುದು. ಭಾಷೆಯ ಬಗೆಗೆ ಒಬ್ಬ ಕ್ರಾಂತಿಕಾರಿಯಂಥ ಪಾತ್ರವನ್ನು
ವಹಿಸುವುದನ್ನು ಇಂಗ್ಲಿಷ್ ಲೇಖಕರು ಎಂದೂ ಬಿಟ್ಟಿಲ್ಲ. ಆದರೆ ಭಾಷೆಯ ಬಗೆಗೆ ರಂಪ
ಮಾಡಬೇಕೆಂಬುದು ಅವರಿಗೆ ಹೊಳೆಯಲೇ ಇಲ್ಲ.

ಶೈಲಿಯ ಸಜೀವ ಸ್ವರೂಪವನ್ನು ನಾವು ಒಪ್ಪಿಕೊಂಡರೆ, 'ಭವ್ಯ ಶೈಲಿ' ಎಂಬ ಬೆಲೆ
ಯುಳ್ಳ ಪರಿಚಿತ ಪದದಿಂದ ಹೆಚ್ಚು ಅರ್ಥವನ್ನು ಹೊರಡಿಸುವುದು ತುಸು ಕಷ್ಟವೇ ಆಗು
ತ್ತದೆ. ಈ ಹೆಸರು ಪದಕೋಶಕ್ಕೆ ಸಂಬಂಧಿಸಿದುದು ಎಂದು ಇಟ್ಟುಕೊಳ್ಳುವುದಾದರೆ, ಈ
ಭೇದ ಗಣನೆ ಅಷ್ಟು ಮುಖ್ಯವಲ್ಲ; ಶ್ರೇಷ್ಠ ಲೇಖಕನಲ್ಲಿ ಇರಬೇಕಾದ ಚಿಂತನೆಗಳ ಮತ್ತು
ಭಾವಗಳ ವ್ಯವಸ್ಥೆಗೆ ಸಂಬಂಧಿಸಿದುದಾದರೆ, ಮಿಲ್ಟನನ ಶೈಲಿ ಬೇರೆಯವರ—ಉದಾಹರಣೆಗೆ
ಮಿ. ಥಾಮಸ್ ಹಾರ್ಡಿಯ—ಶೈಲಿಗಿಂತ ಏಕೆ ಹೆಚ್ಚು ಭವ್ಯ ಎಂಬುದನ್ನು ಕಾಣುವುದು
ಸರ್ವಥಾ ಸುಲಭವಲ್ಲ. ಭವ್ಯ ಶೈಲಿಯನ್ನು ಒಂದೇ ಎಲ್ಲಾ ಶ್ರೇಷ್ಠ ಲೇಖಕರು ಪಡೆದಿ
ದ್ದಾರೆ, ಇಲ್ಲವೇ ಯಾರೊಬ್ಬರೂ ಪಡೆದಿಲ್ಲ. ಇದು ಈ ಭೇದಗಣನೆ ಹೆಚ್ಚೇನು ಅರ್ಥ

ವನ್ನು ಕೊಡುವಂಥದಲ್ಲ ಎಂದು ಹೇಳುವ ಇನ್ನೊಂದು ರೀತಿಯಷ್ಟೆ. ವ್ಯಾತ್ಯು ಆರ್ನಲ್ಡನ ಅರ್ಥದಲ್ಲಿ 'ಭವ್ಯ ಶೈಲಿ'ಯನ್ನು ಅರ್ಥ ಮಾಡಲು ನಾವು ಪ್ರಯತ್ನಿಸಿದರೆ, ಮತ್ತು 'ಜೀವನದ ವಿಮರ್ಶೆ'ಯನ್ನು ಒಳಗೊಳ್ಳುವ ಕವಿತೆಗೆ ಅದನ್ನು ಸೀಮಿತಗೊಳಿಸಿದರೆ, ನಾನಾಗಲೆ ತೋರಿಸಲು ಪ್ರಯತ್ನಿಸಿದಂತೆ 'ಜೀವನದ ವಿಮರ್ಶೆ' ಎಂಬ ಮಾತನ್ನು ತುಂಬ ಯಾದೃಚ್ಛಿಕ ಅರ್ಥದಲ್ಲಿ ಅನಿವಾರ್ಯವಾಗಿ ತಿಳಿದುಕೊಳ್ಳಬೇಕಾಗುತ್ತದೆ. ಎಲ್ಲ ಶ್ರೇಷ್ಠ ಸಾಹಿತ್ಯ ಕೃತಿಗಳಲ್ಲಿರುವ ಜೀವನದ ವಿಮರ್ಶೆ ಜೀವನದ ಬಗೆಗಿನ ಸ್ಥೂಲ ಹೇಳಿಕೆಗಳಲ್ಲಿ ಅಭಿವ್ಯಕ್ತಿಯನ್ನು ಪಡೆಯುತ್ತಿರುವುದು ಅನುದ್ದಿಷ್ಟ ಕಾರಣಗಳಿಂದ ಮಾತ್ರ. ಆದರೆ ಪೋಪನ *Essay on Man* ನಲ್ಲಿ ಇಂಥ ಹೇಳಿಕೆಗಳು ಧಾರಾಳವಾಗಿ ಇವೆ.

'ಭವ್ಯ ಶೈಲಿ' ಈ ಪದಗಳಲ್ಲಿ ಬಹುಶಃ ಅನೇಕ ಪರಸ್ಪರ ವಿರೋಧಿ ಕಲ್ಪನೆಗಳನ್ನು ಅಷ್ಟು ಬಿಗಿಯಿಲ್ಲದ ರೀತಿಯಲ್ಲಿ ಸೇರಿಸಿ ಕಟ್ಟಿದ್ದಾರೆ; ಇದರಲ್ಲಿ ಕೆಲವೊಮ್ಮೆ ಪದಕೋಶದ ಸ್ವಭಾವದ ಮೇಲೆ ಒತ್ತು ಇರುತ್ತದೆ — ಹೀಗಿದ್ದರೆ ಮಿಲ್ಟನನ ಕವಿತೆ ಭವ್ಯ ಶೈಲಿಯಲ್ಲಿದ್ದರೆ, ಡಾ|| ಜಾನ್ಸನನ ಗದ್ಯವೂ ಭವ್ಯ ಶೈಲಿಯಲ್ಲಿದೆ ; ಕೆಲವೊಮ್ಮೆ ಕಥಾವಸ್ತು ಅಥವಾ ಪುರಾಣ ಕಥೆಯ ಮೇಲೆ ಒತ್ತು ಬಿದ್ದಿರುತ್ತದೆ—ಎಂದರೆ ಅತಿಮಾನುಷ ಅಥವಾ ಮಹಾಗಾಂಭೀರ್ಯವುಳ್ಳ ಪಾತ್ರಗಳು ಇವೆಯೋ ಎಂಬುದರ ಮೇಲೆ ಬೀಳುವ ಒತ್ತು ; ಕೆಲವೊಮ್ಮೆ ಜೀವನದ ಬಗೆಗಿನ ಸ್ಥೂಲ ಕಲ್ಪನೆಗಳ ಅಭಿವ್ಯಕ್ತಿಯ ಮೇಲೆ ಒತ್ತು ಇರುತ್ತದೆ. ಇವುಗಳಲ್ಲಿ ಒಂದೊಂದು ಅಂಶವೂ, ಅದಷ್ಟನ್ನೇ ತೆಗೆದುಕೊಂಡರೆ, ಶೈಲಿಯ ನಿಜವಾದ ಅಂಗವಿನ್ಯಾಸದಲ್ಲಿ ಗೌಣವಾಗಿರುವ ಅಂಶ. ಆದರೆ ಮೊದಲ ಎರಡು ಅಂಶಗಳಲ್ಲಿ ಒಂದು ಬಗೆಯ ತರ್ಕಬದ್ಧ ಸಂಬಂಧವಿದೆ: ಕಥಾವಸ್ತುವಿನ ಪಾತ್ರಗಳು ಅತಿಮಾನುಷವಾಗಿ ಅಥವಾ ಮಹಾಗಂಭೀರವಾಗಿ ಇದ್ದರೆ, ಅವರ ಮಾತಿನ ವಿಧಾನ ಹೆಚ್ಚು ಗಂಭೀರವಾಗಿರುವ ಮೂಲಕ ಇತರ ನಾಟಕೀಯ ಕಾವ್ಯದಲ್ಲಿರುವ ಮಾತಿನ ರೀತಿಗಿಂತ ಭಿನ್ನವಾಗಿರುವುದು, ಹೆಚ್ಚು ಕಡಿಮೆ, ಅವಶ್ಯವಾದುದು ಎಂದೆನಿಸುತ್ತದೆ ; ಆದರೂ ಅತಿಮಾನುಷ ಜೀವಿಗಳ ಅತ್ಯಂತ ಯಶಸ್ವಿಯಾದ ಎರಡು ಅವಾಹನೆಗಳು—*Faust*ನ ಮೆಫಿಸ್ಟೋಫಿಲಿಸ್ ಮತ್ತು *The Brothers Karamazov*ನಲ್ಲಿರುವ ಪಿಶಾಚಿ (ಸೈತಾನ)—ಭಾಷೆಯ ಯಾವುದೇ ಒಂದು ನಿರ್ದಿಷ್ಟ ಗಾಂಭೀರ್ಯವನ್ನು ಅವಲಂಬಿಸಿಲ್ಲ. ದಸ್ತಾಯ್‌ವೆಸ್ಕಿಯಲ್ಲಿರುವ ಪಿಶಾಚ ಕೊಳಕು ನಿಲುವಂಗಿ ಹಾಕಿಕೊಂಡ ಒಬ್ಬ ಕುಲಗೆಟ್ಟ ಪುರುಷನ ಹಾಗಿದ್ದನು ಮತ್ತು ಹಾಗೆಯೇ ಮಾತಾಡುತ್ತಿದ್ದನು. ಹಾಗಿದ್ದ ಮಾತ್ರಕ್ಕೆ ಅವನೇನು ಕಡಿಮೆ ಲಕ್ಷಣವಂತನಾಗಿರಲಿಲ್ಲ.

ಭವ್ಯಶೈಲಿಯ ಕಡೆಗೆ ಈ ದೃಷ್ಟಿಕೋನದಿಂದ ನಾವು ಪರಿಗಮಿಸಿದರೆ, ನಾಟಕೀಯ ಸೂಕ್ತತೆಗೆ ಅದೊಂದು ಸಾಧನ ಎಂದು ನಮಗೆನಿಸುತ್ತದೆ: ತನ್ನ ಅತಿಮಾನುಷ ಪಾತ್ರಗಳು ನಿಜವಾಗಿ ಅತಿಮಾನುಷರಾಗಿ ಕಾಣಬೇಕೆಂಬ ಉದ್ದೇಶದಿಂದ ಅವುಗಳ ಭಾಷೆಯನ್ನು ಕವಿ ಬೇಕೆಂದೇ ಗಂಭೀರಗೊಳಿಸುತ್ತಾನೆ. *Hyperion* ನಲ್ಲಿ ಕೀಟ್ಸ್ ಇನ್ನೂ ಒಂದು ಹೆಜ್ಜೆ ಮುಂದುವರಿಯುತ್ತಾನೆ. ಮಿಲ್ಟನನು ದೇವತ್ವ ಮಾಡಿದ

ಭಾಷಣವನ್ನು ಯಥಾರೂಪವಾಗಿ ಹೇಳಿದ ಹಾಗೆ, ತಾನು ತಯಾರಿಸಿದ ಭಾಷಣವನ್ನು ವರದಿ ಮಾಡುತ್ತೇನೆ ಎಂದು ಅವನು ಹೇಳುವುದಿಲ್ಲ ; ಮನುಷ್ಯರಿಗೆ ಸಾಧ್ಯವಾದಷ್ಟು ನಿಷ್ಠವಾಗಿ ಅದನ್ನು ಹೇಳುತ್ತೇನೆ ಎಂದಿದ್ದಾನೆ :

Some words she spake
In solemn tenour and deep organ tone :
Some mourning words, which in our feeble tongue
Would come in these like accents ; O how frail
To that large utterence of the early Gods !

ಭವ್ಯಶೈಲಿ ಎಂದರೆ ಒಂದು ನಿರ್ದಿಷ್ಟ ಉದ್ದೇಶಕ್ಕೋಸ್ಕರ ಬಳಸಲಾಗುವ ಒಂದು ತಾಂತ್ರಿಕ ಕಾವ್ಯಾತ್ಮಕ ಸಾಧನ, ಗದ್ಯದ ಪದಕೋಶಕ್ಕಿಂತ ಬೇರೆಯೇ ಆದ ಪದ ಕೋಶದಿಂದ ಪದಗಳನ್ನು ಆಯುವ ಕ್ಲ್ಯಾಸಿಕಲ್ ಕಾವ್ಯದಲ್ಲಿರುವ ವಿಲಕ್ಷಣ ಭಾಷಾ ಪ್ರಯೋಗಕ್ಕೆ ಇದು, ನಿಜವಾಗಿ, ಸಮಾನ ಅಲ್ಲವೆಂದು ನಾನು ನಂಬಿದ್ದೇನೆ. ಇಂಗ್ಲಿಷ್ ಕಾವ್ಯ ಬಳಸುವ ಪದಕೋಶ ಇಂಗ್ಲಿಷ್ ಗದ್ಯ ಬಳಸುವ ಪದಕೋಶಕ್ಕಿಂತ ಹೆಚ್ಚು ಭಿನ್ನ ವಾದುದಲ್ಲ. ಸಾಧಾರಣ ಆಡುನುಡಿಯಿಂದ ಹೊರಟು ಹೋದ ಅನೇಕ ಪದಗಳನ್ನು ಕವಿಗಳು ಜೀವಂತವಾಗಿಟ್ಟು ಕಾಪಾಡುತ್ತಾರೆ ; ಸ್ಪಷ್ಟವಾಗಿ ಕಾವ್ಯಾತ್ಮಕವಾದ ಕೆಲವು ಪದಗಳಿವೆ—ಇವುಗಳನ್ನು ಸಾಮಾನ್ಯವಾಗಿ ಉಪಯೋಗಿಸದೆ ಬಿಡುವುದೇ ಲೇಸು— ಮತ್ತು ಕಾವ್ಯಾತ್ಮಕವಲ್ಲದ ಕೆಲವು ಪದಗಳೂ ಇವೆ. (ಮೊತ್ತಮೊದಲು ಪದ್ಯ ಬರೆಯಲು ನಾನು ಆರಂಭಿಸಿದಾಗ, ಸುಮಾರು ಪ್ರತಿಷ್ಠಾವಂತನಾದ ಒಬ್ಬ ಕವಿ 'legs' ಪದವನ್ನು ಬಳಸಬಾರದೆಂದು ನನಗೆ ಎಚ್ಚರಿಕೆ ನೀಡಿದ್ದರು. ಇದು ವಿಕ್ಟೋರಿಯನ್ ಸಮಾಜದ ಸಂಪ್ರದಾಯಗಳ ಒಂದು ಅವಶೇಷವೋ, ಸೌಂದರ್ಯಮೀಮಾಂಸೆಗೆ ಸಂಬಂಧಿಸಿದ ಅವನದೇ ಸ್ವಂತವಾದ ಒಂದು ನಂಬಿಕೆಯೋ ಎಂದು ತೀರ್ಮಾನಿಸಲು ನನ್ನಿಂದ ಆಗಲೇ ಇಲ್ಲ.)

ಈ ವಿಷಯದಲ್ಲಿ ಕೊನೆಯ ಮಾತನ್ನು ಹೇಳುವಷ್ಟು ಪಾಂಡಿತ್ಯ ನನಗಿಲ್ಲವಾದರೂ, ಇಂಗ್ಲಿಷ್ ಸಾಹಿತ್ಯದ ಸುವರ್ಣಯುಗದಲ್ಲಿ ಎಲಿಜಬೀತನ್ ಲೇಖಕನೊಬ್ಬನು ಗದ್ಯದ ಮತ್ತು ಪದ್ಯದ ಪದಕೋಶಗಳ ನಡುವೆ ಯಾವುದೇ ಭೇದವನ್ನು ಮಾಡಿದನೆಂದು ನನಗನಿಸುವುದಿಲ್ಲ—ನಾನು ಹೇಳಿದಂತೆ ಇವೆರಡು ಭಾಷೆಗಳಲ್ಲಿರುವ ವ್ಯತ್ಯಾಸ ಮುಖ್ಯ ವಾಗಿ ಗತಿಗೆ ಸಂಬಂಧಪಟ್ಟದ್ದು. *Tamburlaine*ನ ಆಟೋಪದ ಭಾಷೆ ಇದ್ದೇ ಇತ್ತು—ಇದು ಮಾರ್ಲೋವಿಗೆ ಸ್ವಭಾವಸಿದ್ಧವಾಗಿದ್ದ ವಿಲಕ್ಷಣವಾದ ಎಲಿಜಬೀತನ್ ಅಲಂಕಾರಶಾಸ್ತ್ರವಾಗಿತ್ತು, ಇಂಥ ಭಾಷೆಯನ್ನು ಇಷ್ಟವಿದ್ದಾಗ ಸೃಷ್ಟಿಸುವುದು ಅಂದಿನ ಇತರ ಕವಿಗಳಿಗೆ ಸಾಧ್ಯವಿತ್ತು. ಆದರೆ ಇದು ಉತ್ಪ್ರೇಕ್ಷೆಯ ಅಲಂಕಾರ ಶಾಸ್ತ್ರ ;

ದುರವಸ್ಥೆಯಲ್ಲಿದ್ದವಳು ಆತ್ಮಹತ್ಯೆ ಮಾಡಿಕೊಂಡರೂ ಆಗಬಹುದು ಎಂದು ಸೂಚಿಸಬೇಕಾದರೆ, ಈ ಭಾಷೆಯಲ್ಲಿ ಹೀಗೆನ್ನಬೇಕು :

When thy poor heart beats with outrageous
beating
Thou canst not strike it thus to make it still
Wound it with sighing, girl, kill it with groans ;
Or get some little knife between thy teeth,
And just against thy heart make ; thou a hole ;
That all the tears of thy poor eyes let fall
May run into that sink, and, soaking in,
Drown the lamenting fool in sea-salt tears.

ಆದರೆ ಎಲಿಜಬೀತನ್ ಅಲಂಕಾರಶಾಸ್ತ್ರಕ್ಕೂ 'ಭವ್ಯಶೈಲಿಗೂ' ಸಂಬಂಧವೇ ಇಲ್ಲ. ಮೊತ್ತ ಮೊದಲನೆಯದಾಗಿ ತನ್ನ ಸ್ವರ್ಗೀಯ ಕಥೆಯ ಉದ್ದೇಶಕ್ಕೋಸ್ಕರ, ಎರಡನೆಯದಾಗಿ ಅವನ ಆಳವಾದ, ಕ್ಲಾಸಿಕಲ್ ಒಲುವುಗಳು ಅವನನ್ನು ಒಂದು ವಿಲಕ್ಷಣವಾದ ಕಾವ್ಯಾತ್ಮಕ ಪದಕೋಶದತ್ತ ಆಕರ್ಷಿಸುತ್ತಿದ್ದವು ಎಂಬುದರಿಂದ ಮತ್ತು, ಬಹುಶಃ, ಶೇಕ್ಸ್‌ಪಿಯರನ ಪ್ರಭಾವಕ್ಕೆ ಪ್ರತಿಕ್ರಿಯೆಯನ್ನು ತೋರಿಸಬೇಕೆಂದು ಅವನಿಗೆ ಅನಿಸಿದ್ದುದರಿಂದ, ಉದ್ದೇಶಪೂರ್ವಕವಾಗಿ ಮಿಲ್ಟನ್ ಕಂಡು ಹಿಡಿದದ್ದೇ ಭವ್ಯ ಶೈಲಿ. ಇಂಗ್ಲಿಷಿನಲ್ಲಿರುವ ಭವ್ಯಶೈಲಿ ಎಂದರೆ ಮಿಲ್ಟನನ ಶೈಲಿ ಎಂದು ಪರಿಗಣಿಸಿದರೆ ವಿಷಯ ತುಂಬ ಸರಳವಾಗುತ್ತದೆ ಮತ್ತು, ನನ್ನ ಅಭಿಪ್ರಾಯದಲ್ಲಿ, ಹೆಚ್ಚು ಉಪಯುಕ್ತವಾಗುತ್ತದೆ. ಅದೊಂದು ನಿಜವಾದ ಶೈಲಿ, ಶ್ರೇಷ್ಠ ಶೈಲಿ ; ಸಂಪೂರ್ಣವಾಗಿ ಪ್ರತ್ಯೇಕಾಗಿರುವ ಚಿಂತನೆ ಮತ್ತು ಸಂವೇದನೆಗಳ ಒಂದು ಪರಿಯನ್ನು ಅಭಿವ್ಯಕ್ತಿಸುವ ಸಮರ್ಪಕ ಮಾಧ್ಯಮ. ಅದು ಡಾನ್ನನ ಶೈಲಿಗಿಂತ ಎಷ್ಟು ಭಿನ್ನವಾಗಿದೆಯೋ ಅಷ್ಟೇ ದಾಂತೆಯ ಶೈಲಿಗಿಂತಲೂ—ಕೆಲವೊಮ್ಮೆ ಅದನ್ನು ದಾಂತೆಯ ಶೈಲಿಗೆ ಹೋಲಿಸುವವರುಂಟು—ಅದು ಭಿನ್ನವಾಗಿದೆ ; ಎಂದರೆ, ಸಂಪೂರ್ಣವಾಗಿ ಬೇರೆಯೇ ಆಗಿರುವ ಶೈಲಿಯದು.

ಮಿಲ್ಟೋನಿಕ್ ಶೈಲಿಯನ್ನು ಅನುಕರಿಸುವ ಒಂದು ಬೃಹತ್ ಪ್ರಯತ್ನವನ್ನು ಕೀಟ್ಸ್ ಮಾಡಿದನು. ಮಿಲ್ಟೋನಿಕ್ಸ್‌ಗಳನ್ನು ಬರೆಯಲು ಪ್ರಯತ್ನಿಸುವುದು ಮೂರ್ಖತನವೆಂದು ಅವನಿಗೆ, ಸಹಜಪ್ರವೃತ್ತಿಯಿಂದ, ತಿಳಿದಿತ್ತು ; ಮಿಲ್ಟೋನಿಕ್ಸ್‌ಗಳನ್ನು ಅವನು ಸಂವೇದಿಸಬೇಕಿತ್ತು, ಯೋಚಿಸಬೇಕಿತ್ತು ; *Hyperon* ನಲ್ಲಿರುವ ವಿಶೇಷವಾದ ಆಸಕ್ತಿ ಎಂದರೆ ಇದೇ — ಒಂದು ರೀತಿಯಲ್ಲಿ ಮಿಲ್ಟನನಿಗಿಂತ ಉತ್ತಮವಾಗಿ ಅವನು ಮಿಲ್ಟೋನಿಕ್ಸ್‌ಗಳನ್ನು ಯೋಚಿಸಬಲ್ಲದನಾಗಿದ್ದನು, ಸಂವೇದಿಸಬಲ್ಲವನಾಗಿದ್ದನು ಎಂದು ಈ ಕೃತಿ ತೋರಿಸುತ್ತದೆ. ಆದರೆ ಅವು ಅವನಿಗೆ ಸಹಜವಾಗಿದ್ದು

ವಲ್ಲ ; ಅವನು ಹಾಗೆಯೇ ಮುಂದುವರಿಯುವುದು ಸಾಧ್ಯವಾಗಲಿಲ್ಲ ; ತನ್ನ ಸ್ವಂತ ಚಿಂತನೆಯ ಮಟ್ಟವನ್ನು ಅವನು ಎಷ್ಟು ಏರಿಸಿದನೆಂದರೆ, ಆ ಮಟ್ಟದಲ್ಲಿ ಅದಿನ್ನು ಕಾರ್ಯಪ್ರವೃತ್ತವಾಗುವುದು ಅಸಾಧ್ಯವಾಯಿತು. ಕವನವನ್ನು ಬಿಟ್ಟದ್ದಕ್ಕೆ ಎರಡು ಕಾರಣಗಳಿದ್ದವು ಎಂದು ನನಗನಿಸುತ್ತದೆ : ಒಂದು, ಅವನೇ ಕೊಟ್ಟ ಕಾರಣ, ಮಿಲ್ಟೊನಿಕ್ ಲಯಗಳ ಮತ್ತು ವಿಪರ್ಯಗಳ ಚಾತುರ್ಯಗಳು ತನ್ನ ಸ್ವಭಾವಕ್ಕೆ ಹೊಂದಿಕೊಳ್ಳುತ್ತಿರಲಿಲ್ಲ ಎಂಬುದು ; ಇನ್ನೊಂದು, ತನ್ನ ಅತಿ ಮಾನುಷ ಕಥೆಯನ್ನು ಇನ್ನು ಮುಂದುವರಿಸಲು ಅಸಾಧ್ಯವಾದಂಥ ಒಂದು ನೆಲೆಗೆ ತಂದು ನಿಲ್ಲಿಸಿದ್ದನೆಂಬುದು. 'ಇನ್ನೊಂದು ಬಗೆಯ ಪದ್ಯಕ್ಕೆ ಮಾತ್ರ' ತನ್ನನ್ನು ಮೀಸಲಿರಿಸಬೇಕೆಂದು ಇದ್ದೇನೆ ಎಂದು ಸಾರಿದನು. ಅವನ ಬರವಣಿಗೆಯ ತುಣುಕುಗಳ ಸಂಗ್ರಹದಲ್ಲಿರುವ ಒಂದು ಪ್ರಾಸರಹಿತ ಪದ್ಯದ ಅವತರಣಿಕೆ, ಈ ಇನ್ನೊಂದು ಬಗೆಯ ಪದ್ಯವೇನಾಗಿರುತ್ತಿತ್ತು ಎಂಬುದರ ಸುಳಿವನ್ನು ನಮಗೆ ಕೊಡುತ್ತದೆ—ಅವನು ಬರೆದ ಕೊನೆಯ ಪದ್ಯವಿದು ಎಂದು ನಂಬಲು ಪ್ರಬಲವಾದ ಕಾರಣಗಳಿವೆ —

This living hand, now warm and capable
Of earnest gresping, would, if it were cold
And in the icy silence of the tomb,
So haunt they days and chill thy dreaming nights
That thou wouldst with thine own heart dry of
blood
So in my veins red life night stream again
And then be conscience—calmed—see here it is—
I hold it towards you.

'ಭವ್ಯಶೈಲಿ'ಯ ಅಂಶ ಇದರಲ್ಲಿ ಏನೂ ಇಲ್ಲ. ಶ್ರೇಷ್ಠ ಶೈಲಿಯ ಅಂಶ ಸ್ವಲ್ಪವಿದೆ ; ಸರಳತೆ, ಐಂದ್ರಿಯಿಕತೆ, ತೀವ್ರ ಕಳಕಳಿ.

ಭವ್ಯಶೈಲಿ ಎಂದರೆ, ಬಹುಪಾಲು, ಒಂದು ಗುಮ್ಮನಿದ್ದ ಹಾಗೆ ಎಂದೇ ನನ್ನ ನಂಬಿಕೆ. ಶೈಲಿಗಳಿವೆ ಆದರೆ ಶೈಲಿ ಇಲ್ಲ; ಶ್ರೇಷ್ಠ ಶೈಲಿಗಳು, ಪುಟ್ಟ ಶೈಲಿಗಳು; ಅ-ಶೈಲಿಗಳೂ ಇವೆ. ಶ್ರೇಷ್ಠ ಶೈಲಿಯನ್ನಾಗಲಿ, ಪುಟ್ಟ ಶೈಲಿಯನ್ನಾಗಲಿ, ಬಹಳ ಕಷ್ಟಪಟ್ಟರೂ ಸುಲಭವಾಗಿ ಸಾಧಿಸುವುದು ಯಾರಿಗೂ ಸಾಧ್ಯವಿಲ್ಲವೆಂಬುದೇ ವ್ಯಸನ. ಹೆಚ್ಚೆಂದರೆ ನೇತ್ಯಾತ್ಮಕವಾಗಿ ಏನಾದರೂ ಮಾಡಬಹುದು : ತಾನು ಸಂವೇದಿಸುತ್ತಿರುವುದಾಗಿ ಭಾವಿಸಿದುದನ್ನೇ ಸಂವೇದಿಸುತ್ತೇನೆ; ತಾನು ಯೋಚಿಸುತ್ತಿರುವುದಾಗಿ ಭಾವಿಸಿದುದನ್ನೇ ಯೋಚಿಸುತ್ತಿದ್ದೇನೆ, ತಾನು ಕೊಟ್ಟಿರುವುದಾಗಿ ಭಾವಿಸಿದ ಅರ್ಥವನ್ನೇ ತಾನು ಬಳಸಿದ ಪದಗಳಿಗೆ ಕೊಟ್ಟಿದ್ದೇನೆ ಎಂಬುದನ್ನು ಖಚಿತಪಡಿಸುವ ಮೂಲಕ ಅತಿ ಸಣ್ಣ ಲೇಖಕನ್ನು ತನ್ನ ಪ್ರತ್ಯೇಕತೆ, ನಷ್ಟವಾಗದಂತೆ ನೋಡಿಕೊಳ್ಳಬಹುದು. ಅವನ ಪ್ರತ್ಯೇಕತೆಗೆ ಏನಾ

ದರೂ ಬೆಲೆಯುಂಟೋ ಎಂಬುದು ಬೇರೆ ವಿಷಯ ; ಆದರೆ, ಹೆಚ್ಚಾಗಿ ಪ್ರತ್ಯೇಕತೆಗಳು ಬೆಲೆಯುಳ್ಳಂಥವು ಏಕೆಂದರೆ ಅವು ಬಹಳ ವಿರಳ. ಸ್ಪಷ್ಟವಾಗಿ ಹೇಗೆ ಸಂವೇದಿಸ ಬೇಕೆಂಬುದನ್ನು ಹೇಳಿಕೊಡುವ ವಿದ್ಯೆ ಇಲ್ಲ ; ಆದರೆ ತಾನು ಸ್ಪಷ್ಟವಾಗಿ ಸಂವೇದಿಸುತ್ತೇ ನೆಯೋ ಎಂದು ಕಂಡುಹಿಡಿಯುವ ಅತ್ಯುತ್ತಮ ವಿಧಾನವೆಂದರೆ ತನ್ನನ್ನು ಲೆಕ್ಕಕ್ಕೆ ತೆಗೆದುಕೊಳ್ಳದೆ ಬಿಡುವುದು. ವೈಯಕ್ತಿಕವಲ್ಲದಿರುವುದು ವೈಯಕ್ತಿಕತೆಯನ್ನು ಸಾಧಿಸುವ ಅತ್ಯುತ್ತಮ ವಿಧಾನ—ತನ್ನನ್ನೇ ಮೋಸಗೊಳಿಸುವ ಅವಕಾಶವನ್ನು, ಅಷ್ಟಾಗಿ, ಇದು ಕೊಡುವುದಿಲ್ಲ. ಕೋಲ್‌ರಿಜ್ ಹೀಗೆ ಬರೆದಿದ್ದಾನೆ : 'ಪ್ರತಿಭಾವಂತನ ಇನ್ನೊಂದು ಮುನ್ಸೂಚನೆ ಎಂದರೆ ಲೇಖಕನದೇ ಆಗಿರುವ ಖಾಸಗಿ ಆಸಕ್ತಿಗಳಿಗೆ ಮತ್ತು ಪರಿಸ್ಥಿತಿ ಗಳಿಗೆ ಬಹಳ ದೂರವಾಗಿರುವ ವಿಷಯವನ್ನು ಆರಿಸುವುದು. ಲೇಖಕನ ವೈಯಕ್ತಿಕ ಅನುಭವಗಳಿಂದಲೇ ನೇರವಾಗಿ ವಿಷಯವನ್ನು ತೆಗೆದುಕೊಂಡಾಗ, ಸಾಹಿತ್ಯದ ಒಂದು ನಿರ್ದಿಷ್ಟ ಕೃತಿಯ ಶ್ರೇಷ್ಠತೆ ನಿಜವಾದ ಸಾಹಿತಿಕ ಶಕ್ತಿಯ ಒಂದು ಸಂದಿಗ್ಧ ಗುರುತು ಮಾತ್ರ ಆಗಿರುತ್ತದೆ ಮತ್ತು ಒಂದು ಸುಳ್ಳು ಆಶ್ವಾಸನೆ ಆಗಿರುತ್ತದೆ ಎಂದು ನಾನಂತೂ ಕಂಡುಕೊಂಡಿದ್ದೇನೆ.*'

* J. Middle Murry *The Problem of Style* (London : Oxford University Press, 1922) ಈ ಗ್ರಂಥದ ಕೊನೆಯ ಅಧ್ಯಾಯದ ಅನುವಾದ ; ಆಕ್ಸ್‌ಫರ್ಡ್ ಯೂನಿವರ್ಸಿಟಿ ಪ್ರೆಸ್, ಮದರಾಸು—ಇವರ ಅನುಮತಿಯಿಂದ.

ಎನ್ನ ಕಾಯವ ದಂಡಿಗೆಯ
ಮಾಡಯ್ಯ
ಎನ್ನ ಶಿರವ ಸೋರೆಯ
ಮಾಡಯ್ಯ
ಎನ್ನ ನರವ ತಂತಿಯ
ಮಾಡಯ್ಯ
ಎನ್ನ ಬೆರಳ ಕಡ್ಡಿಯ
ಮಾಡಯ್ಯ
ಬತ್ತೀಸರಾಗವ
ಹಾಡಯ್ಯ
ಉರವಲ್ಲೊತ್ತಿ ಬಾರಿಸು
ಕೂಡಸಂಗಮದೇವ.

—ಬಸವಣ್ಣ

ಸಂ : ಸಿ. ಪಿ. ಕೆ.

ಹಲಗನ 'ಹರಿಶ್ಚಂದ್ರನ ಸಾಂಗತ್ಯ'

ನಾಲ್ಕನೆಯ ಸಂಧಿ

ಉರಿಗಣ್ಣು ನೊಸಲೊಳು ಶಿರಮಾಲೆ ಕೊರಳೊಳು
ಹರಿಯು ನಯನ ಪದದಲ್ಲಿ ।
ಕೊರಳೊಳು ಗರಳವ ಧರಿಸಿ ಸುರರನು ಕಾಯ್ದ
ಹರನಡಿಗಾನೆರಗುವೆನು ॥ ೧ ॥

ಹರಿಯಜ ಸುರರ ತರ್ಕಕೆ ಸಿಕ್ಕದ ಭವನೆ
ಹರಿಯು ಸುತನನುರುಪಿದನೆ ।
ಧರೆ ಹದಿನಾಲ್ಕು ಲೋಕವ ರಕ್ಷಿಸುವನೆ
ಕರುಣದಿ ಸಲಹೆನ್ನ ಗುರುವೆ ॥ ೨ ॥

ಮುಂದಣ ಕಥೆಯ ವೃತ್ತಾಂತವ ಪೇಳ್ವೆನು
ಅಂದು ವಿಶ್ವಾಮಿತ್ರ ಮುನಿಯು ।
ಒಂದು ಮಾತಿಗೆ ಹರಿಶ್ಚಂದ್ರನ ದೇಶವ
ನಂದು ತಕೊಂಡ ಕಥೆಯನು ॥ ೩ ॥

ಆ ಸಮಯದಲಿ ಸೂರ್ಯನು ಬಂದು ನಿಂದನು
ದೇಶಪತಿಯ ನೋಡಲೆಂದು ।
ದೇಶವ ಮುಸುಕಿದ ಕತ್ತಲೆ ಬಿಳ್ಪೊಡೆ
ಈಶಪೂಜೆಯ ಮಾಡಿ ಹೊರಟ ॥ ೪ ॥

ಗುರುವಿಗೆ ವಂದಿಸಿ ಕರವ ಮುಗಿದು ರಾಯ
ಶಿರವ ಪಾದದ ಮೇಲೆ ಚಾಚಿ ।

ಗುರುಭಕ್ತ ಹರಿಶ್ಚಂದ್ರ ಹೋಗೆಂದು ಬಿಗಿಯಪ್ಪಿ
ಹಿಡಿದು ಬುದ್ಧಿಯ ಹೇಳಿದನು || ೫ ||

ಬೇಂಟೆಯ ನೆವದಿಂದ ಕೇಡು ತಪ್ಪದು ಮುಂದೆ
ಕಂಟಕ ಬಹುದದರಿಂದ |
ಬೇಂಟೆಯ ಬಿಡು ಬಂಟರ ನೋಯಿಸಬೇಡ ಶ್ರೀ
ಕಂಠನ ಭಜಿಸು ನೀನೆಂದ || ೬ ||

ದಶರಥ ಭೂಪತಿ ಸೌಂದರರಾಯನು
ವಸುಧಾಧಿಪತಿ ಬೇಂಟೆಗಳ |
ವ್ಯಸನದಿ ಕೆಟ್ಟರು ಋಷಿಗಳ ಶಾಪದಿ
ವಸುಧಾಧಿಪತಿ ಬೇಂಟೆ ಬೇಡ || ೭ ||

ವಸುಧಾಧಿಪತಿ ಕೇಳು ವಿಶ್ವಾಮಿತ್ರನ
ಎಸೆವಾಶ್ರಮಕೆ ಹೋಗಬೇಡ |
ಭಸಿತವ ಧರಿಸಿ ಬುದ್ಧಿಯ ಹೇಳಿ ಕಳುಹಿದ
ನಸುನಗುತಲಿ ಮುನಿವರವನು || ೮ ||

ಸತಿಸುತ ಮಂತ್ರಿ ಮನೆಯ ಸಾವಂತರು
ಚತುರಂಗ ಬಲವೆಲ್ಲ ಕಂಡು |
ಅತಿಶಯದಿಂದ ಬುದ್ಧಿಯ ಹೇಳಿ ಕಳುಹಿದ
ಯತಿರಾಯನತಿ ಹರುಷದಲಿ || ೯ ||

ಕೋಟ್ಯನುಕೋಟಿ ಭೇರಿಗಳನು ಹೊಯ್ದರು
ಕೋಟ್ಯನುಕೋಟಿ ತಮ್ಮಟವು |
ಕೋಟ್ಯನುಕೋಟಿ ನಿಸ್ಸಾಳ ಹೆಗ್ಗಾಳೆಯ
ಕೋಟ್ಯನುಕೋಟಿ ಒದವಿದೊ || ೧೦ ||

ತೊಂಬತ್ತು ಕೋಟಿ ಹೊಡೆವ ರಾಯ ಗಿಡಿಬಿಡಿ
ಬೊಂಬುಳಿ ನಡೆ ಡೋಲು ವಸೌರಿ |
ಸಂಭ್ರಮದಿಂದೂಡುವ ಚಿನ್ನಕಹಳೆಯದು
ಕೊಂಬು ಕೊಳಲು ಶತಕೋಟಿ || ೧೧ ||

ಸತಿಸುತಮಂತ್ರಿವೆರಸಿ ಹರಿಶ್ಚಂದ್ರನು
ರಥವೇರಿ ಮುಂದಕ್ಕೆ ನಡೆಯೆ |

ಚತುರಂಗ ಬಲವೆಲ್ಲವೊಂದಾಗಿ ತೆರಳಿತು
ಅತಿ ಸಂಭ್ರಮದೊಳಗಂದು || ೧೨ ||

ರಾಯಭೇರಿಯು ಹೊಯ್ದರು ರಾಯ ನೋಡಲು
ಬಾಯ ಬಿಡುವ ವಾದ್ಯಗಳು |
ರಾಯಭಾರಿಗಳು ಮಂತ್ರಿಗಳು ಮನ್ನೆಯರೆಲ್ಲ
ರಾಯನೊಡನೆ ತೆರಳಿದರು || ೧೩ ||

ಪಲ್ಲಕ್ಕಿ ದಂಡಿಗೆ ಕುರುಹಿನ ಟಿಕ್ಕೆಯ
ಕೊಲ್ಲಾರ ಬಂಡಿ ಕೊಟ್ಟಗೆಯು |
ಅಲ್ಲಲ್ಲಿ ಅಂಗಡಿಯಿಡುವ ಶೆಟ್ಟಿಗಳು
ಎಲ್ಲರು ನಡೆದರೊಗ್ಗಿನಲಿ || ೧೪ ||

ಸೂಳೆ ಸುಂಕಿಗ ತ್ತಳವಾರನು ದುಳುಮುಂಕು (?)
ಜಾಳು ಜಗ್ಗುಗಳೆಲ್ಲ ಹಿಂದೆ |
ಗೂಳ ಪಾಳೆಯ ತೆರಳಿತು ಮೆಲ್ಲಮೆಲ್ಲನೆ
ಹೇಳಲಳವೆ ಶೇಷನಿಗೆ || ೧೫ ||

ಹೊಡೆವ ತಂಬಟೆ ಭೇರಿ ನಿಸ್ಸಾಳ ಸೂಳೈಸೆ
ನಡುಗಿದವಖಿಳ ಬ್ರಹ್ಮಾಂಡ |
ಹೊಡೆವ ನಾನಾವಾದ್ಯ ಧ್ವನಿ ಘೀಳಿಡೆ
1ಪಡೆಯನದಾರು ಬಣ್ಣಿಸರು || ೧೬ ||

ಪಡೆ ನಡೆಯಲು ಕೂರ್ಮನ ಬೆನ್ನು ಕುಸಿಯಲು
ಧರೆ ಎಡಬಲದಲ್ಲಿ ಒಲಿಯೆ |
ಹೆಜ್ಜೆ ನಡುಗಿತು ಫಣಿಪತಿಗೆ ದಿಗ್ಗಜಗ
ಳ್ಕಾಗ್ಗರಿಸಿತು ಮಂಡಿಯೊಳು ನಿಂತಿರಲು || ೧೭ ||

ಮದಕರಿ ತುರಗ ತೊಂಬತ್ತಾರು ಕೋಟಿಯು
ದೊರೆಯೊಡಬಲದಲ್ಲಿ ನಡೆಯೆ |
ಬಿರುದಿನ ವ್ಯೆಗಾವಲಿನೆಕ್ಕಟಿಗರ
ಬರೆವರೆ ಶೇಷನಿಗಳಲೆ || ೧೮ ||

ಅಂದು ಹರಿಶ್ಚಂದ್ರ ತಂಗಿ ಬೇಂಟೆಯನಾಡೆ
ಹಿಂದಕೆ ತಿರುಗಿತು ದಂಡು |

ಮುಂದೆ ಸಿಕ್ಕಿದ ನಾನಾ ಮೃಗಗಳ ಕೊಂದಾಗ
ತಂದೊಪ್ಪಿಸುವರು ರಾಯನಿಗೆ || ೧೯ ||

ಅಲ್ಲಲ್ಲಿ ದಂಡುಬಿಡುತ ರಾಯ ನಡೆದನು
ಅಲ್ಲಲ್ಲಿ ಪಯಣಗತಿಯಲಿ |
ಅಲ್ಲಲ್ಲಿ ಹುಲ್ಲು ನೀರುಳ್ಳ ತಾವನು ನೋಡಿ
ಅಲ್ಲಲ್ಲಿ ಬಿಡುತ ಪಾಳೆಯವ || ೨೦ ||

ಗಿರಿದುರ್ಗ ವನದುರ್ಗ ಜಲದುರ್ಗದವರೆಲ್ಲ
ಕರವೆತ್ತಿ ಮುಗಿದು ಕಪ್ಪವನು
ಭರದಿಂದ ತಂದಿತ್ತು ರಾಯ ನೋಡೆನೆಯೆಲ್ಲ
ಬರುತಿರ್ದರೆಂದು ಭೀತಿಯಲಿ || ೨೧ ||

ಗಡಿಯವರು ಕೋಟೆ ದಣ್ಣಾಯಕರೆಲ್ಲ
ಬಿಡದೆ ಕಪ್ಪಗಳ ತಂದಿತ್ತು |
ಪೊಡವಿಪತಿಯ ಕೂಡೇ ನಡೆದರು ಬೇಡರು
ಬಿಡದೆ ಓಲೈಸುತಲೆಂದು || ೨೨ ||

ಅಡವಿಯ ಕಾವ ಬೇಡರು ಗಡಿಯೊಳಗಿಹ2
ಬಿಡವೆಚ್ಚು ಗಜಸಿಂಹಗಳ |
ನಡುನೆತ್ತಿಗಳ ಸೀಳಿ ಮುತ್ತುಗಳ ತಂದು
ಪೊಡವಿಪತಿಗೆವೊಪ್ಪಿಸುವರು || ೨೩ ||

ಜಲ್ಲಿಯ ಮೃಗಜಾನ (ತ ?) ತುಪ್ಪದ (ವ ?) ಕಂಬಿಯ
ಅಲ್ಲಲ್ಲಿ ಹೆಬ್ಬುಲಿ ಚರ್ಮ |
ಎಲ್ಲವ ಹೊರೆಗಟ್ಟಿ ತಂದು ಕಾಣಿಕೆಯಿಕ್ಕಿ
ಎಲ್ಲರು ನಡೆದರೆರಗ್ಗಿನಲಿ || ೨೪ ||

ಇಂತು ಅನಂತ ಸಂತೋಷದಿ ರಾಯನು
ಕಾಂತಾರದಿ ಬರುತಿರಲು |
ಚಿಂತಿಸಿ ವಿಶ್ವಾಮಿತ್ರ ಮಾಡಿದನೊಂದು
ತಂತ್ರವನೇನ ಹೇಳುವೆನು || ೨೫ ||

ಸೂಕರನಿಂದಲ್ಲದೆ ಹರಿಶ್ಚಂದ್ರನು
ಈ ಕಾಡಿಗೆ ಬಾರನೆಂದು

ಸೂಕರನೊಂದ ಸೃಷ್ಟಿಸಿ ಮಂತ್ರಿಸಿ ಜಗ
ಲೋಕಾಧಿಪತಿಯ ತೆಹುದೆಂದ ‖ ೨೬ ‖

ಬಂದು ಸೂಕರ ಹರಿಶ್ಚಂದ್ರನು ಬರುತಿರೆ
ಮುಂದೆ ತಾ ಬಹಳ ದೂರದಲಿ ।
ನಿಂದು ಮಲೆತು ದಾಡೆಗಡಿವೃತಿರ್ದುದ ಕಂಡು
ಮುಂದಣ ಬಲ ಮುತ್ತಿತಂದು ‖ ೨೭ ‖

ಈಟಿಯೊಳಿಟ್ಟರೆ ತಪ್ಪಿಸಿಕೊಂಬುದು
ಪೆಟಲೊಳಿಡಲು ಜುಗುಳಾಕಿ (?)
ತಟ್ಟನೆ ತುಂಡಿಸಿ ಖಡ್ಗದಿ ಹೊಯ್ದರೆ
ಬೆಟ್ಟದಂದದಿ ನಿಂದಿಹುದು ‖ ೨೮ ‖

ಶುನಿಗಳ ಬಿಟ್ಟರೆ ಸಿಗಿದಿಟ್ಟು ಬಿಡುವುದು
ಮನದಲಿ ಅತಿರೋಷವಿಹುದು ।
ತನಗಿವಿರಾಂತರ ಕರುಳ ಕಿತ್ತಿಟ್ಟರೆ
ವನದೊಳು ಹರಿದಾಡುತಿಹುದು ‖ ೨೯ ‖

ಕೊಲ್ಲದೆ ಬಿಡೆವು ಎನುತ್ತಲಿ ಶಬರರು
ಎಲ್ಲ ಭಾಷೆಯ ಮಾಡಿಕೊಂಡು ।
ಬಿಲ್ಲನು ಕೈಕೊಂಡು ಮುಸುಕಿದ ಶಬರರ
ಎಲ್ಲರ ಕೊಂದುದಾ ಹಂದಿ ‖ ೩೦ ‖

ಹೊದ್ದಲಮ್ಮರು ಹಂದಿಯ ಕುರುಪಾಟಕ
ಲ್ಲಿದ್ದವರೆಲ್ಲ ಕಂಗೆಟ್ಟು ।
ಬುದ್ಧಿವಂತರ ಕರೆಯೆನ್ನುತ ಶಬರರು
ಇದ್ದರು ದೂರದೂರದಲಿ ‖ ೩೧ ‖

ಬಳಸಿಬಿಟ್ಟರು ಹರುವಲೆಗಳನಲ್ಲಲ್ಲಿ
ಮಳೆಯೊಳಗಿರ್ದ ಸೂಕರಗೆ ।
ಅಳವಲ್ಲ ಕೊಲುವರೆ ನಮಗೆಂದು ಶಬರರು
ತಿರುಗಿದರಂದು ಹಿನ್ನೆಲೆಗೆ ‖ ೩೨ ‖

ಬಿಟ್ಟು ಬಾಣಗಳನು ಅಗ್ನಿಪುಟವಗೊಳಿಸೆ
ಲಕ್ಷಕೆ ತಾಠದೆಯಿರಲು ।

ಪೃಥ್ವಿಪಾಲಕನಿಗೆ ಬಿನ್ನೈಸುವೆವೆಂದು
ಆರ್ತಿಯಿಂದೋಡಿ ಬಂದವರು ॥ ೩೩ ॥

ಭರದಿಂದ ಬಂದು ಕೈಮುಗಿದರು ಶಬರರು
ದೊರೆಗಳ ದೇವನೆ ಕೇಳು ।
ಧರೆಯೊಳು ಹುಟ್ಟಿದ ಹಂದಿಯೆಂತಲ್ಲವು
ದೊರೆಗಳ ದೇವ ಚಿತ್ತೈಸು ॥ ೩೪ ॥

ಕೆದರಿತು ಶಬರರ ಬಿರುದಿನ ಶುನಿಗಳು
ಯಿಂದು ಕೋಟ್ಯನುಕೋಟಿಯುನು ।
ಮುಂದುಗೆಡಿಸಿಕೊಂಡು ಕಾಡುತಿರ್ದಪುದೆಂದು
ಬಂದು ಶಬರರು ಬಿನ್ನೈಸೆ ॥ ೩೫ ॥

ಇನ್ನೊಂದು ಬಿನ್ನಪವನು ಕೇಳೆಲೆ ರಾಯ
ಮುನ್ನೊರ್ವ ನರಕಾಸುರನು ।
ಪನ್ನಗಧರನ ಶಾಪದಲಿ ಸೂಕರನಾಗಿ
ಮುನ್ನಲಾ ಹಂದಿ ಕೊಂದಂತೆ ॥ ೩೬ ॥

ಮತ್ತೊಂದ ಕೇಳು ನೃಪೋತ್ತಮ ಹಂದಿಯ
ವೃತ್ತಾಂತವನು ......
ಮೃತ್ಯುಂಜಯನ ಶಾಪದಿ ಮೂಕದಾನವ
ಮರ್ತ್ಯಲೋಕಕೆ ಹಂದಿಯಾದ ॥ ೩೭ ॥

ಏಕೆ ಸೂಕರನಾದ ಮೂಕದಾನವನೆಂದು
ಲೋಕಾಧಿಪತಿ ಕೇಳಿದರೆ ।
ಆ ಕಥೆಯೆಲ್ಲವ ಶಬರನಾಯಕ ಪೇಳ್ದ
ಭೂಕಾಂತಗೆ ಕೈಯ ಮುಗಿದು ॥ ೩೮ ॥

ಹಂದಿಯು ಕೊಂದ ಕಾರಣವೇನು ಎಲೆ ರಾಯ
ಮುಂದಕ್ಕೆ ನಡೆ ನೀನೆಂದು ।
ಇಂದುಧರನ ಶಾಪದಿ ಹಂದಿಯೆನಲದ
ಕೊಂದವರಿಗೆ ಕೇಡು ಬಹುದು ॥ ೩೯ ॥

ಗುರುವಿನಾಜ್ಞೆಯ ಮೀರಬೇಡೆಂದು ಮಂತ್ರೀಶ
ಕರ ಮುಗಿದು ಬೇಡಿಕೊಂಡ ।

ಘೋರನ ಶಾಪದ ಹಂದಿಯೆಂದು ಬಿನ್ನೈಸಿದ
ಶಬರರ ನುಡಿಯ ಚಿತ್ರೈಸು ॥ ೪೦ ॥

ಇಂದ್ರನು ದೂರ್ವಾಸ ಮುನಿಯಿಂದ ಕೆಟ್ಟನು
ಸಾಂ (?)ದರ ರೋಷಭಾಸ್ಕರನ ।
ನಂದನರಿಂದ ಕೆಟ್ಟನು ರಾಮಚಂದ್ರನು
ಒಂದು ಹೊನ್ನಿಗಿಡಿಂಬಂದು ॥ ೪೧ ॥

ಧರೆಯೊಳು ಮದನವಿಜಯನೆಂಬ ಭೂಪಾಲ
ದುರುಳತನದಿ ಬೇಟೆಯಾಡಿ ।
ಹರಿಣನು ವಾಜಿಯ ದೆಸೆಯಿಂದಲಾತಗೆ
ಮರಣಕೆ ಬಂದನಾತನಿಗೆ ॥ ೪೨ ॥

ಹಿಂದಣ ಕತೆಯನೆಲ್ಲವ ಪೇಳ್ದ ಮಂತ್ರಿಗೆ
ಎಂದು ನುಡಿದ ಹರಿಶ್ಚಂದ್ರ ।
ಇಂದೆನ್ನ ಬಲವನೆಲ್ಲವ ಕೊಂದ ಹಂದಿಯ
ಕೊಂದಲ್ಲದೆ ಬಿಡೆನೆಂದ ॥ ೪೩ ॥

ಕೇಡು ಸಂಭವಿಸುವ ಕಾಲಕ್ಕೆ ಮಂತ್ರೀಶ
ನಾಡಿದ ನುಡಿ ವಿಷವಾಯ್ತು ।
ನಾಡ ಮಾತೇಕಿನ್ನು ಹರಿಶ್ಚಂದ್ರರಾಯಗೆ
ಕೇಡು ಸಂಭವಿಸುವ ಕಾಲ ॥ ೪೪ ॥

ಎಂದುಳ್ಳ ನೀತಿಮಾತನು ಪೇಳ್ದ ಮಂತ್ರಿಗೆ
ಯಿಂತೆಂದು ನುಡಿದ ಹರಿಶ್ಚಂದ್ರ
ಸಂದೇಹವೇನು ಅಡವಿಯ ಮೃಗಗಳೇನು
ಕೊಂದರೆ ಭಯವಾರದೆಂದ ॥ ೪೫ ॥

ಇಂದ್ರಾಗ್ನಿ ಯಮ ನೈರುತ್ಯ ವರುಣ ವಾಯು
ಮುಂದೆ ಕುಬೇರಯಿಶಾನ್ಯ ।
ಅಂದಜ ಹರಿ ಸುರ ವಿಧಿಯಿಂದ ಕೆಟ್ಟರು
ಇಂದೀ ನೃಪರ ಪಾಡೇನು ॥ ೪೬ ॥

ಧರೆಯೊಳು ಸೋಮದತ್ತನ ಮಗ ಶೂದ್ರಕ
ಭರದಿ ವಿಧಿಯ ಗೆಲ್ವೆನೆಂದು ।

ಕರಚರಣನ ಹರಿಯಿಸಿಕೊಳ್ಳೆ ವಾಜಿಯಿಂ
ಸ್ಥಿರ ಕಾಂಚಿಯಾಲದಿ (?) ಮೆರೆಯೆ || ೪೭ ||

ಇಂತೆಂದು ಬುದ್ಧಿಯ ಪೇಳಿದ ಮಂತ್ರಿಯು
ಮಾತೊಂದು ತೃಣಕೆ ಕಡೆಮಾಡಿ |
ಇಂದೆಮ್ಮ ಬಲವನೆಲ್ಲವ ಕೊಂದ ಹಂದಿಯು
ಕೊಂದಲ್ಲದೆ ಹೋಗೆನೆಂದ || ೪೮ ||

ಈಸು ಬಲವನೆಲ್ಲ ಹೇಸದೆ ಕೊಂದೆಮ್ಮ
ಗಾಸಿ ಮಾಡಿದ ಸೂಕರನ |
ಈಸು ಬಲವು ಕೂಡಿ ಕೊಲ್ಲದೆ ಬಿಟ್ಟರೆ
ಹೇಸಿಕೆಯಹುದು ಲೋಕದಲಿ || ೪೯ ||

ಕೆದರಿದ ಕೇಶ ಕಂಪಿಸುವಳ್ಳೆ ಬಿಡುಪುಳ್ಳು
ಬರಲು ತಾಗಿಯೆ ನೆತ್ತರೊಗುತ |
ಮೆರವುತ ಬರುವನ ಕಂಡು ಮನ್ನೆಯರೆಲ್ಲ
ಮೊರೆಯೆಲ್ಲಿಯದೆಂದು ಕೇಳೆ || ೫೦ ||

ನಿಲ್ಲದೋಡುತ ಶಬರನು ನಾಯಿಗಳನೆಲ್ಲ
ಅಲ್ಲಿ ಕೊಂದಿತುಯೆಂದೆನುತ |
ಎಲ್ಲದು ತೋರೆನೆ ಬರಲಮ್ಮನೆನ್ನುತ
ಲ್ಲಿಗೆ ನೀವೆ ಹೋಗೆಂದ || ೫೧ ||

ಹಂದಿಯ ಕಾಣುತ್ತ ಕಣ್ಣುಗತ್ತಲೆಯಾಗಿ
ಮುಂದೆ ನಿಂದರ ಕಾಣಬಾರ |
ಕೊಂದರು ಕೊಲುವಿರಲ್ಲದೆ ಬರಲಮ್ಮವು
ಂದು ನೃಪಗೆ ಮೊರೆಯಿಡಲು || ೫೨ ||

ಹೇಡಿ ಬೇಡನ ಕತ್ತ ಹಿಡಿದು ನೂಕಿಸಿಬಿಟ್ಟು
ಕೂಡಿದ ರಾಯಬಲವನು |
ಒಡನೆ ತೊಂಬತ್ತಾರಕ್ಷೋಣಿಯು ಬಲ
ನಡೆದಿತು ಸೂಕರನಿದ್ದೆಡೆಗೆ || ೫೩ ||

ಪಲ್ಲಕ್ಕಿಯ ನಿಳಿದನು ರಾಯ ಕೋಪದಿ
ಎಲ್ಲ ಬ ವ ಡಿಕೊಂಡು |

ಬಿಲ ತಕ್ಕೊಂಡು ವಾಜಿಯನೇರಿ ನಡೆದನು
ಅಲ್ಲಿ ಸೂಕರಸಿದ್ದೆಡೆಗೆ || ೫೪ ||

ದಾಡೆಗಡಿದು ಕೋಡ ಮಸೆದೊಂದು ಹಿಕ್ಕೆಯ
ಕೂಡೆ ಲಂಘಿಸಿ ಹೊಯ್ದು ತೃಣವ |
ಕೂಡಿದ ಚತುರಂಗಬಲವನು ಬೆದರಿಸಿ
ರೂಢಿಪತಿಯ ಮುಂದೆ ನಿಲಲು || ೫೫ ||

ಅಂದು ಕಂಡನು ಹಂದಿಯನತ್ತಲಿತ್ತಲು
ಉದ್ದಂಡ ಮನ್ನೆಯ ಗಜಸಿಂಹ |
ನಿಂದು ಕೊಂಡಾಡಿದಯಿಂತಪ್ಪ ಹಂದಿಯ
ಎಂದು ನಾ ಕಂಡುದಿಲ್ಲೆಂದ || ೫೬ ||

ಕಾಲಭೈರವನೊ ಕಾರ್ಮುಗಿಲಿಳೆಗಿಳಿಯಿತೊ
ನೀಲಾಚಲದ ಹಬ್ಬುಗೆಯೊ |
ಈ ಲೋಕದ ಕಾರ್ಗತ್ತಲೆಯೊಯೆನೆ
ಶೂಲಪಾಣಿಯ ಒಲ್ಲನ್ನೈಸೆ || ೫೭ ||

ಸಿಡಿಲ ನಾಲಗೆಯೊ ಮಾರಿಯ ಕೈಯ ಕತ್ತಿಯೊ
ಆಡರಿದ ಕಾರ ಮಿಂಚುಗಳೊ |
ಪೊಡವಿಯ ವೃಕ್ಷಗಳೆನೆ ವೈರೋಮವ್ರ
ಬಿಡದೆವೊಪ್ಪಿರ್ದುದಾ ಹಂದಿ || ೫೮ ||

ಕಾಣುತ ಶಬರರಾ ಶುನಿಗಳ ಬಿಟ್ಟರಾ
ಮಾಣದೆಲ್ಲವ ತಲೆದಡಹಿ |
ಕ್ಷೋಣಿಪತಿಯ ಮುಂದೆಯೆಲ್ಲರು ಹೊಕ್ಕರು
ಹಾಣಾಹಣಿಯೊಳವರಂದು || ೫೯ ||

ಹಂದಿಯು ತೋರುತ ಹಿಂದುಮುಂದಾಗುತ
ಅಂದು ಘೋರಾರಣ್ಯದಲಿ |
ಹಿಂದಟ್ಟಿ ಬರುವ ತುರುಗವ ಕಾಣುತ್ತ
ಹಂದಿ ಹೊಕ್ಕಿತು ಆ ವನವ || ೬೦ ||

ಹಂದಿಯೊಡನೆ ನೆಗೆಸಿದ ತನ್ನ ತುರಗವ
ಅಂದು ಹರಿಶ್ಚಂದ್ರನೃಪನು |

ಹಂದಿಯು ಕಾಣದರಸೆ (?) ಮಾಯಾವಾದೀತು
ಎಂದು ನೊಂದನು ಮನದೊಳಗೆ || ೬೧ ||

ಹಂದಿಯು ಬಂದೀತು ವಿಶ್ವಾಮಿತ್ರನ
ನಂದನವನದಿ ಬಯಲಾಯ್ತು |
ಅಂದು ಹರಿಶ್ಚಂದ್ರ ಹಿಂದು ಮುಂದೇಣಿಸದೆ
ನಂದನದೊಳು ಆರಸಿದನು || ೬೨ ||

ಬಳಲಿದ ತುರಗವನಿಳಿದು ನೀರ್ಗುಡಿಸಿಯೆ
ನೆಳಲಲ್ಲಿ ಕಟ್ಟೆ ನೈದಡವಿ |
ಎಳೆಹುಲ್ಲ ಹಾಕಿ ತರಗೆಲೆ ಮೇಲೆ ಕುಳ್ಳಿರ್ದು
ಆಳುಕುತ ವನವ ನೋಡಿದನು || ೬೩ ||

ಸತಿಸುತ ಮಂತ್ರಿವೆರಸಿ ಹರಿಶ್ಚಂದ್ರನು
ಅತಿಚಿಂತೆಯಲಿ ಕುಳ್ಳಿರ್ದು |
ಯತಿಕುವರನ ಕಂಡು ವನವಾರದೆಂದರೆ
ಅತಿಶಯದಲಿ ಪೇಳ್ದನಂದು || ೬೪ ||

ನೊಸಲ ಕಣ್ಣುರಿಯಿಂದ ಕುಸುಮಶರನ ಸುಟ್ಟು
ಭಸಿತವ ಮೈಯೊಳು ಧರಿಸಿದ |
ಆಸಮಾಕ್ಷ ವಿಶ್ವಾಮಿತ್ರನ ವನವೆನೆ
ಹೊಸ ಗ್ರಹ ಸೊಂಕಿದಂತಾದ || ೬೫ ||

ಒಲಿದರೇಳು ಲೋಕವ ರಕ್ಷಿಸುವನು
ಮುಳಿದರೆ ಸಂಹರಿಸುವನು |
ಚಲದಂಕ ವಿಶ್ವಾಮಿತ್ರನ ವನವಿದು
ತೊಲಗು ಜಗದಿ ಮುನಿಯಾಣೆ || ೬೬ ||

ಎಂದ ಮಾತನು ಕೇಳಿ ಹರಿಶ್ಚಂದ್ರರಾಯನು
ಮುಂದರಿಯದೆ ಬಂದೆನೆನಲು |
ಅಂದು ಬರಲು ಆನೆ ಕುದುರೆ ಒಂಟೆಗಳೆಲ್ಲ
ಚಂದಗೆಡಿಸಿದೊ ಆ ವನವ || ೬೭ ||

ನಿಂಬೆ ದಾಳಿಂಬೆ ಹೇರಿಳೆ ಕಿತ್ತಿಳೆ ಮಾವು
ಜಂಬುನೇರಳೆ ಫಲವಡಕೆ |

ಅಂಬರದೊಳಗಿಹ ಕೆಂದೆಂಗು ದಾಳಿಯು
ಕೊಂಬು ಕೊಂಬೆಗಳೆಲ್ಲ ತರಿಯೆ (?) ‖ ೬೮ ‖

ಕೊಳಗಳೆಲ್ಲವ ಹೊಕ್ಕು ಕದಡಿದೊ ಮದಗಜ
ಬಳಲಿದ ಚತುರಂಗಬಲವು ।
ಅಳುಕದೆ ಮುನಿಯ ಸಾಮರ್ಥ್ಯವನರಿಯದೆ
ಬಳಸಿ ಬಿಟ್ಟರು ಪಾಳಯವ ‖ ೬೯ ‖

ಅಂದು ಹರಿಶ್ಚಂದ್ರ ಆ ವನ ಕೆಡಲಾಗಿ
ನೊಂದು ತನ್ನಯ ಮನದೊಳಗೆ ।
ಹಿಂದೆ ಮಾಡಿದ ದಾನಧರ್ಮವೆಲ್ಲವು ಕೆಟ್ಟೊ
ಇಂದು ಈ ವನದಿಂದಲೆನಗೆ ‖ ೭೦ ‖

ಗುರುವಿನಾಜ್ಞೆಯ ಮೀರಿದ ಚಿಂತೆಯೊಂದು ಮೇ
ಲೊರಹ ಸಿಕ್ಕದ ಚಿಂತೆಯೊಂದು ।
ವರಮಂತ್ರಿ ಪೇಳೆ ಕೇಳದ ಚಿಂತೆ ಮೂರನೆ
ಸುರತರು ಕೆಡೆ ಚಿಂತೆ ನಾಲ್ಕು ‖ ೭೧ ‖

ಇಂತು ಅನಂತ ಚಿಂತೆಯ ಹರಿಶ್ಚಂದ್ರನು
ಯೆಂತು ನಾ ನೋಡುವೆನೆನುತ ।
ಚಿಂತಿಸಿದ ಸೂರ್ಯನು ಪಡುಗಡಲೊಳು ಬೀಳೆ
ಸಂತಸವಾದುದಂಬುಧಿಗೆ ‖ ೭೨ ‖

ಇಂದುವದನೆಯ ತೊಡೆಯ ಮೇಲೆ ತಲೆಯಿಟ್ಟು
ಅಂದು ವೀಳೆಯವ ತೆಕ್ಕೊಳುತ ।
ಕಂದನ ತೊದಲ್ನುಡಿಗಳ ಕೇಳುತಲಿರುತ
ಮಂದ ಕವಿಯೆ ಒರಗಿದನು ‖ ೭೩ ‖

ಕತ್ತಲೆಗವಿಯಿತು ಹರಶ್ಚಂದ್ರ ಸಿತ್ತ್ಯಸು
ಸತ್ಯದ ಸೂರೆಗೊಂಬವನೆ ।
ಅತ್ಯಂತ ಚಿಂತೆಯೊಳೊರಗಿದ ರಾಯಗೆ
ಮತ್ತೊಂದು ಕನಸು ಕಾಣಿಸಲು ‖ ೭೪ ‖

ಅಂಜುತ ಅಳುಕುತ ಒರಗಿದ ರಾಯಗೆ
ಮುಂಜಾವದಲೊಂದು ಕನಸು ।

ಕುಂಜರ ಸಿಂಹನ ಕನಸ ಕಂಡಂದದಿ
ಅಂಜಿಯೆ (?) ರಗಿದನಾ ನೃಪನು || ೭೫ ||

ಅಂಜದಿರೆನುತ ಮೆದೆಯ ತಟ್ಟಿ ಎಬ್ಬಿಸಿ
ಕಂಜಮುಖಿಯು ಬೇಗದಲಿ |
ನಂಜುಗೊರಳ ವಿರೂಪಾಕ್ಷನ ನೆನೆಯುಲು
ರಂಜಿಪ ಭಸಿತವನ್ನಿಟ್ಟು || ೭೬ ||

ಕಂಕಣವನು ಮುಖದಿಂದ ನಿವಾಳಿಸಿ
ಭೋಂಕನೆ ಕಾಲ್ದೆಸೆಗಿರಿಸಿ |
ಶಂಕರನರ್ಧಾಂಗಿ ಸಲಹೆಂದು ಭಸಿತವ
ಕುಂಕುಮಗಂಧಿ ಧರಿಸಿದಳು || ೭೭ ||

ಈರೇಳು ಲೋಕಕ್ಕೆ ವೀರನೆನಿಸಿಕೊಂಬ
ಧೀರ ಹರಿಶ್ಚಂದ್ರ ನೀನು |
ಕಾರಣವಿಲ್ಲದೆ ಹೆದರಿದ ಬಗೆಯೇನು
ಭೂರಮಣಗೆ ಹೇಳೆಂದ || ೭೮ ||

ಪರಬಲ ಮಸ್ತಕ ಶೂಲ ನೆನಸಿಕೊಂಬ
ಬಿರುದುಳ್ಳ ರಾಯರ ಗಂಡ |
ಧುರದೊಳು ಮಲೆತರ ಶಿರವ ಚೆಂಡಾಡುವೆ
ಕರ ಭೀತಿಯೇಕಾದುದೆಂದು || ೭೯ ||

ಚಂದ್ರಮತಿಯೆ ಕೇಳು ನಾ ಕಂಡ ಕನಸೆಲ್ಲ
ಒಂದನುಳಿಯದೆ ಪೇಳುವೆನು |
ಚಂದ್ರನ ರಾಹು ಕೊಂಡುಳುಹಿ ಬಿಟ್ಟಂತಾಯ್ತು
ಇಂದುವದನೆ ಕೇಳೆಂದ || ೮೦ ||

ಘುಡುಘುಂಡಿಸುತಲೊಬ್ಬ ಮುನಿನಾಥ ಕುಳಿತಿರ್ದ
ನಡುವೋಲಗ ಶಾಲೆಯಲ್ಲಿ |
ಹಿಡಿದೊಪ್ಪುವ ಮಣಿಗಂಬ ಹೊಂಗಲಶವ
ಸದೆ ಬಡಿದೆಲ್ಲರ ಕೆಡಹಿ || ೮೧ ||

ಅಂದು ಸಿಂಹಾಸನದಿಂದೆನ್ನ ನೂಕಲು
ಬಂದು ಕಾಗೆಯು ಎದೆಮೆಟ್ಟಿ |

ನಿಂದು ಕರೆವುತಿರೆ ಶಿವಭವನವ ಹೊಕ್ಕೆ
ಮುಂದಣಂತಸ್ಥವೇನೆಂದ || ೮೨ ||

ಕಾಳ ರಕ್ಕಸ ಬಂದೊದ್ದು ಕೊಂದೆನ್ನನು
ಹಾಳು ಬಾವಿಗೆ ನೂಕುವನು |
ಬೀಳುತ ಮೊರೆಯಿಡೆ ವಿರೂಪಾಕ್ಷ ಬಂದೆನ್ನ
ತೋಳ ಹಿಡಿದು ಸೆಳೆಕೊಂಡೆ || ೮೩ ||

ಜಡೆ ವಿಭೂತಿಯು ತೊಡೆದ ರುದ್ರಾಕ್ಷಿಯು
ಉಟ್ಟ ಪುಲಿಯ ಚರ್ಮದುಡಿಗೆ |
ಬಿಟ್ಟ ಕೆಂಜೆಡೆ ಸುಲಿಪಲ್ಲು ಶೂಲದ ಪಣ
ಬಿಟ್ಟು ಬಾಯ್ದೆರೆಯೆ ಹೆದರಿದೆನು || ೮೪ ||

ಅಂಜದಿರೆಂದಭಯವನಿತ್ತು ನೊಸಲೊಳು
ರಂಜಿಪ ಭಸಿತವನ್ನಿಟ್ಟು |
ಅಂಜಬೇಡೆಂದನ ಕಾಣದೆ ಕಂಗೆಟ್ಟು
ಅಂಜಿ ನಾನೊರಲಿದೆನೆಂದ || ೮೫ ||

[3]ಮುಂದಣ ಕನಸು ಹೊಲ್ಲ ಕೇಳಲೆ ರಾಯ
ಹಿಂದೆ ಕಂಡುದು ಕರ ಲೇಸು |
ಅಂದು ವಿರೂಪಾಕ್ಷ ಅಂಜಬೇಡೆನುತ
ಬಂದು ಕೈವಿಡಿದುದು ಲೇಸು || ೮೬ ||

ಗುರುವಿನಾಜ್ಞೆಯ ಮೀರಿ ಸೂಕರನೊಡಬಂದೆ
ವರಮಂತ್ರಿ ಸಾರಿ ಪೇಳಿದರೆ |
ದುರುಳತನದಿ ಕೌಶಿಕನ ವನವ ಹೊಕ್ಕೆ
ಇರುಳೊಂದು ಕನಸ ನಾ ಕಂಡೆ || ೮೭ ||

ಎಂದು ಚಿಂತಿಸಿ ತನ್ನ ಮನದೊಳು ಹರಿಶ್ಚಂದ್ರ
ಅಂದತಿದುಗುಡದೊಳಿರಲು |
ಚಂದ್ರಮತಿಯು ಪನ್ನೀರ ಮುಖಕೆ ಕೊಟ್ಟು
ತಂದು ಕರ್ಪೂರ ವೀಳ್ಯವಿತ್ತು || ೮೮ ||

ಇತ್ತ ಹರಿಶ್ಚಂದ್ರ ಅತಿ ದುಗುಡದೊಳಿರೆ
ಅತ್ತ ಗಾಯದ ಸೂಕರನು |

ಮತ್ತೊಂದು ಮೆಳೆಯೊಳಗಿರ್ದು ಓಡಿತು ಬೇಗ
ನೆತ್ತ ವೋಗುತ ಮುನಿಯೆಡೆಗೆ ॥ ೮೯ ॥

ನೆಟ್ಟಂಬು ಸಹಿತ ವಿಶ್ವಾಮಿತ್ರನೆಡೆಯೊಳು
ತಟ್ಟನೆ ಬೀಳಲು ಕಂಡು ।
ಕೆಟ್ಟ ವಿಶ್ವಾಮಿತ್ರ ಕೋಪಿಸಿ ಬೆಮರಿಡೆ
ಹುಟ್ಟಿದರಾಗ ಹೊಲತಿಯರು ॥ ೯೦॥

ಯತಿಗೆ ಕೋಪವೆ ಹೊಲೆಯೆಂಬ ಗಾದೆವಾತು
ಶ್ರುತಿಶಾಸ್ತ್ರದೊಳಗಲ್ಲದಲ್ಲ ।
ಯತಿಗೆ ಕೋಪವೆ ಹೊಲೆಯೆಂಬುದ ತೋರಿದ
ಕ್ಷಿತಿಯೊಳು ವಿಶ್ವಾಮಿತ್ರ ॥ ೯೧ ॥

ಹಿಂದೆ ನಾ ನೆನೆದ ಕಾರ್ಯವು ಕೈಗೂಡಿತು
ಬಂದು ಸಿಕ್ಕಿದ ಹರಿಶ್ಚಂದ್ರ ।
ಮುಂದೆ ನಾನಾ ತೆರದಲಿ ಕೆಡಿಸದೆ ಬಿಡೆ
ನೆಂದು ಗರ್ಜಿಸಿ ಪಲ್ಮೊರೆದ ॥ ೯೨ ॥

ಕೋಪವೊಳ್ಪುಟ್ಟಿದನಾಮಿಕ ಸತಿಯರ
ರೂಪ ಒಣ್ಣಿಸಲಳವಲ್ಲ ।
ರೂಪು ಯೌವನ ಕಂಡಾರಾರು [ಸಿ]ಕ್ಕರು
ಚಾಪಲಾಕ್ಷಿಯರಿಗೆ ಸೋತು ॥ ೯೩ ॥

ನೀಲದ ಪುತ್ಥಳಿಯೊ ಕಾರ್ಗತ್ತಲೆಯೊಳು
ಮೇಲೆ ಕವಿದು ನಿಂದಂತೆ ।
ಮೂಲೋಕವ ಕೊಲುತಿಪ್ಪ ವಶ್ಯದ ಕಪ್ಪೊ
ಕಾಲಿಗೊಪ್ಪುವ ವಾಹನವೊ ॥ ೯೪ ॥

ಮುನಿಯ ಕೋಪದಿ ಜನಿಸಿದ ಕಾರಣದಿಂದ
ಅವನಿಗೆ ಹೊಲತಿಯರಾಗಿ ।
ಮನದೊಳಳುಕಿಲ್ಲದೆ ಧೂರದಿ ನಿಂದು ಕೇಳ್ದರು
ಯೆಮಗಾಹುದು ಬೇಸಸೆನಲು ॥ ೯೫ ॥

ಜನಪತಿ ಹರಿಶ್ಚಂದ್ರ ವನದೊಳಗಿರುವನ
ಮನಕೆ ಸಂತಸ ಮಾಡಿ ನೀವು;

ವಿನಯದಿಂದವನನೊಲಿಸಿಕೊಳ್ಳೆ ಮತ್ತೆ
ಮುನಿ ಕೌಶಿಕ ಕಳುಹಿದನು ॥ ೯೬ ॥

ಪಟ್ಟೆಯ ಸೀರೆ ಮೂಕುತ್ತಿ ರತ್ನದೋಲೆಯ
ನೆಟ್ಟನೆ ಮುತ್ತಿನ ಸರವ ।
ಸೃಷ್ಟಿಗೆ ಪೊಸತೆನಿಸುವ ಪುನ್ತಿ (?) ಪದಕವ
ಕಟ್ಟಿಕೊಳ್ಳೆಂದಿತ್ತನಂದು ॥ ೯೭ ॥

ಚೆನ್ನೆಯರ ನಡುವಿಗೆ ರನ್ನದೊಡ್ಯಾಣವ
ಬಿನ್ನಣಿಸಿದ ನೇವಳನ್ವು ।
ಹೊನ್ನ ಬಳೆ ರ್‍ಯಾಗಟೆ ಸರಪಣಿ ಮೆರೆದುವು
ಚೆನ್ನೆಯರ ನೆರೆಯ ಮಧ್ಯದಲಿ ॥ ೯೮ ॥

ಚಿನ್ನದ ಕಾಲುಂಗುರ ಮುಂಟಕೆ ಪಿಲ್ಲಿ
ಹೊನ್ನಂದುಗೆ ಕಾಲ ಉಳಿಯು ।
ರನ್ನದ ಸರಗೆಜ್ಜೆ ತಳುಕಿನ ಬೊಂಬೆಯೊ
ಮನ್ಮಥನಾನೆಯಂಥವರು ॥ ೯೯ ॥

ಸುರಪತಿಯೋಲಗದೊಳೂರ್ವಶಿ ರಂಭೆ ಮುನಿದು
ನರಲೋಕಕೆ ಬಂದರೆನಲು ।
ಉರಗಾಂಗನೆಯರು ಧರೆ ನೋಡಬಂದಂತೆ
ಇರುತಿರ್ದರಂಬುಜಾಕ್ಷಿಯರು ॥ ೧೦೦ ॥

ಕಸ್ತೂರಿ ಕರ್ಪೂರ ಪುನುಗು ಜವಾಜಿಯು
ಒಪ್ಪುವ ಅಗಿಲು ಚಂದನವು ।
ಕುಪ್ಪಿಗೆಯೊಳಗಿರ್ದ ಪನ್ನೀರು ಕುಂಕುಮ
ಒಪ್ಪದಿಂದಿತ್ತನವರಿಗೆ ॥ ೧೦೧ ॥

ಸತ್ಯವುಳ್ಳವನ ಅಸತ್ಯನ ಮಾಡೆಂದು
ಮತ್ತಾ ಸತಿಯರಿಗಂದು ।
ಇತ್ತನು ಮುದ್ರೆಯುಂಗುರವನು ಮತ್ತವರಿಗೆ
ಅತ್ಯಂತ ಸಂತೋಷದಿಂದ ॥ ೧೦೨ ॥

ಸೃಷ್ಟಿಯೊಡೆಯ ಹರಿಶ್ಚಂದ್ರನ ಕೆಡಿಸೆಂದು
ನೆಟ್ಟನಾ ಸತಿಯರ ಕಳುಪೆ ।

ದಿಟ್ಟ ಹರಿಶ್ಚಂದ್ರ ಸತ್ಯವ ಬಿಡದಿರೆ
ತಟ್ಟನೆ ಪ್ರಾಣ ಬಿಡುವೆವು ॥ ೧೦೩ ॥

ಇಂದುಮುಖಿಯರು ಭಾಷೆಯ ಮಾಡಿಕೊಂಡರು
ಒಂದು ಕ್ಷಣದೊಳೊಲಿಸುವೆವು ।
ಕುಂದ ಹೊರಿಸಿ ನಮ್ಮನೊಲ್ಲದೆ ಬಿಟ್ಟರೆ
ಮುಂದಲೆ ಮೂಗರಿಸೆನಲು ॥ ೧೦೪ ॥

ಕೊಟ್ಟನು ಕರ್ಪೂರ ವೀಳ್ಯವನವರಿಗೆ
ನೆಟ್ಟನೆ ಹೋಗಿ ನೀವೆಂದು ।
ಕೆಟ್ಟ ವಿಶ್ವಾಮಿತ್ರ ಕಳುಹಿದನಾಕ್ಷಣ
ಸೃಷ್ಟಿಪತಿಯ ಓಲಗಕೆ ॥ ೧೦೫ ॥

ಪಟ್ಟದ ಮದದಾನೆಯಂದದಿ ನಡೆದರು
ಸೃಷ್ಟಿಪತಿಯ ಓಲಗಕೆ ।
ನೆಟ್ಟನೆ ದಂಡಿಗೆವಿಡಿದು ಕೊಂಡಾಡಲು
ಸೃಷ್ಟಿಪತಿಯು ಬೆರಗಾದ ॥ ೧೦೬ ॥

ಹರವಿ ತುಂಬಿದ ಹಾಲಿಗೆ ಹುಳಿ ಹೊಕ್ಕಂತೆ
ಪರಿಮಳದ ನೆವ (?) ಸಾಲಿನೊಳು ।
ಇರದೊಂದಿ ನೀರು ಸುಣ್ಣವು ಬೆರೆದಂದದಿ
ಹರಿಶ್ಚಂದ್ರ ನಿದ್ದೆಗವರು ॥ ೧೦೭ ॥

ಉರಿವ ದೀವಿಗೆಯ ಕೆಡಿಸಲೆಂದು ಬಿರುಗಾಳಿ
ಉರವಣಿಸಿಯೆ ಬಂದಂತೆ ।
ಹರಿಶ್ಚಂದ್ರನ ಕೆಡಿಸಲು ಬಂದ ಸತಿಯರ
ಇರವನದಾರು ಬಣ್ಣಿಪರು ॥ ೧೦೮ ॥

ಇಂದುವದನೆಯರು ಹರಿಶ್ಚಂದ್ರರಾಯರಿಗೆ
ವಂದಿಸಿ ಕರವೆತ್ತಿ ಮುಗಿದು ।
ಅಂದು ಚಿರಂಜೀವಿಯಹಾಗೆಂದು ಹರಿಸಿ ಮುದ
ದಿಂದ ಕೊಂಡಾಡಿದರವರ ॥ ೧೦೯ ॥

ಗಂಡರ ಗಂಡನೆ ಕದನ ಪ್ರಚಂಡನೆ ಭೂ
ಮಂಡಲವಾಳ ರಾಯರಿಗೆ।

ಗಂಡನೆ ಹರಿಶ್ಚಂದ್ರಭೂಪಾಲ ನೋಡೆಂದು
ಕೊಂಡಾಡಿದರೋಲಗದಿ || ೧೧೦ ||

ಹಿಂಡುಮನ್ನೆಯರ ಕೋಳಾಹಳಸಮೀರ
ಗಂಡನೆ ಶರಭ ಭೇರುಂಡ |
ಚಂಡವಿಕ್ರಮನುದ್ದಂಡರಾಯನೆಯೆಂದು
ಕೊಂಡಾಡಿದರೋಲಗದಿ || ೧೧೧ ||

ಪರಬಲತಿಮಿರ ಮಾರ್ತಾಂಡನೆ ಅರಿಬಲ
ಶರಧಿಗೆ ವಡಬಾನಳನೆ |
ಧರೆಯೊಳು ಮಲೆತರಿಗಳ ಗಂಡ ಗಿರಿವಜ್ರ
ಸರಿಯಾರು ಮೂರು ಲೋಕದಲಿ || ೧೧೨ ||

ಬಂದು ಕೊಂಡಾಡಿದ ಸತಿಯರ ಕಾಣುತ
ಅಂದು ಹರಿಶ್ಚಂದ್ರ ನೃಪನು |
ಇಂದಿನವರೀ ಲೋಕದ ಸುದತಿಯರಲ್ಲ
ವೆಂದು ಸಂದೇಹಿಸಿ ನುಡಿದ || ೧೧೩ ||

ಇಂದ್ರನ ಶಚಿಯೊ ಮನ್ಮಥನ ರತಿಯೊ ನಾ
ಗೇಂದ್ರಲೋಕದ ವನಿತೆಯರೊ |
ಅಂದಿನ ಊರ್ವಶಿ ರಂಭೆಯೊ ಎನ್ನುತ
ಒಂದು ಗಳಿಗೆಯೀಕ್ಷಿಸಿದನು || ೧೧೪ ||

ಈ ರೂಪು ಈ ಗುಣ ಈ ವಿದ್ಯ ಚಾತುರ್ಯ
ವಾರಿಧಿ ಮಧ್ಯದೊಳಿಲ್ಲ |
ಮಾರಾರಿಯ ಶಾಪದಿ ಬಂದರಲ್ಲದೆ
ಧಾರುಣಿಯೊಳು ಹುಟ್ಟಲಿಲ್ಲ || ೧೧೫ ||

ಎಂದು ಚಿಂತಿಸುತಿದ್ದ ರಾಯನಯಿದಿರೊಳು
ಅಂದು ದಂಡಿಗೆಯ ಮೇಳೈಸಿ |
ಚಂದದಿ ನಾನಾ ರಾಗವೆಲ್ಲವ ಪಾಡಿ
ಅಂದಾಸನ ಬಿಡಿಸಿದರು || ೧೧೬ ||

ತೋಡಿ ಭೂಪಾಳಿ ಒಡ್ಡಿ ದನ್ಯಾಸಿಯ
ಗೊಂಡಕ್ರಿಯ ಮಲಹರಿಯ |

ದಂಡಿಗೆ ವಿಡಿದು ಪಾಡಿವರೊಲವಿಂದ ಭೂ
ಮಂಡಲ ಮೋಹಿಸುವಂತೆ || ೧೧೭ ||

ಆಹರಿ ಶ್ರೀರಾಗ ಮಲಹರಿ ಲಲಿತ ವ
ರಾಳಿ ಗೌಳ ದೇಶಾಕ್ಷಿ |
ದೇಶಿ ಗುಜ್ಜರಿ ಭೈರವಿ ಮೇಘರಂಜಿಯು
ರಾಳತಿ (?) ಯರು ಪಾಡಿದರು || ೧೧೮ ||

ಮಾಳವ ಮಧುಮಾಧವಿ ಪವಳ ಭವುಳಿ (?)
ಸಾಳವ ಶಂಕರಾಭರಣ |
ಹೇಳಲಳವೆ ಕಾಂಭೋದಿ ಗುಜ್ಜರಿಯು ಬಂ-
ಗಾಳವನೊಲಿದು ಪಾಡಿದರು || ೧೧೯ ||

ಸಂಗೀತ ಸಾಹಿತ್ಯ ಗೀತ ಪ್ರಬಂಧವು
ಶೃಂಗಾರದ ಧರುವುಗಳ |
ಅಂಗನೆಯರು ಪಾಡಲುವೋಲಗವೆಲ್ಲ
ಅಂಗಜನಿಗೆ ಗುರಿಯಾಯ್ತು || ೧೨೦ ||

ಹಾಡುವ ಸತಿಯರ ಗಾಡಿತನಕೆ ಮೆಚ್ಚಿ
ಬೇಡಿ ನಿಮ್ಮಿಷ್ಟವನೆನಲು |
ಬೇಡುವೆ ನಿನ್ನೊಳು ನಾಚದೆಯೆಮಗೆ ನೀ
ನೀಡು ಭೋಗವನೆಂದೆನಲು || ೧೨೧ ||

ಕೊಟ್ಟನು ಹಾಡಿದ ಸತಿಯರಿಗಂದುಡೆ
ಪಟ್ಟೆ ನಾಣ್ಯವ ಸೀರೆಗಳನು |
[ತೊ]ಟ್ಟ ಬಂಗಾರವನೆಸೆವ ಕಳೆದಿತ್ತನು
ಸೃಷ್ಟಿಪತಿಯು ಮನಮೆಚ್ಚಿ || ೧೨೨ ||

ಕೂಡಿ ಆಸೆಗೆ ಬಂದವರಲ್ಲಯೆಲೆ ರಾಯ
ನಾಡೊಳು ನಿಮ್ಮ ಕೀರ್ತಿಯನು |
ಪಾಡಿ ಕೊಂಡಾಡಲು ಕೇಳಿ ಬಂದೆವು ನಾವು
ರೂಢಿಪತಿಯೆ ಮನ್ನಿಸೆನುತ || ೧೨೩ ||

ಕನ್ನೆವೆಣ್ಗಳು ನಾವು ಕೆಟ್ಟು ನಡೆದರಲ್ಲ
ನಿನ್ನ ಬಯಸಿ ಬಂದವೆನುತ |

ಚನ್ನೆಯರುಗಳು ಪೇಳಲು ಹರಿಶ್ಚಂದ್ರಗೆ
ಬಿನ್ನ[ಣ]ದ ಮಾತನಾಡಿದರು || ೧೨೪ ||

ಕೆಟ್ಟ ಸತಿಯರಾಡಿದ ಮಾತು ಕಿವಿಯೊಳು
ನೆಟ್ಟ ಶೂಲದ ತೆರೆನಾಗೆ |
ಕೆಟ್ಟು ನುಡಿಯ ಬೇಡಿ ಹೋಗಿ ನೀವೆನ್ನುತ
ಸೃಷ್ಟಿಪತಿಯು ಕೋಪಿಸಿದ || ೧೨೫ ||

ಜಲದ ಪ್ರಮಾಣವ ಕುಮುದುವು ತೋರ್ಪಂತೆ
ಕುಲವದೋರುವದು ನಾಲಗೆಯು |
ಹೊಲತಿಯರಲ್ಲದೆ ಈ ಮಾತು ಬರುವದೆ
ತೊಲಗಿ ಬೇಗದೊಳೆಂದು ನೃಪನು || ೧೨೬ ||

ಹೊಲೆಯಿಂದ ಜನಿಸಿದ ಮಾನವರಲ್ಲದೆ
ಹೊಲೆ ನಿಲ್ಲದಾರು ಹುಟ್ಟಿದರು |
ಹೊಲಸಿನೊಳಗೆ ನವಮಾಸ ಬೆಳೆದುಬಂದು
ಕುಲಕೆ ಹಾರುವರೆ ಬಲ್ಲವರು || ೧೨೭ ||

ಮುತ್ತು ರತ್ನವು ಕ್ಷೀರ ಮತ್ತಾದ ಮಧುದಂತ
ಕಸ್ತೂರಿ ಪುಣುಗು ಜವಾಜಿ |
ಉತ್ತಮವಲ್ಲೆಂದು ಮತ್ತಾರು ಹಳಿದಾರು
ಮುತ್ತುರತ್ನವು ಪರಿಮಳವ || ೧೨೮ ||

ನವರತ್ನದೊಳಗೊಂದು ಸ್ತ್ರೀರತ್ನವೆಂಬುದು
ಭುವನನದೊಳಗೆ ಕೇಳರಿಯಾ |
ಯುವತಿಯರಿಗೆ ರೂಪು ಲಾವಣ್ಯವಿರುತಿರೆ
ಅವರೊಲ್ಲದೆ ಬಿಟ್ಟರುಂಟೆ || ೧೨೯ ||

ನುಡಿವನಾಲಗೆ ನೋಡವ ಕಣ್ಣು ಪಾದವು
ಬಿಡದೆ ಕೇಳುವ ಕಿವಿಗಳಿಗೆ |
ಒಡನೆ ವಾಸನೆ ತೀಡೆ ಮೂಗಿಗಿಲ್ಲದ ಹೊಲೆ
ನಡುವೆಲ್ಲಿ ಬಂದಿತು ಹೇಳು || ೧೩೦ ||

ಕಿಚ್ಚಿಗೆ ಬಿದ್ದರೆ ಮೈ ಬೇವುದಲ್ಲದೆ
ಕೆಚ್ಚಿನ ಬಾಯಿ ಬೆಂದಪುದೆ |

ಹುಚ್ಚ ಮಾತಾಡದೆ ಸುಮ್ಮನೆ ಹೋಗೆಂದು
ನಿಚ್ಚಟ ಪುರುಷ ಕೋಪಿಸಿದ || ೧೩೧ ||

ಬಚ್ಚಲ ಉದಕವು ತಿಳಿಯಲು ಮಿಂದರೆ
ಹುಚ್ಚನಾಯೊಳ[ಗೆ] ಹಾಲಿರಲು |
ನಿಶ್ಚೈಸುಂಬರೆ ಸೊಬಗಿರೆ ರೂಪಿರೆ
ಮಚ್ಚಿವೂಲಿವರೆ ಬಲ್ಲವರು || ೧೩೨ ||

ಮತ್ತೊಂದು ಕೇಳಾ ನೃಪೋತ್ತಮ ನಿನ್ನಯ
ಮುತ್ತಿನ ಸತ್ತಿಗೆಯಿತ್ತು |
ಅರ್ತಿಯಿಂದೆಮಗೆ ವಲ್ಲಭನಾಗೆಂದು
ಮತ್ತೆವಿಡಿದರು ಮುಂಜೆರಗ || ೧೩೩ ||

ಕೊಂದರೆ ಕೊಲುವಿರಲ್ಲದೆ ಬಿಟ್ಟು ಹೋಗೆವು
ಎಂದು ಚಲಕೆ ನಿಂತಿರಲು |
ಅಂದು ಹರಿಶ್ಚಂದ್ರ ಚಬಕಿಲಿ ಕೊಲಿಸಿದ
ಮಂದ್ಯಾಳತನದ ಸತಿಯರ || ೧೩೪ ||

ಮುಂದಲೆವಿಡಿದು ಕೆಡಹಿ ಎಳೆಯೆಳೆಯೆಂದು
ಕೊಂದರೆಲ್ಲರು ತಮತಮಗೆ |
ಬಂದವ[ರೆ]ಲ್ಲರು ಒದೆದು ಕೊಂದರು
ನಿಲ್ಲದೆ ಓಡಿದರಂದು || ೧೩೫ ||

ನಿಲ್ಲದೆವೋಡಲು ಎಲ್ಲರು ಕಾಣುತ
ಕಲ್ಲ ತಕ್ಕೊಂಡಿಟ್ಟು ಬಿಡದೆ |
ಬಲ್ಲಿದ ವಿಶ್ವಾಮಿತ್ರ ಮೊರೆಮೊರೆಯೆಂದು
ತಲ್ಲಣಿಸುತಲಿ ಓಡಿದರು || ೧೩೬ ||

ಮುನಿನಾಥ ಕೇಳು ಹರಿಶ್ಚಂದ್ರರಾಯನು
ಕೊನೆ ಮುಡಿ ಹಿಡಿದು ಕೆಡಹಿಸಿ |
ಮನಸಿಗೆ ಬಂದಂತೆ ಒದ್ದೊದ್ದು ಕೊಲಿಸಿದ
ಮುನಿನಾಥ ಮೊರೆಯೆನ ಬಿಡದೆ || ೧೩೭ ||

ಎಲ್ಲಿಯ ಮುನಿಯೆತ್ತಣ ಮುನಿಯೆನ್ನುತ
ಹುಲ್ಲಿಗೆ ಕಡೆ ಮಾಡಿ ಬೈದು

ಬಲ್ಲಿದ ಹರಿಶ್ಚಂದ್ರ ಕೊಲ್ಲೆಂದು ಕೊಲಿಸಿದ
ಎಲ್ಲ ಊಳಿಗದರ ಬಿಟ್ಟು || ೧೩೮ ||

ಅಲ್ಲಿರ್ದರೆಲ್ಲರು ನಿಲ್ಲದೆ ಕೊಂದರು
ನಿಲ್ಲದೆ ಓಡುಓಡೆಂದು |
ಹೊಲ್ಲದ ಮಾತನಾಡಬಹುದೆಯೆಂದು
ಕೊಲ್ಲದ ಕೊಲೆಗಳ ಕೊಂದು || ೧೩೯ ||

ಮುಂದಲೆಯನು ಕಿತ್ತು ಮುಕ್ಕವಡೆ ಹೊಯ್ದರು
ಕಂ[ಡು] ಹೆಚ್ಚಲಿ ಬೈದು ನಿಮ್ಮ |
ಅಂದು ವಿಶ್ವಾಮಿತ್ರ ಮೊರೆಯೆನೆ ಕೇಳಿದೆ
ಕೊಂದ ಗಾಯಗಳ ತೋರಿದರು || ೧೪೦ ||

ಗದ್ದುಗೆಯನು ಹೊಯ್ದಿದ್ದ ವಿಶ್ವಾಮಿತ್ರ
ರುದ್ರಾವತಾರದೊಳಂದು |
ಮುದ್ದು ಮುಖದ ನೀರೆಯರ ಮಾತನು ಕೇಳಿ
ಎದ್ದು ನಡೆದನಾ ಕ್ಷಣದಿ || ೧೪೧ ||

ಬಿಟ್ಟ ಕೆಂಜೆಡೆ ಮಿಳಿಮುತ ಪುಲಿಚರ್ಮ
ದುಟ್ಟ ಉಡಿಗೆ ಸರಿವುತಲಿ |
ನೆಟ್ಟಗೆ ಬರುವ ಮುನಿಯನು ಕಂಡೆಲ್ಲರು
ಕೆಟ್ಟೋಡಿತು ತಮತಮಗೆ || ೧೪೨ ||

ಸಿಡಿಲ ಕುಡುಹೊ ವಡವಾನಳ ಪ್ರಳಯಾಗ್ನಿ
ಮೃಡನುರಿಗಣ್ಣಿನ ಕಿಡಿಯೊ |
ಕಡಲೊಳೊಗೆದ ವಿಷ ಸುಡುತ ಬರುವವೊಲು
ಗಡುಗಡಿಸುತ ಬಂದ ಮುನಿಪ || ೧೪೩ ||

ದೂರದಿ ಬರುವ ಮುನಿಯನು ಕಂಡು ಹರಿಶ್ಚಂದ್ರ
ಭೂರಮಣನು ಎದ್ದು ನಮಿಸಿ |
ಸೇರಿಮೊತ್ತಿಗೆ ಬಂದ ಮುನಿಯ ಶ್ರೀಪಾದಕೆ
ಆ ರಾಯ ಬಿದ್ದು ವಂದಿಸಿದ || ೧೪೪ ||

ಪುರಹರ ಭವಹರ ಅಘಹರ ದುರಿತ ಸಂ
ಹರ ಕರುಣಾಕರಯೆನುತ |

ತರಳನ ಸಲಹೆಂದು ಚರಣಕೆ ಬಿದ್ದನು
ಭರದಿಂದ ಒದ್ದನಾ ಮುನಿಪ || ೧೪೫ ||

ಈ ಸತಿಯರನೇಕೆ ಕೊಲಿಸಿದೆ ಎಲೆ ರಾಯ
ಈ ಸುದತಿಯರ ತಪ್ಪೇನು |
ಲೇಸಾಗಿ ಒಲಿದು ಹಚ್ಚಡವಿಡಿದೆಳೆದಾ ಮಾತ
ವಿಸ್ತರಿಸಿದನು ಆ ಮುನಿಗೆ || ೧೪೬ ||

ಇಂದು ಭೋಗವನು ಬೇಡುವರೆ ಮುನೀಶ್ವರ
ಕಂತುಹರನೆ ಸಂಮತವೆ |
ಪಂಥದಿ ಸ್ತ್ರೀಯರು ಸೆರಗ ಹಿಡಿದೆಳೆದರೆ
ಕಾಂತೆರ ನೀಕ್ಷಿಸಿರುವೆನು || ೧೪೭ ||

ನೀನಾಗಿ ಏನ ಬೇಡಿದುದೆನೆ ಕೇಳೆಂದು
ಪೇಳಲು ಆವರು ಬೇಡಿದುದ |
ಮಾನವತಿಯರಿಗೆ ಈಯದೆ ಈ ಪರಿ
ಮಾಡಬಹುದೆ ಮೂರ್ಖ ನೀನು || ೧೪೮ ||

ಕೆಟ್ಟ ವಿಶ್ವಾಮಿತ್ರ ಮಾಡುವನ್ಯಾಯವ
ಪಟ್ಟಣ ಜನವೆಲ್ಲ ನೋಡಿ |
ತಟ್ಟನೆ ಗೋಳಿಟ್ಟು ನೆಟ್ಟನೆ ದೊಳೆತ್ತಿ
ಇಟ್ಟು ಶಪಿಸುತಿರ್ದರವರು || ೧೪೯ ||

ಮರೆದು ನುಡಿವ ಭಾಷೆ ತಪ್ಪದೆ ನೃಪನೆರೆ
ಹರನ ಪಾದವ ನೆನೆವುತಲಿ |
ತೊರೆದು ಹೋಗುತ ಕಂಬನಿ ರಾಯ ನಿಂದಿರೆ
ಮರುಗಿತು ಪರಿವಾರ ಜನರು || ೧೫೦ ||

ಏಕಪತ್ನಿಯ ವ್ರತ ಸಾಕಾರವಿರುವುದು
ನೀ ಕಾಣೆಯ ಯತಿಪತಿಯೆ |
ಬೇಕಾದುದ ಯೋಗ್ಯತೆಗೆ ತಕ್ಕುದ ಬೇಡದೆ
ಈ ಪರಿ ಕೇಳಲು ಬಹುದೆ || ೧೫೧ ||

ನಿನ್ನಯ ಪಾದಕ್ಕೆ ತನುಮನ ಧನವನ್ನು
ಎಲ್ಲವ ವರ್ತಿಸುತಿರುವೆ |

ಖುಲ್ಲಸ್ತ್ರೀಯರು ಬೇಡುವರು ಸುಮ್ಮತವಾಯ್ತೆ
ನಿಮ್ಮ ಮನಕ್ಕೆ ಗುರುರಾಯ ॥ ೧೫೨ ॥

ಕೊಡುವೆಯ ನಿನ್ನ ರಾಜ್ಯದ ಸಂಪತ್ತನು
ಬಿಡದೆ ಪ್ರಜೆ ಪರಿವಾರವೆಲ್ಲ ।
ಕೊಡು ಬೊಕ್ಕಸದೊಳಗಿರುವ ಹೊನ್ನುಗಳೆಲ್ಲ
ತಡೆಯದೆ ಒಪ್ಪಿಸುಯೆನಲು ॥ ೧೫೩ ॥

ಮುತ್ತಿನ ಸತ್ತಿಗೆಯಿತ್ತು ಮನ್ನಿಸುಯೆಂದು
ಮತ್ತೆ ಮುಂಜೆರಗನು ಪಿಡಿಯೆ ।
ಕತ್ತ ಹಿಡಿದು ನೂಕಿ ಕೊಂಡೆವೆನುತ ಮಂತ್ರಿ
ಮತ್ತೆ ನುಡಿದನು ಮುನಿಯೊಡನೆ ॥ ೧೫೪ ॥

ನಿಮ್ಮ ಹೆಸರ ಹೇಳಿ ಮನ್ನಿಸಿ ಬಿಟ್ಟೆವು
ಚಮ್ಮಟಿಗೆಯಲಿ ಕೊಲ್ಲಿಸುವೆವು ।
ಮುತ್ತಿನ ಸತ್ತಿಗೆ ಕೇಳಿವುಳವರೆ ಧೂರ್ತ
ಸತಿಯರ ಮಾತು ಒಪ್ಪಾಯ್ತೆ ॥ ೧೫೫ ॥

ಮಂತ್ರಿಯಾಡಿದ ಮಾತ ಕೇಳಿ ವಿಶ್ವಾಮಿತ್ರ
ತಂತ್ರವ ನೆನೆದು ಮನದಲಿ ।
ಮಂತ್ರಿಗಳರಸ ಮಂತ್ರಿಗಳ ಶಿಖಾಮಣಿ
ಮಂತ್ರಿಕುಲಕೆ ಕಟ್ಟಾಣಿ ॥ ೧೫೬ ॥

ಹುಲ್ಲೆಯ ಮರಿ ನಿಲ್ಲದೆ ಹರಿದಾಡಲು
ಅಲ್ಲಿ ಹೆಬ್ಬುಲಿಯೊಂದು ಕಂಡು ।
ಮೆಲ್ಲನೆ ಹದುಗಿಕೊಂಡಂತೆ ವಿಶ್ವಾಮಿತ್ರ
ನೆಲ್ಲ ಹಾಸಕವನಾಡಿದನು ॥ ೧೫೭ ॥

ಕೊಂದ ನೋವೆಲ್ಲವ ಬಿಟ್ಟೆನು ಮಂತ್ರೀಶ
ಮುಂದೆ ನೃಪಗೆ ಬುದ್ಧಿ ಹೇಳು ।
ಇ[ಂದೆ]ನ್ನ ಮಕ್ಕಳನೊಲ್ಲದೆ ಬಿಟ್ಟರೆ
ಮುಂದೆ ತನಗೆ ಕೇಡಹುದು ॥ ೧೫೮ ॥

ಎಂದ ಮಾತಿಗೆ ಹರಿಶ್ಚಂದ್ರ ಬಿನ್ನೈಸಿದ
ತಂದೆ ಚಿತ್ತೈಸೊಂದು ಮಾತ ।

ಇಂದೆನ್ನ ಸಿರಿ ಹೋಗಲಿ ಈ ಸತಿಯರ–
ನೆಂದಿಗೊಲ್ಲೆನು ಮುನಿರಾಯ ॥ ೧೪೯ ॥

ಮತ್ತೊಂದು ಬಿನ್ನಪವನು ಕೇಳು ಮುನಿನಾಥ
ಹೆತ್ತ ತಾಯಿಗಳಿವರೆನಗೆ ।
ಸ್ವಸ್ತ್ರೀಯಳಲ್ಲದೆ ಲೋಕದ ಹೆಣ್ಗಳು
ಹೆತ್ತ ತಾಯೆಂದು ಭಾವಿಸುವೆ ॥ ೧೬೦ ॥

ಪರಸತಿಯರ ಮಾತು ಬೇಡ ಕೇಳಿಲೆ ರಾಯ
ಪರವನಿತೆಯರೇ [ನು] ಇವರು ।
ಧರೆಯರಿಯಲು ಎನ್ನ ಮಕ್ಕಳುಯಿವರೆಂದು
ಒಡಬಡಿಕೆಯ ಮಾಡಿ ನುಡಿದ ॥ ೧೬೧ ॥

ಎನ್ನ ಮಕ್ಕಳ ನಿನ್ನ ಸತಿಯರ [ಮಾ] ಡಿಕೊ
ಇನ್ನು ಈರೇಳು ಲೋಕವನು ।
ನಿನ್ನ ವಶವ ಮಾಡಿ ಹರಿಯಜ ಸುರರನು
ನಿನ್ನ ಸೇವೆಯ ಮಾಡಿಸುವೆ ॥ ೧೬೨ ॥

ಮುನ್ನ ನೀ ದಯಗೈದ ರಾಜ್ಯ ಕಡಮೆಯೆ
ಯೆನ್ನ ರಾಜ್ಯವನು ದೇಶವನು ।
ನೀ ಬೇಡೆ ಕೊಡುವೆನೆಂದು ಹರಿಶ್ಚಂದ್ರ
ತನ್ನ ಶಿರವ ಬಾಗಿದನು ॥ ೧೬೩ ॥

ಕೊಟ್ಟೆನೆಂದಾಗಲೆ ಆಯಿತು ರಾಯ
ಕೊಟ್ಟ ಭಾಷೆಗೆ ತಪ್ಪಬೇಡ ।
ಕೊಟ್ಟುದುಂಟಾದರೆ ಧಾರೆಯನೆರೆಯೆಂದೆ
ಸೃಷ್ಟಿಪತಿಗೆ ಕೈಯನಾಂತ ॥ ೧೬೪ ॥

ಕಾಶಿ ಕೇದಾರ ಶ್ರೀಶೈಲ ಪಂಪಾಕ್ಷೇತ್ರ
ಇಷ್ಟು ದೇಶ ಹೊರತಾಗಿ ।
ದೇಶವೆಲ್ಲವ ಕೊಟ್ಟೆನುಯೆಂದು ಹರಿಶ್ಚಂದ್ರ
ಆ ಸಭೆಯೊಳು ಧಾರೆಯೆರೆದ ॥ ೧೬೫ ॥

ಅಂದು ಬಲೀಂದ್ರ ಹರಿಗೆ ಧಾರೆಯನೆರೆ
ದಂದವಾಯಿತು ಈ ಕೃತಿಗೆ ।

ಕುಂದಾಯಿತು ಹರಿಶ್ಚಂದ್ರಗೆ ಧರೆಯೊಳು
ಒಂದು ಮಾತಿನ ಕತದಿಂದ || ೧೬೬ ||

ಅಂದು ಹರಿಶ್ಚಂದ್ರ ಚತುರಂಗಬಲವನು
ಮುಂದೆ ಕಾಣಿಕೆಯಿಕ್ಕಿ ಮುನಿಗೆ |
ಅಂದು ಪಟ್ಟವ ಕಟ್ಟಿ ನಿಂದ ಠಾವಿಗೆ
ನಿಂದಿತು ನಾಲ್ಕನೆ ಸಂಧಿ || ೧೬೭ ||

ಐದನೆಯ ಸಂಧಿ

ಅಂಜಿಸಿಯರೆಯಟ್ಟಿ ಕೊಲುತಿಹ ವಿಷ[ವ] ಕರ-
ಕಂಜವನಾಂತು ತೆಕ್ಕೊಂಡು |
ಅಂಜಬೇಡೆಂದು ಸುರರಿಗಭಯವನಿತ್ತ
ನಂಜುಗೊರಳ ಸಲಹೆನ್ನ || ೧ ||

ಮುಂದಣ ಕಥೆಯ ವೃತ್ತಾಂತವ ಪೇಳುವೆ
ಅಂದು ಹರಿಶ್ಚಂದ್ರ ನೃಪನು |
ಒಂದುಳಿಯದೆ ರಾಜ್ಯದೇಶವೆಲ್ಲವ ಕೊಟ್ಟು
ಅಂದು ಎಲ್ಲರ ಕಾಣಿಸಿದ || ೨ ||

ಮಂತ್ರಿಮನ್ನೆಯರು ಸಾಮಂತರು ದೊರೆಗಳು
ಮಂತ್ರವ ಬಲ್ಲ ಕೋವಿದರು |
ಮುಂತಿರ್ದ ಪರಿವಾರ ಕೋವಿದರೆಲ್ಲರು
ಚಿಂತಿಸುತಿಕ್ಕಿ ಕಾಣಿಕೆಯ || ೩ ||

ಪಟ್ಟವ ಕಟ್ಟಿದ ವಿಶ್ವಾಮಿತ್ರಗೆ
ಸೃಷ್ಟಿಪತಿಯು ಎನೆ ಕೇಳಿ |
ನೆಟ್ಟನೆ ಪಾಳಯವೆಲ್ಲ ಗೋಳಿಟ್ಟರು
ಬೆಟ್ಟಕ್ಕೆ ಕಿಚ್ಚನಿಟ್ಟಂತೆ || ೪ ||

ವಾರಿಧಿ ಮಸಗಿ ಭೋರ್ಗರೆವಂತೆ ಬೇಗದಿ
ಸೇರಿದರವರು ಗೋಳಿಡಲು |
ನಾರಿಗಳೆಲ್ಲರು ಎದೆಗಳ ಹೊಯಿಕೊಳೆ
ಭೇರಿಯ ಹೊಯ್ದಂತಾಯ್ತು || ೫ ||

ದೊರೆತನವನು (ದು ?) ಹೋಗಿ ಸಿರಿಯು ನೀಗಾಡಿದೆವು
ಉರುವ ಮಾರಿಯು ಕರಕೊಂಡು |
ತಿರುಕಗೆ ಮರುಳಾಗಿ ರಾಜ್ಯ ಹೋಯಿತುಯೆಂದು
ದೊರೆದೊರೆಗಳು ಹೊರಳಿದರು || ೬ ||

ಹರಿಯಜ ಸುರರು ದೇವರ್ಕಳು ಮುಂತಾಗಿ
ಶಿರವತೂಗಿದರೊಲಿದೊಲಿದು |
ಧರೆಯೊಳಗಿಂತಪ್ಪ ಧೀರರುಂಟೆಯೆಂದು
ಪುರಹರ ಗಿರಿಜೆಗೆ ಪೇಳ್ದ || ೭ ||

ಅಲ್ಲಲ್ಲಿ ಮನ್ನೆಯರೆಲ್ಲರು ಮಲೆತರು
ಅಲ್ಲಲ್ಲಿ [ಕೊ]ಟೆಗಳೆದ್ದು |
ಅಲ್ಲಲ್ಲಿ ಪಾಳೆಯಗಾರರು ಹರಿದಾಡೆ
ಅಲ್ಲಲ್ಲಿ ಸೂರೆಯಾಡಿದರು || ೮ ||

ಇಲ್ಲಿ ಈ ರಾಜ್ಯವ ಕೊಡುವವರಾರು
ಇಲ್ಲಿ ತೆಕ್ಕೊಂಬವರಾರು |
ಎಲ್ಲ ಮನ್ನೆಯರು ಆರ್ಭಟಿಸುತ ಮೊರೆದೇಳೆ
ಅಲ್ಲಿ ಕಂಗೆಟ್ಟನಾ ಮುನಿಪ || ೯ ||

ನಿನ್ನ ರಾಜ್ಯವ ಕೊಟ್ಟು ಮನ್ನೆಯರಿಗೆ ಹೇಳಿ
ಎನ್ನನು ಕೊಲಿಸಬೇಕೆನುತ |
ನಿನ್ನ ರಾಜ್ಯ ನೀನಾಳು ದುರ್ಬುದ್ಧಿಯ
ಚೆನ್ನಾಗಿ ಕಲಿತೆ ಕೇಳರಸ || ೧೦ ||

ಅಂಜದಿರಿಯೆಂದು ವಿಶ್ವಾಮಿತ್ರ ಮುನಿಯೆನು
ಅಂಜಿಕೆಯೆಲ್ಲವ ಬಿಡಿಸಿ |
ಸಂಜೊಗವಾಗಿ ಹೋಗುವರನು ನಿಲ್ಲಿಸಿ
ಕೆಂಜೆಡೆ ಮುನಿಯಾಣೆಯಿಟ್ಟು || ೧೧ ||

ಅಲ್ಲಲ್ಲಿ ಪರಿವಾರಕೆ ಕೈಯ ಮುಗಿವನು
ಎಲ್ಲ ಮನ್ನೆಯರಿಗೆ ನೃಪನು |
ನಿಲ್ಲಿ ನನ್ನಾಣೆಯೆನುತ ಹರಿಶ್ಚಂದ್ರನು
ಎಲ್ಲರ ತಂದು ಕಾಣಿಸಿದ || ೧೨ ||

ಕೊಟ್ಟುದು ಸಟೆಯೊ ದಿಟವೊ ಹೇಳೆಲೊ ರಾಯ
ಕೊಟ್ಟು ಮರೆ[ತೆಯಾ]ದರೆ ನಿನ್ನ ।
ಪಟ್ಟದ ಸತಿಸುತ ಮೊತ್ತವೆರಗಿ ಮಂತ್ರಿಸಹಿತ
ಕಟ್ಟಯೋಧ್ಯೆಗೆ ಪಯಣವ ॥ ೧೩ ॥

ಇನ್ನು ನಾನಿತ್ತ ಬಳಿಕಲಾರ ಕೇಳುವೆ
ನನ್ನ ರಾಜ್ಯವ ನಾನು ಕೊಡಲು ।
ನಿನ್ನಿಚ್ಛೆಯೊ ಅವರಿಚ್ಛೆಯೊ ಎನ್ನುತ
ತನ್ನ ಶಿರವ ಬಾಗಿದನು ॥ ೧೪ ॥

ಅಲ್ಲಿಂದ ತೆರಳಿ ಅಯೋಧ್ಯಕ್ಕೆ ಮುನಿರಾಯ
ನಿಲ್ಲದೆ ರಥವೇರಿಕೊಂಡು ।
ಎಲ್ಲ ಪಾಳ್ಯಕೆ ತೆರಳಿತು ಕೌಶಿಕನೊಳು
ಅಲ್ಲಿ ಭೇರಿಯ ಸನ್ನೆಮಾಡಿ ॥ ೧೫ ॥

ಒಂದಾಗಿ ತೆರಳಿತು ಚತುರಂಗ ಬಲವೆಲ್ಲ
ಅಂದು ವಿಶ್ವಾಮಿತ್ರನೊಡನೆ ।
ಹಿಂದೆ ಹರಿಶ್ಚಂದ್ರ ಸತಿಸುತ ಮಂತ್ರಿಯು
ಬಂದರು ಕಾಲ್ನಡೆಯೊಳಗೆ ॥ ೧೬ ॥

ಕಲ್ಲುಮುಳ್ಳೊಳು ಕಾಲ್ನಡೆಯೊಳು ಹರಿಶ್ಚಂದ್ರ
ಮೆಲ್ಲಮೆಲ್ಲನೆ ಬರುತಿರಲು ।
ನಿಲ್ಲಲೀಸದೆ ಕರತನ್ನಿಯೆಂದೆನ್ನುತ
ಅಲ್ಲಿ ಕಾವಲನಿಕ್ಕಿಸಿದ ॥ ೧೭ ॥

ಅಲ್ಲಲ್ಲಿ ದಂಡುಬಿಡುತ ವಿಶ್ವಾಮಿತ್ರ
ಅಲ್ಲಲ್ಲಿ ಪಯಣಗತಿಯಲಿ ।
ನಿಲ್ಲದೆ ನಡೆತಂದಯೋಧ್ಯವ ಹೊಕ್ಕನು
ಅಲ್ಲಿ ಅನಂತಸಂಭ್ರಮದಿ ॥ ೧೮ ॥

ಕಟ್ಟಿದ ಗುಡಿತೋರಣ ಕೇರಿಕೇರಿಯೊ[ಳ್]
ಕಟ್ಟಿದೊ ಕುರುಜುಪ್ಪರಿಗೆ ।
ಪಟ್ಟಣದವರೆಲ್ಲ ಇದಿರಾಗಿ ಬಂದರು
ಸೃಷ್ಟಿಪತಿಯ ಕಾಂಬ ಭರದಿ ॥ ೧೯ ॥

ಪುರಜನ ಪರಿಜನ ಹರಿಶ್ಚಂದ್ರರಾಯನ
ಬರವ ಕಾಣದೆ ಕಂಗೆಟ್ಟು ।
ಪರಿವಾರವನು ಕೇಳಿ ಹಿಂನೆ ಕಾವಲ ಸಹ
ಬರುವ ನೃಪನ ತೋರಿದರು ॥ ೨೦ ॥

ಬಂದು ಕಂಡವರೆಲ್ಲ ನೊಂದರು ಮನದಲ್ಲಿ
ತಂದು ಕಾಣಿಕೆ[ಯನು] ಪಿಡಿಯೆ ।
ಇಂದಿನರಸುತನ ಎನಗಿಲ್ಲ ಮುನಿಗಿಕ್ಕಿ
ಯೆಂದು ಎಲ್ಲರಿಗೆ ಪೇಳಿದನು ॥ ೨೧ ॥

ನಾರಿಯರೆಲ್ಲರು ಆರತಿಗಳ ತರೆ
ಆ ರಾಯ ಮುನಿಗೆತ್ತಿಸಿದ ।
ಊರೆಲ್ಲ ಕಾಣುತ ಗೋಳಿಟ್ಟೊರಲಲು
ವಾರಿಧಿ ಮೊರೆದಂತಾಯ್ತು ॥ ೨೨ ॥

ಆಂದು ವಿಶ್ವಾಮಿತ್ರ ಎಲ್ಲವನು ನೋಡುತ
ಬಂದು ಹಜಾರದಿ ಕುಳಿತು ।
ಒಂದಾಗಿ ಬಂದರೆಲ್ಲರ ಬೀಳ್ಕೊಟ್ಟನು
ಮುಂದಿರ್ದ ಮಂತ್ರಿ ಮನ್ನೆಯರ ॥ ೨೩ ॥

ಅಂದು ಹರಿಶ್ಚಂದ್ರ ವಿಶ್ವಾಮಿತ್ರಗೆ
ವಂದಿಸಿ ಕರೆವೆತ್ತಿ ಮುಗಿದು ।
ಇಂದು ನಿಮ್ಮೊಡನೆಯೆಲ್ಲವನೊಪ್ಪುಗೊಳ್ಳೆಂದು
ಅಂದು ಒಪ್ಪಿಸಿಕೊಟ್ಟ ನೃಪನು ॥ ೨೪ ॥

ಬೊಕ್ಕಸ ಭಂಡಾರ ಪಟ್ಟೆ ಜಲ್ಲಿಗಳನು
ಸೊಕ್ಕಾನೆ ಕುದುರೆ ಒಂಟೆಗಳ ।
ಲೆಕ್ಕಿಸಲಳವಲ್ಲ ಮುತ್ತುರತ್ನ ವ್ರ ಹೊನ್ನ
ಮಿಕ್ಕಿನ ಭಂಡಾರಗಳನು ॥ ೨೫ ॥

ತೊತ್ತಿರು ಬಂಟರು ಕೊಟ್ಟಿಗೆ ಕೊಲ್ಲಾರ
ಎತ್ತೆಮ್ಮೆ ಕೀಲಾರವನು ।
ಮತ್ತೊಂದನುಳಿಯದೆ ಒಪ್ಪಿಸಿದನು ಬೇಗ
ಸತ್ಯನಿಧಿ ಹರಿಶ್ಚಂದ್ರ ನೃಪನು ॥ ೨೬ ॥

ಪಟ್ಟಣ ಪರಿವಾರ ಮಂತ್ರಿ ಮನ್ನೆಯರನು
ನೆಟ್ಟನೆ ಬೀಗಮುದ್ರೆಯನು ।
ಸೃಷ್ಟಿಪತಿಯ ಮುದ್ರೆಯುಂಗುರವನು ಕೊಟ್ಟು
ಇಷ್ಟಲ್ಲದಿಲ್ಲೆಂದು ಮುನಿಗೆ ॥ ೨೭ ॥

ಸೃಷ್ಟಿಪತಿಯೆಲ್ಲರನೊಪ್ಪಿಸಿದನು
ಪಟ್ಟದ ಸತಿ ಹೊರತಾಗಿ ।
ಉಟ್ಟ ಸೀರೆಯ ಹೊದ್ದ ಹಚ್ಚಡವಲ್ಲದೆ
ಮುಟ್ಟನಿನ್ನೇನನುಯೆಂದ ॥ ೨೮ ॥

ಅಂದು ಹರಿಶ್ಚಂದ್ರ ಮುನಿಗೆ ವಂದಿಸಿ ನಿಂದು
ತಂದ ಪೋದಪೆನಯ್ಯಯೆನಲು ।
ಇಂದು ನೀ ಸುಖದಲ್ಲಿ ಹೋಗೆಂದು ಕಳುಹಲು
ಮುಂದಕೆ ಪಯಣವಾಗುವೆನು ॥ ೨೯ ॥

ತೊಟ್ಟ ಬಂಗಾರವ ಕಳೆದಿಟ್ಟು ಹೋಗೆನೆ
ನೆಟ್ಟನೆಲ್ಲವ ತೆಕ್ಕೊಡಲು ।
ಉಟ್ಟ ಸೀರೆಯ ಹೊದ್ದ ಹಚ್ಚಡವನು ಕೇಳೆ
ಸೃಷ್ಟಿಪತಿಯು ಬೆರಗಾದ ॥ ೩೦ ॥

ಒತ್ತಲಿದ್ದವನ ಕೈಯಲಿ ಹಳೆಯರಿವೆಯ
ಮತ್ತದ ನಾಲ್ಕಾಗಿ ಸೀಳಿ ।
ಪೃಥ್ವೀಪತಿಗೆ ಹೊಳ್ಳೈನುತ[4]ಹೊದ್ದು ನಿಂತನು[4]
ಚಿತ್ತಜಹರ ಗತಿಯೆನುತ ॥ ೩೧ ॥

ದತ್ತವಾಗಿತ್ತ ದ್ರವ್ಯವ ನಿನ್ನ ಬಳಿಯಲ್ಲಿ
ಮ[ತ್ತೈದು]ವೆನು ಯೆಂದು ನಿನ್ನ ಬಳಿಯ ।
ಇ[ತ್ತ]ದ್ರವ್ಯವ ನೀ ಕೊಟ್ಟು ಹೋಗಯ್ಯ
ದತ್ತಾಪಹಾರ ಮಾಡಬೇಡ ॥ ೩೨ ॥

ದೇಶವೊಪ್ಪಿಸುವಾಗ ಮೋಸದಿ ಮರೆದು ನಿ
ರಾಸೆಯ ಮಾಡದೆಯೆನ್ನ ।
ಏಸು ದ್ರವ್ಯವನೆಲ್ಲ ಮೊಸಲಾಗಿಯೆ ಕೊಟ್ಟು
ಸೂಸದೆ ನೀ ತೆರಳೆನಲು ॥ ೩೩ ॥

ಹಂದೆಯು ಹಾವು ಹೊಡೆದಂತಾದನಾ ರಾಯ
ಹಿಂದಕಾಡಿದ ಮಾತ ಮರೆತು ।
ಇನ್ನು ನಾ ಕೊಡಬೇಕು ಮರೆತ್ತಿರ್ವೆ ಮುನಿನಾಥ
ತಂದೆ ಕೋಪಿಸಬೇಡವೆಂದು ॥ ೩೪ ॥

ಕೊಟ್ಟು ಹೋಗೆನ್ನ ಹೊನ್ನನು ನೀನೆಯಿಲೆ ರಾಯ
ಕೊಟ್ಟುದಿಲ್ಲೆಂದರೆ ಬಿಡುವೆನೆ ।
ನೆಟ್ಟನೆ ನಮ್ಮ ಮಕ್ಕಳ ಮದುವೆಯಾಗು
ಪಟ್ಟವ ಕಟ್ಟುವೆ ನಿನಗೆ ॥ ೩೫ ॥

ಕೊಟ್ಟು ಹುಸಿದ ನಾನು ಭ್ರಷ್ಟನಾಗುವನಲ್ಲ
ಕೊಟ್ಟ ರಾಜ್ಯಕೆ ಆಳುಪುವೆನೆ ।
ಕೆಟ್ಟು ನುಡಿಯಬೇಡವೆನುತ ಹರಿಶ್ಚಂದ್ರ
ತಟ್ಟನೆ ಪಾದಕೆ ಬಿದ್ದ ॥ ೩೬ ॥

ಆ ನುಡಿ ಕೇಳುತ ವಿಶ್ವಾಮಿತ್ರನು
ನೋಡು ಇವನ ಗರ್ವವನು ।
ಬೇಡಿಸಿಕೊಳ್ಳದೆ ಕೊಡು ನಮ್ಮ ಹೊನ್ನನು
ನಾಡ ಮಾತೇಕೆ ಬೇಗದಲಿ ॥ ೩೭ ॥

ಎನ್ನ ರಾಜ್ಯದಿ ಹೊನ್ನ ವಂಚಿಸಿಕೊಂಡಿದ್ದು
ಇನ್ನು ಕೊಟ್ಟರೆ ನಾನೊಲ್ಲೆ ।
ನನ್ನ ಸೀಮೆಯೊಳು ಬೇಡಿ ಕೊಟ್ಟರೆ ಒಲ್ಲೆ-
ನೆನ್ನುತ ಮುನಿ ಕೋಪಿಸಿದ ॥ ೩೮ ॥

ಕೊಟ್ಟು ಹೋಗೆಂದು ನಿಷ್ಠುರವ ಮಾಡಲು
ಸೃಷ್ಟಿಪತಿಯು ಕೈಯ ಮುಗಿದು ।
ಕೊಟ್ಟಪೆನಯ್ಯ ನಾಲ್ವತ್ತೆಂಟು ದಿನದೊಳು
ಇಷ್ಟು ಕೋಪವು ಬೇಡ ತಂದೆ ॥ ೩೯ ॥

ಮತ್ತೆ ನಕ್ಷತ್ರಮುನಿಯ ಕಾವಲನಿಟ್ಟು
ಇತ್ತವಧಿಗೆ ಮುನ್ನ ಹೊನ್ನ ।
ಮತ್ತೊಂತು ಕಾಲಲಿ ನಿಲ್ಲಿಸಿ ತೆಕ್ಕೊಳ್ಳೆಂದು
ಆತ್ತ ವಿಶ್ವಾಮಿತ್ರನೆದ್ದ ॥ ೪೦ ॥

ಕಾಶಿಗೆ ಹೋಗಿ ಕೊಟ್ಟಪೆನಯ್ಯ ಹೊನ್ನನು
ಈಸೊಂದು ನಿಷ್ಠುರವೇಕೆ |
ಭಾಷೆಗೆ ತಪ್ಪಿ ಅವಧಿ ತುಂಬಿ ಹೋದರೆ
ದೇಶಕ್ಕೆ ಹೊಲೆಪಾತಕನು || ೪೧ ||

ಸತಿಸುತ ಮಂತ್ರಿವೆರಸಿ ಹರಿಶ್ಚಂದ್ರನು
ಅತಿಭರದಲಿ ಮುಂದೆ ನಡೆಯೆ |
ಖತಿಯಿಂದಲೊಂದಾಗಿ ನಡೆದ ನಕ್ಷತ್ರನು
ಅತಿ ನಿಷ್ಠುರವ ಮಾಡುತಲಿ || ೪೨ |

ಒಂದಾಗಿ ಬರುವರೆಲ್ಲಕೆ ಹರಿಶ್ಚಂದ್ರನು
ನಿಂದು ಕರವನೆತ್ತಿ ಮುಗಿದು |
ತಂದೆಗಳಿರ ಹೋಗಿ ಬರುವೆನು ನಾನೆಂದು
ಯೆಂದರೆ ಗೋಳಿಟ್ಟರಲ್ಲಿಹರು || ೪೩ ||

ಭರತ[ಗೆ] ಹರಿ ಸರ್ವರಾಜ್ಯದೇಶವ ಬಿಟ್ಟು
ವಿರತನಾಗಿ ಹೋದಂತೆ |
ಭರದಿಂದ ಹರಿಶ್ಚಂದ್ರ ರಾಜ್ಯದೇಶವ ಬಿಟ್ಟು
ತಿರುಗಿ ನೋಡದೆ ಹೋಗುತಿರ್ದ || ೪೪ ||

ಇಳೆಯೊಳು ನಳಚಕ್ರವರ್ತಿ ರಾಯರಿಗೆಲ್ಲ
ಆಳುಕಿ ಕಪ್ಪವ ತೆತ್ತು ಬಹರು |
ಬಳಿಕವನಿಗೆ ಏಳರಾಟವು ಹೊದ್ದಲು
ಹಳೆಯರಿವೆಗೆ ಗತಿಯಿಲ್ಲ || ೪೫ ||

ಎಂದು ಹೇಳಿದ ಮಂತ್ರಿಗೆ ಹರಿಶ್ಚಂದ್ರನು
ಇಂದೆನ್ನ ಮಾತನು ಕೇಳು |
ಅಂದವನಿಗೆ ಋಣವಿಲ್ಲದೆ ಹೋದನು
ಇಂದೆನ್ನ ಋಣ ಬೆನ್ನ ಬಿಡದು || ೪೬ ||

ಕೊಡುವೆನೆಂದರೆ ಮುನ್ನ ಮಡಗಿದೊಡವೆಯಿಲ್ಲ
ಪಡೆದ ದೇಶವು ರಾಜ್ಯವಿಲ್ಲ |
ಒಡಹುಟ್ಟಿದವರಿಲ್ಲ ಬಂಧುಬಳಗವಿಲ್ಲ
ಕೊಡುವರೆ ಗತಿ ಯಾವುದೆಂದು || ೪೭ ||

ಸಂಬಳವಿಡಿದೊಲ್ಲೈಸಲರಿಯೆ ಕೂಲಿ
ಕಂಬಳವನು ಮಾಡಲರಿಯೆ ।
ತುಂಬಿ ತುಳುಕಿ ಹೇರಿ ಮಾರಲರಿಯೆನೆಂದು
ಹಂಬಲಿಸಿದನಾ ನೃಪನು ॥ ೪೮ ॥

ಹಾಡಿ ಹರಸಿ ಕೊಂಡಾಡಲರಿಯೆ ಮುನ್ನ
ನಾಡೊಳು ತಿರಿವುದನರಿಯೆ ।
ಕಾಡಿ ಬೇಡೊರ್ವರ ನುಡಿಸಲರಿಯೆ ನಾನು
ರೂಢಿಯೊಳಪಕೀರ್ತಿಯಾದೆ ॥ ೪೯ ॥

ಬದವರಿಗೆಡರಡಸಲು ಕೆಟ್ಟು ಬಾಳರು
ಪೊಡವಿಪತಿಗೆ ಕೇಡು ಬರಲು ।
ನಡುಗಡಲೊಳು ಹಡಗೊಡೆದ ಹದನಂತೆ
ಬಿಡುವೆನು ಪ್ರಾಣವನೆಂದ ॥ ೫೦ ॥

ಪೊಡವಿಪ ಕೇಳೆನ್ನ ಬಿನ್ನಪವನು ಹಡ-
ಗೊಡೆದೊಂದು ಹಲಗೆಯ ಹಿಡಿದು ।
ತಡಿಗೆ ಸಾರಿದರುಂಟು ನೃಪ ನಿನಗೊಲಿವನು
ಬಿಡು ಚಿಂತೆಗಳನೆಂದ ಮಂತ್ರಿ ॥ ೫೧ ॥

ಎಂದು ಹೇಳುತ ಮಂತ್ರಿ ಹರಿಶ್ಚಂದ್ರರಾಯನು
ಒಂದಾಗಿ ಮುಂದಕ್ಕೆ ನಡೆಯೆ ।
ಅಂದು ಹರಿಶ್ಚಂದ್ರ ಸತಿಸುತ ಮಂತ್ರಿಯು
ಹಿಂದೆಣಿಸದೆ ಹೋದರಂದು ॥ ೫೨ ॥

ನಡೆದನು ಆ ರಾಯನು ಕಾಲ್ನಡೆಯಲಿ
ಅಡವಿಯಾರಣ್ಯದೊಳೊಂದು ।
ಒಡೆದವು ಕೈಕಾಲು ಸುರಿದು ರುಧಿರಗಳು
ಅಡಿಗಡಿಗಂದು ಬಟ್ಟೆಡಲು ॥ ೫೩ ॥

ಹತ್ತೆಂಟು ದಿವಸ ಈ ಪರಿಯಲಿ ನಡೆಯಲು
ಮತ್ತೆ ವಿಶ್ವಾಮಿತ್ರ ಮುನಿಯು ।
ಚಿತ್ತದಿ ನೆನೆದನು ಸತ್ವಗುಂದಿಸಲೆಂದು
ಮತ್ತೆ ಬೇಸಗೆಯ ಬಿಸಿಲನು ॥ ೫೪ ॥

ಧರೆ ಹತ್ತಿ ಸಿಡಿಯಲು ಕಾಡುಮೃಗವು ಸೀದು
ಕರಿವುರಿಯಾದುವಲ್ಲಲ್ಲಿ ।
ಸುರುಗಿದ ತರುಮರಗಳು ನಿಂದುರಿದುವು
ಭರದಿ ಕೌಶಿಕನಾಜ್ಞೆಯಲಿ ॥ ೫೫ ॥

ಅಡಿಯಾಕಾಶವೆಲ್ಲವು ಕತ್ತಿ ಬೇಯಲು
ನಡುವೊಬ್ಬರುಳಿದವರುಂಟೆ ।
ನುಡಿದ ಭಾಷೆಗೆ ತಪ್ಪದೆ ಹರಿಶ್ಚಂದ್ರನು
ನಡೆದನಾವಾಗ ಭರದಿಂದ ॥ ೫೬ ॥

ಕಾದ ಕಾವಲಿ[ಯೊ]ಳು ಕಾಲೂರಿ ನಡೆವಂತೆ
ಮೇದಿನಿಯೊಳು ನಡೆವಾಗ ।
ಕಾದ ಮಳಲು ಕಾಲದೊಹಿತವನುಪಂತೆ(?)
ಮೇದಿನಿಪತಿಯು ಲೆಕ್ಕಿಸದೆ ॥ ೫೭ ॥

ಕಂದದೆ ಕುಂದರೆ ಹಿಂದೆಣಿಸದೆ ಬೇಗ
ಅಂದು ಹರಿಶ್ಚಂದ್ರನೃಪನು ।
ಮುಂದಕ್ಕೆ ಅಡಿಯಿಟ್ಟು ನಡವುತಿರ್ದರಸಂಗೆ
ಬಂದ ಸಂಕಟವನೇಂಬೆ ॥ ೫೮ ॥

ಕಾದ ಧರೆಯಲ್ಲಿ ನಿಲಿಸಿದ ನಕ್ಷತ್ರ
ಮೇದಿನಿಪತಿಯ ಕೋಪದಲಿ ।
ಭಾಧೆಮಾಡಿದ ನಮ್ಮ ಹೊನ್ನ ಕೊಡೆನ್ನುತ
ಹೋದರೆ ಮುನಿಯಾಣೆಯೆಂದ ॥ ೫೯ ॥

ಕೊಟ್ಟಪೆನಯ್ಯ ಮುನಿನಾಥ ಕೋಪವ ಬಿಡು
ಇಷ್ಟೊಂದು ನಿಷ್ಠುರ ಬೇಡ ।
ಸೃಷ್ಟಿಪತಿ ಒಡಂಬಡಿಕೆಯ ಹೇಳುತ್ತ
ನೆಟ್ಟನೆ ಮುಂದಕ್ಕೆ ನಡೆದ ॥ ೬೦ ॥

ಪಟ್ಟಣ ಪಾಳಯ ಊರ ಕೇರಿಗಳೂರೆ
ನೆಟ್ಟನೆ ಹಳ್ಳಿಪಳ್ಳಿಗಳ ।
ಸೃಷ್ಟಿಪತಿಯೆಲ್ಲವ ದಾಂಟಿದ ನಡೆದನು
ನೆ ಪಯಣಗತಿಯಲಿ ॥ ೬೧ ॥

ಅಡವಿಯರಣ್ಯದಿ ಪೊಡವಿಪ ನಡೆವಾಗ
ಒಡಲಿಗೆ ಅನ್ನಗಳಿಲ್ಲ ।
ಬಿಡದೆಂಟು ಉಪವಾಸದಿ ತಡೆಯಲು
ಪೊಡವಿಪತಿಯ ಸುತ ಹಸಿದ ॥ ೬೨ ॥

ಅತ್ತ ಶಿಶುವನೆತ್ತಿ ಕೊಂಡು ಸಂತೈಸುತ
ಹೆತ್ತ ತಾಯಾಗ ಮರುಗುತ ।
ಪುತ್ರನ ನೋಡಿ ದುಃಖವ ಮಾಡುತಲೆಲ್ಲ
ಮತ್ತೆ ಗಾವುದ ಹೋದರವರು ॥ ೬೩ ॥

ಉಂಬರೂಟಗಳಿಲ್ಲ ಕೊಂಬರೆ ಬಗೆಯಿಲ್ಲ
ತುಂಬಿದ ಗ್ರಾಮಗಳಿಲ್ಲ ।
ಹಂಬಲಿರುತ ಹಸಿದಳುವ ಮಗುವ ಕಂಡು
ಕಂಬನಿದುಂಬಿದರವರು ॥ ೬೪ ॥

ಕಂಬಿಯ ಹಣ್ಣು ಕೂಸರೆ ಹಣ್ಣು ಬೆಳಗಾಯಿ
ಜಂಬುನೇರಲು ಚೂತಫಲವು ।
ಕೊಂಬೆಲಿ ಕೊಯ್ದ್ತಂದು ನಂಬಿಸಿ ಕೊಡುತಿರೆ
ಭಂಗಿಸೆಲ್ಲವ ಕಿತ್ತುಕೊಂಡ ॥ ೬೫ ॥

ಕೆಟ್ಟ ನಕ್ಷತ್ರ ಕಾಡೊಳುತಂದ ಹಣ್ಣನು
ಸೃಷ್ಟಿಪತಿಯ ಕೈಯಿಂದ ।
ಹೊಟ್ಟೆ ಹಸಿದ ಶಿಶುವಿಗೆ ಕೊಡಲೀಸದೆ
ತೊಟ್ಟನೆಲ್ಲವ ಕಿತ್ತುಕೊಂಡ ॥ ೬೬ ॥

ಇಂತು ಅನಂತ ಪಯಣಗತಿಯಲಿ ಹೋಗೆ
ಮುಂದೊಂದು ಕೃತಕವ ನೆನೆದು ।
ಚಿಂತಿಸಿ ವಿಶ್ವಾಮಿತ್ರ ಮಾಡುವುದನು
ಕಂತುಹರನು ನೋಡುತಿರ್ದ ॥ ೬೭ ॥

ಕತ್ತಲೆಗವಿಯಿಸಿ ಕಾರ್ಮುಗಲೇಳಿಸಿ
ಸುತ್ತ ಹೆಮ್ಮಳೆಯನು ಹೊಲಿಸಿ ।
ಮತ್ತೆ ನಡೆವ ದಾರಿಯ ತಪ್ಪಿಸಿಬಿಟ್ಟು
ಸುತ್ತಿಸಿದನು ಅಡವಿಯನು ॥ ೬೮ ॥

ಕರಡಿ ಕಾಡೆಮ್ಮೆ ಕಾಡ್ಗೋಣ ಸೂಕರಗಳು
ಮೊರೆವ ಹೆಬ್ಬುಲಿ ಗಜ ಸಿಂಹ |
ಶರಭ ಭೇರುಂಡನು ಎರಳೆ ಸಾರಂಗವೆಂದಿ
ಮೊರೆವ ಸರ್ಪಗಳು ಕಾಡುವುವು || ೬೯ ||

ಭೂತ ಭೇತಾಳ ಶಾಕಿನಿ ಡಾಕಿನಿಯರು
ಭೂತಳಪತಿಯ ಕಾಡಿದರೆ |
ಆತನು ಅದಕೆ ಲೆಕ್ಕಿಸದೆ ನಡೆವುತಿರೆ
ಸೋತು ಕಂಗೆಟ್ಟನಾ ಮುನಿಪ || ೭೦ ||

ಸುರಿವ ಹೆಮ್ಮಳೆ ಹಳ್ಳ ಕೊಳ್ಳವು ಹೊಗಬಾರ
ಶರಧಿಯು ಮೊರೆವಂದದಲಿ |
ಹರಿವ ಹೊನಲಿನೊಳು ಮರದಡಿಯಲಿ ನಿಂದ
ಇರವ ಪೇಳುವರಳವಲ್ಲ || ೭೧ ||

ಕಾಡುಗತ್ತಲೆಯೊಳು ಬಿಡದೆ ಸುರಿವ ಮಳೆ
ಅಡಿಯೊಳಗಾಳುದ್ದ ಹೊನಲು |
ಹೊಡೆವ ಸಿಡಿಲು ಮಿಂಚು ಗುಡುಗು ಆರ್ಭಟಿಸಲು
ನಡುಗುತ ಶಿಶು ಕಾತರಿಸೆ || ೭೨ ||

ಎತ್ತಿಕೊಂಡಳು ತನ್ನ ಶಿಶುವ ಚಂದ್ರಮತಿ
ಮುತ್ತಿ ತಕ್ಕೈಸಿ ತೂಪಿರದು |
ಮೃತ್ಯುಂಜಯ ನೀನೆ ಸಲಹೆಂದುಯೆನುತಲಿ
ಅತ್ತು ಶಿಶುವನಪ್ಪಿಕೊಂಡ || ೭೩ ||

ಮಳೆಯೊಳು ಮರದಡಿಯಲಿ ನಿಂದು ನಡುಗುತ
ಸಳಿಯೊಳು ಸಂಕಟಗೊಳುತ |
ತಳಮಳಗೊಂಡಂದು ಕೂಳ್ಗುದಿಗೊಳುತಿರೆ
ನಳಿನಸಖನು ಚಿಂತಿಸಿದ || ೭೪ ||

ಎನ್ನ ವಂಶದ ರಾಯ ಹಿಮಹತ್ತಿ ಸತ್ತರೆ
ಎನ್ನ ಕುಲಕೆ ಹಾನಿಯೆಂದು |
ತನ್ನೊಳು ತಾನೆ ಚಿಂತಿಸಿ ಪೊರಮಟ್ಟನು
ಮುನ್ನಿನ ಮೂಡದಿಕ್ಕಿನಲಿ || ೭೫ ||

ಅಂದು ಹರಿಶ್ಚಂದ್ರ ಮುಂದಕೆ ನಡೆಯಲು
ಅಂದು ಬತ್ತಿದೊ ಹಳ್ಳಕೊಳ್ಳ |
ಒಂದು ಕೊಗಳತೆಯಲ್ಲದೆ ಮಳೆ ಮಿಗಿಲಿಲ್ಲ
ಕಂಡು ನೃಪನು ಬೆರಗಾದ || ೭೬ ||

ದಿಟ ಹರಿಶ್ಚಂದ್ರ ನಡೆವುದ ಮುನಿ ಕಂಡು
ಹೊಟ್ಟೆ ಹೊಟ್ಟೆಯ ಹೊಯ್ದುಕೊಳುತ |
ಬೆಟ್ಟ ಘಟ್ಟವನೇರಿಸುತ್ತ ಬಳಲಿಸಿದ
ಕೆಟ್ಟ ವಿಶ್ವಾಮಿತ್ರನಂದು || ೭೭ ||

ಬೆಟ್ಟವನೆಲ್ಲವ ಸುತ್ತಿ ಕಂಗೆಡಿಸಿದ
ನೆಟ್ಟನೆ ಬಲುಬಿಸಿಲೊಳಗೆ |
ಇಷ್ಟು ಕಂಗೆಟ್ಟರಸನ ಕೇಳಬೇಕೆಂದು
ದುಷ್ಟ ವಿಶ್ವಾಮಿತ್ರ ಬಂದ || ೭೮ ||

ಬಂದ ಮುನಿಯ ಕಾಣುತ ಹರಿಶ್ಚಂದ್ರನು
ಅಂದು ಪಾದದ ಮೇಲೆ ಬಿದ್ದು |
ತಂದೆಯದೇನು ಅರಣ್ಯಕ್ಕೆ ನೀವ್ [ಗಳು]
ಬಂದ ಕಾರ್ಯವ ಬೇಸಸೆಂದ || ೭೯ ||

ಒಂದು ಮಾತನು ಕೇಳುಯೆಲೆನೃಪ ನಿನಗಿನ್ನು
ಮುಂದುಂಟು ಬಲುಸಂಕಟವು |
ಬಂದ ಕಂಟಕವನೆಲ್ಲವ ಪರಿಹರಿಸುವೆ
ಒಂದು ಮಾತನು ಕೇಳೆಂದ || ೮೦

ಎನ್ನ ನಿನ್ನೆಡೆಯೊಳು ಭಿನ್ನಭೇದಗಳಿಲ್ಲ
ಎನ್ನ ಮಕ್ಕಳ ಮದುವೆಯಾಗು |
ಹೊನ್ನನೆಲ್ಲವ ಬಿಟ್ಟು ಪಟ್ಟವ ಕಟ್ಟುವೆ
ನಿನ್ನ ರಾಜ್ಯವ ನಿನಗಿತ್ತು || ೮೧ ||

ಎನ್ನ ಬಿನ್ನಪವನ್ನು ಚೆನ್ನಾಗಿ ಚಿತ್ತೈಸಿ
ನಿನ್ನ ರಾಜ್ಯವು ನನಗೇಕೆ |
ಎನ್ನೊಳಗೀ ನುಡಿ ಬೇಡೆಂದು ಹರಿಶ್ಚಂದ್ರ
ತನ್ನ ಶಿರವ ಬಾಗಿದನು || ೮೨ ||

ಕೊಟ್ಟು ಹುಸಿಯೆನೆಂದು ಕಟ್ಟಿದೆ ಬಿರುದನು
ಕೊಟ್ಟ ಭಾಷೆಗೆ ತಪ್ಪೆನೆಂದೂ ।
ಬಿಟ್ಟ ರಾಜ್ಯವ ಹಿಡಿದೆನೆ ನಾನೆನುತ
ದಿಟ್ಟ ನುಡಿದ ಕೌಶಿಕೆಗೆ ॥ ೮೩ ॥

ಅಂದು ಹರಿಶ್ಚಂದ್ರ ಮುಂದಕ್ಕೆ ನಡೆದನು
ಸಂದೇಹವನು ಬಿಟ್ಟು ಮನದಿ ।
ಮುಂಪೆ ಬಂದುದ ಕಾಂಬೆನೆನ್ನುತೆ ನೃಪ
ಅಂದು ಅರಣ್ಯದಿ ನಡೆದ ॥ ೮೪ ॥

ಹರಿನ ಹಳ್ಳದಿ ಕರಚರಣ ಶ್ರೀ ಮುಖವನು
ಭರದಿಂದಲೆಲ್ಲ[ವ] ತೊ[ಳೆ]ದು ।
ವಿರೂಪಾಕ್ಷನ ಪಾದಕಮಲವನರ್ಚಿಸಿ
ಗುರುವ ಮಂತ್ರವ ಸ್ಮರಿಸಿದನು ॥ ೮೫ ॥

ಗುರುಪ್ರಸಾದಫಲವ ಕೈಕೊಂಡು
ಹರಿಶ್ಚಂದ್ರ ಸತಿಸುತ ಮಂತ್ರಿ ।
ಹರುಷದಿ ಮಾತಾಡುತ ಮುಂದೆ ನಡೆದರು
ಹರಿಕಾರ ನಕ್ಷತ್ರ ಸಹಿತ ॥ ೮೬ ॥

ಪೊಡವಿಪತಿಗೆ ನಕ್ಷತ್ರ ನುಡಿದನಂದು
ಅಡವಿಗೆ ಗುರಿಯಾಗಬೇಡ ।
ಮಡದಿ ಸುತನು ಮಂತ್ರಿಯು ನೋಯಿಸದೆಂತು–
ನ್ನೊಡೆಯ ಹೇಳಿದ ಮಾತು ಕೇಳು ॥ ೮೭ ॥

ಬಿಡು ಈ ಮಾತನು ನುಡಿಯದಿರೆನ್ನೊಳು
ಮಡದಿ ಸುತನು ಮಂತ್ರಿ ತಾನು ।
ಒಡನೆ ಪ್ರಾಣವ ಬಿಟ್ಟು ಅಳಿದರೇನಾಯಿತು
ಕಡೆಗೆನ್ನ ಸತ್ಯವ ನೋಡು ॥ ೮೮ ॥

ಅಡಿಯಿಟ್ಟು ಮುಂದಕೆ ನಡೆದನರಣ್ಯದಿ
ಬಿಡದೆ ಘೀಳಿಡುವಾ ವನದಿ ।
ನಡೆವರಸನ ಕಂಡು ವಿಶ್ವಾಮಿತ್ರನು
ಬಿಡದೊಂದು ಕೃತಕವ ನೆನೆದ ॥ ೮೯ ॥

ಕೆಟ್ಟ ವಿಶ್ವಾಮಿತ್ರ ಕಿಡಿಕಿಡಿಯುಗುಳುತ
ಬೆಟ್ಟಕ್ಕೆ ಕಿಚ್ಚನಿಕ್ಕಿದನು ।
ದಿಟ್ಟಹರಿಶ್ಚಂದ್ರ ನಡೆವ್ರತ ತೋರಿದ
ಬೆಟ್ಟಘಟ್ಟಗಳು ಬೇವುದನು ॥ ೯೦ ॥

ಧಿಗಿಲು ಭುಗಿಲು ಚಿಟಿಚಿಟಿಲೆಂದೆನ್ನುತ
ಹೊಗೆಯು ನಾಲ್ದೆಸೆಯನು ಮುಸುಕಿ ।
ನೆಗದುರಿಯಾಕಾಶವನಂದು ತುಡುಕಲು
ಖಗಮೃಗವೆಲ್ಲ ಕಂಗೆಟ್ಟೊ ॥ ೯೧ ॥

ಎರಳೆಸಾರಂಗ ಸೂಕರ ಮರೆ ಕರಡಿಯು
ಮೊರೆವ ಹೆಬ್ಬುಲಿ ಗಜಸಿಂಹ ।
ಉರಿಯೊಳು ಸಿಕ್ಕಿ ಬೇವ್ರತ ಸಾಯಲಾರದೆ
ಹರಿಶ್ಚಂದ್ರನ ಮೇಲೆ ಕವಿದೊ ॥ ೯೨ ॥

ಉರಿಗರಿಯಾದುವು ಗಿರಿಗಳು ಸಿಡಿದುವು
ಧರೆಯೆಲ್ಲ ಕಾದುಕ್ಕಿದಂತೆ ।
ತರಹರಿಸವೆ ತಲ್ಲಣಿಸುತಯಿರುತಿರೆ
ಇರುವರೆ ಅಲ್ಲೆಡೆಯಿಲ್ಲ ॥ ೯೩ ॥

ಹರಿಯಜಸುರರು ದೇವರ್ಕಳು ಮುಂತಾಗಿ
ಸುರಪತಿಗೊಂದು ಕಾರಣದಿ ।
ಶರಧಿಯ ಕಡೆಯಲು ಭರದಿಂದ ವಿಷ ಹುಟ್ಟಿ
ಧರೆಯ ಸಂಹರಿಸುವಂದದಲಿ ॥ ೯೪ ॥

ಗಿರಿಯುದ್ದ ಉರಿಯು ಆಕಾಶಕ್ಕೆ ನೆಗೆಯಲು
ಸುರಲೋಕವೆಲ್ಲ ಕಂಗೆಟ್ಟು ।
ಹರಿಯಜಸುರರೆಲ್ಲ ಪ್ರಳಯಾಗ್ನಿಯಿಂದಂಜಿ
ಪುರಹರನಿಗೆ ಮೊರೆಯಿಡಲು ॥ ೯೫ ॥

ಗಿರಿಜೆಯರಸ ಕೇಳಿ ಅಂಜಬೇಡೆನ್ನುತ
ಹರಿಯಜಸುರರ ಸಂತೈಸಿ ।
ಹರಿಶ್ಚಂದ್ರನ ಕೆಡಿಸುವೆನೆಂದು ಕೌಶಿಕ
ಭರದಿ ಬೆಟ್ಟಕೆ ಕಿಚ್ಚನಿಟ್ಟ ॥ ೯೬ ॥

ಅಷ್ಟದಿಕ್ಕಿನ ಗಿರಿ[ಗಳು] ಬೆಂದು ಬಿದ್ದವು
ಬಟ್ಟೆಯು ಕಾಣದಂದದಲಿ ।
ನೆಟ್ಟನೆ ಹಿಂದೆ ಮುಂದೆ ಎಡಬಲದಲಿ ಕೆಂಡ
ಒಟ್ಟಿತು ಗಿರಿಯುದ್ಧದಲಿ ॥ ೯೭ ॥

ನಡುಗದೆ ಹೆದರದೆ ಟೆಕ್ಕದೆ ತೆರಳದೆ
ಸುಡುತ ಬರುವ ವಿಷವ ಕಂಡು ।
ನೃಡನೊಬ್ಬನಿದ್ದಂತೆ ಪೊಡವಿಪ ನಿಂದನು
ಸುಡುತ ಬರುವ ಕಿಚ್ಚ ಕಂಡ ॥ ೯೮ ॥

ಹಿಂದೆ ಮುಂದೆಡಬಲದಲಿ ಕಿಚ್ಚು ಬರುತಿರೆ
ನಿಂದನು ನಡುಮಧ್ಯದಲಿ ।
ಇಂದೆನ್ನ ಪ್ರಾಣದಿ ಮಿಗಿಲಿಲ್ಲವೆನುತ
ಅಂದು ಹರಿಶ್ಚಂದ್ರ ನಡೆದ ॥ ೯೯ ॥

ಮುಂದಕ್ಕೆ ನಡೆವರಸನ ಮಂತ್ರಿ ನಿಲಿಸಿದ
ಹಿಂದಕ್ಕೆ ನಾ ಕೊಟ್ಟ ಭಾಷೆ ।
ಇಂದಿಗುತ್ತರ ನಾ ಸತ್ತ ಬಳಕ ನೀನು
ಹಿಂದೆ ಸಾಯಿಯೆನುತ ತಡೆದ ॥ ೧೦೦ ॥

ಬಿಡುಬಿಡು ಮಡದಿ ಮಗ ಮಂತ್ರಿ ಸಾವುದ
ಬಿಡದೆ ನಾ ಕಣ್ಣಾರೆ ಕಂಡು ।
ಕಡೆಯಲ್ಲಿ ಸಾವುದುಚಿತವಲ್ಲವೆನುತ
ನುಡಿದ ನೃಪನು ಮಂತ್ರಿಯೊಡನೆ ॥ ೧೦೧ ॥

ನಿನ್ನಳವನು ನಾನು ಕಣ್ಣಾರೆ ಕಂಡರೆ
ಎನ್ನಿಂದ ದ್ರೋಹಿಗಳಿಲ್ಲ ।
ಮುನ್ನೊಂದು ಕಾರ್ಯಕೆ ಮಂತ್ರಿ ಮುಂದಲ್ಲದೆ
ಎನ್ನುತ ಮುಂದಕೆ ನಡೆದ ॥ ೧೦೨ ॥

ನಡೆವ ಮಂತ್ರಿಯ ಲೋಹಿತ ಕುವರನು ಕಂಡು
ತಡೆದನು ಅತಿ ಬೇಗದಲಿ ।
ಬಿಡದೆ ದಾವಾಗ್ನಿಗೆ ನಡೆವ ಸುತನ ಕಂಡು
ಪೊಡವಿಪತಿಯ ಸತಿ ತಡೆದ ॥ ೧೦೩ ॥

ಂದನ ಹರಿಶ್ಚಂದ್ರನ ಕೈಯಲಿ ಕೊಟ್ಟು
ಚಂದ್ರಮತಿಯು ಬೇಗದಲಿ |
ಹಿಂದಕ್ಕೆ ಹೋಗೆಂದು ಮಂತ್ರಿಯು ನಿಲಿಸಿದ.
ಮುಂದಕ್ಕೆ ಅಡಿಯಿಟ್ಟಳೆಂದು || ೧೦೪ ||

ಚಂದ್ರಮತಿಯೆ ಕೇಳು ಮುಂದಕ್ಕೆ ನಡೆದರೆ
ಇಂದು ನಿನಗೆ ನನ್ನಾಣೆ |
ಒಂದು ಮಾತನು ಕೇಳು ಕಂದನಳುತಲದೆ
ಮುಂದೆ ನಾ ಹೋದಪೆನೆಂದ || ೧೦೫ ||

ಗಂಡನ ಮುಂದಳಿದರೆ ಮುತ್ತೈದೆ[ಯು]
ಗಂಡನಳಿದ ಬಳಿಕಳಿದು |
ಮುಂಡೆಯಾಗಳಿದರೆ ಇಹಪರವಿಲ್ಲೆಂದು
ದಿಂಡೆಯತನದಿಂದ ನಡೆದು || ೧೦೬ ||

ಹಿಂದಕ್ಕೆ ಬಂದು ಹರಿಶ್ಚಂದ್ರರಾಯರಿಗೆ
ಅಂದು ಕರವನೆತ್ತಿ ಮುಗಿದು |
ಹಿಂದೆ ನಿಮಗೆ ನಾ ಮಾಡಿದವೊಪ್ಪವೆಲ್ಲವ
ಒಂದನು ನೋಡದಿರೆಂದು || ೧೦೭ ||

ಕಂದನ ಮಂತ್ರಿಯು ಹಿಂದಕ್ಕೆ ಕಳುಹೆಂದು
ಚಂದ್ರಮತಿಯು ನಿಶ್ಚೈಸಿ |
ಕಂದನ ತಂದು ಮಂತ್ರಿಯು ಕೈಯಲಿ ಕೊಟ್ಟು
ಅಂದು ಹರಸಿ ಹೋಗೆಂದು || ೧೦೮ ||

ಸತ್ಯವೆ ಜಯ ಅಸತ್ಯವೆ [ಲ]ಯವೆಂದು
ಮತ್ತೆ ಕಿಚ್ಚಿಗೆ ನಡೆವಾಗ |
ಉತ್ತಮ ಪುರುಷೆಯು ಇವಳಲ್ಲದಿಲ್ಲೆಂದು
ಅತ್ತ ದೇವತೆಗಳು ಮರುಗೆ || ೧೦೯ ||

ಹರಿಯಜ ಸುರರಷ್ಟ ದಿಕ್ಪಾಲರಿಗೆಲ್ಲ
ಕರವ ಮುಗಿದು ಚಂದ್ರಮತಿಯು |
ಭರದಿ ವಸಿಷ್ಠನ ಪಾದವ ನೆನೆವುತ್ತ
ಉರಿಯ ಹೊಕ್ಕಳು ಉರವಣಿಸಿ || ೧೧೦ ||

ಉರಿವ ಕಿಚ್ಚಲಿ ನಡೆದಳಾ ಚಂದ್ರಮತಿಯಂದು
ಉರಿವ ಕೆಂಡಕೆ ಬೀಳುವಂತೆ ।
ಸುರಸತಿಯರು ಬಂದು ನಿಂದು ನೋಡಿದರಂದು
ಭರದಿ ಕಂಬನಿಯ ತುಂಬಿದರು ॥ ೧೧೧ ॥

ಚಂದ್ರಮತಿಯು ಮುಂದೆ ನಡವುದ ಕಾಣುತ
ಒಂದಾಗಿ ಎಲ್ಲರು ನಡೆಯೆ ।
[ನಂ]ದಿತು ವ[ಹಿಲ]ದಿ ಉರಿವ ಕಿಚ್ಚಾಕ್ಷಣ
ಇಂದುಧರನ ಕೃಪೆಯಿಂದ ॥ ೧೧೨ ॥

ಸತಿಸುತಮಂತ್ರಿವೆರಸಿ ಹರಿಶ್ಚಂದ್ರನು
ಅತಿಬೇವ ಕಿಚ್ಚಲಿ ನಡೆಯೆ ।
ಖತಿಯಿಂದ ನುಡಿದನು ವಿಶ್ವಾಮಿತ್ರನು
ಪತಿವ್ರತೆಯಿ[ಹ] ಲೋಕಕೆಂದ ॥ ೧೧೩ ॥

ಉರಿ ಗಿರಿ ದರಿ ಹಳ್ಳ ಕಾಳೋರಗ
ಮೊರೆವ ಹೆಬ್ಬುಲಿ ಗಜಸಿಂಹ ।
ಶರಭ ಭೇರುಂಡ ಶಾಕಿನಿ ಡಾಕಿನಿಯರ
ಗುರುಕೃಪೆಯಿಂದ ಕೇಳಿದರು ॥ ೧೧೪ ॥

ಮಾಳವ ಮಲೆಯಾಳ ಗವುಳ ಗುಜ್ಜರ ನೇ
ಪಾಳ ತುಳುವ ಹಮ್ಮೀರ ।
ಕಾಳಿಂಗ ಕಾಶ್ಮೀರ ಕನ್ನೋಜ ಬಂಗಾಳ
ಏಳು ದೇಶವ ದಾಟಿದರು ॥ ೧೧೫ ॥

ಅತ್ತ ಕಾಶಿಯ ದೇಶವ ಹೊಕ್ಕು ನಡೆದರು
ಅತ್ಯಂತ ಸಂತೋಷದಿಂದ ।
ಉತ್ತಮ ಪುರುಷರು ಸತ್ಯವ ಬಿಡದಿರೆ
ಮತ್ತೆಯವರಿಗೆ ಕೇಡಿಲ್ಲ ॥ ೧೧೬ ॥

ಕಂಡನು ಸತ್ಯವ ಬಿಡದೆ ನಡೆವುತಿಹ
ಮಂಡಲ ಪತಿಯ ಕೌಶಿಕನು ।
ಭಂಡಾಗಿ ಹೋದನು ಮರ್ತ್ಯಲೋಕದೊಳೆಂದು
ಮಂಡೆಯ ಹೊಯಿಕೊಂಡನಂದು ॥ ೧೧೭ ॥

ಅತ್ತ ಹರಿಶ್ಚಂದ್ರ ಕಾಶಿಗೆ ನಡೆವುತ್ತ
ಒತ್ತಿಲಿರುವ ಹೊಳೆಗಳನು |
ವಿಸ್ತರಿಸೆನುತ ಪೇಳೆನ್ನುತ ನೃಪ ಕೇಳೆ
ಮತ್ತೆ ಪೇಳಿದನಾ ಮಂತ್ರಿ || ೧೧೮ ||

ಮುಂದಣ ಹೊಳೆಯಿದು ಗಂಗೆ ಗೋದಾವರಿ
ಇಂದಿದು ಯಮುನೆ ಜಾಹ್ನವಿಯು |
ಮುಂದೆ ಸರಸ್ವತಿ ಭಾಗೀರಥಿಯಿದು
ಎಂದು ಪೇಳುತ ದಾಟಿದರು || ೧೧೯ ||

ಭಾಷೆಗೆ ತಪ್ಪದ ಹರಿಶ್ಚಂದ್ರರಾಯನು
ಕಾಶಿಗೆ ಬಂದುದ ಕಂಡು |
ದೇಶಪತಿಯು ಬಿಸಿಲೊಳು ಬಳಲಿದನೆಂದು
ಆ ಸೂರ್ಯನಂಭೋಧಿಗಿಳಿದ || ೧೨೦ ||

ಬಳಲಿದರಾಯನು ಸತಿಸುತ ಮಂತ್ರಿಯು
ಹೊಳೆಯೊಳು ಸ್ನಾನವ ಮಾಡಿ |
ತಳುವದೆ ರಾಯ ಲಿಂಗಪೂಜೆಯ ಮಾಡಲು
ಕುಳಿತಲ್ಲಿಗೈದನೆ ಸಂಧಿ || ೧೨೧ ||

ಅಡಿ ಟಿಪ್ಪಣಿಗಳು

1. 'ನಡುಗಿತು ಅಮರಾವತಿಯು' ಎಂದು ಮುಂದಕ್ಕಿದೆ.
2. ಇದಾದ ಬಳಿಕ 'ಹಿರಿದಿನ ಬೇಡನಾಯಕರು' ಎಂದೂ ಇದೆ.
3. ಇದಕ್ಕೆ ಮೊದಲು 'ಇಂದುವದನೆ ಹರಿಶ್ಚಂದ್ರಗೆ' ಎಂದಿದೆ.
4. "ಮತ್ತೆ ಹೊದ್ದುತಾ ನಿಂತನು ತಲೆಬಾಗಿ" ಎಂದಿದೆ.

ಡಾ. ಎ. ಎಸ್. ವೇಣುಗೋಪಾಲರಾವ್

ಯಶೋಧರನ ಧೃತಿ

ಯಶೋಧರನ ಧೃತಿ, ಚಂದ್ರಮತಿಯ ಮೂಢತನ, ಹಾಗೂ ಅಮೃತಮತಿಯ ಅಧಃಪತನ—ಈ ಮೂರು ಅಂಶಗಳ ಸುತ್ತ ಜನ್ನ ಯಶೋಧರಚರಿತೆಯ ಕತೆಯನ್ನು ನೆಯ್ದಿದ್ದಾನೆ ಎಂದು ವಿಮರ್ಶಕರು ಸಾಮಾನ್ಯವಾಗಿ ಒಪ್ಪಿದ್ದಾರೆ[1]. ಕಡೆಯ ಎರಡು ಅಂಶಗಳು ಕತೆಯಲ್ಲಿ ಎದ್ದು ಕಾಣುವಂತಹವು. ಭಿನ್ನಾಭಿಪ್ರಾಯಕ್ಕೆ ಎಡೆಯಿಲ್ಲದಂತಹುವು. ಇನ್ನು ಯಶೋಧರನ ಬಗೆಗೆ ಬಳಸಲಾದ ಧೃತಿ ಎಂಬ ಮಾತನ್ನು ಕವಿಯೇ ಸ್ಪಷ್ಟವಾಗಿ ಆಡಿದ್ದರೂ, ಕತೆಯ ಅಂತರಂಗ ಇದಕ್ಕೆ ವಿರುದ್ಧ ಸಾಕ್ಷ್ಯವನ್ನೇ ಒದಗಿಸುವಂತೆ ತೋರುತ್ತದೆ. ಯಶೋಧರನ ಧೃತಿಯಲ್ಲಿ ಇರುವ ಬಿರುಕನ್ನೂ ಸಂಭವನೀಯ ಕಾರಣವನ್ನು ಪರಿಶೀಲಿಸುವುದು ಈ ಲೇಖನದ ಉದ್ದೇಶ.

ತನ್ನ ಮನದನ್ನೆ ಅಮೃತಮತಿ ಬದಗನ ಕಾಲ ಬುಡದಲ್ಲಿ ಕೇರೆಯಂತೆ ಹೊರಳಾಡುತ್ತಾ ಅವನ ಕ್ಷಮೆಯನ್ನು (ತಡವಾಗಿ ಬಂದುದಕ್ಕೆ) ಪ್ರಣಯವನ್ನೂ ಯಾಚಿಸುವ ಭೀಭತ್ಸವನ್ನು ಕಂಡಾಗ ಯಶೋಧರನ ಕೋಪ ಸಹಜವಾಗಿಯೇ ಕೆರಳಿತು. ಆ ಸಂದರ್ಭದಲ್ಲಿ ಬಳಸಲಾದ ''ಬಾಳ್ ನಿಮಿರ್ದುದು ತೋಳ್ ತೂಗಿದುದು.'' ಇತ್ಯಾದಿ ಮಾತುಗಳ ಧ್ವನಿ ಸಾಮರ್ಥ್ಯವನ್ನು ವಿಮರ್ಶಕರು ಈಗಾಗಲೇ ಗಮನಿಸಿದ್ದಾರೆ.[2] ಎತ್ತಿದ ತೋಳು ಹಾಗೆಯೇ ಇಳಿಯಿತು. ಹುಳುಕರನ್ನು ಕೊಲ್ಲಲು ಹೇಸಿತು ಯಶೋಧರನ ಮನಸ್ಸು, ಎಂದು ಮುಂದಿನ ಸ್ವಗತ ಪದ್ಯಗಳೆರಡರ ಭಾವ. ಈ ಸಂಧರ್ಭದಲ್ಲಿ ಕವಿ ಬಳಸಿದ ಮಾತು ''ಧೃತಿ ಬಂದುದು ...ಮಾಣೆಂಬ ತೆರದಿ ಪೇಸಿದನರಸನ್.''[3]

ಹುಳುಕರೆಂದು ತೀರ್ಮಾನಿಸಿದವರನ್ನು ಕೂಡಲೇ ಕೊಲ್ಲದೆ ಕೈ ಕೆಳಗೆ ಇಳಿದುದು (ಇಳಿಸಿದುದು) ಯಶೋಧರನ ಧೃತಿಯೋ–ದೌರ್ಬಲ್ಯವೇ ಎಂಬುದನ್ನು ಪರಿಶೀಲಿಸುವುದು ಇಲ್ಲಿ ಪ್ರಕೃತ. ಧೃತಿ ಪ್ರಾಮಾಣಿಕವಾದುದಾದರೆ ನಿಂತ ನಿಲವಿನಲ್ಲಿ ನಿರ್ವೇಗಹೊಂದಿ, ''ಅಹೋ ಸಂಸಾರಂ !'' ಎಂದು ತಪಸ್ಸಿಗೆ ತೆರಳುವುದು ಸಹಜ. ಜೈನ ಕಾವ್ಯಗಳಲ್ಲಿ ಇಂಥ ಕಾಲಲಬ್ಧಿಗಳ ಉದಾಹರಣೆಗಳು ಹೇರಳವಾಗಿ ದೊರೆಯುತ್ತವೆ. ಯಶೋಧರ ಚರಿತೆಯಲ್ಲಿ ಕತೆ ಇನ್ನು ಮುಂದೆ ಪೂರ್ತ ಬೇರೆದಾರಿ ಹಿಡಿಯುವುದೇ ಈ ಧೃತಿಯ ಬಗ್ಗೆ ನಮ್ಮ ಸಂಶಯ ಕೆರಳಲು ಕಾರಣ ! ಇದು ನಿಜವಾಗಿದ್ದಲ್ಲಿ ಯಶೋಧರನ ಸ್ವಗತ,

ಆವನ ದೌರ್ಬಲ್ಯಕ್ಕೆ ಹಾಕಿದ ನವಿರು ಮುಸುಕಾಗಿ ವ್ಯರ್ಥ ಆತ್ಮಸಮರ್ಥನೆಯಾಗಿ ಮಾತ್ರ ಕಾಣುತ್ತದೆ. ತಂದೆಯನ್ನು ಕೊಂದ ಕ್ಲಾಡಿಯಸ್‌ನನ್ನು ವಧಿಸುವ ತನ್ನ ನಿರ್ಧಾರವನ್ನು ರಾಜಕುಮಾರ ಹ್ಯಾಮ್ಲೆಟ್ ಮತ್ತೆ ಮತ್ತೆ ಮುಂದುವರೆಸಿದುದು ಮಾತ್ರವಲ್ಲ, ಪ್ರತಿಸಂದರ್ಭದಲ್ಲೂ ಜಾಣತನದ ಆತ್ಮಸಮರ್ಥನೆಗೆ ತೊಡಗುವುದನ್ನು ಕುತೂಹಲದಿಂದ ನೆನಪಿಸಿಕೊಳ್ಳಬಹುದು.4 ಮಾನವ ಮನಸ್ಸಿನ ವರ್ತನೆ ಅದೆಷ್ಟು ಜಟಿಲ ಹಾಗೂ ಕುಟಿಲ ! ಹಾಗೂ ಆತ್ಮಸಮರ್ಥನಾಕಾತರ ! ಯಶೋಧರನ ಧೃತಿಯೂ ಈ ಜಾತಿಯದೇ.

"ಪರಸ್ಪರನಲ್ಲದೆ ಈ ಪುಳುಕರನರಿವುದೇ ಮಚ್ಚು ಜಾಸಿಯಿದು........ಅಸಿಲತೆ ರಣ ಧೌತಮದು ಈ ಮಸಿ ಮುಸುಡನ ಜೀವಕಸ್ಪಿನಿಂ ಕಂದಿದೊಡೆ ಎನ್ನ ಸೆಯುನಡರ್ದೆನ್ನ ಕೀರ್ತಿ ಪ್ರಸರದ ಕುಡಿ ಕಯ್ಪೆ ಸೊರೆಯ ಕುಡಿಯವೊಲಕ್ಕುಂ" ಇತ್ಯಾದಿ ವೀರಾವೇಶದ ಮಾತುಗಳು ಯಶೋಧರನ ಬಾಯಿಂದ ಹೊಮ್ಮುತ್ತವೆ ನಿಜ. ಅಲ್ಲದೆ ನಡತೆಗೆಟ್ಟ ಹೆಣ್ಣನ್ನು "ಚಿಃ ಕಿಸುಗುಳಂ ಎಂದುಳಿವುದೆ ಗೆಲ್ಲಂ" ಎಂಬ ಬೇಸರದ ಉದ್ಗಾರವೂ ಉಂಟು ಆದರೆ ಯಶೋಧರನಿಗೆ ಇನ್ನೂ ಅಮೃತಮತಿಯನ್ನು ಹಾಗೆ ಉಳಿದು ಬಿಟ್ಟು ತಪಸ್ಸಿಗೆ ನಡೆವ ಸ್ಥೈರ್ಯವಿಲ್ಲ. ಮುಂದಿನ ಕತೆಯೇ ಈ ಮಾತಿಗೆ ಸಾಕ್ಷಿ. ಹುಳುಕರನ್ನು ಕೊಂದು ಕೈ ತೊಳೆದು ಕೊಳ್ಳಲಾಗದ ಮಹಾರಾಜ ಹೇಗೋ ಬೆಳಗು ಮಾಡುತ್ತಾನೆ. ನಿತ್ಯದಾನ, ಆಜ್ಯದರ್ಪಣಾನಲೋಕನ ಎಲ್ಲವೂ ಸಂಪ್ರದಾಯದಂತೆ ನಡೆಯುತ್ತವೆ. ಕೊಲ್ಲಲಾಗದ ರಾಜನಿಗೆ ಹಿಂಸೆಯ ಚಾಪಲ್ಯ ತಪ್ಪಿಲ್ಲ. ಮಹಾರಾಣಿಯ ಬಳಿಗೆ ಬರುತ್ತಾನೆ. ಶೃಂಗಾರ ವಚನಗಳನ್ನಾಡುತ್ತಾನೆ ; ಅದೇ ನೆಪದಲ್ಲಿ ನೆಯ್ದಿಲೆ ಹೂವಿನಿಂದ ಅವಳನ್ನು ಹೊಡೆಯುತ್ತಾನೆ. ಅವಳ ಮೂರ್ಛೆಯ ನಟನೆಯಿಂದ "ಪ್ರಕುಪಿತ ಚಿತ್ತನಾಗುತ್ತಾನೆ." ಅಕಟಕಟ ನೊಂದಳ್ ಎತ್ತಿರೆ ಸುಕುಮಾರಿಯನು, ಎಂದು ಕೊಂಕು ನುಡಿಯಾಡುತ್ತಾನೆ. ಆವನ ಅಣಕವಾದರೂ ಎಂತಹುದು ! "ಭೂನಾಯಕನಣಕಕ್ಕೆ ಸವಣನುಂ ಸೈರಿಪನೇ" ಎಂದು ಕವಿಯೇ ಕೇಳುತ್ತಾನಷ್ಟೆ ! ಎಂದರೆ ಯಶೋಧರನ ಧೃತಿ– ವೈರಾಗ್ಯಗಳು ಎಷ್ಟು ನೈಜವಾದವು ?

ಅಮೃತಮತಿಯ ಸೆಳೆತ ರಾಜನಿಗೆ ಮರುಭವದಲ್ಲೂ ತಪ್ಪುವುದಿಲ್ಲ. ಮರುಭವದಲ್ಲಿ ಚಂದ್ರಮತಿ ನಾಯಿಯಾಗಿಯೂ, ಯಶೋಧರ ನವಿಲಾಗಿಯೂ ಹುಟ್ಟುತ್ತಾರಷ್ಟೆ ? ಕರ್ಮ ಸಂಯೋಗದಿಂದ ಇಬ್ಬರೂ ತಮ್ಮ ಅರಮನೆಯನ್ನೇ ಸೇರಿದರು. ನವಿಲು ಶಯ್ಯಾಗಾರದಲ್ಲಿ ಆಟವಾಡುತ್ತಿತ್ತು. ಮಾವಟಿಗನೊಡನೆ ಅಮೃತಮತಿ ವಿಹರಿಸುವುದನ್ನು ಕಂಡಿತು ; ಪೂರ್ವಭವದ ರೋಷದಿಂದ ಹಾರಿ, ಬದಗನ ಕಣ್ಣನ್ನು ಕುಕ್ಕಿ ಬಿಟ್ಟಿತು. ಮತ್ತೊಂದು ಭವದಲ್ಲಿ ಯಶೋಧರ ಹೋತನಾಗಿ ಹುಟ್ಟಿದನಷ್ಟೆ ? ಅದನ್ನು ಕೊಂದು ಪಿತೃಶ್ರಾದ್ಧವನ್ನು ಯಶೋಮತಿ ಮಾಡುತ್ತಿರುವಾಗ ಯಶೋಧರನ ಜೀವ ಚಿಂತಿಸುವುದೇನು? ? "ಈ ನಗರಿ ಉಜ್ಜಯಿನಿ. ಇದು ನನ್ನ ಧವಳಾಗಾರ. ಇದು ಅಮೃತಮತಿಯ ವಾಸಭವನ. ಇರ್ವಳೋ ಮೇಣ್ ಬರ್ದಳೋ ಮೇಣ್ ಆರ್ದಳೋ ಮೇಣ್ ಅಷ್ಟ

ವಂಕನೊಳ್ ಅದೆಂತಿರ್ಪಳೋ ಕಾಣೆ...." (ಅದೇ. ಪದ್ಯ ೬೩-೬೪) ಮತ್ತೆ ಅದೇ ಸೆಳೆತ. ಭವ ಭವವಲ್ಲೂ ಮಾಗದ ರೋಷ-ವ್ಯಾಮೋಹ, ರಾಗ-ದ್ವೇಷಗಳ ವರ್ತುಲ. ಇದು ಧೃತಿಯೆ ? ದೌರ್ಬಲ್ಯವೆ ? ಚಿಂತಿಸಬೇಕು. ಯಶೋಧರನಲ್ಲಿ ಭವದ ಜಿಹಾಸೆ ಎಲ್ಲಿ ಕಾಣುತ್ತದೆ ?

ಇನ್ನು ಯಶೋಧರನ ದೌರ್ಬಲ್ಯದ ಮತ್ತೊಂದು ಮುಖವನ್ನು ನೋಡಬಹುದು. ಚಂದ್ರಮತಿ ಹಾಗೂ ಈ ದೊರೆಯ ಸಂಬಂಧದ ಸುಸೂಕ್ಷ್ಮ ಲಹರಿಗಳು ನನ್ನನ್ನು ಎಂದಿಗೂ ಬೆರಗುಗೊಳಿಸಿವೆ. ಅದರ ಗಾಢತೆಯನ್ನು ಈಡಿಪಸ್ ಮಾದರಿಯದು ಎಂದು ಹೆಸರಿಸಲು ಈಗ ನಾನು ಸಂಕೋಚಪಡುವುದಿಲ್ಲ. ಕಾವ್ಯದ ಅಂತರಂಗವೇ ಈ ಅಭಿಪ್ರಾಯಕ್ಕೆ ಸಾಕ್ಷಿ ನೀಡುತ್ತದೆ. ನೋಡಿ :

೧) ಯಶೋಧರ ಒಂದು ರಾತ್ರಿ ತನ್ನ ಶಯ್ಯಾಗಾರವನ್ನು ಪ್ರವೇಶಿಸಿದ ಆಕಾಶ ಗಂಗೆಯ ಪುಳಿನ ಸ್ಥಳಕ್ಕೆ ಹಂಸ ಏರೇರಿ ಹೋಗುವಂತೆ, ಎಂದು ಕವಿಯ ವರ್ಣನೆ. ಅಮೃತಮತಿಯೊಡನೆ ಆತ ಕ್ರೀಡಿಸತೊಡಗಿದ. ದಂಪತಿಗಳ ಈ ಪ್ರಣಯದಾಟದ ಸಂದರ್ಭದಲ್ಲಿ ಕವಿ ಯಶೋಧರನನ್ನು ಹೀಗೆ ಸಂಬೋಧಿಸಿದ್ದಾನೆ...." ಅಮೃತಮತಿ ಸಹಿತಂ ಆ ಚಂದ್ರಮತಿ ಸುತನ್ ಅಂತು ತನುಸೋಂಕು ಆಲಿಂಗನ ಚುಂಬನದೆ ಸುರತದಿಂ ಸವಿ ಪೌಢಿಯಿನ್...." ಇತ್ಯಾದಿ ಕವಿ ಸೂಚ್ಯವಾಗಿ ಹೇಳುವುದೇನು ? ನೃಪಕುಲ ತಿಲಕನನ್ನು ಇಲ್ಲಿ ಮದನರಾಜ ಎನ್ನಬಹುದು, ಅಭಿನವ ಮನ್ಮಥ ಎನ್ನಬಹುದು. ಆದರೆ ಶಿವಪೂಜೆಯಲ್ಲಿ ಕರಡಿ ಇಟ್ಟ ಹಾಗೆ ಇಲ್ಲಿ ಚಂದ್ರಮತಿಯ ನೆನಪು ಇಣುಕುವುದೇಕೆ ? ವಾಲ್ಮೀಕಿ ರಾಮಾಯಣದಲ್ಲಿ ಎಳೆಯರಾಮನನ್ನು ಅರುಣೋದಯದಲ್ಲಿ ಮನಸ್ಸಿಲ್ಲದ ಮನಸ್ಸಿನಿಂದ ಎಬ್ಬಿಸುವಾಗ ಮುನಿವಾಲ್ಮೀಕಿ ತುಂಬ ಸಹಜವಾಗಿ "ಕೌಸಲ್ಯ ಸುಪ್ರಜಾರಾಮಾ" ಎನ್ನುತ್ತಾನೆ. ಅಲ್ಲಿಯ ವಾತ್ಸಲ್ಯ ಭರಕ್ಕೆ ಆ ಮಾತೇ ಉಚಿತ. ಏಕಚಕ್ರನಗರದಲ್ಲಿ ಭಿಕ್ಷಾಟನೆಯಿಂದ ಹೊಟ್ಟೆ ಹೊರೆವ ಭೀಮನನ್ನು "ವೃಕೋದರ" ಎನ್ನುವುದು ಕುಮಾರವ್ಯಾಸನ ಪರಿಣತ ಪ್ರತಿಭೆ. ಪ್ರಕೃತ ಸುರತ ನಿರತ ಯಶೋಧರನನ್ನು ಚಂದ್ರಮತೀ ಸುತ ಎನ್ನುವಾಗ ಈ ತಾಯಿ ಮಗನ ಗಾಢ ಮಾನಸಿಕ ರತಿಯನ್ನು ಸೂಚಿಸುತ್ತಿಲ್ಲವೆ ? ಪ್ರಾಯಶಃ ಧರ್ಮದ ಎಲ್ಲೆಕಟ್ಟು, ಸ್ವನಿರ್ಮಿತ ಸಾಂಸಾರಿಕ ಕೋಟೆಯಲ್ಲಿ ಅವರಿಬ್ಬರ ದೈಹಿಕ ಸಮಾಗಮ ವಸ್ತುತಃ ಸಾಧ್ಯವಾಗದಿರಬಹುದು. ಆದರೆ ಆ ಒಳಲಾಲಸೆಯ ಅಭಿವ್ಯಕ್ತಿ ಈ ಸೂಚನೆಯಲ್ಲಿಲ್ಲವೆ ? ಅಮೃತಮತಿಯನ್ನು ಚಂದ್ರಮತಿಯೆಂದೇ ಈ ಮಗ ಮಾನಸಿಕವಾಗಿ ಸ್ವೀಕರಿಸಿದ್ದಾನೆಯೆ ? ಎನ್ನಿಸುತ್ತದೆ.

೨) ಅಮೃತಮತಿಯ ಅಧಃಪತನವನ್ನು ಕಣ್ಣಾರೆ ಕಂಡು ಹಿಂತಿರುಗಿದ ದೊರೆಗೆ ಬಗೆ ಕದಡಿತು. ಮರುದಿನ ಅವಳನ್ನು ಹುಡುಕಿ ಹೊರಟ. ಯಾವುದೋ ನೆಪದಲ್ಲಿ ಹಂಗಿಸಿದ. ಆದರೂ ಅತೃಪ್ತಿ-ವೈರಾಗ್ಯವಲ್ಲ. ಏಕೆಂದರೆ ನೈಜ ಜಿಹಾಸೆ ಅವನನ್ನು ನೇರವಾಗಿ ತಪೋವನಕ್ಕೇ ಸೆಳೆಯುತ್ತಿತ್ತು. ಈಗ ಹೋದದ್ದು ತಾಯಿಯ ಬಳಿಗೆ, ಸಾಂತ್ವನ

ವನ್ನು ಅಪೇಕ್ಷಿಸಿ, "ಬಗೆ ಕದಡಿ ತಾಯ ಪೊರೆಗೆ ಪೋದಂ ನೃಪೇಂದ್ರಂ"- ರಾಜೇಂದ್ರ- ತಾಯಪೊರೆಯಲ್ಲಿ ತನ್ನ ಸಮಸ್ಯೆಗೆ ಸಮಾಧಾನ ಅರಸುತ್ತಾನೆ. ಎಂತಹ ಧ್ವನಿವ್ಯಂಗ್ಯ ! (ಆ. ೩-ಪದ್ಯ-೬೦) ಚಂದ್ರಮತಿ ಮಗನನ್ನು ಲಲ್ಲೈಸುವ ಪರಿಯನ್ನು ಗಮನಿಸಿ. "ಮುಖವನ್ನು ದಿಟ್ಟಿಸಿದಳು. ಅಕ್ಕರೆ ಉಕ್ಕಿತು. ಮೊಲೆಹಾಲು ಸುರಿಯಿತು. ನಮಸ್ಕರಿಸಿದ ಮಗನನ್ನು ಮೇಲೆತ್ತಿದಳು, ಪ್ರೀತಿಯಿಂದ ಅಪ್ಪಿಕೊಂಡಳು, ಅತ್ತಿತ್ತ ಕೆದರಿದ ಮುಂಗು ರುಳನ್ನು ನೇವರಿಸಿದಳು. (ಆ. 2-ಪ-72) ಬೆಳೆದ ಮಗನನ್ನು ಹೀಗೆ ಆದರಿಸಿದ ತಾಯಿ ಅವನನ್ನು ಕೇಳುವ ಪ್ರಶ್ನೆಗಳಿವು : ಯಶೋಧರ ನಿನ್ನ ವಿಸ್ತಾರವಾದ ಎದೆಯಲ್ಲಿ ನಿತ್ಯ ವಸಂತ, ಮನುಷ್ಯರಲ್ಲಿ ನೀನೇ ಮನೋವಲ್ಲಭ. ಕಾಮನ ಕಲ್ಪವಲ್ಲೀ ವಿತಾನದಂತಿ ರುವ ಅಬಲಾ ಜನರು ನಿನ್ನ ವಿಲಾಸವಸಂತದಲ್ಲಿ ಬೆಡಗಿನ ಬಿಂಕದಲ್ಲಿ ಬಾಗಿ ನೆನೆಕೊನೆ ಪೋಗುತ್ತಿದ್ದಾರೆ. ನಿನ್ನ ದೇಹಕಾಂತಿ ನೀರು ಕಳೆದುಕೊಂಡ ಕೊಳವಾಗಿದೆ.... "ನೀರೋಡಿ ನಿನ್ನ ತನುವಿನ ಬಣ್ಣಂ ಬರಗೊಳದವೊಲಾಯ್ತು."... ತಿಂಗಳ ಬೆಳಕಿ ನಂತಹ ನಿನ್ನ ಮುಗುಳುನಗೆ ಇಂದು ಇಲ್ಲವಾಗಿದೆ. ನಿನ್ನ ಹಣೆಯಲ್ಲಿ ಕಸ್ತೂರಿತಿಲಕದ ಗುರುತೇಕೆ ಶೋಭಿಸುತ್ತಿಲ್ಲ ? ನಿನ್ನ ಮಂಗಳಮುಖ ಹಗಲು ಮೂಡಿದ ಚಂದ್ರನಂತಾ ಗಿದೆಯಲ್ಲ—" [ಆ. 3- ಪದ್ಯ 4-7]

ಈ ಉನ್ಮತ್ತ ವಿಲಾಪ ತಾಯ ಅಕ್ಕರೆ-ವಾತ್ಸಲ್ಯ ಮಾತ್ರವೆ ? ಸಂದರ್ಭ ಕೊಂಚ ವ್ಯತ್ಯಸ್ತವಾದರೆ, ಇದು ಪ್ರಣಯಿನಿಯ ಕಾತರ ಕಳವಳದ ಮಾತುಗಳಂತಿಲ್ಲವೆ ? ವಿಸ್ತಾರ ವಕ್ಷಸ್ಥಳ, ಕಾಮನ ಕಲ್ಪವಲ್ಲಿ ವಿಲಾಸ ವಸಂತ—ಈ ಪ್ರಣಯ ಸೂಚಕ ಮಾತುಗಳನ್ನು ಮುಖ್ಯವಾಗಿ ಗಮನಿಸಬೇಕು.

3) ಮುಂದೆ ಪಾಪವೆಂದು ತಿಳಿದೂ ತಿಳಿದೂ ತಾಯ ಮೋಹವನ್ನು ತ್ಯಜಿಸ ಲಾರದ ದೊರೆ ಕೃತಕ ಕೋಳಿಯನ್ನು ಬಲಿಕೊಟ್ಟು ಸಂಕಲ್ಪ ಪಾಪಕ್ಕೆ ಪಕ್ಕಾಗುತ್ತಾನೆ; ಅವನ ಧೃತಿ ಅಗಲೂ ಮಣ್ಣು ಮುಕ್ಕುತ್ತದೆ. ಫಲ ಏಳೇಳು ಭವಗಳಲ್ಲಿ ತೊಳಲಾಟ.

4) ಈ ಜೀವಗಳು ಜನ್ಮ ಜನ್ಮಗಳಲ್ಲಿ ಒಂದೇ ಸ್ಥಳದಲ್ಲಿ ಜನ್ಮತಾಳುವುದು [ನವಿಲು-ನಾಯಿ, ಹಂದಿ-ಹಾವು, ಮೀನು-ಮೊಸಳೆ, ಹೋತ-ಆಡು, ಹೋತ-ಕೋಣ; ಹುಂಜ-ಹೇಂಟೆ] ಕರ್ಮ ಸಂಯೋಗದಿಂದ ಹಿಂದಿನ ಅರಮನೆಯನ್ನೇ ಬಂದು ಸೇರು ವುದು, ಹಳೆಯ ನೆನಪುಗಳು ಮರುಕಳಿಸುವುದು; ಇವೆಲ್ಲ ಜೈನ ಪುರಾಣ ಕಾವ್ಯ ಸಂಪ್ರ ದಾಯಕ್ಕೆ ಅನುಗುಣವಾಗಿಯೇ ಇದೆ. ಆದರೆ ಒಂದು ವಿಶೇಷ ಸಂದರ್ಭವನ್ನು ಮಾತ್ರ ಯಶೋಧರ ಚರಿತೆಯಲ್ಲಿ ಗಮನಿಸಬೇಕು. ಚಂದ್ರಮತಿ ನಾಲ್ಕನೆಯ ಭವದಲ್ಲಿ ಆಡಾಗಿ ಜನಿಸುತ್ತಾಳೆ. ಯಶೋಧರ ಮೀನಾಗಿದ್ದು ಸತ್ತವನು ಅದರ ಹೊಟ್ಟೆಯಲ್ಲಿ ಹೋತ ವಾಗಿ ಹುಟ್ಟುತ್ತಾನೆ, ಬೆಳೆದು ಸೊಕ್ಕುತ್ತಾನೆ, ತನ್ನ ತಾಯಿ ಆಡನ್ನೇ ಏರಿ ನೆರೆಯು ತ್ತಾನೆ. ಹಾಗೆ ಸಮಾಗಮದಲ್ಲಿರುವಾಗಲೇ ಬೇರೊಂದು ಹೋತದಿಂದ ಇರಿಯಲ್ಪಟ್ಟು ಸಾಯುತ್ತಾನೆ, ಮತ್ತೆ ತನ್ನ ವೀರ್ಯದಲ್ಲಿ ತಾಯಗರ್ಭವನ್ನು ಸೇರಿ ಭ್ರೂಣವಾಗುತ್ತಾನೆ, ಬೆಳೆಯುತ್ತಾನೆ; ಈ ಜನ್ಮ ಜಾಲವನ್ನು ಸೂಕ್ಷ್ಮವಾಗಿ ಗಮನಿಸಬೇಕು. ಮಾನುಷ

ಲೋಕದ ನೈತಿಕ–ಸಾಮಾಜಿಕ ನಿರ್ಬಂಧಗಳಲ್ಲಿ ಸಾಧ್ಯವಾಗದಿರಬಹುದಾದ ಹಂಬಲ ಈಗ ಪ್ರಾಣಿ ಜನ್ಮದಲ್ಲಿ ಪೂರ್ತಿಯಾಗುತ್ತದೆ. ಅತೃಪ್ತ ಬಯಕೆ ಇಬ್ಬರಲ್ಲೂ ಹೊತ್ತಿ ಉರಿಯುತ್ತಿತ್ತು. ಅದಮ್ಯ ಕಾಮ ಈಗ ನೀತಿಯ ಕಟ್ಟನ್ನು ಕಳಚಿಕೊಂಡು ಪಶು ಜೀವನದಲ್ಲಿ ಬಿಡುಗಡೆ ಪಡೆದಿದೆ. ಆದರೆ ಈ ಸಮಾಗಮ ಸಂತೃಪ್ತಿಯನಂತರ ಯಶೋಧರನಲ್ಲಿ ಪಾಪ ಪ್ರಜ್ಞೆ ! ಅದರ ಸೂಚನೆಯನ್ನು ಕಾವ್ಯದಲ್ಲಿ ಗಮನಿಸಿ.

ತಾಯ ಗರ್ಭ ಸೇರಿದ ಹೋತದ ಜನನಕಾಲ–ಯಶೋಮತಿ ಬೇಟೆಗೆ ಬಂದವನು ಗರ್ಭಿಣಿ ಆಡನ್ನು ಬಾಣದಿಂದ ಸೀಳುತ್ತಾನೆ. ಮರಿಹೋತ ಸಹಜವಾಗಿ ಹುಟ್ಟದೆ ಬಾಣದ ಗಾಯದ ಮೂಲಕ ಚಿಮ್ಮಿ ಬಂದಿತಂತೆ. ಕವಿಯ ಮಾತು ಈ ಸಂದರ್ಭದಲ್ಲಿ ಹೀಗಿದೆ–"ಯೋನಿಮುಖಪ್ರಸವಕ್ಕೆ ಅಲಸಿದವೊಲ್ ಏರ ಬಾಯಿಂ.... ಅಸುವೆರಸು ಬಿದ್ದುದು." (ಆ. 3–ಪದ್ಯ 56)

ಮಾತೃ ಸಮಾಗಮದ ಅದಮ್ಯ ಕಾಮ, ಅನಂತರ ಒದಗಿದ ತೀವ್ರ ಪಶ್ಚಾತ್ತಾಪ, ಇವುಗಳಲ್ಲಿ ಈಡಿಪಸ್ ಕಾಂಪ್ಲೆಕ್ಸಿನ ಪ್ರತಿ ರೂಪವನ್ನು ಕಾಣಬಹುದಲ್ಲವೆ ?

ಈ ದೈಹಿಕ ಕಾಮನೆಗಳು ಪೂರ್ತಗೊಂಡ ನಂತರ, ಮತ್ತಷ್ಟು ಜನ್ಮದಾಟಿ, ಧರ್ಮ ಬೋಧನೆಯಿಂದ ತಿಳಿಯಾಗಿ, ಸುದತ್ತ ಮುನಿಗಳ ಶಿಷ್ಯತ್ವದಿಂದ ಈ ಜೀವಗಳು ಪಾವನವಾದವು. ಪ್ರಾಯಶಃ ಸಾಂಸಾರಿಕ ಸಂಬಂಧಗಳಲ್ಲಿ ದೇಹ ಕಾಮನೆಯನ್ನು ಮೀರಿದ ನಿರ್ಮಲಾಂತಃಕರಣದ ಪವಿತ್ರ ಸಂಬಂಧದ ಅಣ್ಣ ತಂಗಿಯರಾದುವು.

ಚಂದ್ರಮತಿ–ಯಶೋಧರ ಈ ಜೀವಗಳ ಗುಪ್ತ ಬಯಕೆಯ ತೀವ್ರತೆಯನ್ನು ಖಂಡಿತ ಈ ಕಾವ್ಯದ ಅಂತರಂಗದಲ್ಲಿ ಕಾಣಬಹುದು. ಕೊಂಚ ಸೂಕ್ಷ್ಮ ನಿರೀಕ್ಷಣೆಗೆ ಈ ಅಂಶ ಬಯಲಾಗುತ್ತದೆ. ಆದರೆ ಶುದ್ಧ ಧಾರ್ಮಿಕ ಕಾವ್ಯವಾದ ಯಶೋಧರ ಚರಿತೆಯಲ್ಲಿ ಇಂತಹ ಲೌಕಿಕ ಸಂಗತಿಗಳನ್ನು ಕೆದಕುವುದು ಸಲ್ಲದು ಎಂಬ ಮಡಿವಂತಿಕೆಯಿಂದ ಮನಸ್ಸು ದೂರವಾಗಬೇಕು. ಈ ಕಾವ್ಯ ಬರಿಯ ಧರ್ಮಶ್ರವಣದ ಪ್ರಕಾರವಲ್ಲ. ಪ್ರಣಯ ಪ್ರಪಂಚದ ಚಿತ್ರ ವಿಚಿತ್ರ ತಿರುವು–ಮುರುವು ವಿಕೃತಿಗಳಿಗೂ ಅದು ಮೈಯೊಡ್ಡಿದೆ.

ಒಂದು ಮಾತು, ಮಾತೃಕಾಮದ ಈ ಒಳ ತೋಟಿಯಲ್ಲಿ ಸಿಕ್ಕ ಯಶೋಧರ, ಅಮೃತಮತಿಯನ್ನು ತೃಪ್ತಿಗೊಳಿಸಲು ಅಸಮರ್ಥನಿದ್ದನೆ ? ಅಮೃತಮತಿಯ ವಿಕೃತ ಕಾಮಕ್ಕೆ ಬದಗನ ಕೂಟದಲ್ಲಿ ತೃಪ್ತಿಯನ್ನು ಬಯಸುವ ಲಾಲಸೆಗೆ, ಈ ಅತೃಪ್ತಿಯೇ ಬೀಜವಾಯಿತೆ ?

ಚಿಂತನೆಯ ಬಾಗಿಲು ತೆರೆದಿದೆ. "ಮುಂದೆ ನಡೆಯುವ ಘಟನೆಗೆ ಯಾವ ಸೂಚನೆಯಾಗಲೀ ಇಲ್ಲಿ ದೊರೆಯದು.... ಕಾರ್ಯಕಾರಣ ಸಂಬಂಧ ಕಾಣಿಸದು"6 ಎಂಬ ವಿಮರ್ಶೆ ಪೂರ್ಣ ತೃಪ್ತಿಕರ ಎನಿಸುವುದಿಲ್ಲ. ಬದಲಾಗಿ, "ರತಿರಹಸ್ಯವನ್ನು ಬಣ್ಣಿಸುವುದಕ್ಕಿಂತಲೂ ಪ್ರಣಯ ಸಮಸ್ಯೆಯನ್ನು ಬಿಡಿಸುವುದರಲ್ಲಿ ಅವನ ಆಸಕ್ತಿ ಹೆಚ್ಚು....

ಅದೇ ಅವನ ವೈಶಿಷ್ಟ್ಯ–ಅವನ ಕಾವ್ಯದಸತ್ವ."7 ಎಂಬ ತೀನಂಶ್ರೀ ಅವರ ಸೂಚನೆ7 ಹೆಚ್ಚು ಅರ್ಥ ತ ತ್ತಾಗುತ್ತದೆ.

ಅಡಿ ಟಿಪ್ಪಣಿಗಳು

1. ರಂ. ಶ್ರೀ. ಮುಗಳಿ—ಕನ್ನಡ ಸಾಹಿತ್ಯ ಚರಿತ್ರೆ—ಪುಟ 204
2. ತೀನಂಶ್ರೀ—ಭಾರತೀಯ ಕಾವ್ಯ ಮೀಮಾಂಸೆ-ಪುಟ 276
3. ಜನ್ನ—ಕನ್ನಡ ಯಶೋಧರ ಚರಿತೆ—ಆಶ್ವಾಸ 2. ಪದ್ಯ 53
4. *Shekespeare-Hamlet-Act. III-Scene III.* ಸಾಲು 73_95
5. ಯಶೋಧರ ಚರಿತೆ—ಆಶ್ವಾಸ-2. ಪದ್ಯ—21
6. ಕುವೆಂಪು—ದ್ರೌಪದಿಯ ಶ್ರೀಮುಡಿ—ಪುಟ.23-24
7. ತೀನಂಶ್ರೀ—ಕಾವ್ಯ ಸಮೀಕ್ಷೆ—ಪುಟ. 58

ಎಚ್. ಎಚ್. ಗಂಗಾಧರಾಚಾರ್

ಹಂಬಲ

ಚಂದ್ರನನ್ನು ಮೋಡ ಮುಸುಕಿದ ಹಾಗೆ
ದೈನಂದಿನ ಕ್ಷುದ್ರತೆಗಳು ಮುಸುಕಿ ಬಿಡುತ್ತವೆ ಮನಸ್ಸನ್ನು.
ಇದೇ ನಿಜ ಜೀವನವೆಂಬ ಭ್ರಮೆ ತರಿಸುತ್ತ
ಕುತ್ತಿಗೆಗೆ ಉರುಲು ಹಾಕಿ ಉಸಿರುಗಟ್ಟಿಸುತ್ತವೆ.
ಇವುಗಳೆಲ್ಲವ ಹಗುರವಾಗಿ ತೆಗೆದುಕೊಳ್ಳುವುದು ಹೇಗೆ ?
ಈ ಪರದೆಗಳನ್ನೆಲ್ಲ ಹರಿದು ಒಳನೋಟಗಳ ಕಾಣುವುದು ಹೇಗೆ ?
ಎಲ್ಲ ಸಮಸ್ಯೆಗಳಿಗೂ ಸಿದ್ಧ ಉತ್ತರಗಳಿಲ್ಲ ; ನಿಜ,
ಕಾಲ ಉತ್ತರಿಸುತ್ತದೆ–ಕೆಲವಕ್ಕೆ ;
ಆದರೆ, ಕಾಲವೇ ಉತ್ತರವಲ್ಲ–ಎಲ್ಲ ಸಮಸ್ಯೆಗಳಿಗೆ.
ಹೆಣಗಿ, ಹೆಣಗಿ ಉತ್ತರ ಹುಡುಕುವ ಸಾಹಸದಲ್ಲಿ
ಚಕ್ರ ತಿರುಗುತ್ತದೆ ; ಆಯುಸ್ಸು ತೂತುಗಡಿಗೆಯಲ್ಲಿ ತುಂಬಿದ
ನೀರಾಗುತ್ತದೆ.

ಆದರೂ, ಕಂಡುಕೊಳ್ಳಲೇಬೇಕಾಗಿದೆ–
ಪ್ರತಿ ಸಮಸ್ಯೆಗೂ ಒಂದೊಂದು ಉತ್ತರ.
ಮಹತ್ವಾಕಾಂಕ್ಷೆಯ ಹಂಬಲ ಹೊತ್ತು
ನಡೆದವನ ಎದೆಭಾರ ಭೂಮಿಗಿಂತಲೂ ಭಾರ.
ಹಂಬಲವೊಂದಿದ್ದರೆ ಸಾಲದು, ದೃಢ ನಿರ್ಧಾರವಿಲ್ಲದ ಮೇಲೆ.
ಹಂಬಲವೊಂದಿದ್ದರೆ ಸಾಲದು–ಕ್ರಿಯಾಶೀಲತೆಯಿಲ್ಲದ ಮೇಲೆ.
ಹಂಬಲವೊಂದಿದ್ದರೆ ಸಾಲದು–ದೈನಂದಿನ ಕ್ಷುದ್ರತೆಗಳ ಮೆಟ್ಟಿ,
ನಡೆಯುವ ಸಾಹಸವಿಲ್ಲವ ಮೇಲೆ.
ಹಂಬಲವೊಂದಿದ್ದರೆ ಸಾಲದು–ಕಷ್ಟಪರಂಪರೆಗಳ ಸಹಿಸುವ ಶಕ್ತಿಯಿಲ್ಲದ
ಮೇಲೆ.

ಬೆಳೆ ಬೆಳೆಯಲು ನಿರಂತರ ಕೃಷಿ ಬೇಕು ;
ಒಂದೊಂದೇ ಮೆಟ್ಟಿಲುಗಳ ಹತ್ತಿ ನಡೆಯದೆ ಮೂರ್ತಿ ಕಾಣಿಸದು.
ಕಲ್ಲು ಮುಳ್ಳುಗಳ ಹಾದಿ, ಸಾಧನೆಯ ಹಾದಿ,
ಚುಚ್ಚಿಸಿಕೊಳ್ಳದೆ ವಿಧಿಯಿಲ್ಲ ; ಆರಿಸಿಕೊಂಡ ದಾರಿಯೇ ಅಂತಹುದು.
ಏನಾದರಾಗಲಿ ; ಕಣ್ಣ ಮುಂದಿನ ತಿಳಿವು ಸದಾ ಪ್ರತ್ಯಕ್ಷವಾಗಿರಲಿ
ಕೇಡಿಗಳು, ಕುಹಕಿಗಳು, ದುರಹಂಕಾರಿಗಳು ಹಾಳು ಗೆಡುಹುತ್ತಾರೆಂಬ
ಭಯಬೇಡ.

ಅಲೆಗಳಬ್ಬರದಿಂದ ಸಾಗರವೇನು ಸ್ಥಳಬಿಟ್ಟು ಕದಲುವುದೆ ?
ಸಾಗರ ಉಳಿಸಿಕೊಳ್ಳುತ್ತದೆ—ತನ್ನದೇ ಆದ ಗಾಂಭೀರ್ಯ
ಅಂತರಾಳದಲ್ಲಿ ನಿರಂತರ ಮೌನ,
ಮಡಿಲ ತುಂಬ ಮುತ್ತು ರತ್ನಗಳ ಮಹಾ ಭಂಡಾರ.

ದೊಡ್ಡರಂಗೇಗೌಡ

ಆರಂಭ ಸೂತ್ರ

ಯುವಕನ ಕಣ್ಣಲ್ಲಿ ಯುವತಿ ಕುಣಿಯುತ್ತಾಳೆ
ಹಾದಿ ತಪ್ಪುತ್ತದೆ
ಮೀಸೆ ಮೂಡಿದ ಮೇಲೆ ಮಾರ್ಮಿಕ ತಗಾದೆ
ತವಕ ತಣಿಯುವ ತನಕ ಅಂಗಭಂಗಿಗಳಲ್ಲಿ
ತಿಣುಕುತ್ತಾನೆ ಮಂಗಾಟ ನಡೆಸುತ್ತಾನೆ
ಚಾತುರ್ಯ ಇಣುಕಿಸುತ್ತಾನೆ

ಕಾಮನೆ ಕೊನೆಗೂಡುವವರೆಗೆ
ಕಣ್ಣು ಕಿಡಿ
ಮಾತು ಕಿಡಿ
ಮನಸ್ಸಿನಲ್ಲಿ ಚಿನುಕುರುಳಿ ಪಟಾಕಿ ಸಿಡಿಯುತ್ತದೆ
ಮಣ್ಣಿನಿಂದ ಬಾನಿಗೆ
ಬಾನಿನಿಂದ ಕಲ್ಪನೆಗೆ
ಕಲ್ಪನೆ ನೀಲಿಮದಿಂದ ತಲ್ಲೀನತೆಗೆ
ಶರವೇಗದಿಂದ ಜಿಗಿಯುತ್ತಾನೆ

ತೋಳತೆಕ್ಕೆ ಬೇಕೆಂಬ ಅನ್ನಿಸಿಕೆಯೊಳಗೆ
ತೂಗೂಯ್ಯಾಲೆಯಾಡುತ್ತಾನೆ
ಒಂದೊಂದು ಪಕ್ಕೆಗೂ ಹಲವು ಹನ್ನೊಂದು ಬಿಂಬ
ಪ್ರತಿಬಿಂಬ ನಗ್ನ ಡಿಂಬ
ತಡೆರಹಿತ ಚಲನೆಗೆ ಇಂಬಾಗಿ ಅಹಂಕಾರ
ತಿರುಗಣಿ ಸಿಕ್ಕಿ ಹುಂಬದ ಗುಂಬ ಸೀಳುವ ಶೌರ್ಯ

ಮೋಹ ಬಯಕೆಗಳ ರಾಶಿ ಗೆರೆ ಕೊಯ್ಯದ
ಸುಕುಮಾರ ಹರೆಯ ಬುಸುಗುಟ್ಟುತ್ತದೆ
ಕಣ್ಣು ಮಿಟುಕಿಸಿದ ಚೂಟಿ ಹುಡುಗಿಯ ನೋಟ
ಪ್ರೀತಿಯೆಂದು ಭ್ರಮಿಸಿ ಪ್ರಾಯದಲ್ಲಿ
ಲಜ್ಜೆ ಮರೆತ ಪೌರುಷದ ಒರೆತ ಶುರುವಾಗುತ್ತದೆ.

ಮನೋನಂದನದಲ್ಲಿ ಪನ್ನೀರ ಪೂಸುತ್ತ
ತೂಗಿ ತೊನೆಯುವ ಪುಷ್ಪಗಳತ್ತ
ಬಲಿತ ಫಲಗಳತ್ತ ಕಣ್ಣು ಬೀಳುತ್ತದೆ
ಕಳಿತಗಮನದ ಕವಣೆ
ಗುಂಡಿನಂಥ ನೋಟವಿಟ್ಟ ಗುರಿ ಹೊಡೆತ

ಮನೆಯಲ್ಲಿ ಮಲಗದೆ
ಮಲಗಿದಲ್ಲಿ ನಿದ್ದೆ ಬರದೆ
ಬಂದರೂ ಕನ್ನೆಯರ ಕನಸು ಬಿಡದೆ
ಬಿದ್ದು ಏಳಲಾರದೆ
ಹೊರಳಿದಷ್ಟೂ ಸ್ವಪ್ನ
ಮಗ್ಗಲು ಬದಲಿಸಿದಷ್ಟೂ ಮುಗಿಯದ ಸ್ವಪ್ನ
ಸ್ಖಲನವಾಗುವ ತನಕ ವಿರಾಮವಿಲ್ಲ
ಯೋಚನೆಗೆ ಆದಿಯೇನು ? ಅಂತ್ಯವೇನು ?

ಯೌವನದ ಅರ್ಥ ಪೂರ್ಣ ವಿರಾಮದಲ್ಲಲ್ಲ
ಕಾಮದಲ್ಲಲ್ಲ
    ಎರಡರ ನಡುವಿನ ಗಲ್ಲದ ಬೆಲ್ಲ
ಮೀಟುವೆಡೆಯಲ್ಲೆಲ್ಲಾ ಬಯಕೆ ಝರಿ ಒರೆತ ಕಾಣುತ್ತೆ
ಹುಡುಕಾಟ ಕೂಟದಲ್ಲಿ ಮಗ್ನವಾಗಿ
ರತಿ ವಿರಾಟ್ ರೂಪದಲ್ಲಿ ಭಗ್ನವಾಗಿ

ಪದರ ಪದರ ಅರ್ಥ ಧ್ವನಿ ಕಾವ್ಯನೆಲೆ ತೋರುತ್ತ
ಆರಂಭಶೂರತ್ವ ಮರೆಯಾಗುತ್ತದೆ
ಮರುಘಳಿಗೆ ಮುದಿಯಾದ ಬೆದೆ
ಮುಗಿಲ ನೋಡುತ್ತ ಆಯಾಸ ಉಬ್ಬಸ ಏರುತ್ತಾ ಇಳಿಯುತ್ತಾ
ಕೊಂಚ ಏರುಪೇರಾಗುತ್ತೆ ಎದೆಯ ಬಡಿತ
ಮತ್ತೆ ಮುಂದಿನ ಗಂಟೆ ಬಯಕೆ ಚಕ್ರ ಜಾಗೃತ.

ಸಂ : **ಸುಶೀಲಾ ಸೊಂಡೂರು**

ಸುಲವಾಲರಾಯನ ಕಥೆ

ಸಂಗ್ರಹಿಸಿದ ದಿನಾಂಕ : ೧–೧೨–೧೯೭೪
ಹೇಳಿದವರ ಹೆಸರು : ಲಕ್ಷ್ಮಿಯಮ್ಮ
ವಯಸ್ಸು : ೭೫
ಊರು : ಸುರಹೊನ್ನೆ
ಜಿಲ್ಲೆ : ಶಿವಮೊಗ್ಗ
ಜಾತಿ : ಚಲವಾದಿಗರು

ಸುವ್ವಿಸುವಮ್ಮಲಾಲಿ ಸುವ್ವಲಾಲೆ
ಸುಲವಾಲ ದಂಡಿಗೆ.ಪಯಣ ಸುವ್ವಲಾಲೆ
ಒಬ್ಬೋಳೆ ತಾಯಿಗೆ
ಮೂರ್ಮಂದಿ ಮಕ್ಕಳಯ್ಯ
ಒಬ್ಬನ್ಹೆಸರು ರಾಮಣ್ಣ
ಒಬ್ಬನ್ಹೆಸರು ಸುಲವಾಲ
ಒಬ್ಬೆಸ್ರು ದೇವಮ್ಮ
ಬೆಟ್ಟೆಣ್ಣೆ ಉಣ್ವಾಗ
ಒಳ್ಳೇಲಿ ಹಾಲ ಕುಡಿವಾಗ
ನಾನುಟ್ಟೆದನ್ನೆರಡೊರ್ಷ್ಕೆ
ದಂಡೀಗೆ ಬತ್ತೀನಂತ
ಕಾಗದವ ಬರದಾನೊ
ಹನ್ನೆರಡೊರ್ಷ ತುಂಬಿತು
ತಂಗೆ ದೇವಮ್ನೋರ
ಕಾಡ ಮೇಲೆ ಕಳಿಸ್ಬೇಡ
ಅವಳ ಕಾಲು ಮಣ್ಣಾಯ್ತದೆ
ನಾ ದಂಡ್ನಿಂದ ಬರುಗಂಟ

ಮೆದುವೆಯ ಮಾಡ್ಬೇಡಿ
ನನ್ನ ತಂಗೆ ದೇವಮ್ನೋರ
ತೂಗು ಮಂಚದಲ್ಲಿ ಮಡಗವ್ವ
ಸುಲವಾಲರಾಯ ದಂಡಿಗ್ಹೋದ
ದಂಡ್ಗೋದ ಸುದ್ದಿ ಕೇಳಿ
ಥಾಳಿ ಕೋಟೆಯವರು ಬಂದಾರೊ
ಹೆಣ್ಣ ಕೇಳುಕ್ ಬಂದಾರೊ
ದೇವಮ್ನೋರ ಕೊಡಿರಮ್ಮ
ಮದುವೆಯ ಮಾಡಿರಮ್ಮ
ದಂಡ್ಗೋಗಿರ್ಪ ಸುಲವಾಲರಾಯ
ಅವ್ನ ದಂಡಿಂದ ಬರುಗಂಟ
ಮದುವೆಯ ಮಾಡುದಿಲ್ಲ
ದಂಡ್ಗೋಗಿರ್ವ ಸುಲವಾಲರಾಯ
ಅವ್ನ ದಂಡ್ನಲ್ಲೆ ಮಡಿದ್ಹೋದ
ಸುಟ್ಟ ಕಾಗ್ದ ನೋಡಿರಮ್ಮ
ಸುಟ್ಟ ಕಾಗ್ದ ತೋರಿಸಿದ್ರು
ದಂಡ್ಗೋಗಿರ್ವ ಸುಲವಾಲರಾಯ
ಅವ್ನ ಅಲ್ಲೀನೆ ಮಡಿದ್ಹೋದ
ಅಂಗಂದ ಮಾತಕೇಳಿ
ಸ್ವಾಕಾವ ಮಾಡೀರೊ
ಸ್ವಾಕಾನೆ ಮಾಡಿಕಂಡು
ಥಾಳಿಕೋಟೆಯವರಿಗೆ ಅವ್ಳ
ಕದ್ದು ಮದುವೆ ಮಾಡ್ಬಿಟ್ಟ
ದಂಡ್ಗೋಗಿರೊ ಸುಲವಾಲರಾಯನಿಗೆ
ಕೆಟ್ಟ ಸಪುನ ಕೆಟ್ಟ ಸಪುನ
ನಾನು ಊರಿಗಾದ್ರೂ ಹೋಗಬೇಕು
ನೀವು ಸಂಬ್ಳಾನೆ ಕೊಡಿರಯ್ಯ
ಹಾಗಂದ ಮಾತಕೇಳಿ
ಅವ್ರು ಸಂಬ್ಳಾನೆ ಕೊಡಿರಿಯ್ಯ
ಹಾಗಂದ ಮಾತ ಕೇಳಿ
ಅವ್ರು ಸಂಬ್ಳಾನೆ ಕೊಟ್ಟಾರೊ
ಸಂಬಳಾನೆ ಈಸ ಕಂದು

ಅವ್ನ ಚೋಜಿ ಮ್ಯಾಲೆ ಏರ್ಕಂಡು
ಬಂದಾನೊ ಸುಲವಾಲ
ಆರ್ದಿನ್ಕೆ ಬರು ಪಯಣ
ಮೂರ್ದಿನ್ಕೆ ಬಂದಾನೊ
ಮೂರ್ದಿನ್ಕೆ ಬರೊ ಪಯಣ
ಒಂದೆ ದಿನ್ಕೆ ಬಂದಾನೊ
ಒಂದೆ ದಿನ್ಕೆ ಬರೊ ಪಯಣ
ಒಂದೆ ಗಳಿಗ್ಗೆ ಬಂದಾನೊ
ಆಡುಕಾಯ್ವ ಮಕ್ಕಳಿರಾ
ನಮ್ಮಟ್ಟಿಲೇನು ಸುದ್ದಿರಪ್ಪ
ನಾವ್ ಕಾಣೊ ತಾವ್ ಕಾಣೊ
ದಂಡ್ಗೋಗಿರು ಸುಲವಾಲರಾಯ್ನ ತಂಗಿ
ಕದ್ದು ಮದುವೆ ಮಾಡ್ಬುಟ್ರು
ನೀರ್ಗೋಗು ಅಕ್ಕದೀರ್ಯ
ನಮ್ಮಟ್ಟಿಲೇನು ಸುದ್ದಿರವ್ವ
ನಾವ್ ಕಾಣೊ ತಾವ್ ಕಾಣೊ
ದಂಡ್ಗೋಗಿರು ಸುಲವಾಲರಾಯ್ನ ತಂಗಿ
ಕದ್ದು ಮದುವೆ ಮಾಡ್ಬುಟ್ರು
ಹಾಗಂದ ಮಾತ ಕೇಳಿ
ಹ್ವೋಟದಲ್ಲಿ ಹೋದಾನೊ
ಮಗ ಬಂದ ಸುದ್ದಿ ಕೇಳಿ
ಅವರ್ತಾಯಿ ಮದೇವಮ್ಮ
ಆರತಿಯ ತಂದಾಳೊ
ನೀ ಆರತಿಯ ತರುವ್ರೋಕೆ
ನನ್ನ ತಂಗೆ ದೇವಮ್ನೋರು
ಎಲ್ಲಿಗ್ಹೋದರವ್ವ
ಹಾರುವರ ಕೇರೀಗೆ
ಅವ್ಳು ಆಡೂಕೆ ಹೋಗವ್ಳೆ
ಕುಂಬಾರ ಕೇರೀಗೆ
ಅವಳಾಡೂಕೆ ಹೋಗವ್ಳೆ
ತಂದಿದ್ದ ಮುತ್ತಿನ ಆರತಿಯ
ಹಿಂದಿರುಗಿಸಿದ ಸುಲವಾಲರಾಯ

ಹೋದಾನೊ ಪಾರೂರ ಕೇರೀಗೆ
ಹಾರುವರ ಮಕ್ಕಳಿರಾ
ನನ್ನ ತಂಗೆ ದೇವಮ್ನೋರು
ನಿಮ್ಮೊಂದಿಗೆ ಬರನಿಲ್ವೆ
ನಿಮ್ಮ ತಂಗೆ ದೇವಮ್ನೋರು
ಇಲ್ಲಿಗೆ ಬರನಿಲ್ಲ
ನೀ ಅತ್ತಾಗಿ ದಂಡಿಗೊಯ್ಲ್ಲೆ
ಥಾಳಿಕೋಟೆಯವರು ಬಂದು
ಕದ್ದು ಮದುವೆ ಮಾಡ್ಕಂದ್ರು
ಕುಂಬಾರಗೇರಿಗ್ಹೋದಾನೋ
ಕುಂಬಾರ ಮಕ್ಕಳಿರಾ
ನನ್ನ ತಂಗೆ ದೇವಮ್ನೋರು
ನಿಮ್ಮೊಂದಿಗೆ ಬರನಿಲ್ವ
ನಿಮ್ಮ ತಂಗೆ ದೇವಮ್ನೋರು
ಇಲ್ಲಿಗೆ ಬರನಿಲ್ಲ
ನೀ ಅತ್ತಾಗಿ ದಂಡಿಗೊಯ್ಲ್ಲೊ
ಥಾಳಿಕೋಟೆಯವರು ಬಂದು
ಕದ್ದು ಮದುವೆ ಮಾಡ್ಕಂದ್ರು
ಹಾಗಂದ ಮಾತಕೇಳಿ
ಮನೆಗಾದ್ರೂ ಬಂದಾನೊ
ಅವ್ರ ತಾಯಿ ಮಹದೇವಮ್ನ
ಕೇಳಾನೊ ಸುಲವಾಲರಾಯ
ತಾಯೆಮ್ಮ ತಾಯಮ್ಮ
ನನ್ನೊಂದ್ಗೆ ಸುಳ್ಳಮಾತ
ಹೇಳಿದೆಯಲ್ಲ ಸರಿಯಮ್ಮ !
ಕದ್ದು ಮದುವೆ ಮಾಡಬಹುದೆ
ನಾನು ಏನಂತ ಹೇಳಿದ್ದಿ
ಅಪ್ಪ ಸುಳ್ಳಕಾಗ್ದ ತೋರಿಸಿದ್ರು
ನಾವು ಸ್ವಾಕಾನೆ ಮಾಡಿಕಂದು
ಮದುವೆಯ ಮಾಡ್ಬುಟ್ವೊ
ನೀ ಬುತ್ತೀನೆ ಕಟ್ಟವ್ವ
ನನ್ನ ತಂಗೆ ದೇವಮ್ನೋರ

ನಾ ನೋಡೋಕೆ ಹೋಗಬೇಕು
ಬುತ್ತೀನೆ ಕಟ್ಟವ್ನೆ
ಬುತ್ತೀನೆ ಕಟ್ಟಿಸ್ಕಂದು
ಅವ್ನು ಬಂದಾನೊ ಮನೆಯಿಂದ
ಅವ್ನ ಪಾಗೆ ಮುನ್ನಾಗಿತ್ತು
ನಾ ಏಳ್ದ ಮಾತ ಕೇಳಪ್ಪ
ನೀ ಈವತೋಗೊ ಪಯ್ಣುವ
ನಾಳೆ ಹೋಗಪ್ಪ ಸುಲವಾಲ
ನಾಳೋಗೋ ಪಯಣವ
ನಾನೀವತ್ತೀ ಹೋಯ್ತೀನಿ
ಅಪ್ಪ ಸುಲವಾಲರಾಯ
ನೀ ಮನಿಂದ ಕಡಿತ್ಲೆ
ನಿನ್ನ ಪಾಗ ಮನ್ನಾಗಿತ್ತು
ಅವ್ನು ಕಡ್ದು ಹೋಗ್ವಾಗ
ಹಾವು ಅಡ್ಡಾಗಿತ್ತು
ಈವಿತ್ತೋಗೊ ಪಯ್ಣಾವ
ನಾಳೆ ಹೋಗೊ ಸುಲವಾಲ
ನಾಳೋಗೋ ಪಯ್ಣಾವ
ನಾನೀವತ್ತೆ ಹೋಯ್ತೀನಿ
ಮುಂದೆ ಮುಂದೆ ಸುಲವಾಲ
ಹಿಂದಿಂದೆ ಮಹದೇವಮ್ಮ
ಹೊಸ ಮಡಕೆ ಅಡಲಾಯ್ತು
ಈವತ್ತೋಗು ಪಯ್ಣಾವ
ನಾಳೋಗೋ ಸುಲವಾಲ
ನಾಳೋಗೊ ಪಯ್ಣಾವ
ನಾನೀವತ್ತೆ ಹೋಯ್ತೀನಿ
ಅಲ್ಲಿಂದ ಮುಂದ್ಕೊಯ್ಲಿ
ಹಾರವಯ್ಯನ ಅಡ್ಡಾದ
ಬೇಡಪ್ಪ ಸುಲವಾಲ
ನಾಳೋಗೊ ಪಯಣವ
ನಾನಿವತ್ತೆ ಹೋಯ್ತೀನಿ
ಅಲ್ಲಿಂದ ಮುಂದ್ಕೊಯ್ಲಿ

ಗಾಣಿಗನೆ ಅಡಲಾದ
ನಾ ಹೇಳ್ದ ಮಾತ ಕೇಳಪ್ಪ
ಈವತ್ತ್ಹೋಗೊ ಪಯಣವ
ನಾಳೋಗೊ ಸುಲವಾಲ
ನಾಳೋಗೋ ಪಯಣವ
ನಾನೀವತ್ತೆ ಹೋಯ್ತೀನೆಂದು
ತಾಯಿ ಮಹದೇವಮ್ಮನಿಗೆ
ಅವ್ಳ ಕಾಲಿಗೆ ಅಡ್ಡಬಿದ್ದು
ಮುಂದಕ್ಕೆ ಪಯ್ಣ ಮಾಡವ್ನೆ
ನಾ ಧಾಳಿಕೋಟೆಗಾದ್ರೂ ಹೋಯ್ತಿನಿ
ಅವ್ರ ತಾಯಿ ಮಹಾದೇವಮ್ಮ
ಹಿಂದಕಾದ್ರೂ ಬಂದಾಳೊ
ಹೊಲ ಉಳು ಅಣ್ಣೈದೀರ್ಯ
ನೀವು ಧಾಳಿಕೋಟೆಗೆ
ದಾರೀನಾದ್ರೂ ತೋರಿಸ್ರಯ್ಯ
ನಿನ್ನನ್ನೂ ನಾವ್ಯಾಣೊ
ಧಾಳಿಕೋಟೆ ನಾವ್ಯಾಣೊ
ನೀವ್ರ ಹಿಡಿದಿರ್ವ ಮಾಳಿನಕೋಲು
ನಿಮ್ಮ ಗಂಟ್ಲಲ್ಲೆ ಬೆಳಿಲಪ್ಪಾ
ರಾಟೆ ನೂಲು ಮುದುಕವ್ವ
ನೀ ಧಾಳಿಕೋಟೆಗೆ
ದಾರಿನಾದ್ರೂ ತೋರಿಸವ್ವ
ಬಾಗೆಯ ಬಲ್ಗಾಕು
ಸೀಗೆಯ ಎಡ್ಗಾಕು
ನೀ ನಾಗರ ಸಂಪಂಗಿಯ
ನೀ ನಡು ನಡುವೆ ಹೋಗಪ್ಪಾ
ಅಂಗಂದ ಮಾತಕೇಳಿ
ಸುಲವಾಲ ಬಾಗೆಯ ಬಲ್ಗಾಕಿ
ಅವ್ನ ಸೀಗೆಯ ಎಡ್ಗಾಕಿ
ನಾಗರ ಸಂಪಂಗಿಯ
ನಡುನಡುವೆ ಹೋದವ್ನೆ
ಧಾಳಿಕೋಟೆ ಏರಿವ್ಯಾಕೆ

ಹೋದಾನೊ ಸುಲವಾಲ
ಏರಿಮ್ಯಾಲೆ ಕುಂತಕಂದು
ದೇವಮ್ಮ ದಾದಿಯರು
ಅವ್ರು ನೀರಿಗಾದ್ರೂ ಬಂದವ್ರೆ
ನೀ ಯಾವ ಸೀಮೆ ದೊರೆ ಮಗ
ನೀ ಯಾವ ನಾಡ್ನ ದೊರೆ ಮಗ
ನೀ ಒಬ್ಬಾನೆ ಕುಳಿತಿದ್ಯೆ
ನಾ ದಂಡ್ಗೋಗಿರು ಸುಲವಾಲ
ದೇವಮ್ಮೋರ ಅಣ್ಣನಮ್ಮ
ನನ್ನ ತಂಗೆ ದೇವಮ್ನೋರ
ಇಲ್ಲಿಗಂಟೆ ಬರಿಹೇಳಿ
ಏರಿಮ್ಯಾಕೆ ಬರಹೇಳಿ
ದೇವಮ್ಮ ದಾದಿಯರು
ನೀರನ್ನೆ ಹೊತ್ತುಕಂದು
ಅವ್ರು ಮನೆಗಾದ್ರೂ ಹೋದಾರೊ
ನಿಮ್ಮಣ್ಣ ಸುಲವಾಲರಾಯ
ದಂಡಿಗೆ ಹೋಗಿದ್ದುರಂತೆ
ದಂಡಿಂದ ಬಂದವ್ನೆ
ಅವ್ನು ನಿನ್ನ ನೋಡೋಕೆ
ಏರಿ ಮ್ಯಾಲೆ ಕುಂತವ್ನೆ
ನೀ ಹೋಗಿ ನೋಡವ್ವ
ಹಾಳು ಮುಂಡೆ ಮೊಕವನ್ನು
ನೋಡ್ದೆ ಇದ್ರೆ ಆಗ್ದೆ ಇತ್ತೆ
ಈ ಹಾಳಾದ ಧಾಳಿಕೋಟೆ
ಹೊಸ ಮನಸ್ರು ಕೇಳ್ತದೆ
ಹಾಳು ಧಾಳಿಯು ಕೋಟೆ
ಅವ್ಳು ಬಿಂದಿಗೆನಾದ್ರೂ ತಕ್ಕಂದು
ನೀರಿಗಾದ್ರೂ ಬಂದಾಳೊ
ಅಣ್ಣನ ಕತ್ತು ತಂಗೆ ಕೈಲಿ
ತಂಗೆ ಕತ್ತು ಅಣ್ಣನ್ಕೈಲಿ
ಕತ್ತಕತ್ತ ತಬ್ಬಿಕಂದು
ಅವ್ರು ಸ್ವಾಕಾನೆ ಮಾಡುತ್ತಾರೆ

ಸ್ನಾಕಾನೆ ಮಾಡುಬುಟ್ಟು
ಅಣ್ಣಾನುವೆ ತಂಗುವೆ
ಇಬ್ಬಾರೂ ಕುಂತುಕಂದ
ಅವ್ರು ಊಟಾನೆ ಮಾಡುತಾರೆ
ಅಣ್ಣ ಸುಲವಾಲರಾಯ
ನೀ ಹಿಂದಕಾದ್ರೂ ಹೋಗಣ್ಣ
ಹಿಂದಕಾದ್ರೆ ಹೋಗುದಿಲ್ಲ
ನಿನ್ನ ಬದ್ಕು-ಬಾಳ ನೋಡ್ಬೇಕು
ನಿನ್ನ ಮನೆಮಠ ನೋಡಬೇಕು
ನಿನ್ನ ಗಂಡಾನ ನೋಡಬೇಕು
ನಿನ್ನ ಅತ್ತೆಮಾವದೀರ ನೋಡ್ಬೇಕು
ಹೇಳ್ದ ಮಾತ ಕೇಳಣ್ಣ
ಈ ಹಾಳ ಧಾಳಿಕೋಟೆ
ಹೊಸ ಮನಸ್ರ ಕೇಳ್ತದೆ
ನೀ ಹಿಂದಕಾದ್ರೂ ಹೋಗಣ್ಣ
ನಾ ಹಿಂದಕಾದ್ರೂ ಹೋಗುದಿಲ್ಲ
ನಾನು ಕೂಡ ಬತ್ತೀನಿಕನವ್ವ
ಅವ್ನು ಎಷ್ಟೇಳ್ದ್ರು ಕೇಳುದಿಲ್ಲ
ಅವ್ಳು ಪಲ್ಲಿನಾದ್ರೂ ಮಾಡ್ಬುಟ್ಲು
ಬಿಂದಿಗೆನಾದ್ರೂ ಬುಟ್ಬುಗಂಡ್ಲು
ಮನೆಗಾದ್ರೂ ಹೋದಾಳೊ
ಅವ್ನ ಕಿರುಮನೆಗೆ ಬುಟ್ಟಾಳೊ
ಅವ್ರಣ್ಣ ಸುಲವಾಲರಾಯನ್ಗೆ
ಅವ್ನ ಬೀಗಮುದ್ರೆ ಹಾಕದೈ
ಹಾಳಾದ ಧಾಳಿಕೋಟೆ
ಎದ್ದೆದ್ದು ನೋಡುತಾದೆ
ಎತ್ತೆತ್ತಿ ಮಗುಚುತಾದೆ
ಅವ್ರವಾಲೆಕಾರ್ರು ಬಂದಾರೊ
ಅವ್ರು ಬೀದಿ ಬೀದಿ ತಡ್ಕುತಾರೆ
ಕೇರಿ ಕೇರಿ ತಡ್ಕುತಾರೆ
ಎಲ್ಲಾನೂ ಹುಡಿಕಂದು
ಅವ್ರು ದೇವಮ್ಮನ್ನಟ್ಗೆ ಬರುತಾರೆ

ದೇವಮ್ನ ಹಟ್ಟಿಗ್ಬಂದು
ಭೀಗವ ತಗಿಯಮ್ಮ
ಹೊಸ ಮನಸ್ರು ಕೇಳುತಾದೆ
ನಾ ಹುಟ್ದವ್ಳೆ ಒಬ್ಬಾಳು
ನಾ ಬೆಳೆದವ್ನೆ ಒಬ್ಬಾಳು
ನಾ ಯಾರಾನ ತೋರಸ್ರಪ್ಪ
ಅಪ್ಪ ವಾಲೆಕಾರ್ರು
ಅಮ್ಮ ತೋರ್ದ್ರು ತೋರ್ಬಹುದು
ಅವ್ರು ವಾಚಾನೆ ಕರೆಸಿದ್ರು
ಅವ್ರು ಭೀಗಾನೆ ಹೊಡೆಸಿದ್ರು
ಸುಲವಾಲರಾಯ್ನ ಕರೆಕಂದು
ಹೋದಾರೊ ವಾಲೆಕಾರ್ರು
ಅವ್ರು ಮೂಡ್ಲಾಗಿ ನಿಲ್ಸಿ
ನಿನ್ನ ದ್ಯಾವರ ನೆನೆಕಯ್ಯ
ನಿನ್ನ ಹಿರಿಗುರು ನೆನೆಕಯ್ಯ
ನಿನ್ನ ತಂದೆ ತಾಯ್ಗಳ ನೆನೆಕಯ್ಯ
ನಿನ್ನ ಅಕ್ಕತಂಗೇರ ನೆನೆಕಯ್ಯ
ನಿನ್ನ ಬಂಧುಬಳಗ ನೆನಕಯ್ಯ
ಅವ್ನ ಎಲ್ಲಾರ ನೆನೆಕಂದು
ದ್ಯಾವರ ಸಿರಿಪಾದ
ಹಿರಿಗುರುವಿನ ಸಿರಿಪಾದ
ತಂದೆ ತಾಯ್ಗಳ ಸಿರಿಪಾದ
ತಂಗಿದೇವಮ್ನ ಸಿರಿಪಾದ
ನಮ್ಮಣ್ಣಾನ ಸಿರಿಪಾದ
ಬಂಧುಬಳಗದ ಸಿರಿಪಾದ
ನನ್ನ ಮಂಡೆ ಮ್ಯಾಲಿರಪ್ಪ
ಅವ್ನ ಕೈಯಾನೆ ಜೋಡ್ಸಿಕಂದು
ಮೂಡ್ಲಾಗಿ ನಿಂತ್ಕಂದ
ಅವ್ರು ಮೂರೆ ತುಂಡಿಗೆ
ಸುಲವಾಲರಾಯ್ನ ಕಡಿದಾರೊ
ತಂಗೆ ದೇವಮ್ನೋರ್ಗೆ
ಸುದ್ದಿ ಕೊಟ್ರು ವಾಲೆಕಾರ್ರು

ಅವ್ಳ ಬಂದಾಳೊ ದೇವಮ್ಮ
ಅವ್ಳ ಸ್ವಾಕಾನೆ ಮಾಡಾಳೊ
ಗಂಡಾನೂ ಹೆಡ್ತೀನೂ
ಸತ್ತ ಸುಲವಾಲರಾಯ್ನ
ರಥದ್ಮೇಲೆ ಏರ್ಕಂದು
ಅವರಪ್ಪಾನ ಮನೆಮುಂದೆ
ಅವರ ತಾಯಿ ಮಹದೇವಮ್ಮ
ಗಾಬರಿಸಿ ಬಂದಾಳೊ
ಅವರಣ್ಣ ರಾಮದೇವರುವೆ
ಗಾಬರಿಸಿ ಬಂದಾನೊ
ಅವ್ರು ಸುಲವಾಲರಾಯ್ನ ನೋಡಾರೊ
ಅವ್ರ ತಾಯಿ ಮಹದೇವಮ್ಮ
ಅವರಣ್ಣ ರಾಮದೇವರುವೆ
ಅವ್ರು ಸಿರಿಗಂಧದ ಸೌದೇಯ
ತರಿಸಿದ್ರು ಮಹಾದೇವಮ್ಮ
ಅವ್ರು ಹಸುಳೆಯ ಹೋತವ್ರೆ
ಸುಲವಾಲರಾಯನ್ಗೆ ಬೆಂಕಿಯ
ಅವ್ನ ಅಗ್ನಿಗೊಂಡ ಆಗ್ವಾಗ
ಅಂತವನೆ ಹೋದನಂತೆ
ನಮ್ಮಿಂದ ಏನಂತೆ
ಅಂದುಕೊಂಡು ಐದುಜನರು
ಅವ್ರು ಅಗ್ನಿಗೊಂಡ ಆದಾರೊ

[ವಿ.ಸೂ : ಪ್ರತಿಸಾಲಿಗೂ "ಸುವ್ವಲಾಲಿ" ಎಂದುಸೇರಿಸಿ ಓದಿಕೊಳ್ಳಬೇಕು]

ಎನ್. ಅನಂತರಂಗಾಚಾರ್

ಕಂಬ ರಾಮಾಯಣಮ್

ಕ್ರಿಸ್ತಶಕೆದ ಆದಿಯಿಂದಲೂ ಸಂಸ್ಕೃತ ಮತ್ತು ಪ್ರಾಕೃತಭಾಷೆಗಳನ್ನು ವಾಲ್ಮೀಕಿ ರಾಮಾಯಣದ ಆಧಾರದ ಮೇಲೆ ವಿವಿಧ ರೀತಿಯಲ್ಲಿ ರಾಮಾಯಣಗಳು ರಚಿತವಾಗುತ್ತಿದ್ದರೂ ಭಾರತೀಯ ದೇಶಭಾಷೆಗಳಲ್ಲಿ ಮುಂದಿನ ಅನೇಕ ಶತಮಾನಗಳವರೆಗೆ ಆ ವಿಷಯವಾಗಿ ಆ ರೀತಿಯ ರಾಮಾಯಣಗಳು ಯಾವವೂ ರಚಿತವಾಗಿರುವಂತೆ ಕಾಣುವುದಿಲ್ಲ. ದೇಶೀಯ ಭಾಷಾ ಸಾಹಿತ್ಯವು ಬೇರೆ ಬೇರೆ ಕಾಲಗಳಲ್ಲಿ ವಿಕಾಸಗೊಳ್ಳಲು ಆರಂಭವಾದುವು. ಸಾಮಾನ್ಯವಾಗಿ ಎಲ್ಲ ದೇಶೀಯ ಭಾರತ ಭಾಷೆಗಳಲ್ಲಿಯೂ ಆದಿಯುಗ ಭಾಷಾಂತರಯುಗ. ಆ ಕಾಲದಲ್ಲಿ ಸಾಮಾನ್ಯ ಜನಗಳ ಉಪಯೋಗಕ್ಕಾಗಿ ಪ್ರಾಚೀನವಾದ ಸಂಸ್ಕೃತ ಪುರಾಣೇತಿಹಾಸಗಳು ಭಾಷಾಂತರಿತವಾದವು. ಹಾಗೆ ವಿಕಾಸಗೊಂಡ ಭಾಷೆಗಳಲ್ಲಿ ತಮಿಳಿನಲ್ಲಿಯೇ ನಾವು ಬಹಳ ಪ್ರಾಚೀನಕಾಲದಿಂದ ಗ್ರಂಥ ರಚನೆಯನ್ನು ಕಾಣುವುದು. ಅಲ್ಲಿಯ ಆದಿಕಾಲದ ಸಾಹಿತ್ಯಕ್ಕೆ ಸಂಘಸಾಹಿತ್ಯವೆಂದು ಹೆಸರು. ಅಂತಹ ಸಂಘಗಳು ತಮಿಳು ದೇಶದಲ್ಲಿ ಮೂರು ಇತ್ತೆಂದು ತಿಳಿದುಬರುತ್ತದೆ. ಅವುಗಳಲ್ಲಿಯೂ ಮೊದಲೆರಡು ಸಂಘಗಳ ಕಾಲದ ಸಾಹಿತ್ಯ ಉಪಲಬ್ಧವಿಲ್ಲ. ಮೂರನೆಯದವುಗಳು ವಿವಿಧ ರೀತಿಯ ಸಂಕಲನಗಳು. ಆ ಕಾಲದಲ್ಲಿ ಸಂಪೂರ್ಣವಾದ ಪುರಾಣ ಗ್ರಂಥಗಳು ರಚಿತವಾಗಿಲ್ಲ. ಆ ಕಾಲ ಕಳೆದಮೇಲೆ ನಾಡಿನಲ್ಲಿ ಭಕ್ತಿ ಸಾಹಿತ್ಯವು ಪ್ರಚಾರವಾದಮೇಲೆ ಅವುಗಳ ಪ್ರಭಾವದಿಂದ ಸುಮಾರು ಹತ್ತನೆಯ ಶತಮಾನದಲ್ಲಿ ಮೊತ್ತ ಮೊದಲನೆಯ ಸಲ ರಾಮಾಯಣವು ರಚಿತವಾಯಿತು. ಅದನ್ನು ರಚಿಸಿದವರು ಕಂಬರು.

ಕಂಬರು ತಂಜಾವೂರು ಜಿಲ್ಲೆಯ ತಿರುವಳುಂದೂರಿ (ತೇರಯಿಂದೂರು)ನಲ್ಲಿ ಉಚ್ಚ ಜಾತಿಯಲ್ಲಿ ಹುಟ್ಟಿದರು. ಇವರ ತಂದೆಯ ಹೆಸರು ಆದಿತ್ಯನ್. ಇವರ ಬಾಲ್ಯದಲ್ಲಿಯೇ ತಂದೆ ತೀರಿಕೊಂಡಿದ್ದರಿಂದ ಪೋಷಕರಿಲ್ಲದೆ ತಿರುವಣ್ಣೈನಲ್ಲೂರಿನ ಶಡೈಯಪ್ಪವಳ್ಳಲ್ ಎಂಬುವರ ಆಶ್ರಯದಲ್ಲಿ ಬೆಳೆದು ವಿದ್ಯಾವಂತರಾದರು. ಕಂಬರೆಂಬುದು ಇವರ ತಂದೆ ತಾಯಿಗಳಿಟ್ಟ ಹೆಸರೆಂದೂ ಕೆಲವರು ಇವರ ನಾಡು ಕಂಬನಾಡಾದುದರಿಂದ ಅವರಿಗೆ ಆ ಹೆಸರು ಬಂತೆಂದು ಮತ್ತು ಕೆಲವರು ಕಾಂಚೀಪುರದ ಏಕಾಂಬರ ನಾಡಿನ

ಹೆಸರಿನ ಸಂಕ್ಷಿಪ್ತ ಹೆಸರೆಂದು ಇನ್ನು ಕೆಲವರೂ ಹೇಳುತ್ತಾರೆ. ಆ ಕಾಲದ ಕೆಲವು ಶಾಸನಗಳಲ್ಲಿ ಕಂಬರ್ ಎಂಬ ಹೆಸರೇ ಇರುವುದರಿಂದ ಅದು ಅವರ ಅಂಕಿತನಾಮವಿರ ಬಹುದೆಂದೇ ಹೇಳಬಹುದು.

ಇವರ ಕಾಲವು ೯ ನೆಯ ಶತಮಾನದ ಉತ್ತರಾರ್ಧವೆಂದು ಇಟ್ಟುಕೊಳ್ಳಬಹುದು. ೧೨ ನೆಯ ಶತಮಾನದ ಉತ್ತರಾರ್ಧವೆಂದೂ ಕೆಲವರು ಹೇಳುತ್ತಾರೆ. ಕಂಬರು ವೈಷ್ಣವರು; ಆದರೂ ಶಿವಪರಮಾತ್ಮನನ್ನು ಸ್ತುತಿಸಿರುವುದು ಇವರ ಹೃದಯ ವೈಶಾಲ್ಯವನ್ನೂ ಪ್ರದರ್ಶಿಸುತ್ತದೆ. ಇವರು ತಮ್ಮ ಹಿಂದಿನ ಅನೇಕ ಗ್ರಂಥ ಗಳಿಂದ ವಿಶೇಷ ಪ್ರಭಾವಿತರಾಗಿದ್ದಾರೆ. ಇವರ ಹಿಂದೆ ತಿರುವಳ್ಳುವರ 'ತಿರುಕ್ಕುರುಳಿ'ನ ೭೦೦ ಕ್ಕಿಂತ ಹೆಚ್ಚಿನ ವಾಕ್ಯಗಳನ್ನು ವಾಕ್ಯಖಂಡಗಳನ್ನು ತಮ್ಮ ಗ್ರಂಥದಲ್ಲಿ ಅನುವಾದ ಮಾಡಿದ್ದಾರೆ. ಇದರಿಂದ ಇವರಿಗೆ ಆ ಗ್ರಂಥದಲ್ಲಿದ್ದ ಗೌರವವು ವ್ಯಕ್ತಪಡುವುದು. ಅಷ್ಟೇ ಅಲ್ಲದೆ 'ತೊಲ್‌ಕಾಪ್ಪಿಯಂ' ಎಂಬ ಲಕ್ಷಣ ಗ್ರಂಥವನ್ನು ಚೆನ್ನಾಗಿ ಅಭ್ಯಾಸ ಮಾಡಿದ್ದರು. ಇವರಿಗೆ 'ಕಲ್ವಿಯಲ್ ತಿರಿಯೋರ್', ವೃತ್ತಬಂಧಪ್ರವೀಣನ್ 'ಕವಿ ಚಕ್ರವರ್ತಿ' ಮೊದಲಾದ ಬಿರುದುಗಳಿವೆ. ಇವರು ತಮಿಳು ಮತ್ತು ಸಂಸ್ಕೃತ ಭಾಷೆಗಳಲ್ಲಿ ಉದ್ದಾಮಪಂಡಿತರಾಗಿದ್ದೂ ತಮ್ಮ ಕಾಲದಲ್ಲಿದ್ದ ಎಲ್ಲ ರಾಮಾಯಣ ಗಳನ್ನು ಕೇಳಿಕೊಂಡು ದಿನಕ್ಕೆ ೭೦೦ ಪದ್ಯಗಳನ್ನು ಬರೆಯುತ್ತಿದ್ದರೆಂದು ಪ್ರತೀತಿ. ಅಲ್ಲದೆ ಅವರಿಗಿಂತ ಹಿಂದೆ ಇದ್ದ ಸಂಘಸಾಹಿತ್ಯದಿಂದಲೂ ಪ್ರಭಾವಿತರಾಗಿದ್ದಾರೆ.

ಕಂಬರಾಮಾಯಣವೆಂದು ಪ್ರಸಿದ್ಧರಾಗಿರುವ ಅವರ ಕೃತಿಗೆ ಕಂಬರು ಇಟ್ಟ ನಾಮಧೇಯ 'ರಾಮಾವತಾರಮ್' ಎಂದು. ಕಂಬರಿಗಿಂತ ಹಿಂದೆ ತಮಿಳುಭಾಷೆಯಲ್ಲಿ ಪೂರ್ಣವಾದ ರಾಮಾಯಣದ ಕತೆ ಯಾವುದೂ ಇರಲಿಲ್ಲ. ಆದರೂ ಸಂಘಸಾಹಿತ್ಯ ದಲ್ಲಿಯೂ ವೈಷ್ಣವ ಆಳ್ವಾರುಗಳ ದಿವ್ಯಪ್ರಬಂಧಗಳಲ್ಲಿಯೂ ರಾಮಾಯಣಕ್ಕೆ ಸಂಬಂಧ ಪಟ್ಟ ವಿಷಯಗಳ ಸೂಚನೆಯಿದೆ. ಅವುಗಳ ಪ್ರಭಾವ ಇವರ ಗ್ರಂಥದ ಮೇಲೆ ವಿಶೇಷ ವಾಗಿದೆ. ಅವುಗಳಲ್ಲಿಯೂ ತಿರುಮಂಗೈಯಾಳ್ವಾರರ ಕೃತಿಗಳು ಇವರ ಕೃತಿಯ ಮೇಲೆ ತಮ್ಮ ವಿಶಿಷ್ಟ ಮುದ್ರೆಯನ್ನು ಒತ್ತಿವೆ.

ಆದಿಕಾಲದಿಂದ ತಮಿಳುನಾಡಿನಲ್ಲಿ ಪ್ರೇಮಕ್ಕೆ ವಿಶೇಷ ಸ್ಥಾನವಿದೆ. ಅದು ಶ್ರೇಷ್ಠ ವಾದ ಆದರ್ಶ ಮತ್ತು ಸಹಜ ಪ್ರವೃತ್ತಿ. ತಮಿಳರ ಪ್ರಕಾರ ಪೂರ್ವಪ್ರಣಯವಿಲ್ಲದ ಸ್ವಯಂವರಕ್ಕೆ ಅರ್ಥವಿಲ್ಲ. 'ಶಿಲಪ್ಪಧಿಕಾರ'ದ ಪ್ರಕಾರ ಪಾತಿವ್ರತ್ಯಕ್ಕೆ ಉತ್ತಮ ಸ್ಥಾನವಿದೆ. ಪತಿವ್ರತೆಯರಿಗೆ ಅನ್ಯಾದೃಶ ಶಕ್ತಿಯಿದೆ. ಸ್ತ್ರೀಯರ ಕೇಶಪಾಶವು ಅವರ ಶಯ್ಯೆಯೆಂದೇ ವರ್ಣಿತವಾಗಿದೆ. ಅದು ಪತಿಯ ಅಮೂಲ್ಯವಾದ ಆಸ್ತಿ ; ಅದನ್ನು ಪರ ಪುರುಷನು ಮುಟ್ಟಕೂಡದು.

ಕಂಬರ ಕಾಲಕ್ಕೆ ಸ್ತ್ರೀಪಾರಿಶುದ್ಧ್ಯವು ಸಮಾಜದಲ್ಲಿ ಅಗ್ರಸ್ಥಾನವನ್ನು ಪಡೆದಿತ್ತು. ಯಾವ ಕಾರಣದಿಂದಲೂ ಅದು ವ್ಯತ್ಯಾಸವಾಗುವುದು ಸಾಧ್ಯವೇ ಇರಲಿಲ್ಲ.

ಈ ಹಿನ್ನೆಲೆಯಲ್ಲಿ ಕಂಬರು ತಮ್ಮ 'ರಾಮಾವತಾರ'ವನ್ನು ರಚಿಸಿದ್ದಾರೆ. ಇವು

ಗಳಿಗೆ ಹೊಂದಿಕೊಳ್ಳುವಂತೆ ತಮ್ಮ ಗ್ರಂಥದ ಸನ್ನಿವೇಶಗಳನ್ನು ಪಾತ್ರಗಳನ್ನು ಮಾರ್ಪಾಟು ಮಾಡಿಕೊಂಡು ತಮ್ಮ ಕಾಲಕ್ಕೆ ಆದರ್ಶವಾಗಿರುವಂತೆ ಕೃತಿರಚನೆ ಮಾಡಿದ್ದಾರೆ. ಇವರು ಪೂರ್ಣಮಾಡದೆ ಬಿಟ್ಟಿದ್ದ ಉತ್ತರಕಾಂಡವನ್ನು ಒಟ್ಟ ಕೂತ್ತರ್ ಎಂಬುವರು ರಚಿಸಿದ್ದಾರೆ. ಕಂಬ ರಾಮಾಯಣದ ಕಾಂಡಗಳು ಪಟಲಗಳಾಗಿ ಭಾಗವಾಗಿ ಒಂದೊಂದು ಪ್ರತ್ಯೇಕ ಹೆಸರನ್ನೂ ಪಡೆದಿವೆ.

ಕಂಬರಾಮಾಯಣಕ್ಕೆ ವಾಲ್ಮೀಕಿ ರಾಮಾಯಣವೇ ಮೂಲ. ಅದನ್ನು ಬಹುಮಟ್ಟಿಗೆ ಅನುಸರಿಸಿದ್ದಾರೆ. ಆದರೆ ಮೇಲೆ ಹೇಳಿದ ದೃಷ್ಟಿಯಿಂದ ಕೆಲವು ಮಾರ್ಪಾಟುಗಳಾಗಿ ಕತೆಯ ಶೋಭೆಯನ್ನು ಹೆಚ್ಚಿಸಿವೆ. ಪ್ರಾರಂಭದಿಂದಲೇ ಆಗಿರುವ ಮಾರ್ಪಾಟುಗಳನ್ನು ಅವುಗಳ ಫಲವನ್ನು ಸ್ಥೂಲವಾಗಿ ವಿಚಾರ ಮಾಡಬಹುದು. ಈ ಕಾರ್ಯದಲ್ಲಿ ಅವರು ಮೂಲದ ಕೆಲವು ಭಾಗಗಳನ್ನು ಬಿಟ್ಟಿದ್ದಾರೆ. ಕೆಲವನ್ನು ಹೊಸದಾಗಿ ಸೇರಿಸಿದ್ದಾರೆ. ಕೆಲವಕ್ಕೆ ಹೊಸ ಆಕಾರವನ್ನು ಕೊಟ್ಟಿದ್ದಾರೆ.

ವಾಲ್ಮೀಕಿ ಮಹರ್ಷಿಯಲ್ಲಿ ಕಥಾನಾಯಕನಾದ ರಾಮ ಆದರ್ಶಮಾನವ. ಕಂಬರ ಕಾಲಕ್ಕೆ ಜನರ ಮನಸ್ಸಿನಲ್ಲಿ ಆದರ್ಶಮಾನವನಾಗಿದ್ದ ಅವನು ಅವತಾರ ಪುರುಷನಾಗಿ ಆರಾಧ್ಯ ದೇವನಾಗಿದ್ದ. ಆದುದರಿಂದ ಕಂಬರ ನಾಯಕ ನಾಯಕಿಯರು ದೇವತೆಗಳೇ. ಮಾನವರ ಉದ್ಧಾರಕ್ಕಾಗಿ ಭೂಲೋಕಕ್ಕೆ ಅವತರಿಸಿದವರು. ಅವರಲ್ಲಿ ಗುಣಪೂರ್ಣತ್ವವೂ ದೋಷರಾಹಿತ್ಯವೂ ಇದ್ದೇ ಇರಬೇಕು. ಇಲ್ಲದಿದ್ದರೆ ಅವರು ತಮ್ಮ ಘನತೆಯನ್ನೂ ಗೌರವವನ್ನೂ ಕಳೆದುಕೊಳ್ಳುತ್ತಾರೆ. ರಾಮನು ಭಗವಂತ, ಸೀತೆ ಅವನ ಪತ್ನಿ, ಭರತ ಲಕ್ಷ್ಮಣ ಶತ್ರುಘ್ನರು ಅವನ ಸಹೋದರರು. ಸುಗ್ರೀವ, ಗುಹ, ವಿಭೀಷಣರು ಅವನ ಮಿತ್ರರು, ಹನುಮಂತ ಅವನ ಸೇವಕ, ಕೌಸಲ್ಯೆ, ಕೈಕೆ, ಸುಮಿತ್ರೆಯರು ಅವನ ತಾಯಂದಿರು. ಇವರು ಯಾರಲ್ಲಿ ಕಳಂಕವುಂಟಾದರೂ ಮೂಲವ್ಯಕ್ತಿಗೆ ಕಳಂಕ. ಅವನ ಪ್ರತಿಪಕ್ಷದವರಾದ ರಾವಣ, ವಿಭೀಷಣ, ಕುಂಭಕರ್ಣರೂ ಉದಾತ್ತ ವ್ಯಕ್ತಿಗಳು. ಕೆಲವರು ತಮ್ಮ ಒಂದೊಂದು ದೌರ್ಬಲ್ಯದಿಂದ ದುರಂತಕ್ಕೀಡಾಗುತ್ತಾರೆ.

ಇದರಂತೆ ಕಂಬರ ರಾಮ ಸಾಕ್ಷಾತ್ ದೇವರೇ. ಆದರೆ ಭೂಲೋಕದಲ್ಲಿ ಅವತರಿಸಿದ ಮೇಲೆ ಸಾಮಾನ್ಯ ಮನುಷ್ಯನಂತೆಯೇ ಆಚರಿಸುತ್ತಾನೆ. ತಾನು ದೇವರೆಂಬುದು ಅವನಿಗೆ ತಿಳಿಯದು. ಅವನ ಲಾಲನೆ ಪೋಷಣೆಗಳೆಲ್ಲ ಮಾನವನಂತೆಯೇ. ಇತರರಂತೆಯೇ ಸುಖ ದುಃಖಗಳನ್ನು ಅನುಭವಿಸುತ್ತಾನೆ. ಕೆಲವು ವೇಳೆ ಮಾನವಸಹಜವಾದ ಗ್ಲಾನಿಗೊಳಗಾದರೂ ಆತನ ದಿವ್ಯ ತಪಸ್ಸಿನಿಂದ ಅವನಿಗೆ ಸತ್ಯಾಂಶದ ಅರಿವುಂಟಾಗುತ್ತದೆ. ಇತರರು ಆಗಾಗ ಅವನ ದೈವತ್ವವನ್ನು ಜ್ಞಾಪಿಸುತ್ತಿದ್ದರೂ ಅವನು ಮಾತ್ರ ತನ್ನ ಮಾನವಸಹಜವಾದ ನಡತೆಯಲ್ಲಿಯೇ ವರ್ತಿಸುತ್ತಾನೆ. ತನಗೆ ಉಂಟಾದ ಕಷ್ಟನಷ್ಟಗಳಲ್ಲಿಯೂ ಲಕ್ಷ್ಮಣನಂತಹ ಇತರರೇ ಅವನ ಶಕ್ತಿಯನ್ನೂ ಜ್ಞಾಪಿಸಬೇಕು; ಅದಕ್ಕಾಗಿಯೇ ಕಂಬರು ಕ್ಷಣಕ್ಷಣಕ್ಕೂ ರಾಮನ ದೈವತ್ವವನ್ನೂ ಜ್ಞಾಪಿಸುತ್ತಿರುತ್ತಾರೆ. ಕಂಬರಲ್ಲಿ ಈ ದೈವತ್ವವೂ ಮಾನವತ್ವವೂ ಮೇಳನವಾಗಿರುವುದೇ ಅದು

ವಿಶೇಷ ಜನಪ್ರಿಯವಾಗಿರುವುದಕ್ಕೆ ಕಾರಣ. ದೈವತ್ವವೇ ಪ್ರಧಾನವಾಗಿದ್ದಲ್ಲಿ ಅವನ ಅನೇಕ ಅದ್ಭುತ ಕಾರ್ಯಗಳಿಗೆ ವೈಶಿಷ್ಟ್ಯವೇ ಇರುತ್ತಿರಲಿಲ್ಲ. ಆದುದರಿಂದಲೇ ಕಂಬರ ರಾಮನು ವಾಲ್ಮೀಕಿಯಲ್ಲಿರುವಂತೆ ಕೈಕೆ ಮತ್ತೂ ಭರತರಲ್ಲಿ ಲೇಶ ಮಾತ್ರವೂ ದುರುಕ್ತಿಯನ್ನಾಡುವುದಿಲ್ಲ. ಮಾನವ ಸಹಜವಾದ ದೌರ್ಬಲ್ಯಕ್ಕೆ ಒಳಗಾಗುವುದಿಲ್ಲ. ಲಕ್ಷ್ಮಣ ಕೌಸಲ್ಯೆಯರು ಅಂತಹ ಕಾರ್ಯದಲ್ಲಿ ಭಾಗಿಗಳಾಗುವುದಿಲ್ಲ. ಅನಿವಾರ್ಯವಾದ ಸಂದರ್ಭಗಳನ್ನು ಕಂಬರು ಬಹು ಲಘುವಾಗಿ ತೇಲಿಸಿ ಬಿಡುತ್ತಾರೆ. ಇತರ ಪಾತ್ರಗಳ ದೌರ್ಬಲ್ಯವನ್ನು ಸುಗುಣವನ್ನಾಗಿಯೇ ಎಣಿಸುತ್ತಾರೆ. ಮಂಥರೆಯ ಸನ್ನಿವೇಶವನ್ನೂ ಒಂದು ಪದ್ಯದಲ್ಲಿ ಮುಗಿಸಿದ್ದಾರೆ. ಕೈಕೆಯ ಕ್ರೌರ್ಯವೇ ರಾಮನ ಕೀರ್ತಿ ಪ್ರಚಾರಕ್ಕೆ ಕಾರಣವೆನ್ನುತ್ತಾರೆ.

ಕಂಬರ ಕಾವ್ಯದಲ್ಲಿ ಸೀತಾ ಸ್ವಯಂವರ ಸನ್ನಿವೇಶವು ಬಹು ಆಕರ್ಷಕವಾಗಿದೆ. ಮೂಲದಲ್ಲಿ ಬಹುಸಂಗ್ರಹವಾಗಿರುವ ಸನ್ನಿವೇಶವನ್ನೂ ಕಂಬರು ತಮಿಳುನಾಡಿನ ಕಳವಿಯಲ್ (ವಿವಾಹಪೂರ್ವದ ಪ್ರೇಮ) ಸಂಪ್ರದಾಯವನ್ನನುಸರಿಸಿ ಆ ಸಂದರ್ಭವನ್ನೂ ಅಯ್ದು ಪ್ರತ್ಯೇಕಪಟಲಗಳಲ್ಲಿ ವಿಸ್ತರಿಸಿ ನಾಯಕ ನಾಯಿಕೆಯರಿಗೆ ಸ್ವಯಂವರಕ್ಕೆ ಹಿಂದಿನದಿನವೇ ಸಂದರ್ಶನವನ್ನೇರ್ಪಡಿಸಿ, ಅವರ ವಿರಹವನ್ನು ವಿಸ್ತರಿಸಿ,ವಿವಾಹಕ್ಕೆ ಸಂಬಂಧಪಟ್ಟ ಮೆರವಣಿಗೆ ಮೊದಲಾದುವುಗಳನ್ನು ಅತಿದೀರ್ಘವಾಗಿ ವರ್ಣಿಸಿದ್ದಾರೆ.

ಕಂಬರಾಮಾಯಣದಲ್ಲಿ ಸೀತಾರಾಮರ ಪ್ರೇಮವು ಅನ್ಯಾದೃಶವಾಗಿ ಚಿತ್ರಿತವಾಗಿದೆ. ಸೀತೆಯು ಎಂದೂ ಯಾವ ಕಾರಣಕ್ಕೂ ಬಿರುನುಡುಗಳನ್ನಾಡುವುದಿಲ್ಲ. ವನಪ್ರಯಾಣ ಕಾಲದಲ್ಲಿ ರಾಮನಿಗೆ, ಸೀತಾಪಹರಣ ಕಾಲದಲ್ಲಿ ಲಕ್ಷ್ಮಣನಿಗೆ, ಅಶೋಕವನದಲ್ಲಿ ಕೈಕೆಯ ವಿಷಯವಾಗಿ ಮೂಲದಲ್ಲಿ ಅವಳು ಆಡಿರುವ ಕಠಿಣವಾದ ಮಾತುಗಳಿಗೆ ಇಲ್ಲಿ ಅವಕಾಶವೇ ಇಲ್ಲ. ಲಂಕಾದಹನದ ಸಂದರ್ಭದಲ್ಲಿ ತನ್ನ ಪಾತಿವ್ರತ್ಯದ ಮಹಿಮೆಯಿಂದ ತಾನೇ ಲಂಕೆಯನ್ನೂ ಸುಡಬಲ್ಲ ಶಕ್ತಿಯುಳ್ಳವಳು ಎಂಬ ಸೂಚನೆಯೂ ಇದೆ. ಸೀತಾದೇವಿಯ ಅಗ್ನಿಪ್ರವೇಶ ಸಂದರ್ಭ ಪೂರ್ಣವಾಗಿ ಮಾರ್ಪಾಟಾಗಿದೆ.

ಇಲ್ಲಿಯ ಶೂರ್ಪನಖಿಯ ಪ್ರಸಂಗವು ರಾಮನ ಪಾತ್ರವನ್ನು ಉದಾತ್ತಗೊಳಿಸಿದೆ. ವಾಲ್ಮೀಕಿರಾಮಾಯಣದಲ್ಲಿ ಶೂರ್ಪನಖಿಯು ಕರಾಳವದನೆಯಾಗಿ ಮಾಂಸಾಭಿಲಾಷೆಯಿಂದ ಬಂದು ಕಾಮಪೀಡಿತಳಾಗಿ ರಾಮನ ಆಜ್ಞೆಯ ಪ್ರಕಾರ ಲಕ್ಷ್ಮಣನಿಂದ ಕರ್ಣನಾಸಾಚ್ಛೇದವನ್ನು ಪಡೆಯುತ್ತಾಳೆ. ಕಂಬರು ಈ ಸಂದರ್ಭವನ್ನೂ ಮಾರ್ಪಾಟು ಮಾಡಿ ಬಹುಸುಂದರವಾದ ನಾಟಕೀಯ ದೃಶ್ಯವನ್ನು ಕಲ್ಪಿಸಿಸಿದ್ದಾರೆ. ಇಲ್ಲಿ ಅವಳ ಹೆಸರು ಕಾಮಲತೆ. ತನ್ನ ದುರ್ನಡತೆಯಿಂದಲೇ ಲಕ್ಷ್ಮಣನಿಂದ ಭಂಗಿತಳಾಗುತ್ತಾಳೆ.

ಮೂಲದಲ್ಲಿ ಸಂಗ್ರಹವಾಗಿರುವ ಜಟಾಯು ಸ್ನೇಹದ ವೃತ್ತಾಂತವು ಇಲ್ಲಿ ವಿಸ್ತಾರವಾಗಿದ್ದೂ ರಾಮಲಕ್ಷ್ಮಣರ ಮೈತ್ರಿಗೆ ಬಹುಪೂರಕವಾಗಿದೆ.

ಕಂಬರ ಸೀತಾಪಹರಣ ಸನ್ನಿವೇಶ ಬಹುಚಮತ್ಕೃತವಾಗಿ ಚಿತ್ರಿತವಾಗಿದೆ. ಸೀತೆಯು ಈ ಸಂದರ್ಭದಲ್ಲಿ ಯಾವ ಕೆಟ್ಟ ಮಾತನ್ನಾಡದೆ ತಾನು ಪ್ರಾಣತ್ಯಾಗ

ಮಾಡುವಂತೆ ಹೆದರಿಸಿ ಲಕ್ಷ್ಮಣನನ್ನು ರಾಮನಲ್ಲಿಗೆ ಹೋಗುವಂತೆ ಮಾಡುತ್ತಾಳೆ. ಅಲ್ಲದೆ ಪ್ರತಿವ್ರತಾಶಿರೋಮಣಿಯಾದ ಸೀತೆಯನ್ನು ರಾವಣನು ಸ್ಪರ್ಶ ಮಾಡುವುದು ಸಾಧ್ಯವಿಲ್ಲದೆ ಅವಳನ್ನು ಪರ್ಣಶಾಲೆಯೊಡನೆಯೇ ಅಪಹರಿಸಿಕೊಂಡು ಹೋಗುತ್ತಾನೆ.

ವಾಲ್ಮೀಕಿ ರಾಮಾಯಣದಲ್ಲಿ ವಾಲಿವಧೆಯಾದ ಮೇಲೆ ಅವನ ಹೆಂಡತಿಯಾದ ತಾರೆಯೂ ವಾಲಿಯ ತಮ್ಮನಾದ ಸುಗ್ರೀವನ ಪತ್ನಿಯಾಗಿ ಅವನ ಭೋಗದಲ್ಲಿ ಭಾಗಿಯಾಗುತ್ತಾಳೆ. ಭಾತೃಪತ್ನಿಯನ್ನೂ ಭೋಗಿಸಿದುದೇ ಅಪರಾಧವೆಂದು ರಾಮನು ವಾಲಿಯನ್ನು ಸಂಹರಿಸಿದಾಗ ಅಣ್ಣನ ಹೆಂಡತಿಯನ್ನು ಸುಗ್ರೀವನು ಸ್ವೀಕರಿಸುವುದು ಹೇಗೆ ಸಾಧುವಾದೀತು. ಕಂಬರು ಈ ಸಮಸ್ಯೆಯನ್ನು ಪರಿಹರಿಸಿದ್ದಾರೆ. ಇಲ್ಲಿ ಪತಿ ಮರಣಾನಂತರ ತಾರೆಯೂ ವಿಧವೆಯಾಗಿಯೇ ಉಳಿದು ತಪಸ್ವಿನಿಯಾಗಿ ರಾಜಮಾತೆಯಂತೆ ನಿರಾಲಂಕರಣಗಳಾಗಿ ಬಂದು ಕುಪಿತನಾದ ಲಕ್ಷ್ಮಣನನ್ನು ಸಮಾಧಾನಪಡಿಸುತ್ತಾಳೆ. ಅಕೆಯನ್ನೂ ನೋಡಿದಾಗ ಲಕ್ಷ್ಮಣನಿಗೆ ವಿಧವೆಯರಾದ ತನ್ನ ಮಾತೆಯರ ಜ್ಞಾಪಕ ಬಂದು ಕೋಪವನ್ನು ದೂರಮಾಡಿ ಸಂಯಮದಿಂದ ವರ್ತಿಸುತ್ತಾನೆ.

ಇಲ್ಲಿ ಯುದ್ಧ ಕಾಂಡದಲ್ಲಿ ಬರುವ ರಾಕ್ಷಸರೆಲ್ಲ ಉದಾತ್ತ ವ್ಯಕ್ತಿಗಳೇ. ಪರಮ ಭಾಗವತನಾದ ವಿಭೀಷಣನು ಮೂಲಕ್ಕಿಂತ ಇಲ್ಲಿ ಹೆಚ್ಚು ಶ್ರೇಷ್ಠಮಟ್ಟಕ್ಕೇರಿದ್ದಾನೆ. ರಾವಣನಿಗೆ ರಾಮನ ದೈವತ್ವವನ್ನು ಶ್ರುತಪಡಿಸುವುದಕ್ಕಾಗಿ ನೃಸಿಂಹಾವತಾರದ ಕಥೆಯನ್ನು ಅದ್ಭುತವಾಗಿ ವರ್ಣಿಸುತ್ತಾರೆ. ವಿಭೀಷಣಶರಣಾಗತಿಯ ಸಂದರ್ಭವೂ ಬಹು ಆಕರ್ಷವಾಗಿದೆ. ರಾಮನಿಗೆ ಅವನಿಂದಾದ ಸಹಾಯವು ಬಹು ಸ್ಪಷ್ಟವಾಗಿ ವಿಸ್ತೃತವಾಗಿದೆ.

ಪ್ರತಿನಾಯಕರಾದ ರಾವಣ ಕುಂಭಕರ್ಣರ ಪಾತ್ರಗಳು ಮೂಲದಲ್ಲಿಯೇ ಸುಪುಷ್ಟವಾಗಿ ಚಿತ್ರಿತವಾಗಿವೆ. ಕಂಬರಲ್ಲಿ ಅವರು ಇನ್ನೂ ತೇಜಸ್ವಿಗಳಾಗಿ ಕಾಣುತ್ತಾರೆ. ಇಲ್ಲಿ ಅವರು ಪೂರ್ಣವಾಗಿ ವಿಧಿಯ ಕೈಗೊಂಬೆಗಳಾಗಿದ್ದಾರೆ. ಇಲ್ಲಿಯು ರಾವಣನು ಈ ಸೀತಾರಾಮರ ದೈವತ್ವನ್ನರಿತು ತನ್ನ ಪರಾಕ್ರಮಕ್ಕೆ ಕುಂದು ಬರದಂತೆ ರಾಮನನ್ನು ಗೆದ್ದು ಸೀತೆಯನ್ನು ರಾಮನಿಗೆ ಹಿಂತಿರುಗಿಸಬೇಕೆಂಬ ನಿರ್ಣಯಕ್ಕೂ ಬರುತ್ತಾನೆ. ಆದರೆ ವಿಧಿ ಅದಕ್ಕೆ ಅವಕಾಶ ಕೊಡುವುದಿಲ್ಲ.

ಇಲ್ಲಿಯು ಕುಂಭಕರ್ಣನ ಪಾತ್ರ ಚಿತ್ರಣ ಅನ್ಯಾದೃಶವಾಗಿದೆ. ಶೂರನೂ ಧೀರನೂ ಸಂಯಮಿಯೂ, ಧರ್ಮಿಷ್ಠನೂ ಆದ ಕುಂಭಕರ್ಣನು ಕರ್ತವ್ಯಗಳೆರಡರ ಮಧ್ಯೆ ಸಿಕ್ಕಿ ದುರಂತವನ್ನು ಪಡೆದ. ಅವನನ್ನು ನೋಡಿದ ಎಂತಹವರಿಗಾದರೂ ಹೃದಯ ವಿದ್ರಾವಕವಾಗದಿರದು.

ಕಂಬರಾಮಾಯಣದ ಇತರ ಪಾತ್ರಗಳೂ ಬಹು ಉದಾತ್ತವಾಗಿ ಚಿತ್ರಿತವಾಗಿವೆ. ಭರತ, ಲಕ್ಷ್ಮಣ, ಶತ್ರುಘ್ನ , ಗುಹ, ಸುಗ್ರೀವ ಮೊದಲಾದವರ ಚಿತ್ರಣ ಆಕರ್ಷಕವಾಗಿವೆ.

ಶೆಂತಮಿಳ್ ನಾಡಿನ ಪ್ರಕೃತಿ ಸೌಂದರ್ಯದಲ್ಲಿ ಮಗ್ನರಾದ ಕಂಬರು ತಮ್ಮ

ಕಾವ್ಯದಲ್ಲಿ ಅಲ್ಲಿಯ ಪ್ರವೃತ್ತಿಯ ವಿವಿಧ ಸುಂದರ ದೃಶ್ಯ, ಸಸ್ಯ, ನದಿ, ಪರ್ವತ ಮೊದಲಾದುವನ್ನು ಪ್ರತ್ಯಕ್ಷವಾಗಿ ಪರಿಚಿತವಾಗುವಂತೆ ವರ್ಣಿಸಿದ್ದಾರೆ. ಉತ್ತಮ ಕವಿಗಳಾದುದರಿಂದ ಕಾವ್ಯಾಂಗಗಳಾದ ವಿವಿಧ ವರ್ಣನೆಗಳನ್ನು ದೀರ್ಘವಾಗಿ ಮಾಡಿದ್ದಾರೆ.

ಕಂಬ ರಾಮಾಯಣದ ಛಂದಸ್ಸು ಬಹು ಸರಳವಾಗಿ ಓದುತ್ತದೆ. ಗಾಯನ ನರ್ತನಗಳಿಂದ ಪಠನ ಮಾಡುವುದಕ್ಕೆ ಅನುಕೂಲವಾಗಿ ತಾಳ ಲಯಬದ್ಧವಾಗಿವೆ. ಇಂದೂ ತಮಿಳುನಾಡಿನಲ್ಲಿ ಇದನ್ನು ವೇದಸದೃಶವಾದ ಗ್ರಂಥವೆಂದು ಭಾವಿಸಿ ಪ್ರತಿ ದಿನವೂ ಅನೇಕ ಕಡೆಯಲ್ಲಿ ಪಾರಾಯಣ ಮಾಡುತ್ತಾರೆ. ಗಾನ ಮಾಡುತ್ತಾರೆ. ಕೆಲವು ಭಾಗಗಳನ್ನು ನೃತ್ಯರೂಪದಲ್ಲಿಯೂ ಅಭಿನಯಿಸುತ್ತಾರೆ. ಇದು ಪ್ರಪಂಚದ ಇತರ ಎಲ್ಲ ಶ್ರೇಷ್ಠ ಕಾವ್ಯಗಳೊಂದಿಗೆ ಸಮದೂಗಬಲ್ಲುದು.

ಕಾವ್ಯಾವಲೋಕನ

"ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ"– ಡಾ. ಎಂ.ಬಿ. ನೇಗಿನ ಹಾಳ, ಪ್ರಕಟಣೆ, ಪ್ರಸಾರಾಂಗ, ಕರ್ನಾಟಕ ವಿಶ್ವವಿದ್ಯಾಲಯ, ಧಾರವಾಡ, 1982, ಪುಟಗಳು 241+10, ಬೆಲೆ 22-00 ರೂಪಾಯಿಗಳು.

ಪ್ರಸ್ತುತ ಗ್ರಂಥದಲ್ಲಿ ಕರ್ನಾಟಕದ ಶಾಸನಗಳಲ್ಲಿ ಪ್ರಾಕೃತ-ಸಂಸ್ಕೃತ-ಕನ್ನಡ, ಕನ್ನಡ ವರ್ಣಗಳು, ಶಬ್ಧ ರೂಪ ವಿಚಾರ, ಸ್ವೀಕರಣ ವಿಚಾರ, ನಾಮ ಪದವಿಚಾರ, ಕ್ರಿಯಾಪದ ವಿಚಾರ, ವಾಕ್ಯವಿಚಾರ ಎಂಬ ಎಂಟು ಅಧ್ಯಾಯಗಳಿವೆ. ಇವುಗಳ ಜೊತೆಗೆ ಪ್ರಸ್ತಾವನೆ ಮತ್ತು ಅನುಬಂಧಗಳು ಕೂಡ ಸೇರಿವೆ.

ಕವಿರಾಜಮಾರ್ಗದಿಂದ ಈಚೆಗೆ ರಚಿತವಾದ ಎಲ್ಲ ಸಾಹಿತ್ಯಕೃತಿಗಳ ಅಧ್ಯಯನ ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಸಾಕಷ್ಟು ನಡೆದಿದೆ. ಕ್ರಿ. ಶ. 9ನೇ ಶತಮಾನದಿಂದೀಚೆಗೆ ಕನ್ನಡ ಸಾಹಿತ್ಯ ಕ್ಷೇತ್ರ ತುಂಬ ಹುಲುಸಾಗಿ ಬೆಳೆದು ಬಂದಿದೆ ಎಂಬುದನ್ನು ಇದರಿಂದ ತಿಳಿಯಬಹುದಾಗಿದೆ. ಕವಿರಾಜಮಾರ್ಗಕ್ಕಿಂತ ಹಿಂದಿನ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಅಧ್ಯಯನ ಅಷ್ಟೇನು ಸಮರ್ಪಕವಾಗಿ ನಡೆಯಲು ಇಂದಿಗೂ ಸಾಧ್ಯವಾಗಿಲ್ಲ.

ಕವಿರಾಜ ಮಾರ್ಗಕ್ಕಿಂತ ಹಿಂದಿನ ಕಾಲದ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಅಧ್ಯಯನಕ್ಕೆ ನೆರವಾಗುವ ಯಾವ ಲಿಖಿತ ಗ್ರಂಥಗಳು ದೊರೆಯುವುದಿಲ್ಲ. ಈ ಕಾಲಕ್ಕೆ ಸಂಬಂಧಿಸಿದ ಕೆಲವು ಕನ್ನಡ ಶಾಸನಗಳು ಮಾತ್ರ ದೊರೆಯುತ್ತವೆ. ಹೀಗೆ ದೊರೆಯುವ ಕೆಲವು ಶಾಸನಗಳಲ್ಲಿ ಕೆಲವು ಅಸ್ಪಷ್ಟವಾಗಿದ್ದರೆ ಮತ್ತೆ ಕೆಲವು ಕನ್ನಡಭಾಷೆಯಲ್ಲಿಲ್ಲ. ಈ ಕಾರಣದಿಂದಾಗಿಯೋ ಈ ಕಾಲದ ಕನ್ನಡ ಭಾಷೆ ಮತ್ತು ಸಾಹಿತ್ಯಗಳ ಅಧ್ಯಯನ ಸಮರ್ಪಕ ಹಾಗೂ ಸಮಗ್ರವಾಗಿ ನಡೆಯಲು ಸಾಧ್ಯದಾಗಿಲ್ಲವೆನ್ನಬಹುದು.

ಡಾ. ಎನ್. ನರಸಿಂಹಯ್ಯ, ಡಾ. ಜಿ. ಎಸ್. ಗಾಯಿ ಮತ್ತು ಡಾ. ಕೆ. ಕುಶಾಲಪ್ಪಗೌಡ ಅವರು ಕನ್ನಡ ಶಾಸನಗಳ ಭಾಷಿಕ ಅಂಶಗಳನ್ನು ಕುರಿತು ವಿವೇಚಿಸಿದ್ದಾರೆ. ಡಾ. ಎನ್. ನರಸಿಂಹಯ್ಯ ಮತ್ತು ಡಾ. ಜಿ. ಎಸ್. ಗಾಯಿಯವರು ಕ್ರಿ.ಶ. 450 ರಿಂದ ಕ್ರಿ.ಶ. 850 ರವರೆಗಿನ ಕನ್ನಡ ಶಾಸನಗಳನ್ನು ಕುರಿತು ವಿವೇಚಿಸಿದ್ದರೆ, ಡಾ. ಕೆ. ಕುಶಾಲಪ್ಪಗೌಡ ಅವರು ಕನ್ನಡದ ಇತ್ತೀಚಿನ ಶಾಸನಗಳನ್ನು

(ಕೊಡಗು) ಕುರಿತು ವಿವೇಚಿಸಿದ್ದಾರೆ. ಇಷ್ಟಾದರೂ ಕನ್ನಡ ಶಾಸನಗಳ ಭಾಷಿಕ ಅಧ್ಯಯನ ಸಮರ್ಪಕವಾಗಿ ಸಾಗಿದೆ ಎಂದು ಹೇಳಲು ಬರುವುದಿಲ್ಲ. ಕ್ರಿ.ಶ. ಸುಮಾರು ಹತ್ತನೇ ಶತಮಾನದವರೆಗೆ ದೊರೆಯುವ ಕನ್ನಡ ಶಾಸನಗಳ ಭಾಷಿಕ ಅಂಶಗಳನ್ನು ಕುರಿತು ವಿವರಿಸಿ ವಿವೇಚಿಸಿದವರಲ್ಲಿ ಡಾ. ಎನ್. ನರಸಿಂಹಯ್ಯ ಮತ್ತು ಡಾ. ಜಿ.ಎಸ್. ಗಾಯಿಯವರು ಅತಿ ಮುಖ್ಯರು ಎನಿಸಿಕೊಂಡಿದ್ದಾರೆ.

ಕ್ರಿ.ಶ. 450 ರಿಂದ ಕ್ರಿ.ಶ. 850 ರವರೆಗೆ ಸುಮಾರು ನಾನೂರಕ್ಕೂ ಹೆಚ್ಚು ಕನ್ನಡ ಶಾಸನಗಳು ದೊರೆಯುತ್ತವೆ ಎಂದು ಕೆಲವರ ಅಭಿಪ್ರಾಯ. ಇವುಗಳಲ್ಲಿ ಕೇವಲ 132 ಶಾಸನಗಳನ್ನು ಮಾತ್ರ ಡಾ. ಎನ್. ನರಸಿಂಹಯ್ಯ ಮತ್ತು ಡಾ. ಜಿ.ಎಸ್. ಗಾಯಿಯವರು ತಮ್ಮ ಅಧ್ಯಯನಕ್ಕೆ ಬಳಸಿಕೊಂಡಿದ್ದಾರೆ. ಇವರು ಅಸ್ಪಷ್ಟವೆಂದು ಬಿಟ್ಟ ಹಾಗೂ ಇವರು ಗಮನಿಸದ ಇನ್ನೂ ಅನೇಕ ಶಾಸನಗಳು ಇರುವುದು ಕಂಡು ಬರುತ್ತವೆ. ಇಲ್ಲಿಯವರೆಗೆ ದೊರೆಯುವ ಎಲ್ಲ ಪ್ರಾಚೀನ ಕನ್ನಡ ಶಾಸನಗಳನ್ನು ಗಮನಿಸಿ ಅವುಗಳ ಭಾಷಿಕಅಂಶಗಳನ್ನು ಆಧುನಿಕ ಭಾಷಾವಿಜ್ಞಾನದ ದೃಷ್ಟಿಯಿಂದ ವಿಶ್ಲೇಷಿಸಿ ವಿವರಿಸಿ ಕೊಂಡರೆ ಕನ್ನಡ ಭಾಷೆಗೆ ಸಂಬಂಧಿಸಿದ ಎಷ್ಟೋ ಹೊಸ ಹೊಸ ವಿಚಾರಗಳು, ಸಿದ್ಧಾಂತಗಳು ಹೊರಬರುವುದರಲ್ಲಿ ಅನುಮಾನವೇನಿಲ್ಲ. ಅಂತು ಡಾ. ಎನ್. ನರಸಿಂಹಯ್ಯ ಮತ್ತು ಡಾ. ಜಿ. ಎಸ್. ಗಾಯಿಯವರು ಅಸ್ಪಷ್ಟವೆಂದು ಕೈಬಿಟ್ಟ ಹಾಗೂ ಅವರ ಗಮನಕ್ಕೆ ಬಾರದ ಮತ್ತು ಇತ್ತೀಚಿಗೆ ಬೆಳಕಿಗೆ ಬಂದ ಕನ್ನಡ ಶಾಸನಗಳನ್ನೂ, ಕೆಲವು ಪ್ರಾಕೃತ–ಸಂಸ್ಕೃತ ಶಾಸನಗಳನ್ನೂ ಗಮನಿಸಿ ಅವುಗಳ ಭಾಷಿಕ ಅಂಶಗಳನ್ನು ಸಮಗ್ರವಾಗಿ ಪರಿಶೀಲಿಸಿ ವಿವೇಚಿಸಲು ಹೊರಟ ಕೀರ್ತಿ ಡಾ. ಎಂ.ಬಿ. ನೇಗಿನಹಾಳ ಅವರಿಗೆ ಸಲ್ಲುವುದು.

ಕ್ರಿ.ಶ. 9 ನೇ ಶತಮಾನದ ಹೊತ್ತಿಗೆ ಪೂರ್ವದಹಳಗನ್ನಡದ ಅವಸ್ಥೆ ಮುಗಿದು ಅದರ ಮುಂದಿನ ಹಳಗನ್ನಡಅವಸ್ಥೆ ಆರಂಭವಾಗುವುದು. ಇಂತಹ ಸಂಧಿಕಾಲದ ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನ ಆಧುನಿಕ ಭಾಷಾ ವಿಜ್ಞಾನದ ದೃಷ್ಟಿಯಿಂದ ಸುಲಭವೇನಲ್ಲ. ಈ ಅವಧಿಗೆ ಸಂಬಂಧಿಸಿದ ಎಲ್ಲ ಕನ್ನಡ ಶಾಸನಗಳನ್ನು ಆಧುನಿಕ ಭಾಷಾ ವಿಜ್ಞಾನದ ದೃಷ್ಟಿಯಿಂದ ಪರಿಶೀಲಿಸಿ, ವಿವೇಚಿಸಲು ಹೊರಟಾಗ ಹಳಗನ್ನಡ ಎಲ್ಲಿ ಆರಂಭವಾಗುತ್ತದೆ, ಪೂರ್ವದ ಹಳಗನ್ನಡ ಎಲ್ಲಿ ಕೊನೆಗೊಳ್ಳುತ್ತದೆ ಎಂಬುದು ಇದರಿಂದ ತಿಳಿದುಬರುವುದು. ಈ ಸಂಧಿಕಾಲದ ಕನ್ನಡ ಭಾಷೆಯ ಅಧ್ಯಯನ ಇನ್ನೂ ಅಷ್ಟೇನು ಸಮಗ್ರ ಹಾಗೂ ಸಮರ್ಪಕವಾಗಿ ನಡೆದಿಲ್ಲ. ಇಂತಹ ಪರಿಸ್ಥಿತಿಯಲ್ಲಿ ಡಾ. ಎಂ.ಬಿ. ನೇಗಿನಹಾಳ ಅವರ ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನವನ್ನೂ ಕೂಡ ಅಷ್ಟೇನು ಸಮಗ್ರ ಹಾಗೂ ಸಮರ್ಪಕವಾದ ಅಧ್ಯಯನ ಎಂದು ಹೇಳಲು ಬರುವುದಿಲ್ಲ. ಇಲ್ಲಿಯವರೆಗೆ ಈ ಅವಧಿಗೆ ಸಂಬಂಧಿಸಿದ ಕನ್ನಡ ಶಾಸನಗಳ ಭಾಷಿಕ ಅಧ್ಯಯನದಲ್ಲಿ, ಡಾ. ಎನ್. ನರಸಿಂಹಯ್ಯನವರಾಗಲಿ, ಡಾ. ಜಿ. ಎಸ್. ಗಾಯಿಯವರಾಗಲಿ, ಡಾ. ಎಂ. ಬಿ. ನೇಗಿನಹಾಳ ಅವರಾಗಲಿ ಯಾರೂ ಆಧುನಿಕ ಭಾಷಾ

ವಿಜ್ಞಾನದ ಮೂಲತತ್ವಗಳನ್ನು ಆಧರಿಸಿ ಅವನ್ನು ವಿಶ್ಲೇಷಿಸಿ ವಿವರಿಸಿಕೊಂಡಂತೆ ತೋರು ವುದಿಲ್ಲ. ಇವುಗಳಿಂದ ಕ್ರಿ.ಶ. 850ಕ್ಕೆ ಹಿಂದಿನ ಹಾಗೂ ಮುಂದಿನ ಕನ್ನಡ ಭಾಷಾ ಬೆಳವಣಿಗೆಯನ್ನು ನಿರ್ಧರಿಸಿ ವಿವೇಚಿಸಲು ನೆರವಾಗುವ ಯಾವ ಸ್ಪಷ್ಟ ಸಾಮಗ್ರಿಗಳೂ ದೊರೆಯುವುದಿಲ್ಲ. ಈ ಕಾರಣದಿಂದಾಗಿಯೇ ಪ್ರಸ್ತುತ ಪ್ರಾಚೀನ ಕನ್ನಡ ಶಾಸನಗಳ ಭಾಷಿಕ ಅಧ್ಯಯನದಲ್ಲಿಯೂ ಕೂಡ ಸಾಮಾನ್ಯವಾಗಿ ಅನೇಕ ಅರೆಕೊರೆಗಳು ಸಹಜ ವಾಗಿ ಕಾಣಿಸಿಕೊಂಡಿವೆ ಎನ್ನಬಹುದು.

ಡಾ. ಎಂ.ಬಿ. ನೇಗಿನಹಾಳ ಅವರು ಸುಮಾರು ಕ್ರಿ.ಶ. 5 ನೇ ಶತಮಾನದಿಂದ ಹಿಡಿದು ಕ್ರಿ.ಶ. 9 ನೇ ಶತಮಾನದವರೆಗಿನ ಎಲ್ಲ ಕನ್ನಡ ಶಾಸನಗಳನ್ನು ಪರಿಶೀಲಿಸಿ ವಿವೇಚಿಸುವ ಪ್ರಯತ್ನ ಮಾಡಿದ್ದಾರೆಯಾದರೂ ಇವರ ಈ ಪ್ರಾಚೀನ ಕನ್ನಡ ಶಾಸನ ಗಳ ಭಾಷಿಕ ಅಧ್ಯಯನದಲ್ಲಿ, ಕನ್ನಡ ವರ್ಣ ವಿಚಾರಗಳು, ಶಬ್ದ ರೂಪ ವಿಚಾರಗಳು, ವ್ಯಾಕರಣ ವಿಚಾರಗಳು, ವಾಕ್ಯವಿಚಾರಗಳು ಒಟ್ಟಿನಲ್ಲಿ ಅಸ್ಪಷ್ಟವಾಗಿ ಕಾಣಿಸಿ ಕೊಂಡಿವೆ.

ಮೂಲ ಕನ್ನಡದಲ್ಲಿ ಹತ್ತು ಸ್ವರ ಧ್ವನಿ ಮಾಗಳು, ಎರಡು ಬಗೆಯ ಸಂಯುಕ್ತ ಸ್ವರಗಳು, ಹದಿಮೂರು ಅಥವಾ ಹದಿನಾಲ್ಕು ವರ್ಗೀಯ ವ್ಯಂಜನ ಧ್ವನಿಮಾಗಳು, ಎಂಟು ಅವರ್ಗೀಯ ವ್ಯಂಜನ ಧ್ವನಿಮಾಗಳು, ಇರುವುದು ಕಂಡುಬರುತ್ತವೆ ಎಂದು ಕೆಲವರ ಅಭಿಪ್ರಾಯ. ಆದರೆ ಡಾ. ಎಂ.ಬಿ. ನೇಗಿನಹಾಳ ಅವರು ತಮ್ಮ ಗ್ರಂಥದಲ್ಲಿ ಈ ಕೆಳಗಿನ ಸ್ವರ ಹಾಗೂ ವ್ಯಂಜನ ಧ್ವನಿಮಾಗಳನ್ನು ಪಟ್ಟಿ ಮಾಡಿದ್ದಾರೆ :

ಸ್ವರಗಳು :	ಇ	ಈ	ಉ	ಊ		
	ಎ	ಏ	ಒ	ಓ		ಐ
		ಅ	ಆ			ಔ

ವ್ಯಂಜನಗಳು :
ಕ್, ಗ್—
ಚ್, ಜ್—
ಟ್, ಡ್, ಣ್
ತ್ ದ್ ನ್
ಪ್ ಬ್ ಮ್
ಯ್ ರ್ ಱ್ ಲ್ ವ್ ಸ್ ಳ್ ೞ್

ಈ ಮೇಲಿನ ಸ್ವರ ಹಾಗೂ ವ್ಯಂಜನ ಧ್ವನಿಮಾಗಳು ಕ್ರಿ.ಶ. ಸುಮಾರು 5ನೇ ಶತಮಾನದಿಂದ 9 ನೇ ಶತಮಾನದವರೆಗೆ ಹೇಗೆ ಬೆಳೆದು ಬಂದುವು ಎಂಬುದನ್ನು ತಿಳಿ ಯಲು ಅನುಕೂಲವಾಗುವ ಉದಾಹರಣೆಗಳ ಪಟ್ಟಿಯನ್ನು ಇಲ್ಲಿ ಕೊಡಲಾಗಿದೆಯಾ

ದರೂ ಅವನ್ನು ವಿಶ್ಲೇಷಿಸಿ ವಿವರಿಸಿ ತೋರಿಸುವ ಯಾವ ಪ್ರಯತ್ನವನ್ನು ಲೇಖಕರು ಮಾಡಿಲ್ಲ.

ಪೂರ್ವದ ಹಳಗನ್ನಡ ಭಾಷೆಯ ಲಿಪಿ ಸಂಕೇತಗಳ ಅವ್ಯವಸ್ಥೆಯಿಂದಾಗಿಯೋ ಅಥವಾ ಅವನ್ನು ನಿಖರವಾಗಿ ನಿರ್ಧರಿಸಲು ಸಾಧ್ಯವಾಗದೆ ಹೋಗಿಯೋ ಏನೊ ಇದರಲ್ಲಿ ಕೆಲವು ಕನ್ನಡ ಧ್ವನಿಮಾಗಳ ಚಿತ್ರ ಅಸ್ಪಷ್ಟವಾಗಿ ಗೋಚರಿಸುವುದು. ಪೂರ್ವ ದ್ರಾವಿಡದಲ್ಲಿ ಕೇವಲ ಐದು ಹ್ರಸ್ವಸ್ವರಗಳು ಮಾತ್ರವಿದ್ದುವು. ಅನಂತರ ಕಾಲ ಕ್ರಮೇಣ ಅವಕ್ಕೆ ಸಂವಾದಿಯಾಗಿ ಐದು ದೀರ್ಘಸ್ವರಗಳು ವಿಕಾಸಗೊಂಡವು, ಎಂಬ ಸಾಮಾನ್ಯ ಕಲ್ಪನೆ ಇದೆ. ಹಾಗೆಯೇ ಪೂರ್ವದ್ರಾವಿಡದಲ್ಲಿ ಕೇವಲ ಕೆಲವು ಪರುಷ ವ್ಯಂಜನಗಳು ಮಾತ್ರವಿದ್ದುವು ಅನಂತರ ಅವುಗಳಿಗೆ ಸಂವಾದಿಯಾಗಿ ಕೆಲವು ಪದ ಮಧ್ಯ ದಲ್ಲಿ ಸರಳವ್ಯಂಜನಗಳು ವಿಕಾಸಗೊಂಡವು ಎಂಬ ಮತ್ತೊಂದು ಕಲ್ಪನೆ ಇದೆಯಾದರೂ ಕನ್ನಡ ಭಾಷೆಯಲ್ಲಿ ಕ್ರಿ.ಶ. 5ನೇ ಶತಮಾನದ ಹೊತ್ತಿಗಾಗಲೆ ಕೆಲವು ಹ್ರಸ್ವ ಹಾಗೂ ದೀರ್ಘ ಸ್ವರಗಳ ವ್ಯವಸ್ಥೆ, ಕೆಲವು ಪರುಷ ಹಾಗೂ ಸರಳವ್ಯಂಜನಗಳ ವ್ಯವಸ್ಥೆ ಸ್ಪಷ್ಟ ವಾಗಿರುವುದನ್ನು ಪ್ರಸ್ತುತ ಗ್ರಂಥದಲ್ಲಿ ಕೊಟ್ಟಿರುವ ಉದಾಹರಣೆಗಳ ಸಹಾಯದಿಂದ ತಿಳಿಯಬಹುದಾಗಿದೆ.

ಈ ಗ್ರಂಥದಲ್ಲಿ ವ್ಯಂಜನ ಹಾಗೂ ಸ್ವರಗಳಲ್ಲಿ ಕಂಡುಬರುವ ಪರಿವರ್ತನೆಗಳನ್ನು ಸ್ಪಷ್ಟವಾಗಿ ವಿವರಿಸಿ ತೋರಿಸಬಹುದಾಗಿದೆ, ಅಲ್ಲದೆ ದ್ರಾವಿಡಭಾಷೆಗಳ ಸ್ವರವ್ಯತ್ಯಯ (ಇ> ಎ, ಉ> ಒ) ಮತ್ತು ವ್ಯಂಜನಧ್ವನಿಗಳ ಸ್> ಚ್, ಚ್> ಜ್, (ಸ್> ಚ್> ಜ್) ತ್> ಸ್, ನ್> ವ್, ಪ್> ಹ್, ಮತ್ತು ವ್> ಬ್ ಪರಿ ವರ್ತನೆಗಳನ್ನು, ರ್ ಮತ್ತು ಱ್ ಳ ಮತ್ತು ೞ್ ಧ್ವನಿಮಾಗಳ ಸ್ಪಷ್ಟತೆಯನ್ನು ನಿರ್ಧರಿಸಿಕೊಳ್ಳಬಹುದಾಗಿದೆ. ಒಟ್ಟಿನಲ್ಲಿ ಡಾ. ಎಂ.ಬಿ. ನೇಗಿನಹಾಳ ಅವರ ಕನ್ನಡ ವರ್ಣಗಳ ವಿಚಾರ ಸಾಕಷ್ಟುಮಟ್ಟಿಗೆ ಸ್ಪಷ್ಟವಾಗಿದೆ ಎಂದು ಹೇಳಬಹುದಾದರೂ, ಅಲ್ಲಲ್ಲಿ ಧ್ವನಿವರ್ಣಗಳಿಗೆ ಸಂಬಂಧಿಸಿದ ಅಸ್ಪಷ್ಟತೆ ಹಾಗೂ ಅರೆಕೊರಗಳು ಉಳಿದುಕೊಂಡಿರು ವುದ ು ಕಂಡುಬರುತ್ತವೆ ಎನ್ನದೆ ಬೇರೆ ಮಾರ್ಗವಿಲ್ಲ.

ಈಗ ಅವರ ಶಬ್ದರೂಪ ವಿಚಾರವನ್ನು ಗಮನಿಸೋಣ. ಕನ್ನಡದಲ್ಲಿ ಶಬ್ದರಚನೆ ಎಷ್ಟೇ ಸುಲಭವಾಗಿ ಕಂಡು ಬಂದರೂ ಪೂರ್ವದ ಹಳಗನ್ನಡ ಹಾಗೂ ಹಳಗನ್ನಡ ಶಬ್ದ ರಚನೆಯಲ್ಲಿ ತುಂಬ ವ್ಯತ್ಯಾಸ ಇರುವುದು ಗೋಚರಿಸುತ್ತದೆ. ತುಂಬ ವಿಶಿಷ್ಟ ರೀತಿಯ ಶಬ್ದ ರಚನೆ ಇವೆರಡರಲ್ಲಿಯೂ ಕಂಡು ಬರುತ್ತದೆ. ಈ ವಿಶಿಷ್ಟಬಗೆಯ ಶಬ್ದರಚನೆ ಗಳನ್ನು ನಿಖರವಾಗಿ ಗುರುತಿಸಿ ವಿವರಿಸಿಕೊಳ್ಳುವುದು ಬಹಳ ಕಷ್ಟ. ಈ ಕಾರಣ ದಿಂದಾಗಿಯೆ ಲೇಖಕರು ಈ ಯಾವ ಕಾರ್ಯವನ್ನು ಇದರಲ್ಲಿ ಕೈಗೊಂಡಿಲ್ಲವೆನ್ನ ಬಹುದು.

ಪ್ರಸ್ತುತ ಗ್ರಂಥದಲ್ಲಿ ಲೇಖಕರು ವ್ಯಾಕರಣವಿಚಾರಕ್ಕೆ ಸಂಬಂಧಿಸಿದ, ನಾಮ ಪದಗಳು, ವಿಶೇಷಣಗಳು, ಸರ್ವನಾಮಗಳು, ಸಂಖ್ಯಾವಾಚಕಗಳು ಕ್ರಿಯಾಪದ

ಗಳು, ಕ್ರಿಯಾವಿಶೇಷಣಗಳು ಮುಂತಾದುವುಗಳನ್ನು ವಿಶ್ಲೇಷಿಸಿ ವಿವರಿಸಿ ತೋರಿಸುವ ಬದಲು ಅವುಗಳಿಗೆ ಸಂಬಂಧಿಸಿದ ಕೆಲವು ಉದಾಹರಣೆಗಳನ್ನು ಮಾತ್ರ ಪಟ್ಟಿ ಮಾಡಿ ತೋರಿಸಿದ್ದಾರೆ. ಇದೇ ರೀತಿ, ಲಿಂಗ, ವಚನ. ವಿಭಕ್ತಿ ಪ್ರತ್ಯಯಗಳನ್ನು ಕಾಲಸೂಚಕ ಪ್ರತ್ಯಯಗಳನ್ನು ಸೂಚಿಸುವ ಕೆಲವು ಉದಾಹರಣೆಗಳನ್ನು ಮಾತ್ರ ಪಟ್ಟಿ ಮಾಡಿ ಕೊಟ್ಟಿದ್ದಾರೆ ಅಷ್ಟೆ. ಸರ್ವನಾಮಗಳನ್ನು ಉತ್ತಮಪುರುಷ, ಮಧ್ಯಮ ಪುರುಷ ಮತ್ತು ಉತ್ತಮ ಪುರುಷ ಎಂದು ಮೂರು ವರ್ಗಗಳಲ್ಲಿ ವರ್ಗೀಕರಿಸಿ ತೋರಿಸಬಹು ಬಹುದಾದ ಅವಕಾಶಗಳಿವೆ. ಆದರೆ ಆ ಯಾವ ಪ್ರಯತ್ನವನ್ನು ಈ ಗ್ರಂಥದಲ್ಲಿ ಮಾಡಿಲ್ಲ. ನಾಮಪದ, ವಿಶೇಷಣ, ಕ್ರಿಯಾಪದ, ಕ್ರಿಯಾ ವಿಶೇಷಣ, ಮುಂತಾದುವು ಗಳನ್ನು ಇಲ್ಲಿ ಸಾಮಾನ್ಯ(ಸಿದ್ಧ) ಹಾಗೂ ಸಾಧಿತ ಎಂದು ಎರಡು ವರ್ಗಗಳಲ್ಲಿ ವರ್ಗೀಕರಿಸಿಕೊಳ್ಳಬಹುದಾದ ಅವಕಾಶಗಳಿವೆಯಾದರೂ ಲೇಖಕರು ಆ ಯಾವ ಪ್ರಯತ್ನವನ್ನು ಮಾಡಿದಂತೆ ಕಂಡುಬರುವುದಿಲ್ಲ. ದ್ರಾವಿಡಭಾಷೆಗಳಲ್ಲಿ ಸಾಮಾನ್ಯವಾಗಿ ಯಾವ ಪದಗಳು ಲಿಂಗ ವಚನ ವಿಭಕ್ತಿ ಪ್ರತ್ಯಯಗಳನ್ನು ತೆಗೆದುಕೊಳ್ಳಬಲ್ಲವೋ ಅವೆಲ್ಲವೂ ಸಾಮಾನ್ಯವಾಗಿ ನಾಮಪದಗಳಾಗಿ ಗೋಚರಿಸುವುವು. ಹಾಗೆಯೇ ಯಾವ ಪದಗಳು ಕಾಲಸೂಚಕ ಪ್ರತ್ಯಯಗಳನ್ನು ತೆಗೆದುಕೊಳ್ಳಬಲ್ಲವೋ ಅವೆಲ್ಲವೂ ಸಾಮಾನ್ಯವಾಗಿ ಕ್ರಿಯಾಪದಗಳಾಗಿ ಗೋಚರಿಸುತ್ತವೆ ಎಂಬ ಕಲ್ಪನೆ ಸಾಮಾನ್ಯವಾಗಿ ಎಲ್ಲರಿಗೂ ತಿಳಿದ ವಿಚಾರ. ನಾಮಪದಗಳ ಹಿಂದೆ ಅಥವಾ ಮುಂದೆ ಬರುವ ಪದಗಳನ್ನು ವಿಶೇಷಣಗಳು ಎಂತಲೂ ಕ್ರಿಯಾಪದಗಳ ಹಿಂದೆ ಅಥವಾ ಮುಂದೆ ಬರುವ ಪದಗಳನ್ನು ಕ್ರಿಯಾವಿಶೇಷಣಗಳು ಎಂತಲೂ ಹೇಳುವುದು ರೂಢಿಯಲ್ಲಿದೆ. ಇಂತಹ ವ್ಯಾಕರಣ ವಿಚಾರಗಳನ್ನು ಆಧುನಿಕ ಭಾಷಾ ವಿಜ್ಞಾನದ ದೃಷ್ಟಿಯಿಂದ ಪರಿಶೀಲಿಸಿ ವಿಶ್ಲೇಷಿಸಿ ವಿವರಿಸಿದ್ದಿದ್ದರೆ ಈ ಗ್ರಂಥ ತುಂಬ ಉಪಯುಕ್ತವಾಗಿ ಕಾಣಿಸಿಕೊಳ್ಳುತ್ತಿತ್ತು.

ಡಾ. ಕೆ. ಕೆಂಪೇಗೌಡ

ಪ್ರಬುದ್ಧ ಕರ್ಣಾಟಕ

ವಿಷಯ ಸೂಚಿಕೆ

ಸಂಪುಟ ೬೪

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೨-೮೩

ವಿಷಯ ಸೂಚಿಕೆ

ಕಾವ್ಯ

೧	ಆರಂಭ ಸೂತ್ರ	ದೊಡ್ಡರಂಗೇಗೌಡ	೬೪–೩,೪
೨	ಕೋಳಿೋರು ಕೊಡುಗೂಸು	ಡಾ. ಜಿ. ವರದರಾಜರಾವ್	೬೪–೧
೩	ಚಾರ್ಲ್ಸ್ ಬಾದಲೇರನ ಮೂರು ಪದ್ಯಗಳು	ಎಚ್. ಎಮ್. ಚೆನ್ನಯ್ಯ	೬೪–೩,೪
೪	ಧವಳ ಶ್ರೀ ವಚನಗಳು	ಎಂ. ಎ. ಜಯಚಂದ್ರ	೬೪–೧
೫	ರವೀಂದ್ರರನ್ನು ಕುರಿತು	ಡಾ. ಎನ್. ಎಸ್. ವೀರಪ್ಪ	೬೪–೨
೬	ಶಾಂತಿಗೊಂದು ಸವಾಲು	ಬಿ. ಎ. ಸನದಿ	೬೪–೧
೭	ಸಂಪ್ರದಾಯದ ಬೀಳಲುಗಳು	ಜೆ. ಪಿ. ರಾಮಪ್ರಸಾದ್	೬೪–೩,೪
೮	ಸಾಕೆ ?	ಬಿ. ಎ. ಸನದಿ	— ” —
೯	ಸಾಕ್ರಟೀಸನ ಅಮೃತವಾಣಿ	ಪ. ವಿ. ಚಂದ್ರಶೇಖರ	೬೪–೧
೧೦	ಸಾಮಾನ್ಯನ ಡೈರಿಯಿಂದ	ಅಶೋಕ ಹಾಸ್ಯಗಾರನಾಭೀಪುರಂ	೬೪–೧
೧೧	ಸುಲವಾಲರಾಯನ ಕಥೆ	ಸುಶೀಲಾ ಸೊಂಡೂರು	೬೪–೩,೪
೧೨	ಹಲಗನ ಹರಿಶ್ಚಂದ್ರ ಸಾಂಗತ್ಯ	ಸಿ. ಪಿ. ಕೆ.	೬೪–೧, ೨, ೩, ೪
೧೩	ಹಂಬಲ	ಎಚ್. ಎಚ್ ಗಂಗಾಧರಾಚಾರ್	೬೪–೩, ೪

ಲೇಖನಗಳು

೧	ಆದಿಕದಂಬ ರವಿವರ್ಮನ ಕಾಲದ ಕೆಲಗುಂದ್ಲಿಯ ಕನ್ನಡ ಕಲ್ಬರಹ	ಡಾ. ಎಚ್. ಆರ್. ರಘುನಾಥ್ ಭಟ್	೬೪–೧
೨	ಇಂಗ್ಲಿಷ್ ಬೈಬಲ್ ; ಮತ್ತು ಭವ್ಯ ಶೈಲಿ	ಮೂಲ : ಜೆ. ಮಿಡ್ಲ್‌ಟನ್‌ಮರಿ ಅನು : ಎಡ್ವರ್ಡ್ ನೋರೋನ	೬೪–೩,೪
೩	ಇಂದಿನ ತೆಲುಗು ಮಹಿಳಾ ಸಾಹಿತ್ಯ	ನಿರುಪಮಾ	೬೪–೧
೪	ಕಂಬ ರಾಮಾಯಣಂ	ಎನ್. ಅನಂತರಂಗಾಚಾರ್	೬೪–೩,೪
೫	ಕನ್ನಡ ಕಾವ್ಯಗಳಲ್ಲಿ ಯಕ್ಷ ಯಕ್ಷಿಯರ ಸ್ತುತಿ	ಡಾ. ಟಿ. ವಿ. ವೆಂಕಟಾಚಲಶಾಸ್ತ್ರಿ	೬೪–೧
೬	ಜಂಬೂಸ್ವಾಮಿ ಕಥಾ ಸಾಹಿತ್ಯ	ಎಸ್. ಪಿ. ಪಾಟೀಲ್	೬೧–೧

೭	ಪಂಜೆ ಮಂಗೇಶರಾಯರು	ಗೊರೂರು ರಾಮಸ್ವಾಮಿ ಅಯ್ಯಂಗಾರ್	೬೪–೩,೪
೮	ಪ್ರಾಕೃತ ಸಾಹಿತ್ಯ	ಮೂಲ : ಆ. ನೇ. ಉಪಾಧ್ಯೆ ಅನು : ಎ. ಎಲ್. ಶ್ರೀಧರಮೂರ್ತಿ	೬೪–೨
೯	ಬೌದ್ಧ ಜೈನ ರಾಮಾಯಣಗಳು	ಎಸ್. ಅನಂತರಂಗಾಚಾರ್	೬೪–೩,೪
೧೦	ಭರತೇಶ ವೈಭವದ ಭರತ– ಬಾಹುಬಲಿ ಪ್ರಸಂಗ	ಎನ್. ಕುಮುದ	೬೪–೩, ೪
೧೧	ಯಶೋಧರನ ಧೃತಿ	ಡಾ. ಎ. ಎಸ್. ವೇಣುಗೋಪಾಲರಾವ್	೬೪–೩,೪
೧೨	ರಾಮಾಯಣ ಭಾರತಿ	ಡಾ. ಎನ್. ಅನಂತರಂಗಾಚಾರ್	೬೪–೧
೧೩	ಶ್ರೀ ವಿಜಯದಾಸರು–ದಾಸ ಸಾಹಿತ್ಯದ ಮೇರುಶೃಂಗ	ಡಾ. ಕೆ. ಜಿ. ನಾರಾಯಣ ಪ್ರಸಾದ್	೬೪–೨

ನಾಟಕ

೧೪	ಪರಿವರ್ತನೆ	ಸ್ವಾಮಿ ಆಗೇಹಾನಂದ	೬೪–೧

ಕಮ್ಮಟದ ಕಿಡಿಗಳು

೧೫	ನಂದಿಯ ಕೋಡುಗಲ್ಲಿನ ಮೂಲಕ ವಲಿಂಗದರ್ಶನ	ಡಾ. ಚಿದಾನಂದಮೂರ್ತಿ	೬೪–೧
೧೬	ವಡ್ಡಾರಾಧನೆಯಲ್ಲಿ ಎರಡು ಸಂಸ್ಕೃತ ಶ್ಲೋಕಗಳು	ಸೀತಾರಾಮ್ ಜಾಗೀರ್‌ದಾರ್	೬೪–೨

ಲೇಖಕ ಸೂಚಿ

೧	ಆಗೇಹಾನಂದ, ಸ್ವಾಮಿ	ಪರಿವರ್ತನೆ	೬೪–೧
೨	ಅನಂತರಂಗಾಚಾರ್	ರಾಮಾಯಣ ಭಾರತಿ	೬೪–೧
		ಬೌದ್ಧ ಜೈನರಾಮಾಯಣಗಳು	೬೪–೩,೪
		ಕಂಬ ರಾಮಾಯಣವು	— " —
೩	ಅಶೋಕ ಹಾಸ್ಯಗಾರ, ನಾಭೀಪುರಂ	ಸಾಮಾನ್ಯನ ಡೈರಿಯಿಂದ	೬೪–೧
೪	ಕುಮುದ, ಎನ್.	ಭರತೇಶ ವೈಭವದ ಭರತ–ಬಾಹುಬಲಿ ಪ್ರಸಂಗ	೬೪–೩,೪
೫	ಗಂಗಾಧರಚಾರ್, ಎಚ್. ಎಚ್.	ಹಂಬಲ	೬೪–೩,೪
೬	ಚನ್ನಯ್ಯ, ಎಚ್. ಎಮ್.	ಚಾರ್ಲ್ಸ್ ಬಾದಲೇರನ ಮೂರು ಪದ್ಯಗಳು	೬೪–೩,೪
೭	ಚಂದ್ರಶೇಖರ, ಪ. ವಿ.	ಸಾಕ್ರಟೀಸನ ಅಮೃತವಾಣಿ	೬೪–೨
೮	ಚಿದಾನಂದಮೂರ್ತಿ, ಎಂ.	ನಂದಿಯ ಕೋಡುಗಳ ಮೂಲಕ ಶಿವಲಿಂಗ ದರ್ಶನ	೬೪–೧
೯	ಜಯಚಂದ್ರ, ಎಂ. ಎ.	ಧವಳ ಶ್ರೀ ವಚನಗಳು,	೬೪–೧
೧೦	ದೊಡ್ಡರಂಗೇಗೌಡ	ಆರಂಭ ಸೂತ್ರ	೬೪–೩,೪
೧೧	ನಾರಾಯಣ ಪ್ರಸಾದ್, ಕೆ. ಜಿ.	ಶ್ರೀ ವಿಜಯದಾಸರು, ದಾಸ ಸಾಹಿತ್ಯದ ಮೇರುಶೃಂಗ	೬೪–೨
೧೨	ನಿರುಪಮಾ	ಇಂದಿನ ತೆಲುಗು ಮಹಿಳಾ ಸಾಹಿತ್ಯ	೬೪–೧
೧೩	ನರೋನ, ಎಡ್ವರ್ಡ್	ಇಂಗ್ಲಿಷ್ ಬೈಬಲ್ ಮತ್ತು ಭವ್ಯ ಶೈಲಿ	೬೪–೩,೪
೧೪	ಪಾಟೀಲ, ಎಸ್. ಪಿ.	ಜಂಬೂಸ್ವಾಮಿ ಕಥಾಸಾಹಿತ್ಯ	೬೪–೧
೧೫	ರಘುನಾಥರಾವ್	ಆದಿ ಕದಂಬ ರವಿವರ್ಮನ ಕಾಲದ ಕೆಲಗುಂದ್ಲಿಯ ಕನ್ನಡ ಕಲ್ಬರಹ	೬೪–೨
೧೬	ರಾಮಪ್ರಸಾದ್	ಸಂಪ್ರದಾಯದ ಬಿಳಲುಗಳು	೬೪–೩,೪
೧೭	ಗೊರೂರು ರಾಮಸ್ವಾಮಿ ಅಯ್ಯಂಗಾರ್	ಪಂಜೆ ಮಂಗೇಶರಾಯರು	೬೪–೩,೪
೧೮	ವೀರಪ್ಪ, ಎನ್. ಎಸ್.	ರವೀಂದ್ರರನ್ನು ಕುರಿತು	೬೪–೨

೧೯	ವೆಂಕಟಾಚಲಶಾಸ್ತ್ರಿ, ಟಿ. ವಿ.	ಕನ್ನಡ ಕಾವ್ಯದಲ್ಲಿ ಯಕ್ಷ-ಯಕ್ಷಿಯರ ಸ್ತುತಿ	೬೪–೧
೨೦	ವೇಣುಗೋಪಾಲರಾವ್, ಎಂ. ಎನ್.	ಯಶೋಧರನ ಧೃತಿ	೬೪–೩, ೪
೨೧	ಸನದಿ, ಬಿ. ಎ.	ಸಾಕೆ ?	೬೪–೩, ೪
೨೨	ಸಿ. ಪಿ. ಕೆ.	ಹಲಗನ ಹರಿಶ್ಚಂದ್ರ ಸಾಂಗತ್ಯ	೬೪–೧, ೨, ೩, ೪
೨೩	ಸೀತಾರಾಮು ಜಾಗೀರದಾರ್	ವಡ್ಡಾರಾಧನೆಯಲ್ಲಿ ಎರಡು ಸಂಸ್ಕೃತ ಶ್ಲೋಕಗಳು	೬೪–೨
೨೪	ಸುಶೀಲಾ ಸೊಂಡೂರ್	ಸುಲವಾಲರಾಯನ ಕಥೆ	೬೪–೩, ೪
೨೫	ಶ್ರೀಧರಮೂರ್ತಿ, ಎ. ಎಸ್.	ಪ್ರಾಕೃತ ಸಾಹಿತ್ಯ	೬೪–೨

ರಿಜಿಸ್ಟ್ರೇಷನ್ ಆಫ್ ನ್ಯೂಸ್ ಪೇಪರ್ಸ್ (ಸೆಂಟ್ರಲ್) 1956ರ 8ನೇ ನಿಯಮದ 4ನೇ ಫಾರಂಗೆ ಸಂಬಂಧಿಸಿದಂತೆ "ಪ್ರಬುದ್ಧ ಕರ್ಣಾಟಕ" ತ್ರೈಮಾಸಿಕ ಪತ್ರಿಕೆಯ ಸ್ವಾಮಿತ್ವ ಮತ್ತು ಇತರ ವಿಷಯಗಳ ಬಾಬ್ತು ವಿವರ :

1.	ಪ್ರಕಾಶನ ಸ್ಥಳ	:	ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-6
2.	ನಿಯತಕಾಲಿಕತೆ	:	ತ್ರೈಮಾಸಿಕ
3.	ಮುದ್ರಕರು	:	ಟಿ. ಬಾಬು, ಶ್ರೀ ಲಕ್ಷ್ಮೀ ಮುದ್ರಣಾಲಯ 728/1, 2ನೇ ಕ್ರಾಸ್, ರವೆ ಬೀದಿ, ಮೈಸೂರು
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಶ್ರೀ ಲಕ್ಷ್ಮೀ ಮುದ್ರಣಾಲಯ, 728/1, 2ನೇ ಕ್ರಾಸ್, ರವೆ ಬೀದಿ, ಮೈಸೂರು
4.	ಪ್ರಕಾಶಕರ ಹೆಸರು	:	ಕೆ.ಟಿ. ವೀರಪ್ಪ, ನಿರ್ದೇಶಕ, ಪ್ರಸಾರಾಂಗ ಮಾನಸಗಂಗೋತ್ರಿ, ಮೈಸೂರು-6
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-6
5.	ಸಂಪಾದಕರ ಹೆಸರು	:	ಎಚ್. ಎಮ್. ಚನ್ನಯ್ಯ ಪ. ವಿ. ಚಂದ್ರಶೇಖರ
	ರಾಷ್ಟ್ರೀಯತೆ	:	ಭಾರತೀಯ
	ವಿಳಾಸ	:	ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-6
6.	ಪತ್ರಿಕಾ ಸ್ವಾಮಿತ್ವ ಮತ್ತು ವಿಳಾಸ ಬಂಡವಾಳದಲ್ಲಿ ನೂರಕ್ಕೆ 1ಕ್ಕಿಂತ ಹೆಚ್ಚು ಹಣ ಹಾಕಿರುವವರ ವಿವರ	:	ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು-5

ಕೆ. ಟಿ. ವೀರಪ್ಪನಾದ ನಾನು ಮೇಲಿನ ವಿವರಗಳಲ್ಲಿಯ ಎಲ್ಲ ವಿಷಯಗಳೂ ನನಗೆ ತಿಳಿದಮಟ್ಟಿಗೆ ಸತ್ಯವೆಂದು ಈ ಮೂಲಕ ಘೋಷಿಸುತ್ತೇನೆ.

(ಸಹಿ) ಕೆ. ಟಿ. ವೀರಪ್ಪ

ನಿರ್ದೇಶಕ ಹಾಗೂ ಪ್ರಕಾಶಕ, ಪ್ರಸಾರಾಂಗ, ಮೈಸೂರು-6

'ಪ್ರಬುದ್ಧ ಕರ್ಣಾಟಕ'ಕ್ಕೆ ವಿನಿಮಯವಾಗಿ ಬರುವ ಪತ್ರಿಕೆಗಳು

Annals of Oriental Research, University of Madras; *Brahmavidya,* Adyar, Madras; *Bulletin of the School of Oriental and African Studies,* London; *Journal of the Andhra Historical Research Society,* Rajahmundry; *Journal of the Karnataka Historical Research Society,* Dharwar; *Quarterly Journal of the Mythic Society,* Bangalore; *The Indian P.E.N.,* Bombay; *Annals of the Venkateswara Orienial Institute.* Tirupati; *The Jaina Siddhanta Bhaskara and the Jaina Gazette,* Arrah; *Bulletin of the Deccan College Research Institute,* Poona; *Publiction of the Kannda Research Office,* Dharwar; *Annals of the Bhandarakar Oriental Research Institute,* Poona; *Journal of the Karnataka University,* Dharwar; *Public Affiairs,* Bangalore.

'ಪ್ರಪಂಚ', ಹುಬ್ಬಳ್ಳಿ ; 'ಆಂಧ್ರ ಸಾಹಿತ್ಯ ಪರಿಷತ್ಪತ್ರಿಕೆ'(ತೆಲುಗು), ಕಾಕಿನಾಡ ; 'ಪುಸ್ತಕ ಪ್ರಪಂಚ', ಮೈಸೂರು ; 'ಕನ್ನಡ ನುಡಿ', ಬೆಂಗಳೂರು ; 'ಸೋವಿಯತ್ ದೇಶ', ಮದ್ರಾಸು ; 'ಪ್ರಕಾಶ', ಉಡುಪಿ ; 'ಕನ್ನಡ ಸಾಹಿತ್ಯ ಪರಿಷತ್ಪತ್ರಿಕೆ', ಬೆಂಗಳೂರು ; 'ಕರ್ಣಾಟಕ ಭಾರತಿ' ಧಾರವಾಡ ; 'ಸಾಧನೆ', ಬೆಂಗಳೂರು ವಿಶ್ವವಿದ್ಯಾಲಯ.

Reg No. R.N. 17184/57

ಮೈಸೂರು ವಿಶ್ವವಿದ್ಯಾನಿಲಯದ ಈಚಿನ ಪ್ರಕಟನೆಗಳು

			ರೂ. ಪೈ
1.	ಮೈಸೂರು–ಒಂದು ಅಧ್ಯಯನ	....	25–00
2.	ವಚನ ಸಾಹಿತ್ಯ ಸಂಗ್ರಹ (ಸರ್ಕಾರದ ಪ್ರಕಟಣೆ)	....	4–50
3.	ಶ್ರೀ ಸಾಹಿತ್ಯ		100–00/10–00
4.	ಕನ್ನಡ ವಿಷಯ ವಿಶ್ವಕೋಶ	....	100–00
5.	ಪ್ರಬುದ್ಧ ಕರ್ಣಾಟಕ ಅಕಾರಾದಿ ಕವಿಕಾವ್ಯಸೂಚಿ	....	27–00
6.	ದಾಸ್ತೊಯೆವ್‌ಸ್ಕಿ	....	5–00
7.	ತೆಲುಗು ಭಾಷೆ ಮತ್ತು ಸಾಹಿತ್ಯ	....	5–00
8.	ಕಲೆಯ ನೆಲೆ		
9.	ಸಿದ್ದ ಸಾಹಿತ್ಯ	....	20–00
10.	ಕನ್ನಡ ಸಾಂಗತ್ಯ ಪ್ರಕಾರ—ಒಂದು ಸಂಕ್ಷಿಪ್ತ ಸಮೀಕ್ಷೆ	....	10–00
11.	ಕನ್ನಡ ಜನಪದ ಗೀತೆಗಳ ಸಾಂಸ್ಕೃತಿಕ ಅಧ್ಯಯನ	....	21–00
12.	ಕಾಡುಗೊಲ್ಲರ ಸಂಪ್ರದಾಯಗಳು ಮತ್ತು ನಂಬಿಕೆಗಳು	....	22–00
13.	ಕರ್ನಾಟಕ ಸಂಗೀತದಲ್ಲಿ ಮನೋಧರ್ಮ–ಸಂಗೀತದ ಪ್ರಕಾರಗಳು		10–00
14.	ಮಕ್ಕಳು ಮತ್ತು ಕಾನೂನು	....	13–00
15.	ಆಧುನಿಕ ಕನ್ನಡ ಬರಹಗಾರರು	....	45–00
16.	Govinda Pai	...	16–00
17.	ಫ್ರಾನ್ಜ ಕಾಫ್ಕ	....	5–00
18.	ಮಹಾತ್ಮ ಸಂ. ೮	....	18–00
19.	ಗೋವಿಂದ ಪೈ	....	13–00
20	ಕಾಡುಮಲ್ಲಿಗೆ	....	7–50
21.	ಗೊಂದಲಿಗರು	....	8–00
22.	ಸಾಮಾನ್ಯರಿಗೆ ಸಿವಿಲ್ ಎಂಜಿನಿಯರಿಂಗ್	....	5–00
23.	ಸಮೂಹ ಸಂಪರ್ಕ ಮಾಧ್ಯಮಗಳು	....	5–00

ಪ್ರತಿಗಳಿಗೆ ಬರೆಯಿರಿ :

ನಿರ್ದೇಶಕರು, ಪ್ರಸಾರಾಂಗ, ಮೈಸೂರು–570 006